ಬಿಡಿಬರಹಗಳು



ಲೇಖಕರು :

ಎಸ್. ವೆಂಕಟರಮಣ ಅಡಿಗ

ಪ್ರಕಾಶಕರು :

ವೇ॥ ಬ್ರ॥ ಶ್ರೀ ಸುಬ್ರಹ್ಮಣ್ಯ ಉಡುಪ

ವೇದ ವೇದಾಂಗ ವೇದಾಂತ ಪಾಠಶಾಲಾ

ಬಿಡಿ ಬರಹಗಳು : ಶ್ರೀ ಎಸ್. ವೆಂಕಟರಮಣ ಅಡಿಗ ರವರಿಂದ ನಿರೂಪಣೆಗೊಂಡ ಅವರ .

ಮುದ್ರಣ : 2012

ಪುಟಗಳು : 136

ಪ್ರತಿಗಳಿಗಾಗಿ ಸಂಪರ್ಕಿಸಿ :

ಎಸ್. ವೆಂಕಟರಮಣ ಅಡಿಗ

ಪ್ರಕಾಶಕರು :

ವೇ॥ ಬ್ರ॥ ಶ್ರೀ ಸುಬ್ರಹ್ಮಣ್ಯ ಉಡುಪ

ಮುದ್ರಕರು :

ಪರಿಮಳ ಮುದ್ರಣಾಲಯ

ಮೈಸೂರು ರಸ್ತೆ, ಬ್ಯಾಟರಾಯನಪುರ

ಬೆಂಗಳೂರು–560 026

ದೂ. : 26758058

"ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ ।" "ಧರ್ಮ ಏವಹತೋ ಹಂತಿ ಧರ್ಮೋ ರಕ್ಷತಿ ರಕ್ಷಿತಃ ॥" ಜಗತ್ತು ಧರ್ಮದ ನೆಲೆಯಲ್ಲಿ ನಿಂತಿದೆ. ಧರ್ಮ ಮಾರ್ಗದಲ್ಲಿ ನಡೆಯುವವರನ್ನು ಧರ್ಮವೇ ಕಾಪಾಡುವುದು. ಧರ್ಮ ಎಂಬ ಚೌಕಟ್ಟಿನಲ್ಲಿ ನಿಂತು, ಅರ್ಥವನ್ನು ಸಂಪಾದಿಸಿ, ಧರ್ಮ ಮತ್ತು ಅರ್ಥಗಳನ್ನು ಅನುಸರಿಸಿ ಕಾಮ ಸುಖವನ್ನು ಅನುಭವಿಸಿ, ಮುಂದಿನ ಪುರುಷಾರ್ಥವಾದ ಮೋಕ್ಷದ ಕಡೆಗೆ ಗಮನವಿಡಬೇಕು. ಧರ್ಮವೇ ಎಲ್ಲಾ ಪುರುಷಾರ್ಥಗಳಿಗೂ ಮೂಲವು ಎಂದು ಎತ್ತಿ ತೋರಿಸಿ ನಿಜ ಜೀವನದಲ್ಲಿ ಧರ್ಮವೇ ಸರ್ವಸ್ವ ಎಂದು ತಿಳಿದು ಬದುಕಿನ ಸಾರ್ಥಕತೆಯನ್ನು ಪಡೆದವರು ಶ್ರೀ ಯುತ ವೆಂಕಟರಮಣ ಅಡಿಗರು.

" ಭದ್ರೈಷಾಂ ಲಕ್ಷ್ಮೀ ನಿದಹಿತಾಧಿ ವಾಚಿ।" ಎಂದು ಶುಭ ನುಡಿಯ ಮಹತ್ವವನ್ನು ಶ್ರುತಿಯು ಸಾರುತ್ತದೆ. ನುಡಿಯು ನಡೆಯನ್ನು ಸೂಚಿಸುವುದು. ನಡೆ ನುಡಿಯು ಪರಿಶುದ್ಧವಾಗಿದ್ದರೆ ಜಗತ್ತೇ ನಮ್ಮದಾಗುವುದು. ನಡೆ ನುಡಿಗಳ ಶುದ್ಧಿ ಇರಬೇಕಾದರೆ ಸತ್ಸಂಗದ ಅವಶ್ಯಕತೆ ಇರುವುದು. ತಮ್ಮ ಸುಖ ಸಂತೋಷಗಳನ್ನು ತ್ಯಜಿಸಿ ಲೋಕ ಕಲ್ಯಾಣವನ್ನೇ ಬಯಸುವವರು ಸತ್ಪುರುಷರು. ಇವರ ಸಹವಾಸ ದಿಂದ ಸಮಾಜದಲ್ಲಿ ಸತ್ಪ್ರಜೆಯಾಗಿ ಬದುಕಬಹುದು. "ಸಜ್ಜನರ ಸಹವಾಸ ಹೆಜ್ಜೇನು ಸವಿದಂತೆ ಎಂದು, ಗುರುವಿನ ಗುಲಾಮನಾಗದ ತನಕ ದೊರೆಯದಣ್ಣ ಮುಕುತಿ" ಎಂದೂ ಮಹಾತ್ಮರು ಸಾರಿದರು. ಅಜ್ಞಾನವೆಂಬ ಅಂಧಕಾರವನ್ನು ದೂರಮಾಡಿ ಸುಜ್ಞಾನವೆಂಬ ಬೆಳಕನ್ನು ನೀಡುವವರೇ ಗುರುಗಳು ಇವರ ಸೇವೆಯಿಂದ ಆಯುಷ್ಯ, ವಿದ್ಯೆ, ಯಶಸ್ಸು, ಬಲವೆಲ್ಲವೂ ಹೆಚ್ಚಿಸುವುವು. ಈ ಎಲ್ಲಾ ವಿಷಯಗಳು ಅಡಿಗರ ಲೇಖನಾದಿಗಳಿಂದಲೇ ತಿಳಿಯಿತು.

ವೇದ, ವೇದಸಂದೇಶ, ಭಾವೈಕ್ಯ, ಪರಿಸರ ಪ್ರೇಮ, ಸತ್ಯ, ಧರ್ಮ, ನ್ಯಾಯ, ಬದುಕು, ಪುಣ್ಯ ಪಾಪಗಳ ಅರಿವು, ಹುಟ್ಟು-ಸಾವುಗಳಿಂದ ಕೂಡಿದ ಸಂಸಾರ, ದಾನಧರ್ಮ, ಶಿಕ್ಷಣ, ಸ್ತ್ರೀ ಧರ್ಮ, ದೇವರು ಭಕ್ತಿ - ಹೀಗೆ ಒಂದೊಂದು ಲೇಖನವು ಇಲ್ಲಿ ಅರ್ಥವತ್ತಾಗಿ ಅನುಭವಕ್ಕೆ ಸಿಗುವುದು. ಪ್ರತಿಯೊಬ್ಬನು ಇವುಗಳನ್ನು ಓದಿ ತನ್ನ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾಗುವುದು ಅನಿವಾರ್ಯ. ಅದರಿಂದ ಸಮಾಜದಲ್ಲಿ ಉತ್ತಮ ಪ್ರಜೆಯಾಗಿ ಇದ್ದು. ಜೊತೆಗೆ ದೇವ, ಪಿತೃ, ಸಮಾಜ ಮುಂತಾದ ಎಲ್ಲಾ ಋಣಗಳನ್ನು ಪರಿಹರಿಸಿಕೊಳ್ಳಬಹುದು.

ಶ್ರೀಯುತ ವೆಂಕಟರಮಣ ಅಡಿಗರು ಉತ್ತಮ ಶಿಕ್ಷಕರು, ದಕ್ಷ ಅಧಿಕಾರಿಗಳು, ವಿದ್ವಾಂಸರು, ಗುರುಭಕ್ತಿಯುಳ್ಳವರು, ಶಿಷ್ಯವಾತ್ಸಲ್ಯದೊಂದಿಗೆ ಹಿತೈಷಿಯಾಗಿದ್ದ ತುಂಬ ಸರಳ ಜೀವನವನ್ನು ಸಾಗಿಸುವವರು, "ವಸ್ತ್ರೇಣ-ವಪುಷಾ-ವಾಚಾ ವಿದ್ಯಮಾ ವನಯೇನ ಚ" ಎಂದು ಸುಭಾಷಿತದಲ್ಲಿ ಹೇಳಿರುವ ಗೌರವಸ್ಥಾನವಾದ ಮೊದಲ ಎರಡರ ಬಗ್ಗೆ ಗಮನ ಕೊಡದೇ ಇದ್ದರೂ ಉಳಿದ ಮೂರು ಭಗವಂತನ ಕೃಪೆಯಿಂದ ಜನ್ಮಸಿದ್ಧವಾಗಿಯೇ ಅವರಿಗೆ ಬಂದಿದೆ. ಎಲೆಯ ಮರೆಯ ಕಾಯಿಯಂತೆ ಇದ್ದ ಇವರು ಅನೇಕ-ಪತ್ರಿಕೆ ಮಾಧ್ಯಮಗಳಲ್ಲಿ, ದೂರದರ್ಶನ ಹಾಗೂ ಆಕಾಶವಾಣಿ ಮುಂತಾದ ಕಡೆಗಳಲ್ಲಿ ಧರ್ಮವನ್ನು ಪ್ರಸಾರ ಮಾಡಿ ತಮ್ಮಿಂದ ಸಂಗ್ರಹಿಸಲ್ಪಟ್ಟ ಅಮೂಲ್ಯವಾದ ಲೇಖನಗಳನ್ನು ಇಲ್ಲಿ ಒಂದುಗೂಡಿಸಿ ದ್ದಾರೆ.

ಈ ಸುಂದರವಾದ ಹೊತ್ತಿಗೆಯು ಅಧ್ಯಯನ, ಅಧ್ಯಾಪನ ಮಾಡುವವರಿಗೆ ಮಾರ್ಗದರ್ಶಕವಾಗಲಿ ಇನ್ನು ಹೆಚ್ಚು ಇವರ ಕೊಡುಗೆ ಸಮಾಜಕ್ಕೆ ಸಿಗುವಂತಾಗಲಿ ಎಂದು ಹಾರೈಸುವೆ.

ಕೃಷ್ಣಮೂರ್ತಿ ಬಾಯರಿ
ಸಂಸ್ಕೃತ ಪ್ರೊಫೆಸರ್
ಜಯಚಾಮರಾಜೇಂದ್ರ ಸಂಸ್ಕೃತ ಕಾಲೇಜು
ಬೆಂಗಳೂರು

ಓದುಗರಲ್ಲಿ ಅರಿಕೆ

ಈ ಹೊತ್ತಗೆಯಲ್ಲಿ ನನ್ನ ಬಿಡಿಬರಹಗಳ ಎರಡು ಭಾಗಗಳು ಪ್ರಕಟವಾಗಿವೆ ಸಾಪ್ತಾಹಿಕಗಳಲ್ಲಿ, ಕೆಲವು ವಿಶೇಷ ಸಂಚಿಕೆಗಳಲ್ಲಿ, 'ಸ್ವಯಂ ಪ್ರಕಾಶ' 'ಸ್ಮಾರ್ತ ಸಂದೇಶ'ದಂತಹ ಮಾಸಿಕ–ತ್ರೈಮಾಸಿಕಗಳಲ್ಲಿ ಆಗಾಗ ಕಾಣಿಸಿಕೊಂಡಿದ್ದ ಲೇಖನ ಗಳು ಪುನಃ ಪ್ರಕಟವಾಗುತ್ತಿವೆ. ಕೆಲವು ಲೇಖನಗಳ ಬಗೆಗೆ ಓದುಗರ ಮೆಚ್ಚುಗೆಯ ಪ್ರತಿಕ್ರಿಯೆ, ಅಭಿನಂದನೆಗಳು ನನ್ನ ಈ ಸಾಹಸಕ್ಕೆ ಪ್ರೇರಣೆ ಬಿಡಿಬಿಡಿಯಾಗಿ ಪ್ರಕಟವಾದ ಲೇಖನಗಳ ಪುಸ್ತಕ ರೂಪದ ಪುನರ್ಮುದ್ರಣ ನನ್ನ ಈ ಉತ್ಸಾಹದ ಚಿಲುಮೆಯನ್ನು ಉಕ್ಕಿಸಿದುದು ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀಸ್ವಾಮಿಗಳ "ನಿಮ್ಮ ಲೇಖನ ಚೆನ್ನಾಗಿ ಬರುತ್ತಿದೆ" ಎಂಬ ಆಶೀರ್ವಚನ. 'ಸ್ವಯಂ ಪ್ರಕಾಶ'ದ ಸಂಪಾದಕ ಗುರುಸೇವಾ ರತ್ನ ಹರಿಹರಪುರ ಸುಬ್ರಹ್ಮಣ್ಯಂರವರ ನಿರಂತರ ಪ್ರೋತ್ಸಾಹವೂ ಇದಕ್ಕೆ ಸ್ಫೂರ್ತಿ.

ಭದ್ರಾವತಿ, ಹಾಸನ, ಬೆಂಗಳೂರಿನ ಆಕಾಶವಾಣಿಯಲ್ಲಿ ಬಿತ್ತರಗೊಂಡ, 'ಚಿಂತನ' ಮೊದಲಾದ ಅ ಪ್ರಕಟಿತ ಲೇಖನಗಳೊಂದಿಗೆ ಕೆಲವು ಅನುಭವ ಕಥನ ಗಳೂ, ಒಂದೆರಡು ಉಪನ್ಯಾಸಗಳೂ ಎರಡನೆಯ ಭಾಗದಲ್ಲಿ ಅಚ್ಚಾಗಿವೆ ಸುಮಾರು 20–22 ವರ್ಷಗಳ ಹಿಂದೆ ಚಿಕ್ಕಮಗಳೂರು ಜಿಲ್ಲೆಯ ಹರಿಹರಪುರ ದಲ್ಲಿ ಆಕಾಶವಾಣಿ ಕಾರ್ಯಕ್ರಮವೊಂದರ ಧ್ವನಿ ಮುದ್ರಣಕ್ಕಾಗಿ, ಅಂದು ಭದ್ರಾವತಿ ಆಕಾಶವಾಣಿಯಲ್ಲಿ ಕೃಷಿವಿಭಾಗದ ಅಧಿಕಾರಿಗಳಾಗಿದ್ದ ಶ್ರೀಯುತ ಸದಾನಂದ ಹೊಳ್ಳರ ಪರಿಚಯವಾಯಿತು. ಈ ಆಕಸ್ಮಿಕ ಸ್ನೇಹದಿಂದಾಗಿ ಮುಂದೆ ಅವರು ಆತ್ಮೀಯ ಸ್ನೇಹಿತರಾದರು, ಭದ್ರಾವತಿ ಆಕಾಶವಾಣಿಯಲ್ಲಿ ನನ್ನ 'ಚಿಂತನ'ಗಳು ಪ್ರಸಾರವಾಗಲು ಕಾರಣರಾದರು. ಇವರಿಗೆ ನಾನು ಕೃತಜ್ಞ, ನಂತರ ಹಾಸನ, ಬೆಂಗಳೂರು ಆಕಾಶವಾಣಿಯಲ್ಲಿ ಬಿತ್ತರಗೊಂಡ ಎಲ್ಲ ಕಾರ್ಯಕ್ರಮಗಳಿಗೆ ಆಯಾ ಕೇಂದ್ರದ ಸಹೃದಯ ಅಧಿಕಾರಿ ಬಂಧುವರ್ಗದವರ ಆತ್ಮೀಯ ಸಹಕಾರವನ್ನು ಮರೆಯಲಾಗದು. ಇವರಿಗೂ ನನ್ನ ಕೃತಜ್ಞತೆಗಳು ಸಲ್ಲಬೇಕು.

2–3 ಕಡೆ ವಾಸ್ತವ್ಯದ ಸ್ಥಳಾಂತರದ ಅವಾಂತರಗಳು ಮತ್ತು ಮರೆವಿನಿಂದಾಗಿ ಎಲ್ಲ ಬರವಣಿಗೆಯನ್ನೂ ಸಂಗ್ರಹಿಸಲಾಗಿಲ್ಲ ಮತ್ತು ಕಾಲಾನುಕ್ರಮವಾಗಿ ಜೋಡಿಸಿ ಅಚ್ಚುಹಾಕಿಸಲು ಸಾಧ್ಯವಾಗಿಲ್ಲ. ಬೇರೆ ಬೇರೆ ಕಾಲ ಘಟ್ಟಗಳಲ್ಲಿ, ವಿಭಿನ್ನ ಸನ್ನಿವೇಶಗಳಲ್ಲಿ ಬರೆದ ಅನೇಕ ಲೇಖನಗಳ ವಿಷಯಗಳು ಪುನಾರಾವರ್ತಿತ ವಾಗಿವೆ. 2–3 ದಶಕಗಳ ಹಿಂದಿಗೂ, ಇಂದಿಗೂ ಆದ, ಆಗುತ್ತಿರುವ ಸಾಮಾಜಿಕ ಸುಧಾರಣೆ ಮತ್ತು ಬದಲಾವಣೆಗಳಿಂದಾಗಿ ಅಂದಂದಿನ ಕೆಲವು ಲೇಖನಗಳು ಈಗ ಅಪ್ರಸ್ತುತವೆನಿಸಬಹುದು. ಅಂತಹ ಅಸಾಮಯಿಕ (outdated)ಸಂಗತಿಗಳ ಜೊಳ್ಳನ್ನು ತೂರಿ, ಗ್ರಾಹ್ಯವೆನಿಸುವ ಸಾರ್ವಕಾಲಿಕ ಸತ್ವ–ವಿಷಯಗಳನ್ನು ಮಾತ್ರ ಸ್ವಿಕರಿಸಿ. ಟೀಕೆ–ಟಿಪ್ಪಣಿ, ಸಲಹೆ–ಸೂಚನೆಗಳಿಗೆ ಸ್ವಾಗತವಿದೆ.

ನನ್ನ ಲೇಖನಗಳನ್ನು ಮೆಚ್ಚಿ ಆಶೀರ್ವದಿಸಿದ ಅಭಿನಂದಿಸಿದ ಮಹಾನು ಭಾವರಿಗೆ ಮತ್ತೊಮ್ಮೆ ನಮನಗಳು.

ಇಂತಿ

ಎಸ್.ವಿ. ಅಡಿಗ

ಪೂರ್ವಾರ್ಧ ವಿಷಯಾನುಕ್ರಮಣಿಕೆ

ದ್ವಿತಿಯಾರ್ಧ ವಿಷಯಾನುಕ್ರಮಣಿಕೆ

ಬಿಡಿ ಬರಹಗಳ

ಪೂರ್ವಾರ್ಧ

ಮದುವೆಯ ಬಗ್ಗೆ
ಜನವರಿ 12, 2012 ರಂದು
ಆವಲಹಳ್ಳಿಯಲ್ಲಿ ನಡೆದ
ಚಿ। ಸೌ। ಸುಕೃತಿ
ಮತ್ತು
ಚಿ। ಹರ್ಷಿಲ್ ರವರ
ಮದುವೆಯಲ್ಲಿ ಮಾಡಿದ
ವಿವರಣಾತ್ಮಕ ಉಪನ್ಯಾಸ

Marriage

Marriage is an important stage in the life of both bride and bridegroom. Before marriage bride is a girl, a sister, daughter, grand-daughter a miss and so on. The bridegroom is a boy, son, brother, grandson, master and so on. After marriage the status of both changes. The girl will be mistress, wife, daughter-in-law, sister-in-law and in course of time she will be mother, grand-mother and so on. The boy becomes mister, husband, son-in-law, brother-in-law and in course of time he will be father, grand-father, and uncle and so on. Both will be partners to lead the house hold life. Their lifestyle changes immediately. They will be jointly responsible for all the activities of their guests, friends, intimates, society and all the relatives of both the families. Therefore a Sanskrit poet exclaims ಧನ್ಯೋಗೃಹಸ್ಥಾಶ್ರಮಃ a family man is blessed.

Smruthis and Dharmashastras have enumerated 8 forms of marriage. Brahma, Daiva, Arsha, Prajapatya, Asura, Gandharva, Rakshasa and Paishacha.

1. In Brahma Vivaha the father of the girl gives her respectfully to a man of character and learning, after decking her with such ornaments as he could afford and without taking anything in return. This Salankrutha Kanyadana to gruhagataya Snatakaya Varaya गृहागताय स्नातकाय वराय.
2. In Daiva, the decorated girl will be given away by her father to a priest who officiated at a sacrifice commenced by him.
3. After receiving from the bridegroom a pair of kine (ಹಸು) exclusively meant to be used in a sacrifice, if the father gives his daughter to him (who is considered worthy) it is Arsha form of marriage.
4. If the suitor pays money to the relations of the girl and also to girl herself, and accepts her as his bride out of free will, it is Asura form of marriage.
5. If the bride and the groom choose each other out of love and passion, resulting in their union, it is the Gandharva form.
6. In the Rakshasa form of marriage, the girl is abducted or captured by force, by killing or injuring her relatives.
7. IN the Paishacha form, the girl is ravished when she is sleeping or is unconscious.

The last two forms being of a criminal nature are condemned. However, for Kshatriya Heroes, the Rakshasa mode was permitted.

At present, it is only the Brahma form that is prevalent. The system of fixing dowry and making it the main consideration, in settling the marriage does not seem to have existed in the ancient times.**Wedding ring exchange**

The wedding ring in general use in Christian marriage, by the 9th century, dates back to the ancient Egyptians. The ring is placed on the third finger of the brides hand because it was thought that this finger carried a vein leading directly to the heart.

Made from gold, the most enduring of metals, the wedding band is supposed to confirm upon its wearers a perfect a lifelong union, hence the superstition that a broken wedding ring is a portent of disaster.

Many of the present day wedding customs that we take for granted, are really born of age old traditions. For example, the wedding veil was introduced by ancient Greeks and Romans to protect the bride from the evil eye of a jealous rival suitor.**Receiving the bridegroom**

In olden days marriage was celebrated in the bride's residence which would be specially decorated. When a Snataka arrives, he is received with great grandeur. Both the families chant unitedly - ಸಮಾನೀವ ಆಕೂತಿಃ ಸಮಾನಾ ಹೃದಯಾನಿವಃ । ಸಮಾನ ಮಸ್ತುವೋ ಮನೋ ಯಥಾವಃ ಸುಸಹಾನತಿ. ಸಮಾನೋ ಮಂತ್ರಃ ಸಮಿತಿಃ ಸಮಾನೀ ಸಮಾನಂಮನಃ ಸಹ ಚಿತ್ತಮೇಷಾಂ । ಸಮಾನಂ ಮಂತ್ರಮಭಿ ಮಂತ್ರಯೇವ ಸಮಾನೇನವೋ ಹವಿಷಾಜುಹೋಮಿ ॥

Let our thoughts be the same. Let there be unity. Let all our desires be fulfilled without any hindrance and difficulty.

Then girl's father makes oral promise to give his daughter to the broom in marriage. This is Vagdana which is binding.

Then both the parties exchange their ancestral details in the assembly loudly to rejoice the familiarity and to confirm that both the bride and the groom must have come from a good vamsha or a pure family, blameless from the highest ethical standards. This is Kanyavarana.

Samavarthana

Samavarthana means return from gurukula, returning from the house of the teacher to one's own house after completing Vedic studies. Since a ceremonial bath was a necessary part of it, it was also known as Snana (¸Áß£À) and aplavana (both of which mean bathing).

After this rite the Brahmachari becomes Snataka means a degree holder and now he will be free to marry a suitable girl and settle down as a Grahasta (or house holder).

For the Samavarthana rite an auspicious day has to be fixed. Permission of the Guru (preceptor) is to be sought after offering him suitable Gurudakshina (gift).

After a ceremonial bath he has to cast off his old outfit completely and put on new cloths more comfortable and suitable for a house holder's lift. He can accept ornaments, umbrella, shoes, flower garlands and so on which were forbidden till now during Brahmacharya.

Formerly this Samavarthana was being arranged in Gurukula, but in modern days the rite of Samavarthana is observed just before marriage as a formal ritual shorn of its meaning and seriousness as Kashiyatra.

Madhuparka Pooja

Madhuparka Pooja is one of the important rituals of marriage. Madhuparka is offered to the bridegroom at the bride's house as a mark of honor.

Madhuparka may be prepared out of 3 materials curds, honey and ghee or 5 materials curds, honey, ghee, water and sugar. Usually only the mixture of three materials curds, honey and ghee is offered in the marriage to the bridegroom along with new cloths, silver articles, gold etc.

Kanyadana

Kanya is defined as an unmarried girl about ten years in age. She was supposed to be protected by Soma, Gandharva and Agni before her marriage, Rigveda mantra says

ಸೋಮೋದದದ್ಗಂಧರ್ವಾಯ ಗಂಧರ್ವೋದದಗ್ನಯೇ ।

ಸೋಮಃ ಪ್ರಥಮೋವಿವಿದೇ ಗಂಧರ್ವೋವಿವಿದ ಉತ್ತರಃ ।

ತೃತೀಯೋ ಅಗ್ನಿಷ್ಟೇಪತಿಃ ತುರೀಯಸ್ತೇಮನುಷ್ಯಜಾಃ ॥

A few of the most common and general qualifications of a Kanya to be married are ಬಾಂಧವಮ್ or purity of the family, Rupam-beauty, Prajna-intelligence and Vittam-wealth. Some other qualifications of a girl expected by the groom is uttered by him when he sees the girl for the first time when the screen (ಅಂತಃಪಟ) is removed in Nireekshana.

ಅಘೋರ ಚಕ್ಷುರವತಿಘ್ನ್ಯೇಧಿಶಿವಾಪಶುಭ್ಯಃ ಸುಮನಾಃ ಸಹವರ್ಚಾಃ ।

ವೀರಸೂರ್ದೇವಕಾಮಾಸ್ಯೋನಾಶಂನೋಭವ ದ್ವಿಪದೇ ಶಂ ಚತುಷ್ಪದೇ ॥

Your look should be pleasing, your attitude should be harmless to me, you should always be good to the animals, your heart should be merciful and you should be mother of a hero male child, and you should be liked by gods with your devotion to them.

In olden times, there was no meeting of both before marriage. They could see each other only during removal of ಅಂತಃಪಟ. All the earlier rituals were to be performed by the elders of both the families.

Kanyadana means gifting the maid to the young man in marriage. It is considered as one of the sixteen maha danas (ಷೋಡಶಮಹಾದಾನ). Hinduism considers marriage as a sacrament. After the marriage husband and wife are co-travelers and companions in the path of spiritual evolution.

When a suitable young man has been found as a match for his daughter, the father of the girl has to give her to him in a religious rite known as Kanyadana. He says that I marry my daughter to him.

ಅವ್ಯಂಗೇಪತಿತೇಕ್ಲೀಬೇ ದಶದೋಷವಿವರ್ಜಿತೇ ।
ಉನ್ಮತ್ತಾವೃತ್ತಿಹೀನಾಶ್ಚತಥಾಪಸ್ಮಾರದೂಷಿತಾಃ ।
ದೂರಸ್ಥಾಃ ಕುಷ್ಠಿನೋ ಮೂರ್ಖಾಃ ಮೋಕ್ಷಮಾರ್ಗಾನುಸಾರಿಣಃ
ಶೂರಾವೇದ್ಯಾ ನಿರ್ವೃತ್ತಾದಶದೋಷಯುತಾವರಾಃ ॥

Means, the boy should not be
Physically handicapped,
Downtrodden,
Impotent,
Passionate,
Jobless
Should not have forgetfulness,
Be in abroad
Suffering from leprosy
An idiot,
A person who wants liberation from worldly affairs,
Worries
An illiterate and
Uninterested in the married life

If the father is satisfied with the specialties and qualifications of the young man, that he expected, he puts the hands of his daughter on his hands pouring the holy water. The father of the bride tells the bridegroom in this rite that he should not prove false to the bride in Dharma, Artha and Kama ಧರ್ಮೇಚ ಅರ್ಥೇಚ ಕಾಮೇಚ ನಾತಿಚರಿತವ್ಯಾತ್ವಯೇಯಂ. The bridegroom responds with the promising words. ನಾತಿ ಚರಾಮಿ I should not do so.

Akshataropana

Akshataropana is exchange of wishes needs and hopes of each other thrice.

ವಧು	ವರ
भगो मे कामः समृध्यताम्	यज्ञो मे कामः समृध्यताम्
श्रीयो मे कामः समृध्यताम्	धर्मोमे कामः समृध्यताम्
प्रजा मे कामः समृध्यताम्	यशो मे कामः समृध्यताम्
ವರ	**ವಧು**
यज्ञो मे कामः समृध्यताम्	भगो मे कामः समृध्यताम्
धर्मोमे कामः समृध्यताम्	श्रीयो मे कामः समृध्यताम्
यशो मे कामः समृध्यताम्	प्रजा मे कामः समृध्यताम्

Good fortune, wealth, strength and children are the wishes of the bride, and Yajna, Dharma and fame are the desires of bridegroom.

The practice of throwing rice and confetti at weddings has its origins in an old Greek fertility rite of showering sweet meats over the couple. The act was also meant to confir Prosperity on the pair.

In the Celebes, or Sulawesi Islands of Indonesia, the belief is that unless the groom's soul is bribed with a shower of rice, it will fly away after the wedding and never return.

Vivaha Homa

The sacred fire is established for offering oblations with appropriate mantras **ಅಗ್ನ ಆಯೂಂಷಿ ಪವಸ ಆಸುವ್ರೋರ್ಜಮಿಷಂಚ ನಃ। ಆರೇಬಾಧಸ್ವದುಚ್ಛುನಾಂ।**

Oh sacred fire guard us with food and avoide famine.

ಅಗ್ನಿರ್ಋಷಿಃ ಪವಮಾನಃ ಪಾಂಚಜನ್ಯಃ ಪುರೋಹಿತಃ । ತಮೀಮಹೇಮಹಾಗಯಂ ॥

I pray for wealth, home, energy and luster.

ಅಗ್ನೇಪವಸ್ವಸ್ವಪಾ ಅಸ್ಮೆವರ್ಚಃ ಸುವೀರ್ಯಂ । ದಧದ್ರಯಿಮಯಪೋಷಂ ॥

Oh sacred fire by accepting our sweet ghee offered, you unite the feelings of we both.

ಪ್ರಜಾಪತೇ ನಸ್ವದೇತಾನ್ಯನ್ಯೋವಿಶ್ವಾಜಾತಾನಿ ಪರಿತಾ ಬಭೂವ ।
ಯತ್ಕಾಮಾಸ್ತೇಜುಹುಮಸ್ತನ್ನೋ ಅಸ್ತು ವಯಂಸ್ಯಾಮಪತಯೋರಯಿಣಾಂ ॥

Oh ! universal God, fulfill our desire for wealth and food.

Laja Homa

This consists in the bride offering laja or parched paddy grains into the homa fire, assisted by her brother. While the bride groom repeats the concerned mantras. It is symbolical of fecundity (ಫಲದಾಯಕತೆ)and prosperity.

Panigrahana

ಗೃಭ್ಣಾಮಿತೇ ಸೌಭಗತ್ವಾಯ ಹಸ್ತಂ ಮಯಾಪತ್ಯಾ ಜರದಷ್ಟಿರ್ಯಥಾಸಃ ।

ಭಗೋ ಅರ್ಯಮಾ ಸವಿತಾ ಪ್ರರಂಧಿಃ ಮಹ್ಯಂತ್ವಾ ದುರ್ಗಾರ್ಯಪತ್ಯಾಯ ದೇವಾಃ ॥

Oh bride !

The gods like ಭಗ, ಅರ್ಯಮಾ, ಸವಿತಾ, ಪುರಂಧಿ, ಪೂಷಾ gifted you to me to maintain household and blessedness. You will be with me till old age.

The groom holds only the thumb of the bride if he desires only male children, if he holds all other fingers only, then his desire is only female issues. If his desire is to have both male and female children, then he should hold all the 5 fingers of the bride. This signifies also his taking full responsibility of her.

ಗೃಭ್ಣಾಮಿತೇ ಸೌಭಗತ್ವಾಯ ಹಸ್ತಂ ಇತ್ಯಂಗುಷ್ಠಮೇವಗೃಹ್ಣೀಯಾತ್, ಯದಿಕಾಮಯೇತ ಪುಮಾಂಸ ಏವ, ಮೇ ಪುತ್ರಾ ಜಾಯೇರನ್ನಿತಿ ॥ ಅಂಗುಳೀರೇವ ಸ್ತ್ರೀ ಕಾಮಃ ॥ ಹೋಮಾಂತೇ ಹಸ್ತಂ ಸಾಂಗುಷ್ಠಂ ಉಭಯಕಾಮಃ ॥

Saptapadi

Without Saptapadi or seven steps by the bride with the groom the marriage is not complete. It is just like registration of marriage and very important also, according to Dharmashastra or Jurisprudences. In the marriage process, the marriage may be broken at any stage before Saptapadi and both the bride and bridegroom are at liberty to get married as they choice and such a marriage is not considered as second marriage. In this regard, I quote section 437 of Hindu marriage act.

The ceremonies are essential for the validity of marriage

a) Invocation before the sacred fire,

b) Saptapadi i.e.,

The taking of seven steps by the bridegroom and bride jointly before the sacred fire. The marriage becomes complete only when the seventh step is taken. Till then it is imperfect and revocable.

Saptapadi is just like an oath taking before the sacred fire taking steps on seven piles of rice.

ಇಷ ಏಕಪದೀ ಭವ । ಸಾಮಾಮನುವ್ರತಾ ಭವ. ಪುತ್ರಾನ್ವಿಂದಾವಹೈ ಬಹೂಂಸ್ತೇ । ಸಂತುಜರದಷ್ಟಯಃ । on the first step of bride the groom says You follow me on the first step for energy, strength and efficiency Let us produce successors till old age.

ಊರ್ಜೇದವಿಪದೀಭವ you follow me on the second step for food, let us produce successors till old age.

ರಾಯಸ್ಪೋಷಾಯ ತ್ರಿಪದೀಭವ you follow me on the third step for protection of wealth that I earn, let us produce successors till old age.

ಮಯೋಭವ್ಯಾಯ ಚತುಷ್ಪದೀ ಭವ you follow me on the fourth step to enjoy by fulfilling our needs and desires, let us produce successors till old age.

ಪ್ರಜಾಭ್ಯಃ ಪಂಚವಪದೀಭವ you follow me on the fifth step to get children.

ಋತುಭ್ಯಃ ಷಟ್ಪದೀಭವ you follow me on sixth step to achieve everything of all the seasons let us produce successors till old age.

ಸಖಾ ಸಪ್ತಪದೀ ಭವ you follow me on the seventh step for good understandings and friendship let us produce successors till old age.

Ashmaropana

During perambulation (going round the sacred fire) thrice, after every round, with the chanting of this mantra, the bride should tread on a mill stone. The groom says ಇಮಮಶ್ಮಾನಮರೋಹ, ಅಶ್ಮೇವ ತ್ವಂ ಸ್ಥಿರಾಭವ. ಸಹಸ್ವವೃತನಾಯತೇ । ಅಭಿತಿಷ್ಠವೃತನ್ಯತಃ ॥

You step on this stone and stand steadily like a stone and take firm decision and be bold to face internal and external enemies and conquer them. Also it symbolizes firmness of her relation with her husband.

Mangala Sutra Bandhana

After the Saptapadi, the bridegroom ties the Mangala Sutra with blessings of elders, round the neck of the bride with 3 knots. She should wear it always as long as her husband is alive. The Sutra generally consists of a string with golden and other beads including a coin shaped amulet. Though this is considered as one of the most important aspects of marriage ritual now, it has not been mentioned in the earlier Dharmashastras. The **ಶೌನಕ ಸ್ಮೃತಿ** is the earliest treatise that mentions it. It is said that the practice must have come into vogue around 1000 AD.

ಬಳುವಳಿ – ಬೀಳ್ಕೊಡುಗೆ

When the bride is about to leave her father's place, for her husband's, she is offered full presents - ಬಳುವಳಿ and her hands are put on the hands of her in-laws with a request to treat her with love and consideration.

The relevance of **ಅರುಂಧತೀ ದರ್ಶನ**

Arundhati is wife of Vasishta, one of the seven great Rishis. She doubted the character of Vasista, therefore lost her luster (ಕಾಂತಿ). Still she is considered a unique devoted and virtuous wife (ಪತಿವ್ರತೆ) who is very faithful to her husband. When Saptarishis were doing याग (sacrifies) with their wives, Agni fell in love with the wives of Rishis attracted by their beauty and loveliness. But he could not enjoy with any of the them. He became ascetic (ಬೈರಾಗಿ) and went to forest. At the same time, one of the daughters of Daksha by name Swahadevi who was in great love with Agni was waiting for an opportunity to enjoy with Agni, went in disguise to Agni in the forms of the wives of Saptarishis, except Arundhati. The six Rishis discarded their wives doubting their characters, but Arundhati remained with Vasishta. Hence she is considered as ಮಹಾಪತಿವ್ರತೆ. These Saptarishis are identified in the sky in the form of a kite and Arundhati twinkling among them.

The married couple should see these ಸಪ್ತಋಷಿಸ್ with Arundhati and the bride should pray to bless her for long life with husband and good issues. This is suggestive of being firm in conjugal life.

The Shastras say that the couple should begin conversation only after seeing ಅರುಂಧತಿ. Till then they are not permitted to talk with each other ರಾತ್ರೌ ಅರುಂಧತೀದರ್ಶನಾನಂತರಮೇವ ವಾಗ್ವಿಸರ್ಗಃ ॥

ಗೃಹಪ್ರವೇಶ

After Vivaha home in the bride's residence, the bridegroom goes to his residence with his life partner. There were no modern vehicles in olden days. The bridegroom used to come in a palanquin or litter carried by 2 or 4 persons, in wedding procession and return with newly wedded bride on the same. On the way if he meets Guru or any old and esteemed persons, he would show his bride and say ಸುಮಂಗಲೀರಿಯಂ ವಧೂರಿಮಾಂ ಸಮೇತ ಪಶ್ಯತ । ಸೌಭಾಗ್ಯಮಸ್ಯೈ ದತ್ವಾಯಾಥಾಸ್ತಂ ವಿಪರೀತನ ॥ इयं वधूः सुमंगलीः. This my wife is ಸುಮಂಗಲಿ इमां समेत पश्यत approach her and see अस्यै

सौभाग्यं दत्वा अस्तम् याथाः. Bless her with good fortune and then proceed. When the bridegroom enters his house with his newly wedded wife, he says ಇಹೈವಸ್ತಂ ಮಾವ್ಯೋಷ್ಟಂ ವಿಶ್ವಮಾಯುರ್ವ್ಯಶ್ನುತಂ । ಕ್ರೀಡಂತೌಪುತ್ರೈರ್ನಪ್ತೃಭಿಃ ಮೋದಮಾನೌ ಸ್ವೇ ಗೃಹೇ .

Oh ! dear bride, let us stay here only, Let us not separate, there may not be any mis-understandings between us. Let us enjoy full duration of life and play with kids, grand children and grand grand children with pleasure.

Some interesting marriage rituals in other countries

How different people love, honors and cherish !

1. When two women of the Choroti and Chaco tribes of Paraguay want to marry the same man, they don tapis-skin boxing gloves and fight it out between them.
2. Girls from the Trobriand Islands, near Papua, begin their live overtures (ಮದುವೆ ಪ್ರಸ್ತಾಪ) in a different way by going up to the man of their choice and biting him. In fact courting habits, both ancient and modern, involve the most complicated rituals and taboos. A cold climate courting custom known as “bundling” was popular in Holland, Switzerland, New England, Scotland and Wales. It allowed couples to lie in bed provided they were clothed and wrapped separately in blankets.
3. In 19^{th} century rural Scotland, pregnancy was almost the rule for brides. A Royal commission of 1868 established that 9 out of 10 women were pregnant on their wedding day in Scotland, a situation hardly in accord with the highest Victorian precepts.
4. In other societies, however, betrothal sometimes involved complete separation of the intended couple. A girl betrothed to a chieftain or other dignitary in the Solomon Islands, in the Pacific was kept imprisoned in a cage, sometimes for years, under the watchful eye of her father, until her wedding day.
5. On the German Island of Bunkum in the mouth of the river Ems, an ordeal by smoke and water was once the punishment ?? out to man who had been courting a girl but was dilatory in naming the day. Young men of the village would surround his house and block the chimney, filling the place with smoke. Then they would remove the roof tiles, climb inside through the loft and challenge the lover Are you engaged ? If he said he was, the whole village celebrated, but if his answer was “No” he would be dragged at the end of a rope three times through a pond.Aphrodisiac (ಆಫ್ರೋಡಿಜಿಯಾಕ್) dink (ಕಾಮೋತ್ತೇಜಕಪೇಯ)

In many societies the consummation of marriage is more important than the ceremony itself to the family, as well as to the bride and groom. The term honey-moon, when the consummation takes place, derives from an old northern European custom of drinking honeyed wine or mead as an aphrodisiac during the first month of marriage.

An old Greek Cypriot custom is to roll a Chubby baby boy up and down on the bride bed before the consummation to ensure the couple will be blessed with healthy male children.

It was once customary among the Pleasants of Languedoc in France, for friends to burst into the bridal chambers and offer the groom and bride soup from a chamber pot. The soup was meant to endow the couple with vigor, so ensuring that their marriage would be quickly blessed with children.

Newly married couples of 17th century Brittany were expected to wait three nights before consuming their marriage. The first night was dedicated to God, the second to St. Joseph, and the third to ghee groom's personal patron saint.

The Yezide sect of Northern Iraq are considerably less restrained. They lock the couple in a room, and after consummation the bridegroom knocks three times on the door which is opened by the priest, who fires a gun as a signal of general acclaim and the commencement of the festivities.

Conjugal Claims in India

When a young man of Jodras tribe of Nilgiries, a district in Tamil Nadu, marries his brothers have conjugal claims on the bride because she is considered married into the family.

If the bride becomes pregnant, a ceremony known as PURSUTPIMI is performed to fix paternity. After a discussion among the potential fathers, the man chosen presents the bride with a symbolic bow ad arrow under a Kiaz tree, in the presence of an elder. Any further children are also considered to be those of the man first selected in PURSUTPIMI including those born after his death until some other man performs the ceremony.

ಆಕಾಶವಾಣಿ – ಭದ್ರಾವತಿ

ಯುಗಾದಿ

ಇಂದು ಚಾಂದ್ರಮಾನ ಯುಗಾದಿ. ಶ್ರೋತೃಗಳಿಗೆ ಯುಗಾದಿಯ ಶುಭಕಾಮನೆಗಳನ್ನು ತಿಳಿಸಿ ಇಂದಿನ 'ಚಿಂತನ' ವನ್ನು ಪ್ರಸ್ತುತಪಡಿಸುತ್ತೇನ. 'ಯುಗಾದಿ' ಎಂಬುದಕ್ಕೆ 'ಯುಗದ ಪ್ರಾರಂಭ' ಎಂದು ಶಾಬ್ದಿಕ ಅರ್ಥ. ಆದರೆ ಈಗ 'ವರ್ಷದ ಆದಿ' ಎಂಬ ಅರ್ಥದಲ್ಲಿ ಪ್ರಚಲಿತವಿದೆ. ಚಂದ್ರನ ಗತಿಯನ್ನನುಸರಿಸಿ ಕಾಲಗಣನೆ–ಚಾಂದ್ರಮಾನ. ಸೂರ್ಯನ ಗತಿಯನ್ನನುಸರಿಸಿದ ಕಾಲಗಣನೆ–ಸೌರಮಾನ.

ಯಾವ ಹುಣ್ಣಿಮೆಯಂದು ಯಾವ ನಕ್ಷತ್ರ ಚಂದ್ರನೊಡನಿರುತ್ತದೆಯೋ ಆ ನಕ್ಷತ್ರದ ಹೆಸರಿನಲ್ಲಿ ಆಯಾ ಚಾಂದ್ರಮಾನ ಮಾಸವನ್ನು ಹೆಸರಿಸಲಾಗುತ್ತದೆ. ಹುಣ್ಣಿಮೆಯಂದು ಚಿತ್ರಾ ನಕ್ಷತ್ರ ಚಂದ್ರನೊಡನಿರುವ ತಿಂಗಳೇ ಚೈತ್ರಮಾಸ. ಚೈತ್ರಮಾಸದ ಮೊದಲ ದಿನ ಚಾಂದ್ರಮಾನ ಯುಗಾದಿ, ಮೇಷ–ವೃಷಭ ಮೊದಲಾದಂತೆ ಆಯಾ ರಾಶಿಯಲ್ಲಿ ಸೂರ್ಯನು ಸಂಚರಿಸುವ ತಿಂಗಳನ್ನು ಮೇಷಮಾಸ, ವೃಷಭ ಮಾಸ–ಹೀಗೆ ಆಯಾ ಹೆಸರಿನಿಂದ ಕರೆಯಲಾಗುತ್ತದೆ. ಮೇಷ ಮಾಸದ ಮೊದಲನ ದಿನ ಅಂದರೆ ಏಪ್ರಿಲ್ 14ರಂದು ಸೌರಮಾನ ಯುಗಾದಿ. ಮಕರ ಮಾಸದ ಮೊದಲ್ ತೇದಿ ತಮಿಳ್ ಯುಗಾದಿ. ಜನವರಿ 1 ಆಂಗ್ಲ ಯುಗಾದಿ.

ಯುಗಾದಿಯ ಆಚರಣೆ ವೈವಿಧ್ಯಮಯವಾಗಿದ್ದರೂ ಮೂಲ ಆಶಯ ಒಂದೇ ಆಗಿದೆ–ಹೊಸವರ್ಷವನ್ನು ಸಂಭ್ರದಿಂದ ಸ್ವಾಗತಿಸುವುದು; ಹೊಸ ಬದುಕಿಗೆ ಮಾನಸಿಕ ವಾಗಿಯೂ ಪ್ರಾಯೋಗಿಕವಾಗಿಯೂ ಸಿದ್ಧವಾಗುವುದು.

ಆಂಗ್ಲ ಯುಗಾದಿ ರಾತ್ರಿ 12 ಗಂಟೆಯಾದೊಡನೆ ಪ್ರಾರಂಭ. ಭಾರತೀಯರು ಉಷಃಕಾಲದಿಂದ ಆಚರಿಸುವುದು ರೂಢಿ. ಮನಸ್ಸಿಗೆ ಮುದ ನೀಡುವಂತೆ ತಳಿರು ತೋರಣಗಳಿಂದಲೂ, ಬಣ್ಣದ ಚಿತ್ತಾರದೊಡನೆ ರಂಗವಲ್ಲ್ಯಾದಿಗಳಿಂದಲೂ ಮನೆಯನ್ನು ಸಿಂಗರಿಸಿರಬೇಕು. ಪ್ರಸನ್ನಚಿತ್ತರಾಗಿ ವಾರ್ಷಿಕ ಯೋಜನೆಯನ್ನು ಅಂದಾಜಿಸಬೇಕು. ಅಂದರೆ 'ಶುಭ ಸಂಕಲ್ಪ' ಮಾಡಬೇಕು. 'ನಾನು ಇದನ್ನು ಮಾಡುತ್ತೇನೆ' ಎಂದು ವರ್ತಮಾನ – ಭವಿಷ್ಯಗಳ ಚಿಂತನೆಯೇ ಸಂ–ಕಲ್ಪ.

ಇಂದು ಬೇವುಬೆಲ್ಲವನ್ನು ಸೇವಿಸಿ ಇತರರಿಗೆ ಹಂಚುವುದು ಶಿಷ್ಟಾಚಾರ. "ಬೇವು"– ಕಹಿ, ಕಷ್ಟ, ಸುಃಖ, ದುಗುಡ, ಪಾಪ, ಕೋಪ, ತಾಪಗಳ ಸಂಕೇತವಾದರೆ "ಬೆಲ್ಲ"–ಸುಖ, ಶಾಂತಿ, ಸಮೃದ್ಧಿ, ಆರೋಗ್ಯ, ದೃಢ ಗಾತ್ರತೆಯ ಸಂಕೇತ. ಎಲ್ಲರ ಬದುಕು ಇವೆರಡರ ಮಿಶ್ರಣ. ಬೇವಿನ ಕಹಿಯ ನಂತರ ಬೆಲ್ಲದ ಸಿಹಿಯ ಸವಿ ಜಾಸ್ತಿ. ಅಂತಯೇ ಸಿಹಿ ಸೇವನೆಯ ನಂತರ ಕಹಿಯ ತೀವ್ರತೆ ಹೆಚ್ಚು. ಬೇವು–ಬೆಲ್ಲ, ಕಹಿ–ಸಿಹಿ ಇಲ್ಲದ ಬದುಕೇ ಇಲ್ಲ.

ಪಂಚಾಂಗ ಶ್ರವಣದ ಮೂಲಕ, ಖಗೋಳಶಾಸ್ತ್ರದಂತೆ ಗ್ರಹಗಳ ಗತಿಯನ್ನನುಸರಿಸಿ ಪ್ರಸ್ತುತಪಡಿಸಿದ ವ್ಯಕ್ತಿಯ, ರಾಷ್ಟ್ರದ, ರಾಜಕೀಯದ-ಆಗುಹೋಗುಗಳ ವಾರ್ಷಿಕ ಭವಿಷ್ಯ (ಮುನ್ನೋಟ) ಕಥನವನ್ನು ಮನನ ಮಾಡುವುದು ಯುಗಾದಿ ಆಚರಣೆಯ ಇನ್ನೊಂದು ಸಂಪ್ರದಾಯ. ಇದು ಅವರವರ ನಂಬಿಕೆಯ ಪ್ರಶ್ನೆ.

ವರಕವಿ ಬೇಂದ್ರೆಯವರನ್ನು ನೆನೆಯದಿದ್ದರೆ ಈ ಲೇಖನ ಅಪೂರ್ಣ. **"ಯುಗಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ. ಹೊಸ ವರುಷಕೆ, ಹೊಸ ಹರುಷವ, ಹೊಸತು ಹೊಸತು ತರುತಿದೆ."** ಯುಗಾದಿಯ ಸಂಭ್ರಮ ನಮಗೆ ನಿತ್ಯೋತ್ಸವವಾಗಲಿ. ಬದುಕಿನಲ್ಲಿ ಸುಖ ದುಃಖಗಳೆರಡರ ಅನಿವಾರ್ಯತೆಯನ್ನರಿತು ಬೇವು-ಬೆಲ್ಲ ಸವಿಯೋಣ. ಬೇವು ಮೊದಲಿರಲಿ, ಕಷ್ಟ, ದುಃಖ, ದುಮ್ಮಾನಗಳ ಕಹಿಯ ನಂತರ ಶಾಶ್ವತ ಸುಖದ ಸವಿ-**"ಬೆಲ್ಲ"** ಸವಿಯುತ್ತಲೇ ಇರೋಣ. ನಮ್ಮೆಲ್ಲರ ಬಾಳಹೊಳೆಯಲ್ಲಿ ಬೆಲ್ಲದ ಸವಿಯ ಹೊನಲು ಹರಿಯುತ್ತಿರಲಿ.

"ಸರ್ವೇ ಜನಾಃ ಸುಖಿನೋ ಭವಂತು"

-ಎಸ್.ವೆಂಕಟರಮಣ ಅಡಿಗ

ಧರ್ಮ ಸಮನ್ವಯ

"ನಾನು ಕುರಾನನ್ನು ಕನ್ನಡಕ್ಕೆ ಅನುವಾದಿಸಿದ್ದೇನೆ. ಆದರೆ ಇಸ್ಲಾಂ ಧರ್ಮವನ್ನು ಒಂದೇ ಮಾತಿನಲ್ಲಿ ಹೇಳಲು ನನಗೆ ಶಬ್ದಗಳು ಸಿಗಲಿಲ್ಲ **ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ। ಅಹಂ ತ್ವಾ ಸರ್ವ ಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ** ॥ ಎಂಬ ಶ್ಲೋಕದಲ್ಲಿ ಕುರಾನಿನ ತಿರುಳನ್ನು ಕಂಡೆ" ಎಂದು ಇತ್ತೀಚೆಗೆ ಸಮಾರಂಭವೊಂದರಲ್ಲಿ ಪ್ರಸಿದ್ಧ ಹಿಂದೀ-ಉರ್ದೂ ವಿದ್ವಾಂಸರಾದ ಜನಾಬ್ ಏಜಾಸುದ್ದೀನ್‌ರವರು ಉಪನ್ಯಾಸ ನೀಡಿದರು. ಶ್ರೀಯುತರ ಈ ಮಾತು ಈಗಂತೂ ತೀರಾ ಪ್ರಸ್ತುತವೆನಿಸುತ್ತದೆ. ಇಂದು ರಾಜಕೀಯ ಕ್ಷೇತ್ರದಲ್ಲಿ, ಧಾರ್ಮಿಕ ವಲಯದಲ್ಲಿ, ಮತೀಯ-ಧಾರ್ಮಿಕ ಗೊಂದಲಗಳ ನಡುವೆ ಈ ಮಾತಿಗೆ ಮತ್ತಷ್ಟು ಮಹತ್ವವಿದೆ. ನಮಗೀಗ ಬೇಕಾಗಿರುವುದು ದಡದಲ್ಲಿ ಕುಳಿತು ನದಿಯ ಆಳ ಅಗಲಗಳ ಚರ್ಚೆಯಲ್ಲ, ಕೈ ಕಂಬದಡಿಯಲ್ಲಿ ಕುಳಿತು ಮೋಕ್ಷ ಮಾರ್ಗದ ಅಪ್ರಾಸಂಗಿಕ ಹರಟೆಯೂ ಅಲ್ಲ. ನಮಗೀಗ ತೀರಾ ಅಗತ್ಯವಾದುದು ಸರ್ವಧರ್ಮ ಸಮನ್ವಯತೆಯ, ವಿಶ್ವಧರ್ಮದ ವಿಶಾಲತೆಯ ಚಿಂತನೆ, ಪ್ರತಿಯೊಬ್ಬರೂ ಅವರವರ ಪರಂಪರಾಗತ ಧರ್ಮಮಾರ್ಗದಲ್ಲಿ ನಿರ್ಧಾರಿತ ಗುರಿಯತ್ತ ಸಾಗುವ ಅನಿವಾರ್ಯತೆ.

'ಸರ್ವಜ್ಞ' ಎಂಬುದು "**ಇಲ್ ಅಲ್ಲಾಹ್**" ಶಬ್ದದ ಅರ್ಥ. ನಮ್ಮ ಭಗವಂತನೂ 'ಸರ್ವಜ್ಞ'. ಅನನ್ಯಗತಿಕನಾಗಿ ನನ್ನನ್ನು ಆಶ್ರಯಿಸಿದರೆ ನಾನು ನಿನ್ನ ಎಲ್ಲ ಪಾಪಗಳನ್ನೂ ಪರಿಹರಿಸಿ ಮೋಕ್ಷ ಕರುಣಿಸುತ್ತೇನೆ" ಎಂಬ ಕೃಷ್ಣನ ಗೀತೋಪದೇಶವೇ ಕುರಾನಿನ ತಿರುಳೂ ಆಗಿದೆಯೆಂಬ ಶ್ರೀಯುತರ ಪ್ರತಿಪಾದನೆ ಅತ್ಯಂತ ಸಮಂಜಸ. ಹಿಂದೂ ದರ್ಶನ ಶಾಸ್ತ್ರದಲ್ಲಿ ಭಗವಂತನನ್ನು ನಿರ್ಗುಣ-ನಿರಾಕಾರನೆಂದು ಬಣ್ಣಿಸಲಾಗಿದೆ. ಮಸೀದಿಗಳಲ್ಲೂ ನಿರಾಕರನನ್ನೇ ಆರಾಧಿಸಲಾಗುತ್ತದೆ, ವಿಗ್ರಹಗಳಿಲ್ಲ. ಹಿಂದೂ ಪ್ರಾರ್ಥನಾ ಮಂದಿರ ಗಳನ್ನು, ದೇವಾಲಯಗಳನ್ನು ಶುಚಿರ್ಭೂತರಾಗಿ (ಮಡಿಯಲ್ಲಿ) ಪ್ರವೇಶಿಬೇಕೆಂಬ ನಿರ್ಬಂಧವಿದೆ. ಕೈ, ಕಾಲು, ಮುಖ ತೊಳೆದೇ ಮಸೀದಿಯನ್ನು ಪ್ರವೇಶಿಸುವ ನಿಯಮವನ್ನು ಕಡ್ಡಾಯವಾಗಿ ಪಾಲಿಸಲಾಗುತ್ತದೆ. ಶಿಖೆಯ ಬದಲು ರುಮಾಲು ಅಥವಾ ಟೋಪಿ ಧರಿಸಲಾಗುತ್ತದೆ. ಹೀಗೆ ಎಲ್ಲೆಲ್ಲೂ ಸಮಾನ ಆಚರಣೆಯೇ ಕಾಣುತ್ತದೆ. 'ಧರ್ಮದ ಅರ್ಥವ್ಯಾಪ್ತಿ ಅತಿವಿಸ್ತಾರವಾದುದು. ಆಚಾರವೇ ಧರ್ಮದ ಸ್ವರೂಪವೆಂದೂ ವ್ಯಾಖ್ಯಾನಿಸುವುದುಂಟು.

ಹಿಂದುಗಳಲ್ಲಿ ಉತ್ಸವಮೂರ್ತಿಯ ಮೆರವಣಿಗೆ ಹೇಗೋ ಹಾಗೆ ಮುಸಲ್ಮಾನರ ಹಬ್ಬವೊಂದರಲ್ಲಿ ಕೈಯ ಮೆರವಣಿಗೆ ಮಾಡಲಾಗುತ್ತದೆ. ಇದನ್ನು ಸಗುಣೋಪಾಸನೆ ಯೆಂದು ಅರ್ಥೈಸಬಹುದಲ್ಲ! ಸಮಾಧಿ-ಮಂದಿರಗಳೆರಡರಲ್ಲೂ ಹರಕೆ-ನಂಬಿಕೆಗಳು ಸಮಾನ, ಧೂಪಶರ್ಕರ ನೈವೇದ್ಯಗಳೂ ಸಮಾನ. ಬಲತೋಳಿನ ಕೆಳಗೆ, ಎಡಹೆಗಲ ಮೇಲೆ ಶಲ್ಯ ಹೊದೆಯುವ ಸಂಪ್ರದಾಯವೂ ಸಮಾನ. ಇಲ್ಲದ ವ್ಯತ್ಯಾಸ ಮಾತ್ರ ನಾವು

ಕಾಣುವ ಕಣ್ಣುಗಳಲ್ಲಿ, ಮನಸಿನ ಭಾವನೆಗಳಲ್ಲಿ, ಆಡುವ ಮಾತುಗಳಲ್ಲಿ, ಆಚರಣೆಯಲ್ಲಿ ಅಲ್ಲಲ್ಲಿ ಗೋಚರಿಸುತ್ತದೆ.

ಈಶ್ವರ್ ಅಲ್ಲಾಹ್ ತೇರೇ ನಾವಲ್, ಸಬ್‌ಕೋಸನ್ಮತಿ ದೇ ಭಗವಾನ್ ಎಂಬ ಚರಣಗಳೂ, ಮೇಲೆ ಉದ್ಧರಿಸಿದ ಶ್ಲೋಕಗಳನ್ನೊಳಗೊಂಡ ಭಗವದ್ಗೀತೆ ಗ್ರಂಥವೂ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರಿಗೆ ಅತ್ಯಂತಪ್ರಿಯವಾದುವು. ನಮ್ಮೆಲ್ಲರ ದೌರ್ಭಾಗ್ಯವೆಂದರೆ, ಇತ್ತೀಚಿನ ದಿನಗಳಲ್ಲಿ ಗಾಂಧೀಜಿಯವರೂ, ಅವರ ಆದರ್ಶಗಳೂ ಮರೆಯಾಗುತ್ತಿವೆಯೆಂದು ಅನಿಸುತ್ತಿದೆ.

ಯುಗಾದಿ–ಮಾಸ–ವಾರಗಳು

'ಯುಗಾದಿ' ಎಂಬುದಕ್ಕೆ ಯುಗದ ಪ್ರಾರಂಭ ಎಂದು ಅರ್ಥ. ಆದರೆ ಈಗ ಈ ಶಬ್ದ ವರ್ಷದ ಆದಿ ಅಂದರೆ ಚೈತ್ರ ಮಾಸದ ಮತ್ತು ಮೇಷ ಮಾಸದ ಮೊದಲ ದಿನ ಎಂಬ ಅರ್ಥದಲ್ಲಿ ಪ್ರಚಲಿತವಿದೆ. ವರ್ಷದಲ್ಲಿ ಹ್ನೆರೆಡು ತಿಂಗಳುಗಳಿವೆ. ಒಬ್ಬೊಬ್ಬ ಮಹನೀಯನ ಹುಟ್ಟಿನ ದೆಸೆಯಿಂದ ಆಂಗ್ಲ ಮಾಸಗಳನ್ನು ಆಯಾ ಹೆಸರಿನಿಂದ ಕರೆಯುವುದು ರೂಢಿ. 'ಜುಲೆ' ಎಂಬ ಮಹನೀಯ ಹುಟ್ಟಿದ ತಿಂಗಳು 'ಜುಲೈ' ಆದಂತೆ. ಆದರೆ 'ಚೈತ್ರ', 'ವೈಶಾಖ' ಮೊದಲಾದ ಮಾಸ ನಾಮಗಳು ಪೂರ್ಣ ವೈಜ್ಞಾನಿಕವಾಗಿವೆ.

ಆಕಾಶದಲ್ಲಿರುವ 'ಅಶ್ವಿನಿ' ಮೊದಲಾದ 27 ನಕ್ಷತ್ರಗಳು ಚಂದ್ರನನ್ನು ಸುತ್ತುತ್ತಿವೆ. ಪ್ರತಿಯೊಂದು ಹುಣ್ಣಿಮೆಯಂದು ಒಂದು ನಕ್ಷತ್ರ ಚಂದ್ರನೊಡನೆ ಇರುತ್ತದೆ. ಮುಂದಿನ ಹುಣ್ಣಿಮೆಯಂದು ಆ ನಕ್ಷತ್ರದ ಮುಂದಿನ ನಕ್ಷತ್ರ ಬಿಟ್ಟು ಅದರ ಮುಂದಿನ ಮತ್ತೊಂದು ನಕ್ಷತ್ರ ಚಂದ್ರನೊಡನೆ ಬರುತ್ತದೆ. ಹುಣ್ಣಿಮೆಯಂದು ಯಾವ ನಕ್ಷತ್ರ ಚಂದ್ರನೊಡನಿರುತ್ತದೋ ಆ ನಕ್ಷತ್ರದಿಂದ ಆ ಚಾಂದ್ರಮಾನ ಮಾಸವನ್ನು ಹೆಸರಿಸಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ಮುಂದಿನ ಮೂರನೆಯ ನಕ್ಷತ್ರ ಚಂದ್ರನೊಡನೆ ಬಂದು ಆ ನಕ್ಷತ್ರ ಹೆಸರು ಆ ತಿಂಗಳಿಗೆ ಬರುತ್ತದೆ. ಆ ನಕ್ಷತ್ರದಿಂದ ಆ ಮಾಸವು ಪೂರ್ಣವಾಗುವುದರಿಂದ ಅಂದು 'ಮಾರ್ಣಮಾಸೀ' ಅಂದರೆ ಹುಣ್ಣಿಮೆಯೆನಿಸುತ್ತದೆ.

ಹುಣ್ಣಿಮೆಯಂದು ಚಿತ್ರಾ ನಕ್ಷತ್ರ ಚಂದ್ರನೊಡನಿರುವ ತಿಂಗಳೇ 'ಚೈತ್ರ ಮಾಸ'. ಮುಂದಿನ 'ಸ್ವಾತೀ' ನಕ್ಷತ್ರವನ್ನು ಬಿಟ್ಟು ವಿಶಾಖ ನಕ್ಷತ್ರ ಚಂದ್ರನೊಡನಿರುವ ಹುಣ್ಣಿಮೆಯ ತಿಂಗಳೇ 'ವೈಶಾಖ ಮಾಸ'. ಅನುರಾಧ ನಕ್ಷತ್ರದ ನಂತರದ ಜ್ಯೇಷ್ಠಾ ನಕ್ಷತ್ರದ ಹುಣ್ಣಿಮೆಯಿರುವುದು ಜ್ಯೇಷ್ಠಮಾಸ. ಹೀಗೆಯೇ ಪೂರ್ವಾಷಾಢಾ–ಆಷಾಢ ಮಾಸ. ಶ್ರವಣ–ಶ್ರಾವಣಮಾಸ. ಮುಂದಿನ ತಿಂಗಳು ಮಾತ್ರ ಧನಿಷ್ಠಾ, ಶತಭಿಷಾ–ಎರಡು ನಕ್ಷತ್ರಗಳ ಮುಂದಿನ ಪೂರ್ವಾಭಾದ್ರಾ ನಕ್ಷತ್ರಕ್ಕೆ ಸಂಬಂಧಿಸಿದಂತೆ ಭಾದ್ರಪದ ಮಾಸವಾಗುತ್ತದೆ. ಉತ್ತರಾಭಾದ್ರಾ, ರೇವತೀ ನಕ್ಷತ್ರಗಳ ನಂತರದ ಅಶ್ವಿನೀ ನಕ್ಷತ್ರದ

ಹುಣ್ಣಿಮೆ ಆಶ್ವಯುಜ ಮಾಸ. ಹೀಗೆಯೇ ಕೃತ್ತಿಕಾ–ಕಾರ್ತಿಕ, ಮೃಗಶಿರಾ–ಮಾರ್ಗಶಿರ ಮೊದಲಾದಂತೆ ಹನ್ನೆರಡು ಚಾಂದ್ರಮಾನ ಮಾಸಗಳಾದುವು. ಈ ಮಾಸನಾಮಗಳು ವೈಜ್ಞಾನಿಕವೂ ಅರ್ಥಪೂರ್ಣವೂ ಆಗಿವೆ.

ನಮ್ಮ ವಾರಗಳು 7 ದೃಶ್ಯ ಗ್ರಹಗಳ ಹೆಸರಿನಲ್ಲಿವೆ. ಆದರೆ ಭಾನುವಾರ, ಸೋಮವಾರ, ಮಂಗಳವಾರ–ಹೀಗೆ ಇವುಗಳ ಅನುಕ್ರಮದ ಹಿಂದಿನ ರಹಸ್ಯವೇನು?

ವ್ಯೋಮ ಕಕ್ಷೆಯಲ್ಲಿ ಗ್ರಹಗಳು ಒಂದರ ಕೆಳಗೆ ಇನ್ನೊಂದು ಕ್ರಮಶಃ ಸುತ್ತುತ್ತಿವೆ. ಈ ಗ್ರಹಗಳ ಕಕ್ಷೆಯ ಅನುಕ್ರಮ ಹೀಗಿದೆ:–

ಮಂದಾಮರೇಜ್ಯ ಭೂಪುತ್ರ ಸೂರ್ಯ ಶುಕ್ರೇಂದು ಜೇಂದವಃ ।
ಪರಿಭ್ರಮಂತ್ಯಧೋಽಧಸ್ಥಾಃ ಸಿದ್ಧ ವಿದ್ಯಾಧರಾ ಘನಾಃ ॥

ಇಲ್ಲಿ ಮಂದ=ಶನಿ, ಅಮರೇಜ್ಯ=ಗುರು, ಭೂಪುತ್ರ=ಮಂಗಳ, ಸೂರ್ಯ, ಶುಕ್ರ, ಇಂದುಜ=ಬುಧ ಮತ್ತು ಚಂದ್ರ ಹೀಗ ಎಲ್ಲಕ್ಕಿಂತ ಮೇಲೆ ಶನಿ ಮತ್ತು ಎಲ್ಲಕ್ಕಿಂತ ಕೆಳಗೆ ಚಂದ್ರ= ಈ 7 ಗ್ರಹಗಳ ಕಕ್ಷೆಯಿದೆ.

ಇನ್ನೊಮ್ಮೆ ಈ ಗ್ರಹಗಳ ಕಕ್ಷೆಯ ಅನುಕ್ರಮ:–

1.ಶನಿ

2.ಗುರು

3.ಮಂಗಳ

4.ಸೂರ್ಯ

5.ಶುಕ್ರ

6.ಬುಧ

7.ಚಂದ್ರ

'ಮಂದಾದಧಃ ಕ್ರಮೇಣ ಸ್ಯುಃ ಚತುರ್ಥಾಃ ದಿವಸಾಧಿಪಾಃ" ಅಂದರೆ ಶನಿಯಿಂದ ಮೊದಲ್ಗೊಂಡು ಕ್ರಮೇಣ ನಾಲ್ಕನೆಯ ಗ್ರಹವು ಆಯಾ ದಿನದ ಅಧಿಪತಿಯೆನಿಸುತ್ತದೆ. ಶನಿಯಿಂದ ನಾಲ್ಕನೆಯ ಗ್ರಹ ಸೂರ್ಯ. ಆದುದರಿಂದ ನಮ್ಮ ವಾರದ ಮೊದಲ ದಿನ 'ರವಿವಾರ'. ಸೂರ್ಯನಿಂದ ನಾಲ್ಕನೆಯವನು ಚಂದ್ರ. ಆದುದರಿಂದ ಎರಡನೆಯದು ಸೋಮವಾರ. ಚಂದ್ರ ಏಳನೆಯವನು ಅವನಿಂದ ಮೇಲಕ್ಕೆ ಹೋಗಿ ಕೆಳಕ್ಕೆ ಎಣಿಸುತ್ತ ಬಂದರೆ ನಾಲ್ಕನೆಯ ಗ್ರಹ 'ಮಂಗಳ'. ಸೋಮವಾರದ ನಂತರ ಮಂಗಳವಾರ. ಮಂಗಳನಿಂದ ನಾಲ್ಕನೆಯವನು ಬುಧ. ಹೀಗೆ ನಮ್ಮ 7 ವಾರಗಳೂ ಮತ್ತು ಇವುಗಳ ಅನುಕ್ರಮವೂ ವೈಜ್ಞಾನಿಕ ತಳಹದಿಯ ಮೇರೆಗೆ ರೂಢಿಗೆ ಬಂದಿವೆ.

ಭಾರತದ ರಾಷ್ಟ್ರೀಯ ಅಂಚೆ ದಿನ

ಚಕ್ರಗತಿಯಂತೆ ನಿರಂತರ ಪ್ರಗತಿಯತ್ತ ಮುಂದುವರಿಯುವುದು ಜಗತ್ತಿನ ಲಕ್ಷಣ. ರಾಷ್ಟ್ರೀಯ ಅಂಚೆ ದಿನವಾದ ಇಂದು ಕೇಂದ್ರ ಸರ್ಕಾರದ ನೇರ ಅಧೀನದಲ್ಲಿರುವ "ಭಾರತೀಯ ಡಾಕ್ ವಿಭಾಗ್" ಎಂಬ ಹೆಸರಿನ ಅಂಚೆ ಇಲಾಖೆಯ ಸಾಧನೆಗಳತ್ತ ಒಂದು ಕಿರು ನೋಟವನ್ನು ಹರಿಸಿದಾಗ ಅದ್ಭುತವೆನಿಸುತ್ತದೆ. 1874ರ ಅಕ್ಟೋಬರ್ 10ರಂದು ಸ್ವಿಜರ್‌ಲ್ಯಾಂಡ್‌ನ (Berne) ಬರ್ನೆಯಲ್ಲಿ Universal Postal Union (ಜಾಗತಿಕ ಅಂಚೆ ಸಂಘ) ಎಂಬ ಒಂದು ಸಂಸ್ಥೆ ಜನ್ಮ ತಳೆಯಿತು. ಈ UPU ಎಂಬ ಸಂಸ್ಥೆ ಟೋಕಿಯೋದಲ್ಲಿ 1969ರಿಂದ ಅಕ್ಟೋಬರ್ 10ನ್ನು (World Post Day) ಜಾಗತಿಕ ಅಂಚೆ ದಿನ ಎಂದು ಸಾರಿತು. ಈಗ ನಾವೂ ಸಹ ಅಕ್ಟೋಬರ್ 10ರಂದು ರಾಷ್ಟ್ರೀಯ ಅಂಚೆದಿನವನ್ನು ಆಚರಿಸುತ್ತಿದ್ದೇವೆ ಆದರೆ ಭಾರತೀಯ ಅಂಚೆಗೆ ಅನೇಕ ಶತಮಾನಗಳ ಚರಿತ್ರೆಯಿದೆ. ಒಂದು ಕಾಲದಲ್ಲಿ, ಪಾರಿವಾಳಗಳ ಕಾಲಿಗೆ ಸಂದೇಶವನ್ನು ಕಟ್ಟಿ ಹಾರಿ ಬಿಡಲಾಗುತ್ತಿತ್ತಂತೆ. ಈ ಪಾರಿವಾಳಗಳೆಂಬ ಅಂಚೆ ವಾಹಕಗಳು ನಿರ್ದಿಷ್ಟ ಜಾಗಕ್ಕೆ ಅಂಚೆ ತಲಪಿಸುತ್ತಿದ್ದವು.

ಹದಿನಾಲ್ಕನೇ ಶತಮಾನದಲ್ಲಿ "ಇಬ್ನಬತೂತಾ' ಎಂಬವನು ಭಾರತದಲ್ಲಿ ಎರಡು ವಿಧವಾದ ಅಂಚೆಯಿತ್ತೆಂದು ಪ್ರಸ್ತಾಪಿಸುತ್ತಾನೆ. ಈಗ ನಮ್ಮ ಅಂಚೆ ಕಚೇರಿಗಳಲ್ಲಿ ಸಂಗ್ರಹ, ಸಾಗಾಟ, ಮತ್ತು ಬಟವಾಡೆ ಎಂದು ಮುಖ್ಯ ಮೂರು ವಿಭಾಗಗಳನ್ನು ಹೆಸರಿಸಬಹುದು. ಒಂದು ದೊಣ್ಣೆಗೆ ಅಳವಡಿಸಿದ 'ಗಗ್ಗರ' ವನ್ನು ಗಣ್-ಬಣ್ ಶಬ್ದ ಮಾಡುತ್ತಾ, ಒಂದು ಮೈಲಿಗೆ ಮೂರರಂತೆ ಇರುವ ಹಳ್ಳಿಗಳಿಗೆ ಅಂಚೆ ಸಾಗಾಟ ನಡೆಸುವ ಕಾಲವೊಂದಿತ್ತು. ನಂತರ ಪ್ರತಿ ನಾಲ್ಕು ಮೈಲಿಗೊಂದರಂತೆ ಇರುವ ಅಂಚೆ ಕಚೇರಿಗೆ ಕುದುರೆ ಸವಾರಿಯ ಮೂಲಕವೂ ಅಂಚೆ ರವಾನೆಯಾಗುತ್ತಿತ್ತು. ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಅಂಚೆ ಇಲಾಖೆಗೆ ಸಮಾನಾಂತರವಾಗಿ ಕಲ್ಲಚ್ಚಿನ ಸುದ್ಧಿಯನ್ನೂ, ಮೌಖಿಕ ಸಂದೇಶವನ್ನೂ ರವಾನಿಸಲಾಗುತ್ತಿತ್ತೆಂದು ಇತಿಹಾಸ ಹೇಳುತ್ತದೆ.

1764 ರಿಂದ 1766ರ ನಡುವೆ ಬ್ರಿಟಿಷರ ಶಾಸನಾವಧಿಯಲ್ಲಿ ಕಲ್ಕತ್ತಾ, ಬೊಂಬಾಯಿ ಮತ್ತು ಮದರಾಸು. . ಈ ಮಹಾನಗರಗಳಲ್ಲಿ ವಾರನ್ ಹೇಸ್ಟಿಂಗ್ಸ್ ರವರಿಂದ ಅಧಿಕೃತ ಅಂಚೆ ಕಚೇರಿಗಳು ಪ್ರಾರಂಭಿಸಲ್ಪಟ್ಟವು. ಆಗ 100 ಮೈಲಿಗಳ ದೂರಕ್ಕೆ ಕಳಿಸುವ ಅಂಚೆಗೆ 2 ಅಣೆ ಶುಲ್ಕ ತೆರಬೇಕಾಗಿತ್ತು. ಅಥವಾ ಬಟವಾಡಿಯಾಗುವಾಗಲೇ ಶುಲ್ಕ ನೀಡಿ ಅಂಚೆ ಪಡೆಯುವ ಸೌಲಭ್ಯವೂ ಇತ್ತು. **ಈಗ ನಮ್ಮ ಸೇವೆಯಲ್ಲಿ ಸುಮಾರು ಒಂದು ಲಕ್ಷದ 56 ಸಾವಿರ ಅಂಚೆ ಕಚೇರಿಗಳಿವೆ.**

ಅಂಚೆ ಸಂಗ್ರಹ-ಬಟವಾಡೆ ವಿಭಾಗದಲ್ಲಿ ಅನೇಕ ಕೊರಿಯರ್ ಸಂಸ್ಥೆಗಳಿಂದ ಪೈಪೋಟಿಯನ್ನು ಎದುರಿಸಿಯೂ ಇಲಾಖೆ ತನ್ನ ಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುತ್ತಲೇ ಇದೆ. **ಸಾಮಾನ್ಯ ಸೇವೆಗಳೊಂದಿಗೆ Logistic Post, Speed Post, Media Post, Electronic Payment - ಹೀಗೆ, ಹೆಸರಿಸಲಾಗದಷ್ಟು ಹತ್ತು ಹಲವು ರೀತಿಯಲ್ಲಿ**

ಸೇವಾಕ್ಷೇತ್ರಗಳನ್ನು ವಿಸ್ತರಿಸಿಕೊಂಡು ನಮ್ಮ ಅಂಚೆ ಇಲಾಖೆ ತನ್ನ ಘನತೆಯನ್ನು ಹೆಚ್ಚಿಸಿಕೊಂಡಿದೆ. ಇತ್ತೀಚಿನ E-mail, mobile message ಗಳಂತಹ ಇಲೆಕ್ಟ್ರಾನಿಕ್ ಮಾಧ್ಯಮಗಳ ಭರಾಟೆಯ ನಡುವೆಯೂ ಅಂಚೆ ಇಲಾಖೆಯ ಪ್ರಸ್ತುತತೆಗೆ ಯಾವುದೇ ಕುಂದುಂಟಾಗಿಲ್ಲ. **ಕೆಲವು ವರ್ಷಗಳ ಹಿಂದೆ ಬೊಂಬಾಯಿಯ ಕಡಲಕಿನಾರೆಯಲ್ಲಿ ಅನೇಕ ಅಂಚೆ ಚೀಲಗಳು ಅನಾಥವಾಗಿ ಬಿದ್ದು ಸುದ್ದಿ ಮಾಧ್ಯಮದವರಿಗೆ ವಿಶೇಷ ಗ್ರಾಸವಾದುದು ಭಾರತೀಯ ಅಂಚೆ ಇಲಾಖೆಯ ಕಾರ್ಯಕ್ಷಮತೆಯ ಕಪ್ಪು ಚುಕ್ಕೆ.** ಈಗ ವೈಜ್ಞಾನಿಕ ಸಾಧನಗಳಿಗೆ ಕೊರತೆಯಿಲ್ಲವಾದುದರಿಂದ ನಮ್ಮ ಅಂಚೆ ಕಚೇರಿಗಳಲ್ಲಿ ವಿವಿಧ ಸೇವೆಗಳಿಗಾಗಿ ಪ್ರತ್ಯೇಕ ಸರದಿಯ ಸಾಲಿನಲ್ಲಿ ಕಾಯುತ್ತಾ ನಿಲ್ಲುವ ಬದಲು, ವಿದೇಶಗಳಲ್ಲಿರುವಂತೆ, ಒಂದೇ ಸರದಿಯ ಸಾಲು-ಹಾಗೂ ಎಲ್ಲ ಕಿಂಡಿಗಳಲ್ಲೂ ಎಲ್ಲ ತರಹದ ಸೇವೆ ಲಭ್ಯವಾಗುವಂತೆ ಸುಧಾರಣೆಯಾಗಬೇಕೆಂಬುದು ಜನಸಾಮಾನ್ಯರ ನಿರೀಕ್ಷೆ, ಅಪೇಕ್ಷೆ.

ಮಾತು

ಮನುಷ್ಯನ ಐದು ಇಂದ್ರಿಯಗಳಲ್ಲಿ ನಾಲಗೆಯೂ ಒಂದು. ಉಳಿದ ನಾಲ್ಕೂ ಇಂದ್ರಿಯಗಳು ಹೊರಗೆ ಕಾಣುತ್ತವೆ. ಆದರೆ ಈ ನಾಲಗೆ ಮಾತ್ರ ಒಳಗೆ ಇದ್ದು ಬಿಡುತ್ತದೆ. "ಒಡಲೆಂಬ ಹುತ್ತಕ್ಕೆ ನುಡಿವ ನಾಲಗೆ ಸರ್ಪ", ಇದರ ಕಾರುಬಾರಿನಿಂದಾಗುವ ಪರಿಣಾಮ ಮಾತ್ರ ಅತ್ಯಂತ ತೀವ್ರವಾಗಿರುತ್ತದೆ. ಕೋಪದ ಹುಲಿಯನ್ನಾದರೂ ಪಳಗಿಸಬಹುದು. ಆದರೆ ಮನುಷ್ಯನ ನಾಲಗೆಯನ್ನು ಮಾತ್ರ-ಪಳಗಿಸಲಾಗದು ಎಂದು ಹಿರಿಯರು ಹೇಳುವುದುಂಟು. ಮನುಷ್ಯನ ಯೋಗ್ಯತೆ ಅವನಾಡುವ ಮಾತಿನಿಂದಲೇ ತಿಳಿಯುತ್ತದೆ. ಮಾತು ಬಲ್ಲವನಿಗೆ ಜಗಳವಿಲ್ಲಃ ಎಂಬ ಉಕ್ತಿ ಅರ್ಥಪೂರ್ಣವಾಗಿದೆ. ನಾವಾಡುವ ಮಾತಿನಿಂದಲೇ ನಮಗೆ ಸ್ನೇಹಿತರೂ ಸಿಗುತ್ತಾರೆ, ವೈರಿಗಳೂ ಆಗುತ್ತಾರೆ. ಒಂದು ಸಂಸಾರ, ಊರು, ರಾಷ್ಟ್ರ-ಉದ್ಧಾರವಾಗುವುದು, ಸರ್ವನಾಶವಾಗುವುದು ಮಾತಿನಿಂದಲೇ. "ಮಾತು ಆಡಿದರೆ ಹೋಯ್ತು, ಮುತ್ತು ಒಡೆದರೆ ಹೋಯ್ತು" ಎಂಬ ಗಾದೆಯಿದೆ. ಹಣ ಕಳೆದುಕೊಂಡರೆ-ಸಂಪಾದಿಸಬಹುದು. ಮೈಗಾದ ಗಾಯವನ್ನು ಔಷಧಿಯಿಂದ ಕ್ರಮೇಣ ಗುಣಪಡಿಸಿಕೊಳ್ಳಬಹುದು. ಆದರೆ ನಾಲಗೆಯ ಮೂಲಕ ಬಾಯಿಯಿಂದ ಹೊರಬಂದ ಮಾತಿನ ಗಾಯ ಗಂಭೀರ ಪರಿಣಾಮವನ್ನು ಶಾಶ್ವತವಾಗಿ ಉಳಿಸಿಯೇ ಬಿಡುತ್ತದೆ. ಒಡೆದ ಮೊಟ್ಟೆಯಂತೆ ಆಡಿದ ಮಾತನ್ನು ಹಿಂದಕ್ಕೆ ಪಡೆಯಲಾಗದು. "ಹಿತಂ ಮನೋಹಾರಿ ಚ ದುರ್ಲಭಂ ವಚಃ" ಎಂಬುದು ಸಂಸ್ಕೃತದ ಆರ್ಯೋಕ್ತಿ. ಪರಿಣಾಮದಲ್ಲಿ ಒಳಿತನ್ನುಂಟು ಮಾಡುವ ಸವಿನುಡಿಯನ್ನಾಡುವುದು ಎಲ್ಲರಿಂದಲೂ ಸಾಧ್ಯವಾಗದು. ಸವಿಮಾತು ಕಹಿಗುಳಿಗೆಯಿದ್ದಂತೆ. ಆರೋಗ್ಯವರ್ಧಕವಾದ ಕಹಿ ಗುಳಿಗೆ ನಾಲಗೆಗೆ ರುಚಿಸುವುದಿಲ್ಲ. ಈ ಕಹಿ ಗುಳಿಗೆಗೆ ಸಿಹಿ ಲೇಪಿಸಿ ರೋಗಿಗೆ ತಿನ್ನಿಸುವಂತೆ, ಮೇಲ್ನೋಟಕ್ಕೆ ರುಚಿಸದಂತಹ ಮಾತಿಗೆ ಮಾಧುರ್ಯದ ಲೇಪ ಬಳಸಿ ಪರಿಣಾಮದಲ್ಲಿ ಸುಖವನ್ನುಂಟು ಮಾಡುವ, ಜಾಣತನದ ಮಾತನಾಡುವ ಕಲೆಯನ್ನು

ನಾವು ರೂಢಿಸಿಕೊಳ್ಳಬೇಕು. ಮೂರ್ಖರಿಗೆ ಹೇಳುವ ಬುದ್ಧಿ ಮಾತು ಬಂಡೆಯ ಮೇಲೆ ಮಳೆ ಸುರಿದಂತೆ. ಮೂರ್ಖರೊಂದಿಗೆ ವ್ಯವಹರಿಸುವಾಗ ಮಾತಿಗಿಂತ ಮೌನವೇ ಲೇಸೆಂದು ಹೇಳುತ್ತಾರೆ. "**ಸತ್ಯಂ ಬ್ರೂಯಾತ್**" ಸತ್ಯವನ್ನೇ ಹೇಳಬೇಕೆನ್ನುತ್ತಾರೆ. ಆದರೆ ಈ ಸತ್ಯ ಪ್ರಿಯವಾದ ಸತ್ಯವಾಗಿರಬೇಕು. ಅಪ್ರಿಯವಾದ ಸತ್ಯವನ್ನು ನುಡಿಯಬಾರದು. ಕೇಳುಗರಿಗೆ ಹಿತವೆನ್ನಿಸುವಂತಿದ್ದರೂ ಅಸತ್ಯವನ್ನೆಂದಿಗೂ ನುಡಿಯಬಾರದು. ಮಂಥರೆಯ ನಾಲಗೆಯಿಂದ ಹೊರಳಿದ ಮಾತುಗಳೇ ರಾಮಾಯಣ ಕಥಾನಕದ ಮೂಲವಲ್ಲವೆ? ದುರ್ಯೋಧನನ ದುರಹಂಕಾರದ ಮಾತುಗಳ ಪರಿಣಾಮವೇ ಧಾರ್ತರಾಷ್ಟ್ರ ಕುಲನಾಶಕವಾದ ಮಹಾಭಾರತದ ಕಥೆ. “ಆಚಾರವಿಲ್ಲದ ನಾಲಗೆ, ನಿನ್ನ ನೀಚ ಬುದ್ಧಿಯ ಬಿಡು” (ನಾಲಗೆ) ಎಂದು ದಾಸರು ಕಟೋಕ್ತಿಯನ್ನು ನಿಂದಿಸುತ್ತಾರೆ.” “ನಾವು ಆಡುವ ಮಾತು ಹೀಗಿರಲಿ ಗೆಳೆಯಾ,” “ಹಸಿರು ಹುಲ್ಲು ಮಕಮಲ್ಲಿನಲಿ ಪಾರಿಜಾತವು ಹೂವು ಸುರಿಸಿದಂತೆ” “ಮೃದು ವಚನ ಮೂಲೋಕ ಗೆಲ್ಲುವುದು” ಎಂಬುದು ಚನ್ನವೀರ ಕಣವಿಯವರ ಮಾತು.

ಪ್ರಿಯ ವಾಕ್ಯಪ್ರದಾನೇನ ಸರ್ವೇತುಷ್ಯಂತಿ ಜಂತವಃ।
ತಸ್ಮಾತ್ ತದೇವ ವಕ್ತವ್ಯಂ ವಚನೇ ಕಾ ದರಿದ್ರತಾ॥

ಎಲ್ಲರ ಮನಸ್ಸಿಗೆ ಮುದ ನೀಡುವ, ಪ್ರಿಯವಾದ ಮಾತನ್ನೇ ಆಡಬೇಕು. ಒಳ್ಳೆಯ ಮಾತಿಗೂ ಬಡತನವೆ? ಸಾರಣೆಯಲ್ಲಿ ಜಳ್ಳನ್ನು ತೂರಿ ಸತ್ವವನ್ನು ಆರಿಸಿಕೊಳ್ಳುವಂತೆ ಪ್ರಾಜ್ಞರು ಆಡುವ ವಿವೇಕಯುತವಾದ, ಸತ್ವಪೂರ್ಣವಾದ, ಒಂದೊಂದೇ ಮಾತಿನಲ್ಲೂ ಸಕಲ ಸಂಪತ್ತೂ ಅಡಗಿರುತ್ತದೆಯೆಂಬುದು ವೇದವಾಣಿ.

ANTI TERRORISM

ನಮ್ಮ ದೇಶದ ಅತ್ಯಂತ ಪ್ರಭಾವಶಾಲಿ ಪ್ರಧಾನ ಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ಅಕ್ಟೋಬರ್ 30ರಂದು ಹತ್ಯೆಯಾದರು. ಇವರ ಪುತ್ರ ರಾಜೀವಗಾಂಧಿಯವರು ಪ್ರಧಾನಿ ಗದ್ದುಗೆಯಲ್ಲಿರುವಾಗಲೇ ಮೇ 21ರಂದು (ಲಿಬರೇಶನ್ ಟೈಗರ್ ಟೆಮಿಳ್ ಈಳಂ–ಎಲ್‌ಟಿಟಿಇ) ತಮಿಳು ವಿಮೋಚನಾ ವ್ಯಾಘ್ರಪಡೆಯ ಸದಸ್ಯರ ದುಷ್ಕೃತ್ಯದಿಂದ ಕೊಲೆಯಾದರು. ಹಾಗಾಗಿ ಈ ಎರಡೂ ದಿನಗಳು ನಮ್ಮ ದೇಶಕ್ಕೆ ಭಯಾನಕ ದಿನಗಳಾದರೂ ಪ್ರತಿವರ್ಷ ಅಕ್ಟೋಬರ್ 30ರಂದು ಮಾತ್ರ ನಾವು (Anti Terrorism Day) 'ಭಯೋತ್ಪಾದನೆ ನಿಗ್ರಹ ದಿನ' ವೆಂದು ಭಯಾನಕತೆಯನ್ನು ನೆನಪಿಸಿಕೊಳ್ಳುತ್ತೇವೆ. ಇವರಿಬ್ಬರ ಹಂತಕರಿಗೂ ಶ್ರೀಮತಿ ಇಂದಿರಾ ಗಾಂದಿಯವರನ್ನಾಗಲೀ ಅಥವಾ ರಾಜೀವಗಾಂಧಿಯವರನ್ನಾಗಲೀ ದ್ವೇಷಿಸಲು, ಹತ್ಯೆಗೈಯಲು ಯಾವುದೇ ವೈಯಕ್ತಿಕ ಕಾರಣವಿರಲಿಲ್ಲ. ಅಂದರೆ, ಇವರಿಬ್ಬರ ಬಗೆಗೆ ಇಲ್ಲದ ಭಯವನ್ನು ಇವರಲ್ಲಿ ಬೇರೆ ಯಾರೋ ಉತ್ಪಾದಿಸಿದುದರಿಂದಲೇ ಇವರೂ ಭಯ–ಉತ್ಪಾದಕರಾದರು.

ಈ ಭಯೋತ್ಪಾದನೆ ನಮ್ಮ ದೇಶಕ್ಕೆ ಮಾತ್ರ ಸೀಮಿತವಾಗಿಲ್ಲ. (United Kingdom) ಸಂಯುಕ್ತ ರಾಷ್ಟ್ರದಲ್ಲಿ ಸುಮಾರು ಮೂರುವರೆ ದಶಕಗಳಿಂದ, ಅಂದರೆ 1973ರಿಂದ ಭಯೋತ್ಪಾದನೆ ನಿಗ್ರಹ ಜಾರಿಯಲ್ಲಿದೆ. 2001ರ ಸೆಪ್ಟಂಬರ್ 11ರ ಧಾಳಿಯ ನಂತರ ಸಂಯುಕ್ತ ಸಂಸ್ಥಾನ (United States) ಭಯೋತ್ಪಾದನೆ ನಿಗ್ರಹಕ್ಕಾಗಿ USA Patriotic Act ಪಾಸ್ ಮಾಡಿತು. ಆಸ್ಟ್ರೇಲಿಯಾ 31.03.2004ರಲ್ಲಿ (Anti Terrorism Act) “ಭಯೋತ್ಪಾದನ ನಿಗ್ರಹ” ಕಾನೂನು ಜಾರಿಗೊಳಿಸಿತು. **ನಿಜವಾದ ಮತ್ತು ಆರೋಪಿತವಾದ ಭಯೋತ್ಪಾದನೆಯ ಬೆದರಿಕೆ ಮತ್ತು ಚಟುವಟಿಕೆಗಳ ವಿರುದ್ಧವಾಗಿ, ಸರಕಾರ, ಸೈನ್ಯ, ಪೋಲೀಸು ಇಲಾಖೆ ಮತ್ತು ನಿಗಮಗಳು–ರೂಪಿಸುವ ವ್ಯೂಹ ರಚನೆ, ಕಾರ್ಯತಂತ್ರ ಮತ್ತು ರಣನೀತಿಯೇ ಭಯೋತ್ಪಾದನೆಯ ನಿಗ್ರಹ. ಪರದೇಶದ ಭಯೋತ್ಪಾದನೆ ನಿಗ್ರಹ ರಾಷ್ಟ್ರಮಟ್ಟದಲ್ಲಿರುತ್ತದೆ.**

ದುನಿಯಾ ಮೇಂ ಮೂರ್ಖ್‌ಕೋ ಈ ನಹೀಂ ಹೋತಾಬ್ ಪರಿಸ್ಥಿತಿ ಸಬೆಕೋ ಮೂರ್ಖ್ ಬನಾತೀ ಹೈ ॥ ಎಂದು ಡಾ॥ ಮಹಾದೇವಿ ವರ್ಮಾರವರು ಹೇಳುತ್ತಾರೆ. ಜಗತ್ತಿನಲ್ಲಿ ಯಾರೂ ಸ್ವತಃ ಮೂರ್ಖರಾಗಲೀ, ದುಷ್ಟರಾಗಲೀ, ಕೊಲೆಪಾತಕಿಗಳಾಗಲೀ ಇರುವುದಿಲ್ಲ. ಆದರೆ ಪರಿಸ್ಥಿತಿ ಎಲ್ಲರನ್ನೂ ಮೂರ್ಖರನ್ನಾಗಿಸುತ್ತದೆ, ದುಷ್ಟರನ್ನಾಗಿಸುತ್ತದೆ, ಕೊಲೆಪಾತಕಿ ಗಳನ್ನಾಗಿಸುತ್ತದೆ. ಈ ಭಯೋತ್ಪಾದಕರಿಗೆ ಸಮಾಜದ ವಿಕ್ಷಿಪ್ತ ಬುದ್ಧಿಯವರೋ, ಸಮಾಜ ಘಾತುಕರೋ, ಆತಂಕವಾದಿಗಳೋ, ಸ್ವಾರ್ಥಸಾಧಕರೋ, ಮೂಲಪ್ರೇರಕರಾಗಿರುತ್ತಾರೆ. ನಿರುದ್ಯೋಗ, ಅಭದ್ರತೆಯ ಭಾವನೆ, ವಿಲಾಸೀ ಜೀವನಕ್ಕೆ ಅವಕಾಶ ಸಿಗದ ನಿರುತ್ಸಾಹ ಮತ್ತು ಅಭಾವ ವೈರಾಗ್ಯ, ಅಸಹಾಯಕತೆಯಿಂದುಂಟಾದ ಅಕಾರಣದ್ವೇಷ– ಇಂತಹ ಪರಿಸ್ಥಿತಿ ಅವರನ್ನು ಸ್ವತಃ ಭಯೋತ್ಪಾದಕರನ್ನಾಗಿಸುತ್ತದೆ. ಒಮ್ಮೆ ಭಯೋತ್ಪಾದಕರಾಗಿ ರೂಪುಗೊಂಡ ಮೇಲೆ, ಅವರು ಸಮಾಜದ ಸಾಮಾನ್ಯ ಜೀವನ ಶೈಲಿಗೆ ಮರಳಲಾರದಷ್ಟು, ನಿಗ್ರಹಕ್ಕೆ ನಿಲುಕಲಾರದಷ್ಟು, ದೂರ ಹೋಗಿ ಬಿಟ್ಟಿರುತ್ತಾರೆ.ಇವರ ಭಯೋತ್ಪಾದಕ–ಸಮಾಜಘಾತುಕ ಚಟುವಟಿಕೆಗಳ ಸಮರ್ಥನೆಗೆ ಸಮಾಜ ಸುಧಾರಣೆ ಯಾಗಲೀ, ಬಡಜನತೆಯ–ಅಸಹಾಯಕರ, ಉದ್ಧಾರದ ನಿಜವಾದ ಕಳಕಳಿಯಾಗಲೀ ಕಾರಣವಲ್ಲ. ಇವರ ಮನಸ್ಸಿನ ಯಾವುದಾದರೊಂದು ಮೂಲೆಯಲ್ಲಿ ಅಪರೂಪಕ್ಕೊಮ್ಮೆ ಅಂಕುರಿಸುವ ಮೃದುಭಾವನೆಗೆ–ಇವರನ್ನು ರೂಪಿಸಿದ ಮೂಲ ಪ್ರೇರಕರು ಪ್ರೋತ್ಸಾಹಿ ಸುವುದಿಲ್ಲ. ಹಾಗಾಗಿ ಇವರು ಭಯೋತ್ಪಾದಕ ಚಟುವಟಿಕೆಗಳನ್ನು ಬಿಡುವ ತನಕ ಜನಸಾಮಾನ್ಯರೊಂದಿಗೆ ಬೆರೆಯುವಂತಿಲ್ಲ, ಸಾಮಾಜಿಕವಾಗಿ ಬೆರೆಯುವ ತನಕ ಭಯೋತ್ಪಾದಕ ಭಾವನೆಗಳನ್ನು ತೊರೆಯುವಂತಿಲ್ಲ. (ಹುಚ್ಚು ಬಿಡುವ ತನಕ ಮದುವೆಯಿಲ್ಲ, ಮದುವೆಯಾಗುವ ತನಕ ಹುಚ್ಚು ಬಿಡದು–ಎಂಬಂತೆ) ಸ್ಪ್ರಿಂಗನ್ನು ಒತ್ತಿಹಿಡಿದಂತೆ ತಾತ್ಕಾಲಿಕವಾಗಿ ಭಯೋತ್ಪಾದಕರನ್ನು ನಿಗ್ರಹಿಸಬಹುದು. ಕೈಸಡಿಲಿಸಿದ ಕೂಡಲೇ ಸ್ಪ್ರಿಂಗ್ ಪುಟಿದೇಳುವಂತೆ ಇವರು ಮತ್ತೆ ಚುರುಕಾಗುತ್ತಾರೆ. ಪರರಾಷ್ಟ್ರದ ಮೇಲೆ ಛೂ ಬಿಡುವುದಕ್ಕಾಗಿಯೇ ಇನ್ನೊಂದು ರಾಷ್ಟ್ರ ಭಯೋತ್ಪಾದಕರನ್ನು ಪೋಷಿಸುವ ಸೋಗಲಾಡಿತನವೂ ಸೇರಿದಂತೆ, ನಮ್ಮ ದೇಶದ ಈ ಆಂತರಿಕ ಸಮಸ್ಯೆ ಸರಕಾರಕ್ಕೆ ಚಿಕಿತ್ಸೆಯಿಲ್ಲದ ಶಾಶ್ವತ ತಲೆನೋವು.

ಸತ್ಸಂಗ

ಎರಡು ಕಾರಣಗಳಿಂದ ಮಾನವನ ಬದುಕು ರೂಪಿತವಾಗುತ್ತದೆ. ಒಂದು ಅನುವಂಶೀಯತೆ. ಎರಡನೆಯದು ಪರಿಸರ. ನಾವು ಸುತ್ತಮುತ್ತಲಿನ ಯಾರ್‍ಯಾರ ಸಹವಾಸ ಮಾಡುತ್ತೇವೋ ಅವರಿಂದ ನಮ್ಮ ಬದುಕು ಪ್ರಭಾವಿತವಾಗುತ್ತದೆ. "ಸಜ್ಜನರ ಸಂಗವದು ಹೆಜ್ಜೇನ ಸವಿದಂತೆ" ಎಂದು ಸರ್ವಜ್ಞ ಕವಿ ಹೇಳುತ್ತಾನೆ. ಸತ್ಪುರುಷರ ಸಹವಾಸದಲ್ಲಿದ್ದರೆ ನಾವು ಸಜ್ಜನರಾಗುತ್ತೇವೆ. ದುಷ್ಟರ ಸಂಗದಿಂದ ನಾವು ದುಷ್ಟರಾಗಿ ಬೆಳೆಯುತ್ತೇವೆ. "ಒಳ್ಳಿದರ ಒಡನಿರ್ದ ಕಳ್ಳನೋಳ್ಳಿದ ನಕ್ಕು, ಒಳ್ಳಿದ ಕಳ್ಳರೊಡನಾಡೆ ಅವ ಶುದ್ಧ ಕಳ್ಳನೇ ಅಕ್ಕು" ಎಂಬುದು ಸರ್ವಜ್ಞನ ಇನ್ನೊಂದು ಸುಭಾಷಿತ.

ಎರಡು ಗಿಳಿಗಳ ದೃಷ್ಟಾಂತ ಕಥೆಯೊಂದನ್ನು ಕೇಳಿದ್ದೀರಿ. ಒಂದೇ ತಾಯಿಯ ಎರಡು ಗಿಳಿಮರಿಗಳಲ್ಲಿ ಒಂದು ಕಟುಕನ ಮನೆಯಲ್ಲಿ ಬೆಳೆಯುತ್ತದೆ. 'ಹೊಡಿ, ಬಡಿ, ಕಡಿ, ಕೊಲ್ಲು' ಎಂಬ ಮಾತುಗಳನ್ನೇ ಅದು ಕಂಠಪಾಠ ಮಾಡುತ್ತದೆ. ಸತ್ಪುರುಷನೋರ್ವನ ಮನೆಯಲ್ಲಿ ಬೆಳೆದ ಗಿಳಿ "ಬನ್ನಿ ಸ್ವಾಮಿ, ಬಾಯಾರಿಕೆ ಬೇಕೆ?" ಎಂದು ಮುಂತಾಗಿ ಸವಿ ಮಾತುಗಳನ್ನು ಕಲಿಯುತ್ತದೆ. ಮೃಗಪಕ್ಷಿಗಳಿಗಿಂತ ಮಾನವನ ಬೆಳವಣಿಗೆಯಲ್ಲಿ ಪರಿಸರದ ಪ್ರಭಾವ ಅತಿಹೆಚ್ಚು. ಮಕ್ಕಳು ಒಳಿತಿಗಿಂತ ಕೆಡುಕನ್ನೇ ಬೇಗ ಅನುಕರಿಸುತ್ತಾರೆ. ಆದುದರಿಂದ ಮಕ್ಕಳ ಎದುರಿನಲ್ಲಿ ಕೆಡು ನುಡಿಗಳನ್ನಾಡದಂತೆ ಎಚ್ಚರ ವಹಿಸಬೇಕು. ಕೈಯಲ್ಲಿ ಉರಿಯುವ ಸಿಗಾರನ್ನು ಹಿಡಿದ ತಂದೆ ಧೂಮಪಾನಿ ಮಗನನ್ನು ಗದರಿಸಲು ಸಾಧ್ಯವೇ? ದುಷ್ಟ ಸಹವಾಸದಿಂದ ಮಕ್ಕಳು ದುರ್ವ್ಯಸನಿಗಳಾಗುತ್ತಿರುವುದು ನಮ್ಮೆಲ್ಲರ ಅನುಭವದ ಸಂಗತಿ.

ಸತ್ಪುರುಷರನ್ನು ಹುಡುಕುವುದೆಲ್ಲಿ? ನಾಲ್ಕು ವರ್ಗದ ಜನರ ಬಗ್ಗೆ ಸಂಸ್ಕೃತದ ಸ್ವಾರಸ್ಯಕರವಾದ ಸುಭಾಷಿತವೊಂದಿದೆ.

ಏತೇ ಸತ್ಪುರುಷಾಃ ಪರಾರ್ಥಘಟಕಾಃ ಸ್ವಾರ್ಥಾನ್ ಪರಿತ್ಯಜ್ಯ ಯೇ।
ಸಾಮಾನ್ಯಾಸ್ತು ಪರಾರ್ಥಮುದ್ಯಮ ಭೃತಃ ಸ್ವಾರ್ಥಾವಿರೋಧೇನ ಯೇ।
ತೇ ಮೀ ಮಾನುಷ ರಾಕ್ಷಸಾಃ ಪರಹಿತಂ ಸ್ವಾರ್ಥಾಯವಿಘ್ನಂತಿಯೇ
ಯೇತು ಘ್ನಂತಿ ನಿರರ್ಥಕಂ ಪರಹಿತಂ ತೇ ಕೇ ನ ಜಾನೀಮಹೇ ॥

ತಮ್ಮ ಎಲ್ಲ ಲಾಭಗಳನ್ನು, ಸುಖಸಂತೋಷಗಳನ್ನೂ ತ್ಯಜಿಸಿ ಪರೋಪಕಾರ ಮಾಡುವವರೇ ಸತ್ಪುರುಷರು. ಒಳ್ಳೆಯ ಫಲ ನೀಡುವ ಮರಗಳಿಗೂ ಇವರನ್ನು ಹೋಲಿಸುವುದುಂಟು. ಬಿರು ಬಿಸಿಲು, ಗಾಳಿ, ಮಳೆ–ಎಲ್ಲವನ್ನೂ ಸಹಿಸಿ, ತಮಗಾಗಿ ಏನನ್ನೂ ಬಯಸದೆ, ಕಲ್ಲೆಸೆದು ಹಿಂಸಿಸಿದರೂ ನೋಯದೆ ಮರಗಳು ಆಹ್ಲಾದಕರವಾದ ತಂಪನ್ನೂ, ಸುವಾಸನಾಭರಿತ ಪುಷ್ಪಗಳನ್ನೂ, ರುಚಿಕರವಾದ ಹಣ್ಣನ್ನೂ ನೀಡುತ್ತವೆ. ಆದುದರಿಂದ ಇವುಗಳ ಹೋಲಿಕೆ ಸಜ್ಜನರೊಂದಿಗೆ.

ತಮ್ಮ ಸ್ವಾರ್ಥ ಸಾಧನೆಗೆ ತೊಂದರೆಯಿಲ್ಲದಂತೆ, ತಮಗಾಗಿ ಯಾವ ನಷ್ಟವನ್ನೂ ಮಾಡಿಕೊಳ್ಳದೆ ಇತರರಿಗೆ ಉಪಕರಿಸುವವರು ಎರಡನೇ ವರ್ಗದ ಸಾಮಾನ್ಯರು.

ತಮ್ಮ ಸ್ವಂತ ಲಾಭಕ್ಕಾಗಿ ಇತರರಿಗೆ ಕೆಡುಕನ್ನು ಮಾಡುವ ನೀಚರದು ಮೂರನೆಯ ವರ್ಗ.

ತನಗೆ ಯಾವುದೇ ಲಾಭವಿಲ್ಲದೆಯೂ ಅಕಾರಣವಾಗಿ ಇನ್ನೊಬ್ಬರ ಸರ್ವನಾಶ ಮಾಡುವವರನ್ನು ಏನೆಂದು ಹೆಸರಿಸಲಿ! ಎಂದು ಕವಿ ಉದ್ಗರಿಸುತ್ತಾನೆ. ಈ ನಾಲ್ಕು ವರ್ಗದವರಲ್ಲಿ ನಾವು ಯಾರ ಸಂಗ ಮಾಡಬೇಕು? ಆದರ್ಶ ಬದುಕಿಗಾಗಿ ಯಾರನ್ನು ಅನುಕರಿಸಬೇಕು, ಅನುಸರಿಸಬೇಕು? ಆಯ್ಕೆಯ ಜಾಣತನ ನಮ್ಮದಾಗಿರಬೇಕು.

ಕಲ್ಪವೃಕ್ಷವು ನಮ್ಮ ಕಲ್ಪಿತವನ್ನಷ್ಟೇ ನೀಡುತ್ತದೆ. ಕಾಮಧೇನು ನಮ್ಮ ಕಾಮನೆಗಳನ್ನು ಪೂರೈಸುತ್ತದೆ. ಚಿಂತಾಮಣಿಯು ನಾವು ಯೋಚಿಸುವುದೆಲ್ಲವನ್ನು ಕೊಟ್ಟೀತು. ಆದರೆ ಸಜ್ಜನರ ಸಹವಾಸವು ಇವೆಲ್ಲಕ್ಕಿಂತ ಮಿಗಿಲಾಗಿ ಸಮಸ್ತವನ್ನೂ ಕರುಣಿಸುತ್ತದೆ. ಆದುದರಿಂದ ಸಜ್ಜನರ ಸಂಗವು ನಿರಂತರ ಮಧುರಾನುಭೂತಿಯನ್ನು ನೀಡುತ್ತದೆ ಎಂಬ ಸರ್ವಜ್ಞವಚನ ಸದಾ ಮನನೀಯ.

ನಾಗರಿಕ ಪ್ರಜ್ಞೆ

ಜಗತ್ತಿನ ಇತರ ರಾಷ್ಟ್ರಗಳು ನಾಗರಿಕತೆಯ ಕಣ್ಣು ತೆರೆಯುವ ಮೊದಲೇ ಭಾರತ ನಾಗರಿಕತೆಯ ಉತ್ತುಂಗ ಶಿಖರದಲ್ಲಿತ್ತೆಂದೂ ಪ್ರಪಂಚಕ್ಕೆ ಜ್ಞಾನದ ಮೊದಲ ಬೆಳಕನ್ನು ತೋರಿಸಿದವರೇ ನಾವೆಂದೂ ಹೆಮ್ಮೆಯಿಂದ ಬೀಗುತ್ತಿದ್ದ ಕಾಲವೊಂದಿತ್ತು. ಆದರೆ ಈಗ ಆ ಬೆಳಕು ಮಂಕಾಗಿ ನಮ್ಮ ನಾಗರಿಕ ಪ್ರಜ್ಞೆ ಮರೆಯಾಗುತ್ತಿದೆಯೋ ಎಂಬ ಸಂದೇಹವನ್ನು ಕುರಿತು ಚಿಂತಿಸುವ ಕಾಲ ಬಂದಿದೆ.

ವಿದ್ಯುಚ್ಛಕ್ತಿಯ ಕಣ್ಣುಮುಚ್ಚಾಲೆಯಿಂದ ನಮ್ಮ ದೈನಂದಿನ ವ್ಯವಹಾರದ ಲಯ ತಪ್ಪುತ್ತಿದೆಯೆಂದು ಗೊಣಗುತ್ತಿರುತ್ತೇವೆ. ಬೆಳಗಾದ ಮೇಲೆ ಕತ್ತಲೆಗಿಂತ 'ಮೊದಲು ಎಷ್ಟು ಗಂಟೆ ನಮ್ಮ ಬೀದಿ ದೀಪ ವ್ಯರ್ಥವಾಗಿ ಉರಿಯುತ್ತದೆಯೆಂದು ನಿತ್ಯ ಕಾಣುತ್ತೇವೆ. ಕತ್ತಲಾದ ನಂತರವೇ ನಮ್ಮ ಬೀದಿ ದೀಪ ಹೊತ್ತಿಸುವ, ಬೆಳಗಾದ ಕೂಡಲೇ ಆರಿಸುವ ನಾಗರಿಕ ಪ್ರಜ್ಞೆಯನ್ನು ನಾವು ಬೆಳೆಸಿಕೊಂಡಿಲ್ಲ. ಲಕ್ಷ ಸಂಖ್ಯೆಯ ಒಟ್ಟು ದೀಪಗಳ, ಮತ್ತು ಅವು ವ್ಯರ್ಥವಾಗಿ ಉರಿಯುವ ಸಮಯ–ಲೆಕ್ಕ ಹಾಕಿದರೆ ವಿದ್ಯುತ್ ಉಳಿತಾಯದ ಅದ್ಭುತ ಕಲ್ಪನೆ ಸಿಕ್ಕೀತು. ಇಂತಹ ಸಣ್ಣ ಲೆಕ್ಕಾಚಾರದಿಂದ ಅಪಾರ ವಿದ್ಯುತ್ ಉಳಿತಾಯವನ್ನು ನಮಗಾಗಿ ನಾವೇ ಮಾಡಬೇಕೇ ಹೊರತು ಸರಕಾರವಾಗಲೀ, ಜನಪ್ರತಿನಿಧಿಗಳಾಗಲೀ ನೇರವಾಗಿ ಮಾಡಬೇಕೆಂದು ನಿರೀಕ್ಷಿಸಲಾಗದು.

ಧೂಮಪಾನ–ಆರೋಗ್ಯಕ್ಕೆ ಹಾನಿಕರವೆಂದು ತಿಳಿದೂ, ಬಸ್ಸಿನಲ್ಲಾಗಲೀ, ಸಾರ್ವಜನಿಕ ಸ್ಥಳಗಳಲ್ಲಾಗಲೀ ನಿಷಿದ್ಧವೆಂಬ ಕಾನೂನಿನ ಅರಿವಿದ್ದರೂ, ಪಕ್ಕದವರು ಆಕ್ಷೇಪಿಸಿದಾಗಲೂ

"ಆರೋಗ್ಯ, ಅನಾರೋಗ್ಯ ನನ್ನದು, ಸಿಗರೇಟಿನ ಹಣ ನನ್ನದು, ನಿಮಗೇಕೆ ನಮ್ಮ ತಂಟೆ?" ಎಂದು ಮೊಂಡುವಾದ ಮಾಡುವ ನವನಾಗರಿಕರಿಗೆ ಏನೆನ್ನಬೇಕು?

ಇತ್ತೀಚೆಗೆ ನನಗಾದ ನಾಗರಿಕತೆಯ ಇನ್ನೊಂದು ಮುಖದ ಅನುಭವವನ್ನು ಹೇಳುತ್ತೇನೆ. "ಹಿರಿಯ ನಾಗರಿಕರಿಗಾಗಿ" ಮೀಸಲಿದ್ದ ಆಸನದಲ್ಲಿ ಕುಳಿತು ನವತರುಣರಿಬ್ಬರು ಹರಟೆ ಹೊಡೆಯುತ್ತಿದ್ದರು. ವಯೋವೃದ್ಧರೊಬ್ಬರೊಂದಿಗೆ ಅವರ ತರ್ಕ ಹೀಗಿತ್ತು. "ಸ್ವಲ್ಪ ಏಳ್ತೀಯಾ ಪ್ಪ" "ಯಾಕೆ ಏಳ್ಬೇಕು?" "ಬರವಣಿಗೆ ಕಾಣ್ಸೋಲ್ವಾ?" "ಏನಂತ?" "ನಾವೇನೂ ಬರವಣಿಗೆ ಮೇಲೆ ಕುಳಿತಿಲ್ವಲ್ಲ?" "ಮುಂದೆ ನಾವೂ ಹಿರಿಯ ನಾಗರಿಕರಾಗ್ತೀವಿ ಕಣ್ರೀ".

ಹಿರಿಯರು ಮಾತು ಮುಂದುವರಿಸಲಿಲ್ಲ. ಈ ನಿತ್ಯ ಪ್ರಯಾಣಿಕರ ಸ್ವಭಾವದ ಅರಿವಿದ್ದ ನಿರ್ವಾಹಕಿಯೂ, ವಾದಕ್ಕಿಳಿಯಲಿಲ್ಲ. ಸಹ ಪ್ರಯಾಣಿಕರೊಬ್ಬರು ವೃದ್ಧರಿಗೆ ಕನಿಕರಿಸಿದರೇ ಹೊರತು ಯಾರೂ ಯುವಕರಿಗೆ ಉಪದೇಶಿಸುವ ಗೊಡವೆಗೆ ಹೋಗಲಿಲ್ಲ.

ನಿಂತ ಬಸ್ಸನ್ನು ಹತ್ತುತ್ತಿರುವಾಗ ರಭಸದಿಂದ ಬಂದ ರಿಕ್ಷಾ ತಗುಲಿ ನನ್ನ ಬಂಧುಗಳೊಬ್ಬರು ಸತ್ತಿದ್ದಾರೆ. ಬಸ್ಸಿನಿಂದ ಇಳಿಯುವಾಗ, ರಸ್ತೆ ದಾಟುವಾಗ, ಫುಟ್ ಪಾತ್ ಮೇಲೆ ನಡೆಯುತ್ತಿರುವಾಗ ವಾಹನ ತಗುಲಿ ಸತ್ತ ಘಟನೆಗಳನ್ನು ವೃತ್ತಪತ್ರಿಕೆಗಳಲ್ಲಿ ಓದುತ್ತಿರುತ್ತೇವೆ. ಸ್ವಂತದ ಮತ್ತು ಇತರರ ಸುರಕ್ಷತೆಗಾಗಿ ಸಾಮಾನ್ಯ ಸಂಚಾರಿ ನಿಯಮಗಳನ್ನು ಪಾಲಿಸುವ ನಾಗರಿಕ ಪ್ರಜ್ಞೆ ನಮ್ಮಲ್ಲಿಲ್ಲ. ನಾವು ವಾಹನದ ಒಳಗಿನಿಂದ ಹೊರಗಿರುವ ಜನರ ಮೇಲೆ ಉಗುಳುತ್ತೇವೆ. ನಮಗೆ ಹೊರ ಸಂಚಾರದಲ್ಲಿ ದೇಹಭಾಧೆ ತೀರಿಸಲು ಸರಿಯಾದ ವ್ಯವಸ್ಥೆಯಿಲ್ಲ. ಇದ್ದರೂ ಚೊಕ್ಕವಾಗಿರಿಸಿ ಬಳಸುವ ಅಭ್ಯಾಸ ನಾವು ಬೆಳೆಸಿಕೊಂಡಿಲ್ಲ.

ಮುಂದುವರಿದ ರಾಷ್ಟ್ರಗಳಲ್ಲಿ ಕಸ–ಕಡ್ಡಿ–ಕೊಳೆ ವಿಲೇವಾರಿಗೆ ಅಚ್ಚುಕಟ್ಟಾದ ವ್ಯವಸ್ಥೆ ಇದೆ. ಇವರಿಗೆ ನೈರ್ಮಲ್ಯ ಪ್ರಜ್ಞೆ ಇದೆ. ಮಾಲಿನ್ಯಗಳಿಂದ ಮುಕ್ತರಾಗಿದ್ದಾರೆ. ಸಂಚಾರಿ ನಿಯಮಗಳ ಕಡ್ಡಾಯಪಾಲನೆಯಿಂದಾಗಿ ಇಲ್ಲಿ ಅಪಘಾತಗಳು ಕಡಿಮೆ.

ಹಿಂದೆ ಶಾಲೆಗಳಲ್ಲಿ ವಾರದಲ್ಲಿ ಒಂದು ಅವಧಿಯ (Period) ನಾಗರಿಕ ಶಿಕ್ಷಣ (Citizenship training) ವಿತ್ತು. ನಂತರ ಆ ಅವಧಿಯನ್ನು ನೀತಿಬೋದೆ (moral education) ಆಕ್ರಮಿಸಿತು. ಈಗಿನ ಪಠ್ಯಕ್ರಮದಲ್ಲಿ ಇಂತಹ ಶಿಕ್ಷಣ ಮಾಯವಾಗುತ್ತಾ ಬಂದಿದೆ. ಪಠ್ಯಕ್ರಮದಲ್ಲಿದ್ದುದನ್ನೇ ಬೋಧಸಿಲಾಗದ ಇಂದಿನ ಪರಿಸ್ಥಿತಿಯಲ್ಲಿ ಪಠ್ಯಕ್ರಮದಲ್ಲಿಲ್ಲದ ಅತಿರಿಕ್ತಬೋಧನೆಗೆ ಅವಕಾಶವೇ ಇಲ್ಲವಲ್ಲ.

ಕಲಿತು ರೂಢಿಸಿಕೊಳ್ಳಲೇ ಬೇಕಾಗಿದ್ದ ಶಿಸ್ತು–ನಾಗರಿಕ ಪ್ರಜ್ಞೆಯ ಬದಲಿಗೆ, ವಿದೇಶಿಯರಿಂದ ನಾವು ಧೂಮಪಾನ, ಮದ್ಯವ್ಯಸನ ಮೊದಲಾದ ಹಲವು ದುರಭ್ಯಾಸಗಳನ್ನು ಮಾತ್ರ ಮೈಗೂಡಿಸಿಕೊಂಡೆವೆಂಬುದೇ ವಿಪರ್ಯಾಸ.

ಮಾತು

'ಕುಲವ ನಾಲಗೆಯರುಹಿತು' ಎಂಬ ರಾಘವಾಂಕ ಮಹಾಕವಿಯ ವಚನದಂತೆ. ಪ್ರತಿಯೊಬ್ಬ ವ್ಯಕ್ತಿಯ ಯೋಗ್ಯತೆ ಅವನ ಮಾತಿನಿಂದ ಹೊರಹೊಮ್ಮುತ್ತದೆ. ದೇಹದ ಯಾವುದೇ ಭಾಗ ಮುಪ್ಪಿನಿಂದ ಶಿಥಿಲವಾದರೂ ನಾಲಗೆ ಮಾತ್ರ ಚುರುಕಾಗಿಯೇ ಇರುತ್ತದೆ. ಹುಲಿಯನ್ನಾದರೂ ಪಳಗಿಸಬಹುದು, ಮನುಷ್ಯನ ನಾಲಗೆಯನ್ನು ಮಾತ್ರ ಪಳಗಿಸಲಾಗದು ಎಂದು ಹಿರಿಯರು ಹೇಳುವ ಮಾತಿದೆ. ಒಡೆದ ಮೊಟ್ಟೆಯಂತೆ, ಆಡಿದ ಮಾತನ್ನು ಹಿಂತೆಗೆದುಕೊಳ್ಳಲಾಗದೆಂದು ಒಂದು ಆಂಗ್ಲ ಗಾದೆಯಿದೆ. 'ಮಾತಿನಿಂ ನಗೆ ನುತಿಯು, ಮಾತಿನಿಂ ಹಗೆ ಕೊಲೆಯು, ಮಾತಿನಿಂ ಸರ್ವ ಸಂಪದವು, ಲೋಕಕ್ಕೆ ಮಾತೇ ಮಾಣಿಕ್ಯ' ಎಂಬುದು ಸರ್ವಜ್ಞ ವಚನ. ಒಳ್ಳೆಯ ಮಾತಿನಿಂದ ಸ್ವರ್ಗ ಸುಖವೂ ಸಿಕ್ಕೀತು, ಕಟು ವಚನದಿಂದ ನರಕವಾಸವೂ ಲಭಿಸೀತು. ಚುಚ್ಚುಮಾತು ಎಲ್ಲ ಸುಖ ಸಂತೋಷವನ್ನೂ ಹಾಳು ಮಾಡಿ ಬದುಕುವ ಆಸೆಗೇ ಮುಳುವಾದ ನಿದರ್ಶನಗಳಿವೆ. "ಮಾತು ಆಡಿದರೆ ಹೋಯ್ತು, ಮುತ್ತು ಒಡೆದರೆ ಹೋಯ್ತು". ಆದುದರಿಂದ ನಮ್ಮ ಮಾತಿನ ಓಟಕ್ಕೆ ವಿವೇಕದ ಕಡಿವಾಣ ಹಾಕುವುದು ಅನಿವಾರ್ಯ. 'ಮಾತಾಡೆ ಮನಕೆ ಮುನಿಸಕ್ಕು' ಎಂದು ಸರ್ವಜ್ಞ ಹೇಳುತ್ತಾನೆ. ಈ ನಾಲಗೆ ಬಾಯಿಯಿಂದ ಹೊರಬಂದು ಬಿರುನುಡಿಯನ್ನಾಡಿ ಒಳಗೆ ಸುಖವಾಗಿ ಅಡಗಿಕೊಳ್ಳುತ್ತದೆ. ಕಪಾಳಮೋಕ್ಷವಾದರೆ, ಹಲ್ಲುಗಳು ಮುರಿಯುತ್ತವೆ. ಅಂದರೆ ಬಾಯಿ ಮಾಡಿದ ಕೃತ್ಯಕ್ಕೆ ಹಲ್ಲುಗಳಿಗೆ ಶಿಕ್ಷೆ. ಇದೇ ಮಾತಿನ ದುಷ್ಪರಿಣಾಮ. ಹಾಗೆಂದು ಹಿತವಾದ ಮಾತನ್ನಾಡುವುದು ಸುಲಭವಲ್ಲ. ಎಂಬುದು ಸಂಸ್ಕೃತದ ಆರ್ಯೋಕ್ತಿ. ಒಡಲಿಗೆ ಹಿತವಾದ ಔಷಧಿ ಕಹಿಯಾಗಿರುವಂತೆ ಹಿತವಾದ ಮಾತು ರುಚಿಸುವುದು ಕಡಿಮೆ. ಆರೋಗ್ಯ ಸುಧಾರಣೆಗಾಗಿ ಸಿಹಿಲೇಪಿಸಿದ ಕಹಿಗುಳಿಗೆ ತಿನ್ನಿಸುವಂತೆ. ಇತರರ ಮನಸ್ಸಿಗೆ ನೋವಾಗದಂತೆ ಸವಿಯಾದ ಮಾತುಗಳನ್ನಾಡಿ ವಿಷಯ ಮನವರಿಕೆ ಮಾಡಬೇಕು. ಕಟೂಕ್ತಿಗಳ ಪರಿಣಾಮವಾಗಿ ಎಷ್ಟೋ ಕುಟುಂಬಗಳು ಸರ್ವನಾಶವಾದ ಉದಾಹರಣೆಗೆ ಕೊರತೆಯಿಲ್ಲ. ಮಂಥರೆಯ ನಾಲಿಗೆಯಿಂದ ಹೊರಳಿದ ಮಾತುಗಳೇ ರಾಮಾಯಣ ಕಥಾನಕದ ಮೂಲವಲ್ಲವೆ? ದುರ್ಯೋಧನನ ಅಹಂಕಾರದ ಮಾತುಗಳ ಪರಿಣಾಮವಾಗಿ ಧಾರ್ತರಾಷ್ಟ್ರಕುಲವೇ ನಾಶವಾದ ಕಥೆಯನ್ನು ಯಾರು ಕೇಳಿಲ್ಲ? ವಿಚಾರವಿಲ್ಲದ ನಾಲಗೆ, ನಿನ್ನ ನೀಚಬುದ್ಧಿಯ ಬಿಡು ನಾಲಗೆ ಎಂದು ದಾಸರು ನಾಲಗೆಯನ್ನು ತೆಗಳುತ್ತಾರೆ. 'ನಾವು ಆಡುವ ಮಾತು–ಹೀಗಿರಲಿ ಗೆಳೆಯಾ' ಎಂದು ಚನ್ನವೀರ ಕಣವಿಯವರು ಹೇಳುತ್ತಾರೆ. "ಹಸಿರು ಹುಲ್ಲು ಮಕಮಲ್ಲನಲ್ಲಿ ಪಾರಿಜಾತವು ಹೂವು ಸುರಿಸಿದಂತೆ" "ಮೃದುವಚನ ಮೂಲೋಕ ಗೆಲ್ಲುವುದಂತೆ.

ಸಕ್ತುಮಿವತಿತನಾ ಪುನಂತೋ ಯತ್ರ ಧೀರಾಉವಾಚಮಕ್ರತ।
ಅತ್ರಾಸಖಾಯಃ ಸಖ್ಯಾನಿ ಜಾನತೇ ಭದ್ರೈಷಾಂ ಲಕ್ಷ್ಮೀರ್ನಿಹಿತಾಧಿವಾಚಿ॥

ಸಾರಣಿಯಲ್ಲಿ ಒಳ್ಳನ್ನು ತೂರಿ ಸತ್ವವನ್ನು ಆರಿಸಿಕೊಳ್ಳುವಂತೆ ಪ್ರಾಜ್ಞರು ಆಡುವ ವಿವೇಕಪೂರ್ಣವಾದ, ಸತ್ವಯುತವಾದ ಒಂದೊಂದೇ ಮಾತಿನಲ್ಲೂ ಸಕಲ ಸಂಪತ್ತೂ ಅಡಗಿರುತ್ತದೆ.

ಇತರರರ ಮನಸ್ಸಿಗೆ ಮುದ ನೀಡುವಂತೆ ಮೆದುವಾಗಿ ಮಾತನಾಡಬೇಕು. ಒಳ್ಳೆಯ ಮಾತಿಗೆ ಬಡತನವೇಕೆ? ನಮ್ಮ ಮಾತು ಇತರರಿಗೆ ಉಲ್ಲಾಸ, ಸಂತೋಷ, ಸಂಭ್ರಮ ನೀಡುವುದಾದರೆ, ಅದೇ ಭಗವಂತನ ಸೇವೆ. "ಸಂತೋಷಂ ಜನಯೇತ್ ಪ್ರಾಜ್ಞಃ ತದೇವೇಶ್ವರಪೂಜನಂಃ" ಸವಿಯಾದ, ಹಿತವಾದ, ಸಂತೋಷಜನಕವಾದ ಮಾತನ್ನಾಡುವುದೇ ಭಗವಂತನ ನಿಜವಾದ ಆರಾಧನೆ.

ಋಣ

ಮನುಷ್ಯ ಮತ್ತು ಮನುಷ್ಯೇತರ ಎಂದು ಜಗತ್ತಿನ ಜೀವ ಜಗತ್ತಿನಲ್ಲಿ 2 ವರ್ಗ. ಪಶು–ಪಕ್ಷಿ ಮೊದಲಾದ ಮನುಷ್ಯೇತರ ಜೀವಿಗಳು ಜಗತ್ತಿನಲ್ಲಿ ಪರಸ್ಪರ ಹೊಂದಿಕೊಂಡು ಸ್ವತಂತ್ರವಾಗಿ ಬದುಕುತ್ತವೆ. ಅವುಗಳಿಗೆ ಮನುಷ್ಯನಂತೆ ಅಥವಾ ಮನುಷ್ಯನಷ್ಟು–ಇತರ ಜೀವಿಗಳನ್ನು ಅವಲಂಬಿಸಿ ಬದುಕುವ ಅವಶ್ಯಕತೆ/ಅನಿವಾರ್ಯತೆ–ಕಡಿಮೆ. ಆದರೆ, ಮನುಷ್ಯ ಮಾತ್ರ, ಹುಟ್ಟಿನಿಂದ ಸಾಯುವ ತನಕ ಪೂರ್ಣ ಪರಾವಲಂಬಿ ಮತ್ತು ಅಸ್ವತಂತ್ರ. ಶೈಶವದಲ್ಲಿ ತಾಯಿತಂದೆ, ಬಂಧುಗಳು ಆತನನ್ನು ಎತ್ತಿ ಆಡಿಸಬೇಕು. ನಂತರ ಅಶನ, ವಸನ, ವಸತಿ, ವಿಹಾರ ಮನೋರಂಜನೆ ಮೊದಲಾದ ಸಮಸ್ತ ಸಂಗತಿಗಳಿಗೂ ಬೇರೆಯವರ ಸಹಾಯ ಅನಿವಾರ್ಯ. ಸತ್ತಮೇಲೂ ಸುಡಲಿಕ್ಕೋ, ದಫನ ಮಾಡಲಿಕ್ಕೋ ಯಾರದ್ದಾದರೂ ಸಹಾಯ ಬೇಕೇಬೇಕು. ಹೀಗೆ ವಿವಿಧ ಹಂತದಲ್ಲಿ ಪರರಿಂದ ಉಪಕಾರ ಪಡೆಯುವ 'ಋಣ' ಮನುಷ್ಯನಿಗೆ ಅನ್ವಯಿಸುವಷ್ಟು, ಮನುಷ್ಯೇತರ ಪ್ರಾಣಿಗಳಿಗೆ ಅನ್ವಯಿಸುವುದಿಲ್ಲ.

'ಋಣ' ಅಂದರೆ ಸಾಲ. ಇದು ಮುಖ್ಯವಾಗಿ ಮೂರು ವಿಧ. ದೇವಋಣ, ಋಷಿ ಋಣ ಮತ್ತು ಪಿತೃ ಋಣ. ಅಲ್ಲದೆ ಸಮಾಜ ಋಣ, ರಾಷ್ಟ್ರ ಋಣ ಎಂದೂ ಪಟ್ಟಿಯಲ್ಲಿ ಸೇರಿಸುವುದುಂಟು. ಪ್ರತ್ಯುಪಕಾರ, ಕೃತಜ್ಞತಾ ಸಮರ್ಪಣೆ– ಹೀಗೆ ಅನೇಕ ರೀತಿಯಲ್ಲಿ ಈ ಋಣ ತೀರಿಸದೆ ಮನುಷ್ಯ ಜನ್ಮ ಸಫಲವಾಗದು.

ಜಗತ್ತಿನ ಸೃಷ್ಟಿಗೆ ಕಾರಣವಾದ ಭಗವಂತನನ್ನು ಉದ್ದೇಶಿಸಿ–ಜೀವಕೋಟಿಯ ಉದ್ಧಾರಕ್ಕಾಗಿ (ಸರ್ವೇಜನಾಃ ಸುಖಿನೋಭವಂತು ಎಂಬ ಕಾಮನೆಯಿಂದ) ಮಾಡುವ ಯಜ್ಞಯಾಗಾದಿಗಳಿಂದ ದೇವಋಣವನ್ನು ತೀರಿಸಬೇಕು. ಅಧ್ಯಯನ ಅಧ್ಯಾಪನ. ಮಹರ್ಷಿ ಪ್ರಣೀತ ಶಾಸ್ತ್ರಾರ್ಥ ಚಿಂತನೆಯ ಮೂಲಕ ಋಷಿ ಋಣದಿಂದ ಬಿಡುಗಡೆ ಪಡೆಯಬೇಕು. ಸಮಾಜದಲ್ಲಿ ಆದರ್ಶವಾಗಿ ಬದುಕಬಲ್ಲ ಸತ್ಸಂತತಿಯನ್ನು ಪಡೆಯುವುದರಿಂದ ಪಿತೃ ಋಣದಿಂದ ಮುಕ್ತಿ. ಸತ್ಯ, ಅಹಿಂಸಾಪಾಲನೆ, ದ್ವೇಷಾಸೂಯರಾಹಿತ್ಯ, ಪ್ರಾಮಾಣಿಕತೆ, ಸೌಹಾರ್ದ, ಪರಸ್ಪರ ಹೊಂದಾಣಿಕೆ, ನಿಸ್ವಾರ್ಥ ಸೇವಾ ಭಾವನೆ ಇವು ಸಮಾಜ ಋಣ, ರಾಷ್ಟ್ರ ಋಣ ತೀರಿಸಲು ಬೇಕಾದ ಗುಣಗಳು.

ಸಾಲ ನೀಡಿದವನು, ಸಾಲಗಾರ ಎಲ್ಲಿ ಹೋದರೂ ಅವನನ್ನು ಪತ್ತೆಮಾಡಿ ವಸೂಲು ಮಾಡದೇ ಬಿಡುವುದಿಲ್ಲ. ಹಾಗೆಯೇ ಈ ಜನ್ಮದಲ್ಲಿ ತೀರಿಸಲಾಗದ ಋಣವನ್ನು ತಿರಿಸುವ ಸಲುವಾಗಿ ಮರುಹುಟ್ಟನ್ನು ಪಡೆಯುವುದು ಅನಿವಾರ್ಯ ಎಂದು ನಂಬುತ್ತೇವೆ. ಈ ಬಗ್ಗೆ ಒಂದು ದೃಷ್ಟಾಂತ ಕತೆ ಕೇಳಿ.

ಬರಿಗಾಲಿನಲ್ಲಿ ಸಂಚರಿಸುವ ಋಷಿ ತುಲ್ಯರಾದ ಪಂಡಿತರೊಬ್ಬರು ಉರಿಬಿಸಿಲಿನಲ್ಲಿ ಸುಡುವ ಮರಳುರಾಶಿಯನ್ನು ದಾಟಿ ಆಶ್ರಮಕ್ಕೆ ಹೋಗಬೇಕಿತ್ತು. ಅಲ್ಲಿಯೇ ಇದ್ದ ಹೊಸ ಪಾದರಕ್ಷೆಗಳನ್ನು ಮೆಟ್ಟಿಕೊಂಡು ಆಶ್ರಮ ತಲುಪಿದರು. ಈಗ ಅವರು ನಿಜವಾಗಿಯೂ ಸಮಗಾರನ ಋಣದಲ್ಲಿ ಬಿದ್ದಿದ್ದರು. ಏಕೆಂದರೆ ಪಾದರಕ್ಷೆ ಕೊಂಡದ್ದೂ ಅಲ್ಲ, ದಾನವಾಗಿ ಪಡೆದದ್ದೂ ಅಲ್ಲ. ಋಣ ತೀರಿಸಲಿಕ್ಕಾಗಿ ಅವರು ಆ ಸಮಗಾರನ ಮಗನಾಗಿ ಹುಟ್ಟಿದರಂತೆ. ಎಳೆವಯಸ್ಸಿನಲ್ಲೇ ತನ್ನ ಪಾಂಡಿತ್ಯ ಬಲದಿಂದ ಹೇರಳವಾಗಿ ಸಂಪಾದಿಸತೊಡಗಿದ ಮಗನ ಪ್ರತಿಭೆಯ ಬಗ್ಗೆ ತಂದೆಗೆ ಸಂದೇಹ. ಆದ್ದರಿಂದ ಮಗನ ಸಂಪಾದನೆಯನ್ನು ಆತ ಬಳಸಲಿಲ್ಲ. ಮುಂದೊಂದು ಅನಿವಾರ್ಯ ಪ್ರಸಂಗದಲ್ಲಿ ತನ್ನ ಗಳಿಕೆಯನ್ನು ತಂದೆಗೆ ಅರ್ಪಿಸಿ ಋಣಮುಕ್ತನಾದ ಬಾಲಕ ತೀರಿಕೊಂಡನಂತೆ.

ಆದ್ದರಿಂದ ಅತಿಶ್ರೇಷ್ಠವಾದ ಮನುಷ್ಯ ಜನ್ಮ ಪಡೆದ ನಾವು ಪಾಪ–ಪುಣ್ಯ. ಒಳಿತು ಕೆಡುಕುಗಳ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು. ದ್ರೋಹ ಚಿಂತನೆಯನ್ನು ಬಿಡಬೇಕು. ಪರೋಪಕಾರ ಬುದ್ಧಿಯನ್ನು ಜಾಗ್ರತಗೊಳಿಸಿ ಋಣಗಳಿಂದ ಮುಕ್ತರಾಗಬೇಕು. ಸುಖವಾಗಿ ಬದುಕಬೇಕು, ಸಾರ್ಥಕ ಜೀವನ ನಡೆಸಬೇಕು. ಸರ್ವೇಜನಾಃ ಸುಖಿನೋಭವಂತು' ಎಂಬುದೇ ನಮ್ಮ ಧ್ಯೇಯವಾಗಬೇಕು.

ಬುದ್ಧಿ

ಜಗತ್ತಿನ ಜೀವರಾಶಿಯಲ್ಲಿ ಎರಡು ವರ್ಗ. 'ಮಾನವ' ಮತ್ತು 'ಮನುಷ್ಯೇತರ', ಬದುಕಿಗಾಗಿ ಏನನ್ನಾದರೂ ತಿನ್ನುವುದು, ವಿಶ್ರಾಂತಿ, ಸಂತಾನೋತ್ಪತ್ತಿ' ಇವೇ ಮೂರು ಮುನಷ್ಯೇತರ ಜೀವಿಗಳ ಸಾಮಾನ್ಯ ಲಕ್ಷಣ. ಆದರೆ ಮನುಷ್ಯನ ಬದುಕಿನ ಅರ್ಥ ವ್ಯಾಪ್ತಿಯು ಅತ್ಯಂತ ವಿಸ್ತಾರವಾದುದು. ಅವನು ಭೂತ, ವರ್ತಮಾನ, ಭವಿಷ್ಯತ್‌ಗಳನ್ನು ಕುರಿತು ಚಿಂತಿಸಬಲ್ಲ. ಸುಖದುಃಖಗಳನ್ನೂ, ಒಳಿತು ಕೆಡುಕುಗಳನ್ನು ವಿವೇಚಿಸಬಲ್ಲ, ಧರ್ಮಾರ್ಥ ಕಾಮಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳ ಸಾಧನೆಯ ಹಾದಿಯನ್ನು ಕ್ರಮಿಸಬಲ್ಲ. ಆದ್ದರಿಂದ ಆದಿಶಂಕರಾಚಾರ್ಯರು "**ಜಂತೂನಾಂ ನರಜನ್ಮ ದುರ್ಲಭಂ**" ಎಂದು ಹೇಳಿದರು. ಇದನ್ನೇ ದಾಸರು 'ಮಾನವ ಜನ್ಮ ದೊಡ್ಡದು' ಎಂದು ಬೋಧಿಸಿದರು.

ಹೀಗೆ ದುರ್ಲಭವಾದ ಮಾನವಜನ್ಮ ನಮಗೆ ದೊರಕಿದ ಮೇಲೆ ಅದನ್ನು ಸಾರ್ಥಕಪಡಿಸಿಕೊಳ್ಳಲು ಜಾಣತನವಿರಬೇಕು. ಈ ಜಾಣತನವೇ ಬುದ್ಧಿವಂತಿಕೆ. ಇದೇ ಬುದ್ಧಿ ಮನುಷ್ಯನ ಹಿರಿಮೆಯ ದ್ಯೋತಕ. ಇಂದಿನ ಸ್ಪರ್ಧಾಯುಗದಲ್ಲಂತೂ ಬುದ್ಧಿಶಕ್ತಿಯ ಬಲವಿಲ್ಲದವರು ಬದುಕುವುದೇ ಕಷ್ಟ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಈ ಬುದ್ಧಿ ಎಲ್ಲಿ ಸಿಗುತ್ತದೆ?

ನಮ್ಮ ಭಾರತೀಯ ಪರಂಪರೆಯಲ್ಲಿ ವಿದ್ಯೆಯನ್ನೂ ಸದ್ಬುದ್ಧಿಯನ್ನೂ ಕರುಣಿಸುವಂತೆ ಭಗವಂತನನ್ನು ಪ್ರಾರ್ಥಿಸುವ ಸಂಸ್ಕೃತಿ ಈಗಲೂ ಉಳಿದಿದೆ. "**ಧಿಯೋ ಯೋನಃ ಪ್ರಚೋದಯಾತ್**" ಎಂದು ನಮ್ಮ ಬುದ್ಧಿಯನ್ನು ಪ್ರಚೋದಿಸುವಂತೆ ಜಗಚ್ಚಕ್ಷುವಿನ ಚೈತನ್ಯವನ್ನು ಕುರಿತು ಉಪದೇಶಿಸುವ ಉಪನಯನವೆಂಬ ಒಂದು ಸಂಸ್ಕಾರ ಕೆಲವರಲ್ಲಿ ರೂಢಿಯಲ್ಲಿದೆ. ಏಕೆಂದರೆ ದನಗಾಹಿಯು ದೊಣ್ಣೆಯನ್ನು ಹಿಡಿದು ತನ್ನ ಹಸುಗಳನ್ನು ಹುಲಿ, ಚಿರತೆಗಳಿಂದ ರಕ್ಷಿಸುವಂತೆ ಭಗವಂತನು ದಂಡಧಾರಿಯಾಗಿ ನಮ್ಮ ರಕ್ಷಣೆಗೆ ನಿಲ್ಲುವುದಿಲ್ಲ. ಆದರೆ ಯಾರನ್ನು ರಕ್ಷಿಸಲು ಅಪೇಕ್ಷಿಸುತ್ತಾನೋ ಅವರಿಗೆ ಬುದ್ಧಿಶಕ್ತಿಯನ್ನು ಅನುಗ್ರಹಿಸುತ್ತಾನೆ.

ನದೇವಾ ದಂಡ ಮಾದಾಯ ರಕ್ಷಂತಿ ಪಶುಪಾಲವತ್ ।

ಯಂ ತು ರಕ್ಷಿತು ಮಿಚ್ಛಂತಿ ಬುದ್ಧ್ಯಾಸಂಯೋಜಯಂತಿ ತಮ್।

ಬುದ್ಧಿರ್ಯಸು ಬಲಂ ತಸ್ಯ, ಮಾನವ ತನ್ನ ಬುದ್ಧಿಯ ಬಲದಿಂದ ಎಲ್ಲವನ್ನು ಗಳಿಸಬಲ್ಲ, ಸಾಧಿಸಬಲ್ಲ. ಜಗತ್ತಿನ ಅತಿಶ್ರೇಷ್ಠವಾದ ಜ್ಞಾನರಾಶಿಯೆನಿಸಿದ ವೇದಗಳ ಅರ್ಥವನ್ನು ಸರಳೀಕರಿಸಿ ಪುರಾಣಗಳ ರೂಪದಲ್ಲಿ ಪ್ರಸ್ತುತಪಡಿಸಿದ ಭಗವಾನ್ ವೇದವ್ಯಾಸರು ತಮ್ಮ ದೇವೀ ಭಾಗವತ ಕೃತಿಯ ಆದಿಯಲ್ಲಿ **ಸರ್ವಚೈತನ್ಯ ರೂಪಾಂ ತಾಂ ಆದ್ಯಾಂ ವಿದ್ಯಾಂಚ ಧೀಮಹಿ, ಬುದ್ಧಿಂ ಯಾನಃ ಪ್ರಚೀದಯಾತ್** ಎಂದು ಚೈತನ್ಯ ಸ್ವರೂಪಿಣಿಯಾಗಿ ಜಗತ್ತನ್ನು ವ್ಯಾಪಿಸಿರುವ ಆದಿಶಕ್ತಿಯನ್ನು ಕುರಿತು ಬುದ್ಧಿಯನ್ನು ಪ್ರಚೋದಿಸುವಂತೆ ಪ್ರಾರ್ಥಿಸುತ್ತಾರೆ. ಹಾಗೆಯೇ ಅತಿಶ್ರೇಷ್ಠವಾದ ಮಾನವ ಜಾತಿಯಲ್ಲಿ ಜನಿಸಿದ ನಾವೆಲ್ಲರೂ ಒಂದೇ ಎಂಬ ಮಾನವೀಯ ಭಾವನೆಯನ್ನು ಮೈಗೂಡಿಸಿಕೊಂಡು, ಪರಸ್ಪರ ದ್ವೇಷಾಸೂಯೆ, ಪರೋತ್ಕರ್ಷಾಸಹಿಷ್ಣುತೆ, ಸ್ವಾರ್ಥ, ಅತಿಆಸೆ ಮೊದಲಾದುವನ್ನು ಮರೆತು, ಅವಿಭಕ್ತ ಕುಟುಂಬದ ಸದಸ್ಯರಂತೆ ಎಲ್ಲರೂ ಎಲ್ಲರ ಒಳಿತಿಗಾಗಿ ಶ್ರಮಿಸುವ ಮೂಲಕ ಜನ್ಮವನ್ನು ಸಾರ್ಥಕಪಡಿಸಿಕೊಳ್ಳುವ ಸದ್ಬುದ್ಧಿಯನ್ನು ಕರುಣಿಸುವಂತೆ ಪ್ರತಿದಿನ ನಸುಕಿನಲ್ಲಿ ಸರ್ವಶಕ್ತನನ್ನು ಪ್ರಾರ್ಥಿಸೋಣ.

ಪ್ರೇಮ

ಪುಸ್ತಕದ ರಾಶಿಯನ್ನು ಸಾಯುವ ತನಕ ಓದಿದರೂ ಯಾರೂ ಜ್ಞಾನಿಯೆನಿಸಿಕೊಳ್ಳಲು ಸಾಧ್ಯವಿಲ್ಲ. ಭಗವಂತನ ಮೇಲಿರುವ ಪ್ರೇಮ ಎಂಬ ಎರಡೂವರೆ ಅಕ್ಷರಗಳನ್ನು ಅರ್ಥೈಸಿಕೊಳ್ಳುವವನೇ ನಿಜವಾದ ಜ್ಞಾನಿ ಎಂಬುದು ಸಂತ ಕಬೀರವಾಣಿ. ಈ ಎರಡು ಅಕ್ಷರಗಳಿಗೆ ಬೇರೆ ಬೇರೆ ಪರಿಭಾಷೆ ಇದೆ. ಭಗವಂತನಲ್ಲಿರುವ ಪ್ರೇಮ–ಭಕ್ತಿ, ಗುರುಹಿರಿಯಲ್ಲಿರುವ ಪ್ರೇಮ–ಗೌರವ, ಆದರೆ, ಶಿಷ್ಯರಲ್ಲಿರುವ ಪ್ರೇಮ–ಅಭಿಮಾನ, ಮಕ್ಕಳ ಮೇಲಿರುವುದು– ಮಮತೆ, ವಾತ್ಸಲ್ಯ, ಪ್ರೇಮಿಗಳಲ್ಲಿರುವುದು ಪ್ರೀತಿ–ಅನುರಾಗ. ಸೇವ್ಯ–ಸೇವಕರಲ್ಲಿರುವುದು–ವಿಶ್ವಾಸ, ನಂಬುಗೆ. ಸ್ನೇಹಿತರಲ್ಲಿ ಅನ್ಯೋನ್ಯತೆ, ಸೋದರರಲ್ಲಿ ಭಾವುಕತೆ–ಹೀಗೆ ಬೇರೆ ಬೇರೆ ಪರಿಭಾಷೆಯೊಂದಿಗೆ ಈ ಪದದ ಅರ್ಥವ್ಯಾಪ್ತಿ ಅತ್ಯಂತ ವಿಸ್ತಾರವಾಗಿದೆ.

(ಪ್ರೇಮದ ಮಾರ್ಗತೀರಾ ಸಂಕೀರ್ಣವಾದುದು. ಇದು ಹೋದಲ್ಲಿ ಬಿತ್ತಿ ಧಾರಾಳವಾಗಿ ಬೆಳೆಯುವಂತಹುದಲ್ಲ. ಎಲ್ಲರೂ ಯಾವಾಗಲೂ ಸಂತೆಯಲ್ಲಿ ಕೊಳ್ಳುವ ವಸ್ತುವೂ ಅಲ್ಲ, ಅತ್ಯಂತ ಅಮೂಲ್ಯ) ಈ ಪ್ರೇಮ ವಿವಿಧ ಸನ್ನಿವೇಶಗಳಲ್ಲಿ ಬೇರೆ ಬೇರೆ ರೂಪದಲ್ಲಿ ಪ್ರಕಟವಾಗುತ್ತದೆ. ಆಯಸ್ಸು, ವರ್ಚಸ್ಸು, ಕೀರ್ತಿ ಮನೋಬಲವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಗುರುಹಿರಿಯರನ್ನು ಗೌರವದಿಂದ, ನಮಸ್ಕರಿಸುವುದರ ಮೂಲಕ, ಆದರದ ಸೇವೆ ಶುಶ್ರೂಷೆಗಳ ಮೂಲಕ, ಅವರ ಮೇಲಿರುವ ಕಿರಿಯರ ಪ್ರೇಮ ವ್ಯಕ್ತವಾಗುತ್ತದೆ. ಸ್ವಂತ ಮಕ್ಕಳಂತೆ ನಿರ್ವ್ಯಾಜ ಪ್ರೇಮದಿಂದ ತನ್ನ ಸಮಸ್ತ ವಿದ್ಯೆಯನ್ನೂ ಧಾರೆ ಎರೆಯುವುದರ ಮೂಲಕ ಗುರು ಶಿಷ್ಯನ ಮೇಲಿನ ಅಭಿಮಾನ ತೋರುತ್ತಾನೆ. ಶಿಷ್ಯನ ಏಳಿಗೆಯ ಬಗ್ಗೆ ಹೆಮ್ಮೆಪಡುತ್ತಾನೆ. ಮಕ್ಕಳಿಗೆ ಊಟ–ಬಟ್ಟೆ–ವಿದ್ಯೆ ನೀಡಿ, ಸಕಾಲದಲ್ಲಿ ಬುದ್ಧಿ ಹೇಳಿ, ತಿದ್ದಿ–ತೀಡಿ ಯೋಗ್ಯರನ್ನಾಗಿ ಮಾಡುವುದೇ ತಂದೆ ತಾಯಿಗಳಿಗೆ ಮಕ್ಕಳ ಮೇಲಿನ ಪ್ರೇಮ (ಅದೇ ಮಮತೆ) ದಾರಿ ತಪ್ಪುತ್ತಿದ್ದಾಗ ಹುಸಿ ಕೋಪದಿಂದ "ನೀನು ಹಾಳಾಗಿ ಹೋಗು" ಎಂದು ಏರುದನಿಯಲ್ಲಿ ಗದರಿಸುವುದೂ ಪಿತೃವಾತ್ಸಲ್ಯದ ಇನ್ನೊಂದು ರೂಪ. ಇಲ್ಲಿ ಶಾಬ್ದಿಕ ಅರ್ಥಕ್ಕೆ ವಿರುದ್ಧವಾದ ಭಾವಾರ್ಥವಿದೆ. ಮಗೂ, ಹಾಳಾಗಬೇಡ. 'ತಪ್ಪನ್ನು ತಿದ್ದಿಕೊಂಡು ಚೆನ್ನಾಗಿರು' ಎಂಬ ವಾತ್ಸಲ್ಯದ ಧ್ವನಿಯಿದೆ. ಪ್ರಣಯಿಗಳಲ್ಲಿ ಸರಸ ವಿರಸ, ಅಳು–ನಗು, ಗಿಡಮರಗಳ ಸುತ್ತಾಟ, ಗಾಯನ–ನರ್ತನಾದಿಗಳ ಮೂಲಕ ಹತ್ತು ಹಲವು ರೀತಿಯಲ್ಲಿ ಪ್ರೇಮ ಪ್ರಕಟವಾಗುತ್ತದೆ. ದೃಶ್ಯ ಮಾಧ್ಯಮಗಳಲ್ಲಿ ವೈವಿಧ್ಯಪೂರ್ಣ ಅತಿರೇಕದ ಚಿತ್ರಣ ಎಲ್ಲರಿಗೂ ಪರಿಚಿತ. ವಿವರಣೆ ಅಗತ್ಯವಿಲ್ಲ. ಏಕಲವ್ಯ ತನ್ನ ಹೆಬ್ಬೆರಳನ್ನೇ ಗುರುದಕ್ಷಿಣೆಯಾಗಿ ಅರ್ಪಿಸಿದ ಗುರುಭಕ್ತಿಯ ಮಹಾಭಾರತದ ಕಥೆಯನ್ನು ಅರಿಯದವರಿಲ್ಲ. ತನ್ನ ಸೇವಕನಾದ ಆಂಜನೇಯ ಸೀತೆಯನ್ನು ಖಂಡಿತವಾಗಿಯೂ ಹುಡುಕುತ್ತಾನೆಂಬ ಶ್ರೀರಾಮನ ನಂಬಿಕೆ ರಾಮಾಯಣದ ಚೂಡಾಮಣಿ ಪ್ರಸಂಗ.

"ಅಣ್ಣ, ಕೈಕೇಯಿಯ ಮಾತಿನಿಂದ ಬೇಸರಿಸಿದ ತಂದೆಯ ಮಾತಿಗೆ ಬಗ್ಗಿ ವನವಾಸದ ನಿರ್ಧಾರ ಮಾಡಬೇಡ. ನನಗನುಮತಿ ನೀಡು. ಈಗಲೇ ಬಿಲ್ಲನ್ನು ಬಗ್ಗಿಸಿ, ಹೆದೆಯೇರಿಸಿ ಎಲ್ಲವನ್ನೂ ಪರಿಹರಿಸುತ್ತೇನೆ." ಎಂಬ ಲಕ್ಷ್ಮಣನ ಆದೇಶದ ಮಾತಿನಲ್ಲಿ, ಭರತನ ಪಾದುಕಾ ಪ್ರಸಂಗದಲ್ಲಿ, ಭ್ರಾತೃಪ್ರೇಮದ ಭಾವುಕತೆಯ ಪರಿಚಯವಾಗುತ್ತದೆ.

ಶ್ರೀರಾಮಚಂದ್ರ ಚಕ್ರವರ್ತಿ, ಗುಹ–ನಿಷಾದರಾಜ. ಇವರಿಬ್ಬರ ಪ್ರೇಮ ಅನೇಕ ಭಾವನೆಗಳ ಸಂಗಮ. ರಾಮಚಂದ್ರ ವನವಾಸಕ್ಕೆ ತೆರಳುವಾಗ ಗುಹ ಗಂಗಾನದಿಯನ್ನು ದಾಟಿಸುವ ಒಂದು ಹೃದಯಂಗಮ ಸನ್ನಿವೇಶ–(ಭೋಜಕವಿಯ) ಚಂಪೂ ರಾಮಾಯಣದಲ್ಲಿ "**ಕ್ಷಾಲಯಾಮಿ ತವಪಾದ ಪಂಕಜಂ ನಾಥ ದಾರು ದೃಷದೋಃ ಕಿಮಂತರಂ । ಮಾನುಷೀ ಕರಣ ಚೂರ್ಣಮಸ್ತಿ ತೇ ಪಾದಯೋರಿತಿ ಕಥಾ ಪ್ರಥೀಯಸೀ ॥**" ಆಹಲ್ಯಾಶಾಪೋದ್ಧಾರದ ಪ್ರಸಂಗವನ್ನು ನೆನೆದು ಗುಹ ಹೇಳುವ ಮಾತಿದು. ನಿನ್ನ ಪಾದಧೂಳಿಯಿಂದ ಕಲ್ಲು ಹೆಣ್ಣಾಗುತ್ತದೆ. ಕಲ್ಲು–ಮರಗಳಿಗೆ ವ್ಯತ್ಯಾಸವಿಲ್ಲ. ನನ್ನಲ್ಲಿರುವುದು ಇದೊಂದೇ ಮರದ ದೋಣಿ. ನಿನ್ನ ಪಾದಧೂಳಿಯಿಂದ ಈ ದೋಣಿ ಹೆಣ್ಣಾದರೆ ನನ್ನ ಗತಿಯೇನು? ಆದುದರಿಂದ ನಿನ್ನ ಚರಣಗಳನ್ನು ತೊಳೆಯುತ್ತೇನೆ" ಇದು ರಾಮನ ಮೇಲೆ ಗುಹನ ಪ್ರೀತಿಯ ಸ್ವರೂಪ.

ದ್ವೇಷ–ಇದರ ವಿರುದ್ಧಾರ್ಥಕ ಪದ. ಇದರಿಂದ ಸರ್ವನಾಶ ಸಾಧ್ಯ. ಪ್ರೇಮದಿಂದ ಪಶುಪಕ್ಷಿಗಳೂ ಸೇರಿದಂತೆ ಸಮಸ್ತ ಜಗತ್ತನ್ನೇ ಗೆಲ್ಲಬಹುದು, ಭಗವಂತನನ್ನು ಒಲಿಸಿ ಕೊಳ್ಳಬಹುದು. ಮೂಕನು ಸಕ್ಕರೆಯ ಸವಿಯನ್ನು ಅನುಭವಿಸಬಲ್ಲ, ವರ್ಣಿಸಲಾರ, ಹಾಗೆಯೇ ಪ್ರೇಮ.

ಗುರು

'ಗುರು' ಎಂಬ ಪದ ಇತ್ತೀಚಿನ ದಿನಗಳಲ್ಲಿ ಮೂಲ ಬೆಲೆಯಿದ್ದೂ ವ್ಯವಹಾರಕ್ಕೆ ಸಿಗದ ಒಂದು ಸವಕಲು ನಾಣ್ಯವಿದ್ದಂತೆ. ಬೆಳ್ಳಿ, ಬಂಗಾರ, ತಾಮ್ರ, ಹಿತ್ತಾಳೆಯ ಪ್ರಾಚೀನ ನಾಣ್ಯ ಗಳಾದರೆ ಸವಕಲಾದರೂ ಮುಖಬೆಲೆಯಿಲ್ಲದೆಯೂ ದ್ರವ್ಯದ ಮೂಲಬೆಲೆಗೆ ಮೋಸವಿಲ್ಲ. ಆದರೆ ಈಗ ವ್ಯವಹಾರದಲ್ಲಿರುವ ಹೆಚ್ಚಿನ ನಾಣ್ಯಗಳಿಗೆ ಸವಕಲಾಗುವವರೆಗೆ ಮಾತ್ರ ಮುಖ ಬೆಲೆ. ಈ ವ್ಯಾಖ್ಯಾನ ಉತ್ಪ್ರೇಕ್ಷೆಯಿಲ್ಲದ, ಜನಸಾಮಾನ್ಯರ ಪ್ರಾಮಾಣಿಕ ಅನಿಸಿಕೆ.

ನಿಜವಾದ 'ಗುರು' ಯಾರು? 'ಗುರು' ಪದಕ್ಕೆ ಲಘುವಲ್ಲದ, ಮಹತ್ತಾದುದು ಎಂಬುದು ಒಂದು ಅರ್ಥ. 'ಗು' ಎಂಬುದು ಅಂಧಕಾರವನ್ನೂ 'ರು' ಎಂಬುದು 'ಪರಿಹರಿಸು'ಎಂಬ ಅರ್ಥವನ್ನೂ ಸೂಚಿಸುವ ವರ್ಣಗಳು. "**ಗುಕಾರ ಸ್ತ್ವಂಧಕಾರಃ ಸ್ಯಾತ್ "ರು" ಕಾರಸ್ತನ್ನಿವಾರಕಃ**" ಅಂದರೆ ಶಿಷ್ಯರ ಅಜ್ಞಾನವೆಂಬ ಅಂಧಕಾರವನ್ನು ಹೋಗಲಾಡಿಸಿ ಅವರ ಹೃದಯದಲ್ಲಿ ಜ್ಞಾನದ ಬೆಳಕನ್ನು ಹೊತ್ತಿಸುವವನು ಎಂಬ ಇನ್ನೊಂದು ಅರ್ಥ ಹೆಚ್ಚು ಪ್ರಚಲಿತವಿದೆ. ವಸಿಷ್ಠರು, ದ್ರೋಣಾಚಾರ್ಯರು, ಸಮರ್ಥ ರಾಮದಾಸರು,

ವಿದ್ಯಾರಣ್ಯರು ಮೊದಲಾದ ಮಹಾಪುರುಷರು ಶಾಸ್ತ್ರ–ವಿದ್ಯೆ ಬೋಧನೆಯಿಂದಲೂ, ಸಮರ್ಥ ಮಾರ್ಗದರ್ಶನ ದಿಂದಲೂ ಸುಶಿಕ್ಷಿತರನ್ನಾಗಿಸಿ ಮಹಾಸಾಮ್ರಾಜ್ಯ ಸ್ಥಾಪಿಸಲು, ವಿಸ್ತರಿಸಲು, ರಾಜ್ಯಭಾರ ನಿರ್ವಹಿಸಲು ತರಬೇತಿ ನೀಡಿದ ಗುರುಗಳು.

ಗುರುವು ಆಚಾರ್ಯನೆಂದೂ ಕರೆಯಿಸಿಕೊಳ್ಳುತ್ತಾನೆ. "**ಆಚಿನೋತಿ ಆಚಾರಾನ್ ಸ್ವಯಮಾಚರತಿ ಚ**" ಅಂದರೆ ಶುದ್ಧವಾದ, ಸತ್ಯವಾದ ಆಚಾರವನ್ನು ಬೊಧಿಸುವುದಲ್ಲದೆ ತಾನು ಸ್ವತಃ ಅಂತಹ ಆಚರಣೆಯನ್ನು ಅನುಷ್ಠಾನ ಮಾಡುವವನು. ಆಚಾರ್ಯ. ದ್ರೋಣಾಚಾರ್ಯರು ಶಸ್ತ್ರಾಸ್ತ್ರ, ವಿದ್ಯೆಯನ್ನು ಬೋಧಿಸಲೂ ರಣರಂಗದಲ್ಲಿ ಕಾದಾಡಲೂ ಸಮರ್ಥರಿದ್ದರು. ಶಂಕರ, ಮಧ್ವ, ರಾಮಾನುಜ ಮೊದಲಾದವರು ಅಧ್ಯಾತ್ಮ ವಿದ್ಯೆಯನ್ನು ನಿರೂಪಿಸುವ ಶಾಸ್ತ್ರ, ಗಂಥ ರಚನೆ ಮಾಡಿದ್ದಲ್ಲದೆ ತಮ್ಮ ಬದುಕಿನಲ್ಲೂ ಆ ತತ್ವಗಳನ್ನು ಅಳವಡಿಸಿಕೊಂಡಿದ್ದರು. ಆದುದರಿಂದ ಇವರು ಆಚಾರ್ಯರು. ಆದರೆ ಗುರುಗಳೆಲ್ಲರೂ ಆಚಾರ್ಯರಾಗಿರುತ್ತಾರೆಂಬ ಸಾಮಾನ್ಯ ನಿರೂಪಣೆ ಸರಿಯಲ್ಲ.

ಸಂತ ನಾನನಕರು ಹೀಗೆ ಹೇಳುತ್ತಾರೆ. **ಗುರು ಗೋವಿಂದ್ ದೋಊ ಖಡ್ಲೆ ಕಾಕ್ಕೆಲಾಗೂವ ಪಾಈ, ಬಲಿಹಾರೀ ಗುರು ಆಪಣ್ಯೆ ಗೋವಿಂದ್ ದಿಯೋ ಬತಾಈ**"

ಎದುರಿನಲ್ಲಿ ಗುರುಗಳೂ ಭಗವಂತನೂ ಏಕಕಾಲದಲ್ಲಿ ಪ್ರತ್ಯಕ್ಷರಾದರೆ ಮೊದಲು ಯಾರನ್ನು ವಂದಿಸಬೇಕೆಂಬುದು ಸಮಸ್ಯೆ. ಭಗವಂತನ ಸ್ವರೂಪವನ್ನು ತಿಳಿಸುವ ಗುರುವೇ ಪ್ರಥಮ ವಂದ್ಯನೆಂದು ಅವರು ಹೇಳುತ್ತಾರೆ. ಮುನಿಸಿಕೊಂಡ ಭಗವಂತನನ್ನು ಗುರುವಿನ ಸಹಾಯದಿಂದ ಒಲಿಸಿಕೊಳ್ಳಬಹುದು. ಆದರೆ ಗುರುವೇ ಕೋಪಿಸಿಕೊಂಡರೆ ದೇವರೂ ರಕ್ಷಿಸಲಾರನಂತೆ. ಗುರುವನ್ನು ತ್ರಿಮೂರ್ತಿ ಸ್ವರೂಪರೆಂದು ವರ್ಣಿಸಿ ನಮಸ್ಕರಿಸುವ ಸಂಪ್ರದಾಯವಿದೆ.

ಸ್ಪರ್ಶಮಣಿಯನ್ನು ಯಾವ ಲೋಹಕ್ಕೆ ಸೋಕಿಸಿದರೂ ಆ ಲೋಹ ಬಂಗಾರವಾಗು ತ್ತದೆ. ಆದರೆ ಹಾಗೆ ಬಂಗಾರವಾದ ಲೊಹ ತಾನೇ ಸ್ಪರ್ಶಮಣಿಯಾಗಲಾರದು. ಗುರು ಹಾಗಲ್ಲ. ತನ್ನ ಶಿಷ್ಯರನ್ನು ತನ್ನಷ್ಟೇ ಸಮರ್ಥರನ್ನಾಗಿ, ತನಗಿಂತ ಮಿಗಿಲಾಗಿ ರೂಪಿಸಬಲ್ಲ.

ಗುರು–ಶಿಷ್ಯನ ಜಡ ಬುದ್ಧಿಯೆಂಬ ಕಲ್ಲಿಗೆ ಸಾಣೆ ಹಿಡಿದು ಪಾರಮಾರ್ಥಿಕ ಜ್ಞಾನ ಕಾಣುವ ಕನ್ನಡಿಯಂತೆ ಮಾಡುತ್ತಾನೆ. ಎಲ್ಲ ಶಿಷ್ಯರನ್ನೂ ಒಂದೇ ರೀತಿ ತಯಾರು ಮಾಡುವ ಕೆಲಸ ಗುರುವಿಗೆ ಕಷ್ಟಸಾಧ್ಯ. ಅವನು ಕೊಳಲನ್ನೂದಿ ಸ್ವರ ಹೊರಡಿಸಲು ಕಲಿಸಬಹುದು. ಆದರೆ ಸ್ವರ ವೈವಿಧ್ಯವನ್ನು ವಿವಿಧ ರಾಗಗಳನ್ನು ನುಡಿಸಲು ಶಿಷ್ಯನಿಗೆ ಸ್ವಂತದ ಯೋಗ್ಯತೆ, ಪರಿಶ್ರಮ ಬೇಕು. (ಸ್ವಯಂ ಪ್ರತಿಭೆಯೇನೂ ಇಲ್ಲದ ವ್ಯಕ್ತಿತ್ವ ಶೂನ್ಯನಾದ ಶಿಷ್ಯನ ಬಗೆಗೆ ಗುರುವಿನ ಮೇಲೆ ದೋಷಾರೋಪಣೆ ಮಾಡುವಂತಿಲ್ಲ)

ಕಬೀರರು ಹೇಳುವಂತೆ ಭೂಮಂಡಲವೆಂಬ ಕಾಗದದ ರಾಶಿಯ ಮೇಲೆ, ಕಾಡಿನ ಮರಗಳೆಲ್ಲವುಗಳ ಲೇಖನಿಗಳನ್ನು ಸಪ್ತ ಸಾಗರದ ಜಲರಾಶಿಯೆಂಬ ಮಸಿಯಲ್ಲದ್ದಿ ಬರೆಯ ಹೊರಟರೂ ಗುರುವಿನ ಮಹಿಮೆ ಪೂರ್ತಿ ಬರೆಯಲಾಗದು. ಗುರುವೇ ನಿನ್ನ ಮಹಿಮೆ ಅಪಾರ.

ವೇದಗಳಲ್ಲಿ ಭಾವೈಕ್ಯ ಮತ್ತು ಪರಿಸರ ಪ್ರೇಮ

ಗಾಯಂತಿದೇವಾಃ ಕೀಗೀ ತಕಾನಿ ಧನ್ಯಾಸ್ತು ತೇ ಭಾರತ ಭೂಮಿಭಾಗೇ।
ಸ್ವರ್ಗಾಪವರ್ಗಾಸ್ಪದ ಮಾರ್ಗಭೂತೇ ಭವಂತಿ ಭೂಯಃ ಪುರುಷಾಃ ಸುರತ್ವಾತ್

ವಿಷ್ಣು ಪುರಾಣದ ಈ ಶ್ಲೋಕ ತುಂಬ ಪ್ರಸಿದ್ಧವಾಗಿದೆ. ಸ್ವರ್ಗ–ಮೋಕ್ಷಗಳಿಗೆ ಮಾರ್ಗದಂತಿರುವ ಭಾರತ ಭೂಮಿಯಲ್ಲಿ ಜನಿಸಿರುವ ಪುರುಷರು ದೇವತೆಗಳಾದ ನಮಗಿಂತಲೂ ಭಾಗ್ಯಶಾಲಿಗಳೆಂದು ದೇವತೆಗಳೂ ಗಾಯನ ಮಾಡುವ ಈ ಪುಣ್ಯ ಭೂಮಿ ನಮ್ಮದು.

'ಭಾರತ' ಎಂಬ ನಮ್ಮ ದೇಶದ ಹೆಸರನ್ನು ಉಚ್ಚರಿಸುವಾಗಲೇ ಮೈಪುಳಕಿತವಾಗುತ್ತದೆ. **"ಬಿಸ್ವ ಭರನ್ ಪೋಷನ್ ಕರ್ ಜೋ ಈ, ತಾಕರ್ ನಾಮ್ ಭರತ್ ಅಸ್‌ರೋ ಈ"** ಎಂದು ಎಲ್ಲರನ್ನೂ ಪೋಷಿಸುವುದರಿಂದ ಇದಕ್ಕೆ 'ಭಾರತ' ಎಂದು ಹೆಸರಾಯಿತೆಂಬುದಾಗಿ ತುಲಸೀದಾಸರು ಹೇಳುತ್ತಾರೆ. ದೇಶ ಸಂಬಂಧವಾಗಿ ಶ್ರೀ ಕೃಷ್ಣ ಅರ್ಜುನನನ್ನು ಸಂಬೋಧಿಸುವಾಗಲೆಲ್ಲ 'ಭಾರತ', 'ಭರತರ್ಷಭ' ಶಬ್ದಗಳ ಧಾರಾಳ ಬಳಕೆಯಾಗಿದೆ.

ವೇದಗಳನ್ನು ಈ ಭಾರತದ ಸಂಸ್ಕೃತಿಯ ಮೂಲವೆಂದು ಹೇಳಲಾಗುತ್ತದೆ. ಮನುಕುಲದ ಏಳಿಗೆ, ದುಃಖ ಪರಿಹಾರ ಮತ್ತು ಶಾಶ್ವತ ಸುಖ ಪ್ರಾಪ್ತಿಯೇ ಮುಖ್ಯ ಧ್ಯೇಯವಾಗಿ ಉಳ್ಳ ನಮ್ಮ ಪ್ರಾಚೀನ ಮಹರ್ಷಿಗಳು ನಿರಂತರ ಚಿಂತನೆಯಿಂದ ಮಂತ್ರ ದ್ರಷ್ಟಾರರೆನಿಸಿಕೊಂಡರು. ಮರೆಯಬಾರದಂತೆ, ಆಗಾಗ ಮನನ ಮಾಡುವಂತೆ, ಛಂಧೋಬದ್ಧವಾದ ಮಂತ್ರಗಳ ರೂಪದಲ್ಲಿ ರಾಷ್ಟ್ರೀಯ ಭಾವೈಕ್ಯ, ಸಮಾನತೆ, ಸಹಬಾಳ್ವೆ, ಸ್ನೇಹಪರತೆ ಮೊದಲಾದ ಉನ್ನತ ಆದರ್ಶಗಳನ್ನು ಸಹಸ್ರಾರು ವರ್ಷಗಳ ಮೊದಲೇ ಪ್ರಚುರ ಪಡಿಸಿದ ಶ್ರೇಯಸ್ಸು ಈ ಮಹರ್ಷಿಗಳಿಗೆ ಸಲ್ಲಬೇಕು.

ಸಂಗಚ್ಛಧ್ವಂ ಸಂವದಧ್ವಂ ಸಂ ವೋ ಮನಾಂಸಿ ಚಾನತಾಂ। ಸಮಾನೀವ ಆಕೂತಿಃ ಸಮಾನಾ ಹೃದಯಾನಿವಃ ಸಮಾನ ಮಸ್ತು ವೋಮನೋ ಯಥಾ ವಃ ಸು ಸಹಾಸತಿ॥
ಎಲ್ಲರೂ ಒಂದಾಗಬೇಕು. ಅಭಿಪ್ರಾಯ ಭೇದವಿರಬಾರದು. ಪರಸ್ಪರ ಅರಿತುಕೊಳ್ಳಬೇಕು, ವೈಯಕ್ತಿಕ ವಿಚಾರಗಳನ್ನು ಇತರರ ಮೇಲೆ ಹೇರಬಾರದು, ಶಿಸ್ತಿನ ಪರಿಧಿಯೊಳಗೆ ಕಾರ್ಯನಿರ್ವಹಿಸಬೇಕು. ವೈಚಾರಿಕ ಮೌಲ್ಯಗಳನ್ನು ಒಂದೇ ಆಗಿ ನಿರ್ಣಯಿಸೋಣ. ಎಲ್ಲರ ಹೃದಯದ ವಿಚಾರ ಪ್ರವಾಹ ಒಂದೇ ಆಗಲಿ. ಆಚಾರ–ವಿಚಾರ, ಆಹಾರ ವಿಹಾರ, ವೇಷಭೂಷಣ ಮೊದಲಾದಂತೆ ಜೀವನ ವಿಧಾನ ಒಂದೇ ಆಗಿ ತಾರತಮ್ಯ ಭಾವಗಳಿಲ್ಲದೆ ಸಮಾನತೆಯಿಂದ ಬದುಕಬೇಕು ಎಂಬ ಸಮತಾವಾದದ ಸಂದೇಶವನ್ನು ಬೀರುವ ಈ ಋಗ್ವೇದ ಮಂತ್ರಗಳ ಮೌಲ್ಯವನ್ನು ಅಳೆಯಲಾದೀತೆ!

ಪಶುಪಕ್ಷಿಗಳೂ ಸೇರಿದಂತೆ ಸಮಸ್ತ ಜೀವಕೋಟಿಗಳಿಗೆ ಸಕಲ ಸಂಪತ್ತನ್ನು ನೀಡುವಂತೆ ಸರ್ವೇಶ್ವರನನ್ನು ಪ್ರಾರ್ಥಿಸುವ ಯಜುರ್ವೇದದ ಒಂದು ಮಂತ್ರ–

ಇಷೇತ್ವೋರ್ಜೇತ್ವಾ ವಾಯವಸ್ಥೋ ಪಾಯವಸ್ಥ ದೇವೋವಃ ಸವಿತಾ ಪ್ರಾರ್ಪಯತು ಶ್ರೇಷ್ಠತಮಾಯ ಕರ್ಮಣ ಆಪ್ಯಾಯಧ್ವಮಘ್ನಿ ಯಾದೇವಭಾಗ ಮೂರ್ಜಸ್ವತಿ ಪಯಸ್ವತೀಃ ಪ್ರಜಾವತಿ ರನವಿಯಾ ಆಯಕ್ಷ್ಮಾಮಾವಹಸ್ತೇನ ಈಶತಮಾಘಶಗ್‌ಂಸೋ ರುದ್ರಸ್ಯಹೇತಿಃ ಪರಿವೋ ವೃಣಕ್ತು ಧ್ರುವಾ ಅಸ್ಥಿನ್ ಗೋಪತೌಸ್ಯಾತ್ ಬಹ್ವೀರ್ಯಜ ಮಾನಸ್ಯ ಪಶೋನ್ ಪಾಹಿ ॥

ಸುವೃಷ್ಟಿಯಾಗಲಿ, ಅನ್ನ ಹೆಚ್ಚಲಿ. ಅಭ್ಯುದಯವಾಗಲಿ, ಸದಾಚಾರ ಪ್ರವೃತ್ತಿಯುಂಟಾ ಗಲಿ, ಪಶುಸಮೃದ್ಧಿಯಾಗಲಿ, ಕ್ಷಯಾದಿ ರೋಗಗಳು ಬಾರದಿರಲಿ, ಮನುಷ್ಯನ ಕಾರ್ಯ ನಿರತ ಇಂದ್ರಿಯಗಳು ಸುಖವಾಗಿರಲಿ, ಹಸುಗಳು ಮತ್ತಿತರ ಪಶುಪಕ್ಷಿಗಳ ಸಂತಾನ ವರ್ಧಿಸಲಿ ಮತ್ತು ಇವೆಲ್ಲರನ್ನೂ ರಕ್ಷಿಸು ಎಂದು ಈಶ್ವರನಲ್ಲಿ ಸಲ್ಲಿಸುವ ಪ್ರಾರ್ಥನೆ ಎಷ್ಟು ವಿಶಾಲಭಾವನೆಗಳಿಂದ ಕೂಡಿದೆ!

ಎಂತಹ ಆಘಾತಗಳಲ್ಲೂ ತನ್ನ ಸತ್ವವನ್ನು ಕಳೆದುಕೊಳ್ಳದೇ ನಿತ್ಯ ನೂತನ ವಾಗಿರುವುದೇ ಭಾರತೀಯ ಸಂಸ್ಕೃತಿಯ ಹೆಗ್ಗುರುತು. ಸ್ವಾಮಿ ವಿವೇಕಾನಂದರು ಭಾರತೀಯ ಸಂಸ್ಕೃತಿಯನ್ನು ಅಮರವೆಂದು ಹೇಳುತ್ತಾರೆ. ವೇದಗಳೇ ಈ ಸಂಸ್ಕೃತಿಯ ಮೂಲ.   The Rigvedas are Hindu Saered writings which are probably the oldest literary compositions in the world. ಎಂದು ಪಾಶ್ಚಾತ್ಯ ವಿದ್ವಾಂಸರು ಉದ್ಗರಿಸುವಂತೆ ವೇದಮೂಲವಾದ ಈ ಭಾರತೀಯ ಸಂಸ್ಕೃತಿ ವೃಕ್ಷವನ್ನು ಸರಿಯಾಗಿ ಪೋಷಿಸದಿರುವುದೇ ಭಾರತೀಯ ಮೌಲ್ಯಗಳ ಇಂದಿನ ಅಧಃಪತನಕ್ಕೆ ಕಾರಣ. ಉಪನಿಷತ್ತುಗಳು, ಆರಣ್ಯಕಗಳು, ಧರ್ಮಸೂತ್ರಗಳು, ಸ್ಮೃತಿಗಳು, ಭಾಗವತ, ರಾಮಾಯಣ, ಭಾರತ ಮೊದಲಾದ ಪುರಾಣ ಇತಿಹಾಸ ಗ್ರಂಥಗಳೇ ಈ ಸಂಸ್ಕೃತಿ ವೃಕ್ಷದ ಕಾಂಡ–ಪತ್ರ–ಶಾಖೆಗಳು. ಇದರ ನೆರಳಲ್ಲಿ ಇದರ ಮಹತ್ವವನ್ನಿರಯದಿದ್ದರೆ. ಪೋಷಿಸದಿದ್ದರೆ ನಮ್ಮಂತಹ ಮೂರ್ಖರು ಬೇರೆ ಇಲ್ಲ. ಪ್ರಾತಃಕಾಲದಲ್ಲಿ ಭೂದೇವಿಯನ್ನೂ, ನಿಸರ್ಗ ದೇವತೆಗಳನ್ನೂ ಪುಣ್ಯ ನದಿಗಳನ್ನೂ ಸ್ಮರಿಸಿ, ಪ್ರಾರ್ಥಿಸಿ ನಿತ್ಯಕರ್ತವ್ಯವನ್ನು ಪ್ರಾರಂಭಿಸುವ ಈ ಸಂಸ್ಕೃತಿಯ ನೆರಳಿನಲ್ಲಿ ಬದುಕುವ ನಾವು ಧನ್ಯರು.

ಅಶ್ವತ್ಥ, ಆಲ, ಅತ್ತಿ, ಪಲಾಶ, ಹಲಸು, ಮಾವು, ತೆಂಗು, ಅಡಕೆ ಮೊದಲಾದ ವೃಕ್ಷಗಳೂ, ಗುಡೂಚಿ ಮೊದಲಾದ ಬಳ್ಳಿಗಳೂ, ಅರ್ಕ, ಅಪಾಮಾರ್ಗವೆ ಮೊದಲಾದ ಸಸ್ಯಗಳೂ ನಮಗೆ ಪವಿತ್ರ. ಗರಿಕೆಯಂತಹ ಹುಲ್ಲೂ ನಮಗೆ ಶ್ರೇಷ್ಠವೇ, ಬೇರಾವುದೇ ದೇಶದಲ್ಲಿಲ್ಲದ ವೃಕ್ಷ ಪ್ರೇಮದ ಇಂತಹ ಪರಂಪರೆಯಲ್ಲಿ ಸಹಸ್ರಾರು ವರ್ಷಗಳಿಂದ ಬೆಳೆದು ಬಂದ ನಾವು ಇಂದು ಅರಣ್ಯ ನಾಶದ ಮೇಲಾಟಕ್ಕಿಳಿದಿರುವುದು ಎಂತಹ ವಿಪರ್ಯಾಸ!

ಸಾವಿರಾರು ವರ್ಷಗಳ ಹಿಂದೆಯೇ ಭಾವೈಕ್ಯ, ಸಮಾನತೆ, ಪರಿಸರ ಪ್ರೇಮದ ಸಂದೇಶವನ್ನು ಜಗತ್ತಿಗೆ ಸಾರಿದ,. ಭಾರತೀಯ ಸಂಸ್ಕೃತಿಯ ಮೌಲ್ಯವನ್ನು ಎತ್ತಿ ಹಿಡಿದ. ವೇದವೃಕ್ಷವನ್ನು ಪೋಷಿಸುವುದರಿಂದ ಮಾತ್ರ ನಮ್ಮ ಉದ್ಧಾರ ಸಾಧ್ಯವಾದೀತು.

ಧರ್ಮ-ಧರ್ಮ ಮತ್ತು ವಿಜ್ಞಾನ

ಧೃಞ್ ಧಾರಣ ಪೋಷಣಾಯೋಃ ಧಾತುವಿಗೆ ಸನ್ ಪ್ರತ್ಯಯ ಸೇರಿ 'ಧರ್ಮ' ಶಬ್ದದ ನಿಷ್ಪತ್ತಿಯಾಗುತ್ತದೆ. **ಧ್ರಿಯತೇ ಸುಖಪ್ರಾಪ್ತಯೇ ಸೇವ್ಯತೇ ಸಧರ್ಮಃ** ಅಂದರೆ ಮಾನವನ ಸುಖಕ್ಕಾಗಿ ಸೇವಿಸಲ್ಪಡುವ, ಆಚರಿಸಲ್ಪಡುವ ಕಾರ್ಯಚಟುವಟಿಕೆಗಳೇ 'ಧರ್ಮ'. ಮನುಸ್ಮೃತಿಯಲ್ಲಿ ಧರ್ಮದ ಸ್ವರೂಪ ನಾಲ್ಕು ವಿಧವೆಂದು ವರ್ಣಿಸಲ್ಪಟ್ಟಿದೆ.

ವೇದಃ ಸ್ಮೃತಿಃ ಸದಾಚಾರಃ ಸ್ವಸ್ಯ ಚಪ್ರಿಯ ಮಾತ್ಮನಃ।
ಏತಚ್ಚತುರ್ವಿಧಂ ಪ್ರಾಹುಃ ಸಾಕ್ಷಾತ್ ಧರ್ಮಸ್ಯ ಲಕ್ಷಣಮ್ ॥

ವೇದಗಳಲ್ಲಿ ಉಕ್ತವಾದುದು 'ಧರ್ಮ' ನಿಷಿದ್ಧವಾದುದು. ಅಧರ್ಮ. ಸ್ಮೃತಿಗಳಲ್ಲಿ ಪ್ರತಿಪಾದಿತವಾದುದು ಮತ್ತು ಮಹರ್ಷಿಗಳ ಆಚಾರ-ಇವೂ 'ಧರ್ಮ.' ಎಲ್ಲಕ್ಕಿಂತ ಮುಖ್ಯವಾದುದು ಹಾಗೂ ನಿಜವಾದ ಧರ್ಮವೆಂದರೆ ನಮ್ಮ ಆತ್ಮೋದ್ಧಾರಕ್ಕೆ ಅನುಕೂಲವಾಗಿರುವುದು.

ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ, ಲೋಕೇಧರ್ಮಿಷ್ಠಂಪ್ರಜಾಉಪಸರ್ಪಂತಿ।
ಧರ್ಮೇಣ ಪಾಪಮಪನು ದತಿ, ಧರ್ಮೇ ಸರ್ವಂ ಪ್ರತಿಷ್ಠಿತಂ। ತಸ್ಮಾತ್ ಧರ್ಮಂ ಪರಂಂ ವದಂತಿ""

ವೇದಗಳಲ್ಲಿ ಹೇಳಿದ ಈ ಧರ್ಮವೇ ಜಗತ್ತಿಗೆ ಆಧಾರವಾಗಿದೆ. ಧರ್ಮಾನುಯಾಯಿ ಗಳನ್ನು ಲೋಕ ಗೌರವಿಸಿ ವಂದಿಸುತ್ತದೆ. ಧರ್ಮವಿದ್ದಲ್ಲಿ ಪಾಪ ಲೇಪವಿರುವುದಿಲ್ಲ. ಆದುದರಿಂದ ಧರ್ಮವೇ ಸರ್ವಶ್ರೇಷ್ಠವಾಗಿದೆ.

ಧರ್ಮವನ್ನು ವಿಶ್ಲೇಷಿಸುವ ಮಹರ್ಷಿಗಳು ರಾಜಧರ್ಮ, ಆರ್ಯಧರ್ಮ, ಸ್ತ್ರೀಧರ್ಮ, ಕುಲಧರ್ಮ, ಯತಿಧರ್ಮ, ಆಪದ್ಧರ್ಮ ಎಂದು ಮೊದಲಾಗಿ ಹಲವು ರೀತಿಯಲ್ಲಿ ಹೇಳುತ್ತಾರೆ. ಮಹಾಕವಿ ಕಾಳಿದಾಸನ ರಘುವಂಶದ ಮೊದಲನೇ ಸರ್ಗದ 5,6,7,8 ನೇ ಶ್ಲೋಕಗಳಲ್ಲಿ ವರ್ಣಿತವಾದ ರಾಜಧರ್ಮ ಅನುಕರಣೀಯವಾಗಿದೆ. ಅವರು ಜನ್ಮದಿಂದ ಪವಿತ್ರರು, ಹಿಡಿದ ಕೆಲಸವನ್ನು ಸಾಧಿಸಿಯೇ ಬಿಡುವವರು, ಶಾಸ್ತ್ರವಿಹಿತವಾದ ಯಜ್ಞಾನುಷ್ಠಾನ ಮಾಡುವವರು, ಯಾಚಕರಿಗೆ ಕೇಳಿದ್ದನ್ನು ಕೊಡುವವರು, ಆಯಾ ಅಪರಾಧಕ್ಕನುಗುಣವಾಗಿ ಸೂಕ್ತ ಶಿಕ್ಷೆ ವಿಧಿಸುವವರು, ತ್ಯಾಗಕ್ಕಾಗಿಯೇ ಧನ ಸಂಗ್ರಹಿಸು ವವರು, ಸತ್ಯಕ್ಕಾಗಿಯೇ ಮಿತಭಾಷಿಗಳು, ಬ್ರಹ್ಮಚರ್ಯಾದಿ ಆಶ್ರಮಧರ್ಮಗಳನ್ನು ಚಚೂ ತಪ್ಪದೇ ಪಾಲಿಸುವವರು. ಈಗ ಯಾವುದೇ ದೇಶದ ಯಾವುದೇ ಆಡಳಿತ ವ್ಯವಸ್ಥೆಯಲ್ಲಿ ರಾಜಶಾಸನದ ಇಂತಹ ಧರ್ಮವನ್ನು ಕನಸಿನಲ್ಲಾದರೂ ಊಹಿಸಲು ಸಾಧ್ಯವೇ? ತೈತ್ತರೀಯ ಉಪನಿಷತ್ತಿನ "**ಸತ್ಯಂ ವದ ಧರ್ಮಂ ಚರ**" ಮೊದಲಾದ ಸ್ನಾತಕ ಧರ್ಮದ ಆದರ್ಶ ವಾಕ್ಯಗಳು ವಿಶ್ವದ ಬೇರಾವುದೇ ಸಾಹಿತ್ಯದಲ್ಲೂ ಸಿಗಲಾರವು.

ಇತ್ತೀಚಿನ ದಿನಗಳಲ್ಲಿ ಪ್ರತಿಯೊಂದನ್ನೂ ವಿಜ್ಞಾನದ ಒರೆಗಲ್ಲಿನಲ್ಲಿ ಪರೀಕ್ಷಿಸುವ ಮನೋವೃತ್ತಿ ಬೆಳೆಯುತ್ತಿದೆ. ಇದು ಆರೋಗ್ಯಕರ ಪ್ರವೃತ್ತಿಯೇ ಸರಿ. ಏಕೆಂದರೆ ಧರ್ಮ ಮತ್ತು ವಿಜ್ಞಾನ ಒಂದನ್ನೊಂದು ಬಿಟ್ಟಿರಲಾರವು. ಐನ್‌ಸ್ಟೀನ್ ಹೇಳುವಂತೆ Science without religion is lame andreligion without sicence is blind ಧರ್ಮ ಮತ್ತು ವಿಜ್ಞಾನ ಒಂದಕ್ಕೊಂದು ಪೂರಕ. ಧರ್ಮವಿಲ್ಲದ ವಿಜ್ಞಾನ ಕುಂಟು. ವಿಜ್ಞಾನವಿಲ್ಲದ ಧರ್ಮ ಕುರುಡು. ವಿಜ್ಞಾನವು ಈಶ್ವರನ ಅಸ್ತಿತ್ವವನ್ನು ಒಪ್ಪುವುದಿಲ್ಲವೆಂಬ ಜಡವಾದಿಗಳು ವಿಜ್ಞಾನ ಮತ್ತು ಧರ್ಮಗಳೆರಡನ್ನೂ ಆಳವಾಗಿ ಅಧ್ಯಯನ ಮಾಡಿಲ್ಲವೆಂದೇ ಹೇಳಬೇಕು. ವೈಜ್ಞಾನಿಕ ಜಿಜ್ಞಾಸೆಯು ಧಾರ್ಮಿಕ ಚೈತನ್ಯದ ಒಂದು ಅನಿವಾರ್ಯ ಅಂಗವಾಗಿದೆ.

ಮನುಷ್ಯ ಬಾಹ್ಯ ಜಗತ್ತಿನ ಆಗುಹೋಗುಗಳನ್ನು ಚಿಂತಿಸುವಾಗ ವಿಜ್ಞಾನಿಯೆನಿಸಿ ಕೊಂಡರೆ, ಅಂತರ್ಜಗತ್ತಿನ ಆಳದಲ್ಲಿ ಮುಳುಗಿದನಾದರೆ ಧರ್ಮವನ್ನು ವಿಮರ್ಶಿಸುತ್ತಾನೆ. ಹೀಗೆ ಧರ್ಮ ಮತ್ತು ವಿಜ್ಞಾನಗಳ ಪ್ರೇರಕ ಶಕ್ತಿಯ ಮೂಲ ಒಂದೇ ಆಗಿದೆ. ಇವರೆಡರ ಉದಯವೂ ಆಶ್ಚರ್ಯ ಮೂಲಕವಾದ ಜಿಜ್ಞಾಸೆಯಿಂದಾಗುತ್ತದೆ. ಪ್ರತಿಯೊಂದು ವಸ್ತುವಿನ ಬಗೆಗೆ ನಮ್ಮ ಅಂತರಂಗದಲ್ಲಿ ಹೇಗೆ? ಮತ್ತು ಏಕೆ? ಎಂಬ ಎರಡು ಪ್ರಶ್ನೆಗಳೇಳುತ್ತವೆ. ಈ ಎರಡು ಪ್ರಶ್ನೆಗಳ ಉತ್ತರಗಳು 'ಧರ್ಮ'ದಲ್ಲಿ ಕೊನೆಗೊಳ್ಳುತ್ತವೆ.

ವಿಜ್ಞಾನ, ತತ್ವಶಾಸ್ತ್ರ ಮತ್ತು ಧರ್ಮ ಈ ಮೂರು ಶಬ್ದಗಳಿಗೆ ಆಧುನಿಕ ವಿದ್ವಾಂಸರ ವ್ಯಾಖ್ಯಾನ ಹೀಗಿದೆ.

1.Science is systamatised knowledge
2.Realized science is Philosophy
3.Realized Philosophy is religion ಅಂದರೆ ವಿಜ್ಞಾನ ಮತ್ತು ದರ್ಶನ ಶಾಸ್ತ್ರಗಳ ವೈಚಾರಿಕತೆಯ ತುದಿಯಲ್ಲಿ ಧರ್ಮ ಉದಯಿಸುತ್ತದೆ. ಆದುದರಿಂದ ಧರ್ಮ ಮತ್ತು ವಿಜ್ಞಾನ ಪರಸ್ಪರ ಪೂರಕಗಳೇ ಹೊರತು ವಿರೋಧಿಗಳಲ್ಲ. Sir Oliver Lodge ನ ಮಾತುಗಳಲ್ಲಿ ಹೇಳುವುದಾದರೆ "The region of religion and the region of a completed science are one" ಹಿಂದಿಯಲ್ಲಿ ದೋಹಾ ಹೀಗಿದೆ. **ಹಜಾರ್ ಸ್ಯಾನ್ಸ್ ರಂಗ್ ಲಾಯೇ, ಹಜಾರ್ ಕಾನೂನ್ ಹಮ್ ಬನಾಯೇಂ। ಖುದಾ ಕೀಕುದರತ್ ಯಹೀರ ಹೇಗೀ, ಹಮಾರೀ ಹೈರತ್ ಯಹೀ ರಹೇಗೀ॥** ಅಂದರೆ ಧರ್ಮ ಮತ್ತು ವಿಜ್ಞಾನಗಳ ನಡುವೆ ವಿರೋಧವಿಲ್ಲ. ಎರಡೂ ಪರಸ್ಪರ ಪೂರಕಗಳು.

ಮಜ್ ಹಬ್ ನಹೀಂ ಸಿಖಾತಾ ಆಪಸ್ ಮೇಂ ಬೈರ್ ರಖ್‌ನಾ ॥ ಯಾವ ಧರ್ಮ ದಿಂದ ಇನ್ನೊಂದು ಧರ್ಮಕ್ಕೆ ತೊಂದರೆಯಾಗುತ್ತದೋ, ಯಾವ ಧರ್ಮವು ಇನ್ನೊಂದು ಧರ್ಮವನ್ನು ದ್ವೇಷಿಸಲು-ಜಗಳಾಡಲು ಸೇರಿಸುತ್ತದೆಯೋ ಅದು ಧರ್ಮವೇ ಅಲ್ಲ. ಮಹಾಭಾರತದ ವನಪರ್ವದ ಈ ಉಕ್ತಿ ಇದನ್ನೇ ಪ್ರತಿಪಾದಿಸುತ್ತದೆ. **ಧರ್ಮಂ ಯೋ ಬಾಧತೇ ಧರ್ಮಃ ನ ಸ ಧರ್ಮಃ ಕುವರ್ತ್ಮ ತತ್। ಅವಿರೋಧಾತ್ತು ಯೋ ಧರ್ಮ ಸಧರ್ಮಃ ಸತ್ಯವಿವಿಕ್ರಮಃ।**

ಪರಸ್ಪರ ಹೊಂದಾಣಿಕೆ ಮತ್ತು ಸಮನ್ವಯಗಳೆರಡು ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯಗಳು. ಜಗತ್ತಿನ ಮಹಾವಿಜ್ಞಾನಿಗಳು ತತ್ವಚಿಂತಕರೂ ಸಮನ್ವಯದ ಅವಶ್ಯಕತೆಯನ್ನು ಒತ್ತಿ ಹೇಳುತ್ತಿದ್ದಾರೆ. ಮಾನವ ಜನಾಂಗದ ಏಳಿಗೆಗೆ ಧರ್ಮ ಮತ್ತು ವಿಜ್ಞಾನಗಳ ಸಮನ್ವಯದ ಅಗತ್ಯತೆಯನ್ನು ವಿಚಾರವಾದಿಗಳು ಪ್ರತಿಪಾದಿಸ ತೊಡಗಿದ್ದಾರೆ. ಆದುದರಿಂದ ವಿಜ್ಞಾನ ಮತ್ತು ಧರ್ಮಗಳ ಸಮನ್ವಯಕ್ಕೆ ಇದು ಸಕಾಲ. ಭೌತಿಕವಾದಿ ಚಿಂತಕರು ಧಾರ್ಮಿಕ ಚಿಂತನೆಯ ಮಹತ್ವವನ್ನು ಅರಿಯಬೇಕು ಮತ್ತು ಸನಾತನಿಗಳು ವೈಜ್ಞಾನಿಕ ಹಿನ್ನೆಲೆಯನ್ನು ಚಿಂತಿಸಲು ತೊಡಗಬೇಕು. ಹೀಗೆ ವಿಜ್ಞಾನ ಮತ್ತು ಧರ್ಮಗಳ ಸಮನ್ವಯ ಮತ್ತು ಸದುಪಯೋಗದಿಂದ ಮಾತ್ರ ಜಗತ್ತಿನ ಕಲ್ಯಾಣವಾದೀತು.

ಪರೋಪಕಾರ ಧರ್ಮ

ನಮ್ಮ ಬದುಕು ಪರಾವಲಂಬಿತ. ನಾವು ಉಣ್ಣುವ ಆಹಾರ, ಧರಿಸುವ ಬಟ್ಟೆ, ವಾಸಿಸುವ ಮನೆ–ನಮಗೆ ನೂರಾರು, ಸಾವಿರಾರು ಜನರ ಪರಿಶ್ರಮದ ಬಳುವಳಿ. ಸಮಾಜದಿಂದ ನಾವು ಉಪಕೃತರಾದುದಕ್ಕೆ ನಾವು ಪ್ರತ್ಯುಪಕಾರದ ಮೂಲಕವೇ ಅದರ ಋಣ ತೀರಿಸಿದರೆ ಮಾತ್ರ ನಮ್ಮ ಬದುಕು ಸಾರ್ಥಕ. ಮನುಷ್ಯ ಬದುಕಿದ್ದಾಗ ಮಾತ್ರವೇ ಉಪಕಾರ ಮಾಡಬಲ್ಲ. ಮನುಷ್ಯನನ್ನುಳಿದು ಇತರೆ ಪ್ರಾಣಿ, ಪಕ್ಷಿ, ತರು–ಲತೆಗಳು ಬದುಕಿದ್ದಾಗಲೂ, ಸತ್ತಮೇಲೂ ಸಮಾಜಕ್ಕೆ ಉಪಯೋಗಿಯಾಗಿವೆ. ಪ್ರಾಣಿಗಳು ಸತ್ತಮೇಲೂ ಅವುಗಳ ಚರ್ಮ–ಮಾಂಸ ಉಪಯೋಗಕ್ಕೆ ಬರುತ್ತದೆ. ಕಬೀರದಾಸರು ಹೇಳುವಂತೆ **ಇತತೇಂ ವೇ ಪಾಹನ್ ಹನತ್, ಉತತೇಂ ವೇ ಫಲ್ ದೇತ್** ಮಾವು ಮೊದಲಾದ ಫಲವೃಕ್ಷಗಳಿಗೆ ನಾವು ಎಷ್ಟೇ ಕಲ್ಲುಗಳನ್ನೆಸೆದು ಗಾಸಿಗೊಳಿಸಿದರೂ ಅಷ್ಟು ಹೆಚ್ಚು ಅವು ನಮಗಾಗಿ ಸವಿಯಾದ ಫಲಗಳನ್ನುದುರಿಸುತ್ತವೆ. ಬದುಕಲು ಆಮ್ಲಜನಕ ನೀಡಿ ಪೋಷಿಸುತ್ತವೆ. ಆದರೆ ಜಗತ್ತಿನ ಜೀವಿಗಳಲ್ಲೆಲ್ಲ ಸರ್ವಶ್ರೇಷ್ಠರೆಂದು ಮೆರೆಯುವ ನಾವು, ಈಗ ಹೆಚ್ಚುಹೆಚ್ಚು ಮರಗಳನ್ನು ಕಡಿದು, ನಮ್ಮ ವಿನಾಶದ ಹಾದಿಯನ್ನು ನಾವೇ ವಿಸ್ತರಿಸುತ್ತಿದ್ದೇವೆ.

ವ್ಯಾಸರು ಹದಿನೆಂಟು ಪುರಾಣಗಳಲ್ಲೂ ಎರಡೇ ಸಂಗತಿಗಳನ್ನು ಪ್ರತಿಪಾದಿಸುತ್ತಾರೆ. ಒಂದು–ಪರೋಪಕಾರ–ಇದರಿಂದ ಪುಣ್ಯಲಭಿಸುತ್ತದೆ. ಮತ್ತೊಂದು–ಪರಪೀಡನೆ ಪಾಪ ಸಂಪಾದನೆಗಾಗಿ **ಅಷ್ಟಾದಶ ಉರಾಣೇಷು ವ್ಯಾಸಸ್ಯ ವಚನಂ ದ್ವಯಂ। ಪರೋಪಕಾರಃ ಪುಣ್ಯಾಯ, ಪಾಪಾಯ ಪರಪೀಡನಮ್॥** ಸಮಸ್ತ ಜೀವಿಗಳ ಬಗ್ಗೆ ಕನಿಕರಿಸುವುದು ಮತ್ತು ಅವುಗಳ ದುಃಖ ನಿವಾರಣೆಗಾಗಿ ಸಹಾಯ ಮಾಡುವುದನ್ನು **'ಈಶ್ವರಾರಾಧನೆ'** ಯೆಂದು ಮಹರ್ಷಿ ತಿರುವಳ್ಳುವರ್‌ರವರು ಹೇಳುತ್ತಾರೆ.

ಇತರರ ಕಷ್ಟದಿಂದ ನಮ್ಮ ಮನಸ್ಸಿಗೆ ನೋವಾಗುವುದು ಮತ್ತು ಆ ಕಷ್ಟವನ್ನು ದೂರ ಮಾಡುವ ಪ್ರವೃತ್ತಿಯುಂಟಾಗುವುದು. ಮಾನವನ ಸಹಜ ಧರ್ಮವೆಂದು ಮನೋವಿಜ್ಞಾನ ಹೇಳುತ್ತದೆ. ಬಕಾಸುರನ ಬಳಿಗೆ ತನ್ನ ಮಗನನ್ನು ಕಳಿಸುವ ಮೂಲಕ ಪರೋಪಕಾರ ಧರ್ಮವನ್ನು ಮೆರೆದ ಕುಂತೀದೇವಿಯ ಮತ್ತು ಪರೋಪಕಾರಕ್ಕಾಗಿ ಆತ್ಮಬಲಿ ನೀಡಿದ ಜೀಮೂತವಾಹನನ ಆದರ್ಶವನ್ನು ಅರಿಯದವರಿಲ್ಲ. ತಾನು ಸ್ವತಃ ಹಸಿವು ನೀರಡಿಕೆಗಳಿಂದ ಚಡಪಡಿಸುತ್ತಿದ್ದರೂ ತನ್ನ ಆಹಾರ ಪಾನೀಯವನ್ನು ಇತರರಿಗೆ ನೀಡಿದ ರಂತಿದೇವನ ಪರೋಪಕಾರದಕತೆ ಭಾಗವತದಲ್ಲಿ ಪ್ರಸಿದ್ಧವಾಗಿದೆ. ಪ್ರತ್ಯಕ್ಷನಾದ ಭಗವಂತನಲ್ಲಿ ಅವನು ಬೇಡಿದ ವರನ **ನ ಕಾಮಯೇಹಂ ಗತಿಮಿಶ್ವರಾತ್ ಪರಾಂ ಅಷ್ಟರ್ಧಿಯುಕ್ತಾಂ ಅಪುನರ್ಭವಂ ವಾ। ಆರ್ತಿಂ ಪ್ರಪದ್ಯೇ ಖಿಲ ದೇಹ ಭಾಜಾಂ ಅಂತಸ್ಥಿತಃ ಯೇನ ಭವಂತ್ಯ ದುಃಖಾಃ।**

ಅವನಿಗೆ ಅಷ್ಟಸಿದ್ಧಿ ಮೋಕ್ಷಾದಿಗಳು ಬೇಕಿಲ್ಲ. ಸಮಸ್ತ ಪ್ರಾಣಿಗಳ ಅಂತಃಕರಣದಲ್ಲಿದ್ದು ಅವುಗಳ ದುಃಖ ದೂರ ಮಾಡುವ ಸಾಮರ್ಥ್ಯಬೇಕು. ಇದು ನಿಜವಾದ ಪರೋಪಕಾರ ಬುದ್ಧಿ.

ಹೀಗೆ ಅಗತ್ಯವಿರುವವರಿಗೆ, ತನ್ನ ಆತ್ಮತೃಪ್ತಿಗಾಗಿ, ವಾತ್ಸಲ್ಯ ಸಹಾನುಭೂತಿಪೂರಿತ ಭಾವನೆಗಳಿಂದ ಅನ್ನ ವಸ್ತ್ರಾದಿಗಳನ್ನು ನೀಡುವುದೇ ಪರೋಪಕಾರ. ಆದರೆ, ಪ್ರತ್ಯುಪಕಾರ ನಿರೀಕ್ಷೆಯಿಂದ ಮತ್ತು ಅಗತ್ಯವಿಲ್ಲದವರಿಗೆ ಹಾಗೂ ಅಪಾತ್ರರಿಗೆ ದಾನ ಮಾಡುವುದು ಮಾತ್ರ ಪಾಪಕಾರ್ಯ. ಹೊಟ್ಟೆ ತುಂಬಿದವರಿಗೆ ಅಥವಾ ಜಠರ ರೋಗಿಗಳಿಗೆ ಮೃಷ್ಟಾನ್ನದ ಅಗತ್ಯವಿಲ್ಲವಷ್ಟೆ! **ಪರೋಪಕರಣಂ ಯೇಷಾಂ ಜಾಗರ್ತಿ ಹೃದಯೇ ಸತಾಂ। ನಶ್ಯಂತಿ ವಿಪದಸ್ತೇಷಾಂ ಸಂಪದಃ ಸ್ಯುಃ ಪದೇ ಪದೇ॥**

ಯಾರ ಹೃದಯದಲ್ಲಿ ಪರೋಪಕಾರ ಬುದ್ಧಿ ಜಾಗೃತವಾಗಿರುತ್ತದೆಯೋ, ಅವರ ಆಪತ್ತುಗಳು ನಿವಾರಣೆಯಾಗುವುದಲ್ಲದೆ, ಸಮೃದ್ಧಿಯನ್ನು ಹೊಂದುತ್ತಾರೆ.

ಸಂಸಾರೇ ನಪರೋಪಕಾರ ಸದೃಶಂ ಪಶ್ಯಾಮಿ ಪುಣ್ಯಂ ಸತಾಮ್ ॥ ಎಂಬ ಕ್ಷೇಮೇಂದ್ರ ಕವಿಯ ಉಕ್ತಿಯಂತೆ ಪರೋಪಕಾರಕ್ಕೆ ಸಮನಾದ ಪುಣ್ಯ ಬೇರೆ ಇಲ್ಲ.

ಆತ್ಮಯಜ್ಞ, ಪಿತೃಯಜ್ಞ, ದೇವಯಜ್ಞಗಳಂತೆ ಪರೋಪಕಾರವೂ ಒಂದು ಯಜ್ಞವೇ ಸರಿ. ಪರೋಪಕಾರ ಪ್ರವೃತ್ತಿಯಿಲ್ಲದ ಯಾವುದೇ ಧಾರ್ಮಿಕ ಕಾರ್ಯಗಳೂ, ಪೂಜಾಪಾಠಗಳೂ ನಿರರ್ಥಕ. ಪರಹಿತಯಜ್ಞ ಭಾವನೆಯಿಲ್ಲದ ಮನುಷ್ಯ ತನ್ನ ಸ್ವಾರ್ಥಕ್ಕಾಗಿ ಸಮಾಜದಿಂದ ಕದಿಯುವ ಕಳ್ಳನಾಗುತ್ತಾನೆಂಬುದಕ್ಕೆ ಭಗವದ್ಗೀತೆಯ 3ನೇ ಅಧ್ಯಾಯದ ಈ ಶ್ಲೋಕ ಉದಾಹರಣೆ:–

ಇಷ್ಟಾನ್ ಭೋಗಾನ್ ವೋ ದೇವಾಃ ದಾಸ್ಯಂತೇ ಯಜ್ಞಭಾವಿತಾಃ।
ತೈರ್ದತ್ತಾ ನಪ್ರದಾಯ್ಯೈ ಭ್ಯಃ ಯೋ ಭುಂಕ್ತೇ ಸ್ತೇನ ಏವಕ್ತೇಸಃ॥

ಮನುಷ್ಯನ ಯೋಗ್ಯತೆಯನ್ನು ಅವನ ಪರೋಪಕಾರ ಪ್ರವೃತ್ತಿಯಿಂದ ಅಳೆಯಲಾಗುವುದೇ ಹೊರತು ಆತನ ವೈಯಕ್ತಿಕ ಸಂಪತ್ತಿನಿಂದಲ್ಲ. ಪರೋಪಕಾರದಂತಹ

ವಿಶಾಲ ಮನೋಭಾವವೇ ಮನುಷ್ಯನ ಅಂತರಾತ್ಮದ ಹಿರಿಮೆಯ ಒರೆಗಲ್ಲು. ತನ್ನ ಜೀವನವನ್ನೇ ಸಮಿತ್ತನ್ನಾಗಿ ಪರೋಪಕಾರದ ಯಜ್ಞದಲ್ಲಿ ಹೊಮಿಸುವವನೇ ಧನ್ಯನೆಂದು ಭರ್ತೃ ಹರಿಯ ನೀತಿ. ನಮ್ಮ ಭಾರತೀಯ ಸಾಹಿತ್ಯದ, ಸಾಂಸ್ಕೃತಿಕ ಪರಂಪರೆಯಲ್ಲಿ ಪರೋಪಕಾರದ ಮಹತ್ವವನ್ನು ಸಾರುವ ದೃಷ್ಟಾಂತಗಳು ವಿಪುಲವಾಗಿವೆ. ಪರೋಪಕಾರಕ್ಕಾಗಿ ದೇಹತ್ಯಾಗ ಮಾಡಿದ ದಧೀಚಿ ಮಹರ್ಷಿಗಳು ಇಂದಿಗೂ ಅಮರರು. ತ್ರಿಲೋಕ ವೀರನಾದ ರಾವಣನಿಂದ ತನ್ನ ಮರಣ ನಿಶ್ಚಿತವೆಂದು ತಿಳಿದೂ ಕಾದಿ ಮಡಿದ, ಪರೋಪಕಾರಿ ಜಟಾಯು ಧರ್ಮಸ್ವರೂಪನಾದ ಶ್ರೀರಾಮನಿಂದ ಶಾಶ್ವತ ಪುಣ್ಯ ಪದವಿಯನ್ನೇ ಪಡೆದ.

ಪರಹಿತ ಸರಿಸ ಧರ್ಮನಹಿಂ ಭಾ ಈ ।
ಪರಪೀಡಾಸಮ ನಹಿಂ ಅಧಮಾ ಈ॥

ಎಂಬ ತುಲಸೀದಾಸರ ವಚನದಂತೆ ಪರೋಕಾರಕ್ಕೆ ಸಮನಾದ ಧರ್ಮ ಬೇರೊಂದಿಲ್ಲ.

ಪಂಚ ವಕಾರಗಳು

ಮನುಷ್ಯ ತನ್ನ ಬದುಕಿನಲ್ಲಿ ಏನೆಲ್ಲ ಸಂಪಾದಿಸುತ್ತಾನೋ ಹಾಗೆಯೇ ಎಷ್ಟನ್ನೋ ಕಳೆದುಕೊಳ್ಳುತ್ತಾನೆ. ತಾನು ಕಳೆದುಕೊಂಡವುಗಳಲ್ಲಿ ಕೆಲವನ್ನು ಮತ್ತೆ ಪಡೆಯುತ್ತಾನೆ. ಹೀಗೆ ಕಳೆದುಕೊಳ್ಳಬಾರದ, ಮತ್ತು ಪುನಃ ಸಂಪಾದಿಸಲಾಗದ ಒಂದು ಸಂಗತಿಯೇ ಗೌರವ. ಇಂತಹ ಆತ್ಮಗೌರವವನ್ನು ಪಡೆಯಲಪೇಕ್ಷಿಸುವವರು ಇತರರನ್ನು ಗೌರವಿಸಲು ಸಿದ್ಧರಿರಬೇಕು. ಇತರರಿಗೆ ಗೌರವ ನೀಡಲಾರದ ವ್ಯಕ್ತಿ ಇತರರಿಂದ ಗೌರವವನ್ನು ನಿರೀಕ್ಷಿಸಬಾರದು. ಮನುಷ್ಯ 5 ವಕಾರಗಳಿಂದ ಗೌರವ ಸಂಪಾದಿಸುತ್ತಾನೆಂಬುದನ್ನು ಒಂದು ಸುಭಾಷಿತ ಹೀಗೆ ಹೇಳುತ್ತದೆ.

ವಸ್ತ್ರೇಣ ವಪುಷಾವಾಚಾ ವಿದ್ಯಯಾ ವಿನಯೇನ ಚ।
ವಕಾರೈಃ ಪಂಚಭಿರ್ಹೀನಃ ನರೋ ನಾಯಾತಿ ಗೌರವಮ್॥

ಗರಿಗರಿಯಾಗಿ ಇಸ್ತ್ರಿಮಾಡಿದ ಉತ್ತಮ ಪೋಷಾಕನ್ನು ಧರಿಸಿದ ಒಬ್ಬ ಸಾಮಾನ್ಯ ವ್ಯಕ್ತಿಯನ್ನೂ ಇಂದಿನ ಸಮಾಜ ಅತ್ಯಂತ ಗೌರವದ ದೃಷ್ಟಿಯಿಂದ ನೋಡುತ್ತದೆ. ಸಾಮಾನ್ಯ ಪೋಷಾಕು, ಸರಳ ವ್ಯಕ್ತಿತ್ವದಿಂದ ಗೌರವ ಸಂಪಾದಿಸುವವರು ಮಹಾತ್ಮಾ ಗಾಂಧಿಯಂತಹ ಕೆಲವೇ ಮಂದಿ ಮಾತ್ರ. ಒಮ್ಮೆ ಈಶ್ವರಚಂದ್ರ ವಿದ್ಯಾಸಾಗರರಿಗಾಗಿ ಔತಣಕೂಟವನ್ನು ಏರ್ಪಡಿಸಲಾಗಿತ್ತು. ಪ್ರತಿಷ್ಠಿತ ಆಹ್ವಾನಿತರೆಲ್ಲ ಈಶ್ವರಚಂದ್ರರ ನಿರೀಕ್ಷೆ

ಯಲ್ಲಿ ಭೋಜನ ಮಂದಿರದಲ್ಲಿ ಸೇರಿದ್ದರು. ಸಾದಾ ಉಡುಪಿನಲ್ಲಿ ಬಂದ ಈಶ್ವರ ಚಂದ್ರ ರನ್ನು ದ್ವಾರಪಾಲಕ ಒಳಗೆ ಬಿಡಲಿಲ್ಲ. ಉತ್ತಮ ಪೋಷಾಕನ್ನು ಧರಿಸಿ ಮರಳಿದ ಇವರು ಪ್ರತಿಷ್ಠಿತರ ಗುಂಪಿಗೆ ಪ್ರವೇಶ ದೊರಕಿಸಿಕೊಂಡರೆಂಬುದೊಂದು ನೈಜ ಘಟನೆ. ಮಿರಿ ಮಿರಿ ಮಿಂಚುವ, ಬೆಲೆ ಬಾಳುವ ಬಟ್ಟೆ, ಕೈಗಡಿಯಾರ, ಬೆರಳುಗಳಲ್ಲಿ ಉಂಗುರ, ಕಣ್ಣಿಗೆ ಕನ್ನಡಕ ಇವು ಒಬ್ಬ ವ್ಯಕ್ತಿಯ ಪ್ರತಿಷ್ಠೆಯ ಕುರುಹು ಎಂದು ಭಾವಿಸುವ ಬಹುಮಂದಿ ಯನ್ನು ನಾವು ನಿತ್ಯದ ಬದುಕಿನಲ್ಲಿ ಕಾಣುತ್ತೇವೆ. ಮಹಾತ್ಮಾಗಾಂಧಿ, ರಮಣ ಮಹರ್ಷಿ ಗಳು, ಜೈನ ದಿಗಂಬರರು, ಸರ್ವಸಂಗಪರಿತ್ಯಾಗಿಗಳಾದ ಕೆಲವು ಸಂನ್ಯಾಸಿಗಳು ಇದಕ್ಕೆ ಅಪವಾದ. ಸುಂದರ ರೂಪ, ಒಳ್ಳೆಯ ಮೈಕಟ್ಟುಳ್ಳ ಆಕರ್ಷಕ ವ್ಯಕ್ತಿತ್ವದಿಂದಲೂ ಮನುಷ್ಯ ಗೌರವ ಪಡೆಯುತ್ತಾನೆ.

'ಕುಲವ ನಾಲಗೆಯರುಹಿತು' ಎಂಬುದು ರಾಘವಾಂಕನ ಉಕ್ತಿ. ಆತನಾಡುವ ಮಾತಿನಿಂದಲೇ ಪ್ರತಿಯೊಬ್ಬ ಮನುಷ್ಯ ತಾನಾಗಿ ತನ್ನ ಯೋಗ್ಯತೆಯನ್ನು ಪರಿಚಯಿಸು ತ್ತಾನೆ. 'ಬಾಯಿಬಿಟ್ಟರೆ ಬಣ್ಣಗೇಡು' ಎಂಬ ಗಾದೆಯ ಮಾತಿನಂತೆ ಪ್ರತಿಯೊಬ್ಬರ ಪೂರ್ವಾಪರ ಆತನ ಮಾತಿನಲ್ಲಿ ವ್ಯಕ್ತವಾಗುತ್ತದೆ. ಆದುದರಿಂದ ಮಾತನಾಡುವ ರೀತಿಯನ್ನು ಬಸವಣ್ಣನವರು ಹೀಗೆ ಹೇಳುತ್ತಾರೆ. "ನುಡಿದರೆ ಮುತ್ತಿನ ಹಾರದಂತಿರ ಬೇಕು. ಲಿಂಗ ಮೆಚ್ಚಿ ಅಹುದಹುದೆನ್ನಬೇಕು." "ಮಾತಿನಿಂ ನಗೆ ನುತಿಯು, ಮಾತಿನಂ ಹಗೆ ಕೊಲೆಯು, ಮಾತಿನಿಂ ಸರ್ವಸಂಪದವು, ಲೋಕಕ್ಕೆ ಮಾತೆ ಮಾಣಿಕ್ಯ" ಎಂಬ ಸರ್ವಜ್ಞ ವಚನದಿಂದ ಗೌರವ ಕಳೆದುಕೊಳ್ಳುವ ಎಲ್ಲ ಚಟುವಟಿಕೆಗಳಿಗೂ ಮಾತೇ ಮೂಲ ಕಾರಣವೆಂಬುದು ವಿದಿತವಾಗುತ್ತದೆ. 'ಮಾತಾಡೆ ಮನಕೆ ಮನಿಸಕ್ಕು, ಮಾತಿನಲಿ ಸೋತವನೆ ಜಾಣ' ಎಂಬುದು ಸರ್ವಜ್ಞನ ಇನ್ನೊಂದು ಉಕ್ತಿ. ಇತರರನ್ನು ಉದ್ರೇಕಿಸುವ, ಮನನೋಯಿಸುವ ಮಾತುಗಳನ್ನು ಬೆಳೆಸುತ್ತಾ ಹೋಗಬಾರದು. ಮಾತಿನಿಂದ ವಿರಸವುಂಟಾಗುವ ಸನ್ನಿವೇಶದಲ್ಲಿ ಸೋಲುವುದು ಜಾಣತನ.

ರಹಿಮನ್ ಜಿಹ್ವಾ ಬಾವರೀ ಕಹಿಗಇ ಸರಗ್ ಪತಾಲ್।
ಆಪುನ ಕಹಿ ಭೀತರ ಗಇ, ಜೂತೀ ಖಾತ್ ಕಪಾಲ್ ॥

ನಾಲಗೆಯ ಬಗ್ಗೆ ರಹೀಮರ ಈ ಉಕ್ತಿ ಎಷ್ಟು ಸ್ವಾರಸ್ಯವಾಗಿದೆ! ಬಾಯಿಯಿಂದ ಹೊರಬಂದ ನಾಲಗೆ ಸ್ವರ್ಗಪಾತಾಳಗಳನ್ನೇ ಒಂದು ಮಾಡುವಂತೆ ಅಸಂಬದ್ಧವಾಗಿ ಒದರಿ ಒಳಗೆ ಸೇರಿತು. ಪರಿಣಾಮ? ಚಪ್ಪಲಿ ಏಟು ಕಪಾಲಕ್ಕೆ. ನಾಲಗೆಯೊಂದು ವಿಷಸರ್ಪ. ಅದು ಮಾನವನ ಶರೀರದೊಳಗಿದ್ದು ಆತನಿಗೆ ಕೆಡುಕಾಗಬಹುದಾದ ಎಲ್ಲ ಸಂಗತಿಗಳನ್ನೂ ನುಡಿಯುತ್ತದೆ. ಆದುದರಿಂದ ಮನುಷ್ಯ ತನ್ನ ಗೌರವಕ್ಕೆ ಕುಂದುಬಾರದಂತೆ ಎಚ್ಚರಿಕೆಯಿಂದ ಮಾತನಾಡಬೇಕು.ಪ್ರಿಯವಾಕ್ಯ ಪ್ರದಾನೇನ ಸರ್ವೇತುಷ್ಯಂತಿ ಜಂತವಃ। ಒಳ್ಳೆಯ ಮಾತಿನಿಂದ ಸಮಸ್ತ ಜೀವಿಗಳೂ ಸಂತೋಷಿಸುವು ದಾದರೆ ಅಂತಹ ಮಾತುಗಳಿಗೆ ಬಡತನವೇಕೆ? ಹಿತಮಿತವಾಗಿ ಮಾತನಾಡುವ ಕಲೆಯನ್ನೂ ಜಾಣ್ಮೆಯನ್ನೂ ಸಾಧಿಸಿದವನು ನಿಜವಾಗಿಯೂ ಗೌರವ ಪಡೆಯುತ್ತಾನೆ.

ವಿದ್ವಾಂಸನಲ್ಲಿರುವ ವಿದ್ಯೆ ರಹಸ್ಯ ನಿಧಿಯಿದ್ದಂತೆ, ವ್ಯಯಿಸಿದಷ್ಟೂ ವರ್ಧಿಸುವ ಅಕ್ಷಯ ಭಂಡಾರವಿದ್ದಂತೆ. ಆದುದರಿಂದ ವಿದ್ವಾಂಸ ಎಲ್ಲೇ ಹೋಗಲಿ, ಇದ್ದಲ್ಲೇ ಇರಲಿ, ಗೌರವಕ್ಕೆ ಅರ್ಹನಾಗುತ್ತಾನೆ. **ಅಭಿವಾದನ ಶೀಲಸ್ಯ ನಿತ್ಯಂ ವೃದ್ಧೋಪಸೇವಿನಃ । ಚತ್ವಾರಿ ತಸ್ಯ ವರ್ಧಂತೇ ಆಯುರ್ವಿದ್ಯಾಯಶೋಬಲಂ॥**

ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುವ ಈ ಸುಭಾಷಿತದಂತೆ ಗುರುಹಿರಿಯರನ್ನು ಗೌರವಿಸುವ, ಗೆಳೆಯರನ್ನು ಆದರಿಸುವ, ವಿನಯಶಾಲಿಗಳಾದ ಕಿರಿಯರೂ ಹಿರಿಯರ ಗೌರವಕ್ಕೆ ಪಾತ್ರರಾಗಬಲ್ಲರು. ವಿನಯವುಳ್ಳವರು ದೀರ್ಘಾಯುಷಿಗಳೂ, ತೇಜೋವಂತರೂ, ಕೀರ್ತಿಶಾಲಿಗಳೂ ಆಗುತ್ತಾರೆ. **ನ ರತ್ನ ಮನ್ವಿಷ್ಯತಿ ಮೃಗ್ಯತೇ ಹಿ ತತ್** ॥

ಎಂಬ ಕಾಳಿದಾಸನ ಉಕ್ತಿಯಂತೆ ಯಾರೂ ಗೌರವವನ್ನು ಹುಡುಕಿಕೊಂಡು ಹೋಗುವುದಿಲ್ಲ. ತನ್ನ ವಿಶಿಷ್ಟ ಗುಣಗಳಿಂದಲೇ ಗೌರವಕ್ಕೆ ಪಾತ್ರನಾಗಬೇಕು.

ಹೀಗೆ ವಸ್ತ್ರ, ವಪು, ವಾಕ್, ವಿದ್ಯೆ ಮತ್ತು ವಿನಯ ವೆಂಬ ಪಂಚ ವಕಾರಗಳಿಲ್ಲದ ಮನುಷ್ಯ ಗೌರವಕ್ಕೆ ಪಾತ್ರನಾಗಲಾರ.

ಪಾಪ–ಪುಣ್ಯ–ಮೋಕ್ಷ

ಪಾಪ, ಪುಣ್ಯ, ಸದಾಚಾರಗಳ ಶುಭಾಶುಭ ಫಲಗಳನ್ನು ಇಹಲೋಕದಲ್ಲಾಗಲೀ ಪರಲೋಕದಲ್ಲಾಗಲೀ ಅನುಭವಿಸಿಯೇ ತೀರಬೇಕಾಗುತ್ತದೆಂಬುದು ಹಿರಿಯರ ಅನುಭವದ ಮಾತು. ಈಗ **"ಪರಲೋಕ"** ಎಂಬುದೊಂದಿದೆಯೆ? ಎಂಬುದು ಸಂದೇಹ. ಚಂದ್ರಾದಿಗ್ರಹಗಳೊಂದಿಗೆ ಸಂಪರ್ಕ ಸ್ಥಾಪಿಸುವಲ್ಲಿ ಸಫಲರಾದ ವಿಜ್ಞಾನಿಗಳು ಈ ಸಂದೇಹಕ್ಕೆ ಇನ್ನೂ ಉತ್ತರ ಹುಡುಕಿಲ್ಲ. ಆದ್ದರಿಂದ ನಮಗೆ ಉಳಿದಿರುವುದು ಶಬ್ದ ಪ್ರಮಾಣ ಮಾತ್ರ. **ಸಂದಿಗ್ಧೇ ಪರಲೋಕೇಪಿ ತ್ಯಾಜ್ಯಮೇವಾಶುಭಂ ಜನೈಃ। ನಾಸ್ತಿ ಚೇನ್ನಾಸ್ತಿನೋ ಹಾನಿಃ ಅಸ್ತಿ ಚೇನ್ನಾ ಸ್ತಿಕೋಹತಃ ॥**

ಪರಲೋಕ ಇರಲಿ, ಇಲ್ಲದಿರಲಿ, ಪಾಪಕೃತ್ಯಗಳಿಗೆ ಹೆದರುವುದರಿಂದ ಹಾನಿಯಿಲ್ಲವಲ್ಲ. ಅಂತಹ ಪರಲೋಕವೊಂದಿರುವುದಾದರೆ ದುಷ್ಫಲಗಳನ್ನು ಅನುಭವಿಸುವುದು ಅನಿವಾರ್ಯ ಎಂಬುದು ಶಾಸ್ತ್ರಕಾರರ ಮತ.

ಸುಕೃತಿ ಮತ್ತು ದುಷ್ಕರ್ಮಿಗಳ ಲಕ್ಷಣಗಳನ್ನರಿತು ನಾವು ಶಾಸ್ತ್ರಗಳೆಂಬ ಕನ್ನಡಿಯಲ್ಲಿ ಆತ್ಮಾವಲೋಕನ ಮಾಡಿಕೊಳ್ಳುವುದೇ ಜಾಣತನ. ದಾನಾದಿಗಳಲ್ಲಿ ಪ್ರವೃತ್ತಿ, ಮಧುರ ಭಾಷಿತ್ವ, ಭಗವದುಪಾಸನೆ ಮತ್ತು ಅನ್ನಸಂತರ್ಪಣಾದಿಗಳಿಂದ ಭೂತತೃಪ್ತಿ ಇವು ಪುಣ್ಯ ಜೀವಿಗಳ ಲಕ್ಷಣ. ಜಿಪುಣತನ, ಸ್ವಜನ ನಿಂದೆ, ದುರ್ನಡತೆ, ದುರ್ಜನರ ಸಹವಾಸ, ಅತಿಕೋಪ, ಕಟುವಚನ ಇವು ದುಸ್ಕೃತ್ಯಗಳ ಫಲ. ಇಂತಹ ದುಷ್ಕೃತ್ಯಗಳಿಂದ ಪಾಪ ಸಂಚಯವಾಗಿ ತನ್ಮೂಲಕ ಮತ್ತಷ್ಟು ದುಷ್ಕಾರ್ಯಗಳಿಗೆ ಪ್ರೇರಣೆಯುಂಟಾಗುತ್ತದೆ. ಒಮ್ಮೆ ಈ ಚಕ್ರಗತಿಯಲ್ಲಿ ಸಿಲುಕಿದ ಮೇಲೆ ಬಿಡುಗಡೆ ಅಸಂಭವ.

ಕೆಲವೊಮ್ಮೆ, ದುಷ್ಟರು ಸತ್ಫಲಗಳನ್ನೂ ಸಜ್ಜನರು ಕಷ್ಟಕೋಟಲೆಗಳನ್ನೂ ಅನುಭವಿಸಿದುದನ್ನೂ/ಅನುಭವಿಸುತ್ತಿರುವುದನ್ನೂ ಕಂಡಾಗ ಬೇರೆಯೇ ಅನ್ನಿಸಬಹುದು. ಆದರೆ ಇಂತಹ ಬದುಕಿನ ಅಂತ್ಯದಲ್ಲೇ ಸ್ವಾರಸ್ಯದ ಅರಿವಾಗುವುದು. ಜನ್ಮಾಂತರದ ಕರ್ಮಫಲವೆಂದರೂ, ಪ್ರಾರಬ್ಧವೆಂದರೂ ಇದೇ. ಅತ್ಯುತ್ಕಟವಾದ ಪುಣ್ಯ ಅಥವಾ ಪಾಪದ ಫಲಗಳ ಅನುಭವ. ಒಮ್ಮೆ ಪ್ರಾರಂಭವಾದ ಮೇಲೆ ಅದು ಮುಗಿಯುವ ತನಕ ಇನ್ನೊಂದು ಫಲವನ್ನು ಏಕ ಕಾಲದಲ್ಲಿ ಅನುಭವಿಸುವಂತಿಲ್ಲ.

ಪುನರಾವರ್ತನೆಯುಳ್ಳ 'ದೇವಾದಿ ಪುಣ್ಯಯೋನಿ' ಘೋರಪತನದ ದ್ಯೋತಕವಾದ 'ಸ್ಥಾವರಾದ ಅಧಮಯೋನಿ' ಗಳಿಗಿಂತ ಭಗವದುಪಾಸನೆ ಮತ್ತು ತತ್ವಜ್ಞಾನದ ಮೂಲಕ ಮೋಕ್ಷವನ್ನು ಪಡೆಯಲು ಸಾಧಕವಾದ ಮಾನವ ಜನ್ಮ ಅತ್ಯಂತ ದುರ್ಲಭ. ಇಂತಹ ಶ್ರೇಷ್ಠವಾದ ನರಜನ್ಮವನ್ನು ಪಡೆದು **"ನ ಹಿ ಕಲ್ಯಾಣ ಕೃತ್ ಕಶ್ಚಿತ್ ದುರ್ಗತಿಲತಾತ ಗಚ್ಛತಿ"** ಎಂಬ ಗೀತಾವಾಕ್ಯದಂತೆ ಸಮಸ್ತ ಜೀವಿಗಳಿಗೂ ಒಳಿತನ್ನೇ ಚಿಂತಿಸುವವನಿಗೆ ಎಂದೆಂದಿಗೂ ಕೆಡುಕಿನ ಭಯವಿಲ್ಲ.

ಸಾವಿರಾರು ಹಸುಗಳ ನಡುವೆಯೂ, ಕರುವು ತನ್ನ ತಾಯನ್ನು ಗುರುತಿಸುವಂತೆ, ಪ್ರತಿಯೊಬ್ಬನ ಪಾಪ–ಪುಣ್ಯಗಳು ತನ್ನ ಯಜಮಾನನನ್ನು ಯಥಾ ಸಮಯದಲ್ಲಿ ಹುಡುಕಿ ತಕ್ಕ ಫಲವನ್ನು ನೀಡಿಯೇ ನೀಡುತ್ತವೆ. ಆದುದರಿಂದ ಮನುಷ್ಯ ಅಧರ್ಮ ಮತ್ತು ಪಾಪಗಳ ಆಚರಣೆಯ ಭಾವಿ ದುಷ್ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು ಶಾಸ್ತ್ರ, ವಿಹಿತವಾದ ಧರ್ಮಾಚರಣೆಗಳಿಂದ ತನ್ನನ್ನು ತಾನು ಉದ್ಧರಿಸಿಕೊಳ್ಳಬೇಕು. ಆದರೆ ಆತ್ಮೋದ್ಧಾರದ ಈ ಮಾರ್ಗ ಅತ್ಯಂತ ವಕ್ರವೂ ತೊಡಕಿನದೂ ಆಗಿದೆ. ನದಿ ತನ್ನ ಎಲ್ಲ ಅಡೆತಡೆಗಳನ್ನೂ ಅಂಕುಡೊಂಕಿನ ಮಾರ್ಗಗಳನ್ನೂ ನಿವಾರಿಸಿಕೊಂಡು ವಿಕಾಸ ಗೊಳ್ಳುತ್ತಾ ಮುಂದೊಂದು ದಿನ ಸಮುದ್ರವನ್ನು ಸೇರಿ ಲೀನವಾಗುವಂತೆ, ಮನುಷ್ಯನು ನಿರಂತರ ಚಿಂತನೆಯಿಂದ, ಸತತ ಸಾಧನೆಯಿಂದ, ಬದುಕಿನ ಎಲ್ಲ ಜಂಜಾಟಗಳನ್ನೂ ದಾಟಿ, ವಿಕಾಸ ಪಥದಲ್ಲಿ ಮುನ್ನಡೆದು ಮೋಕ್ಷವನ್ನು ಸಾಧಿಸುವುದೇ ಜೀವನದಿಯ ಅಂತಿಮ ಗುರಿ.

ಸಾವು–ಸುಖ

ಮಾಟೀ ಕಹೈ ಕುಮ್ಹಾರ್ ಕೋ ತೂಕ್ಯೂಂ ರೌಂದೇ ಮೋಹಿ । ಇಕ್‌ದಿನ್ ಐಸಾ ಆಇಗಾ ಮೈಂ ರೌಂದೂಂಗೀ ತೋಹಿ॥

ತನ್ನನ್ನು ತುಳಿಯುತ್ತಿರುವ ಕುಂಬಾರನನ್ನು ಕುರಿತು ಮಣ್ಣು ಹೇಳುತ್ತದೆ– "ಅಯ್ಯಾ, ಇಂದು ನೀನು ನನ್ನನ್ನು ತುಳಿಯುತ್ತಿದ್ದಿ. ನಾನೇ ನಿನ್ನನ್ನು ತುಳಿಯುವ ಕಾಲವೊಂದು ಮುಂದೆ ಬರುತ್ತದೆ." ಕಬೀರದಾಸರ ಈ ದ್ವಿಪದಿಯಲ್ಲಿ ದರ್ಶನ ಶಾಸ್ತ್ರದ ಸಾರವೇ ಅಡಗಿದೆ. ಪೃಥಿವ್ಯಪ್ತೇಜೋ ವಾಯ್ವಾಕಾಶಗಳೆಂಬ ಪಂಚ ಭೂತಗಳಿಂದುಂಟಾದ ಈ ಗೂಡಿನಲ್ಲಿಡಗಿರುವ ಆತ್ಮನ ಪ್ರೇರಣೆಯಿಂದ ಮನುಷ್ಯ ತನ್ನನ್ನೇ ತಾನು ತುಳಿಯುತ್ತಾನೆ. ಅಂದರೆ ಈ ಪಾಂಚಭೌತಿಕ ಶರೀರ ಪುನಃ ಪಂಚಭೂತಗಳಲ್ಲೇ ಲೀನವಾಗಬೇಕೆಂಬ ತತ್ವ ಇಲ್ಲಿ ಅಡಕವಾಗಿದೆ. ನೀರ ಮೇಲಿನ ಗುಳ್ಳೆಯಂತೆ ಕ್ಷಣ ಭಂಗುರವಾದ ಈ ಬದುಕಿಗೆ ಯಾವುದೇ ಕ್ಷಣದಲ್ಲೂ ಸಾವು ಸಂಭವಿಸಬಹುದೆಂಬುದೇ ದಾರ್ಶನಿಕರ ನಿರಂತರ ಚಿಂತನೆ. ಆದರೂ ಪ್ರತಿಯೊಬ್ಬನೂ ಇಚ್ಛಾಮರಣಿಯಂತೆ ವರ್ತಿಸುವುದು ಸೃಷ್ಟಿಯ ವಿಡಂಬನೆಗಳಲ್ಲೊಂದು.

ಈ ಸಾವಿನ ಸ್ವರೂಪ ಅತ್ಯಂತ ರಹಸ್ಯಮಯ ಮತ್ತು ಅಷ್ಟೇ ಭೀಕರ. ಅನ್ನ ಗಂಟಲಲ್ಲಿ ಸಿಕ್ಕಿ ಸತ್ತವರುಂಟು, ಹಲವಾರು ರೋಗಗಳಿಂದಲೋ, ನಡೆಯುವಾಗ ಜಾರಿಬಿದ್ದೋ, ನೀರಿನಲ್ಲಿ ಮುಳುಗಿಯೋ, ಬಸ್ಸು–ರೈಲು–ವಿಮಾನ ಪ್ರಯಾಣದಲ್ಲೋ, ನೈಸರ್ಗಿಕ ವಿಪತ್ತುಗಳಿಂದಲೋ ಅಥವಾ ಮಲಗಿ ನಿದ್ರಿಸುವಾಗಲೋ ಮರಣ ಸಂಭವಿಸುವುದುಂಟು. ಕೇವಲ ಸಾವಿನ ಭಯದಿಂದಲೇ ಹೃದಯ ಕ್ರಿಯೆ ನಿಂತು ಸತ್ತ ಉದಾಹರಣೆಗಳೂ ಇವೆ. 'ಓ ಓ ಕಾಲಪುರುಷಂಗೆ ಗುಣಮಣಂ ಇಲ್ಲಂಗಡ" ಎಂಬ ಮುದ್ದಣನ ಉದ್ಗಾರದಂತೆ ಕಾಲಪುರುಷ ಯಾವಾಗ, ಯಾರನ್ನು, ಹೇಗೆ ಕಬಳಿಸುತ್ತಾನೆಂದು ಯಾರೂ ಅರಿತವರಿಲ್ಲ. ಆದರೂ ಜಗತ್ತಿನಲ್ಲಿ ಬದುಕಿಗಾಗಿ ಹೋರಾಟ ನಿಂತಿಲ್ಲ, ನಿಲ್ಲುವುದೂ ಇಲ್ಲ, ನಿಲ್ಲಲೂಬಾರದು. ಸೃಷ್ಟಿಯೊಂದಿಗೆ ಲಯವೂ, ಲಯದೊಂದಿಗೆ ಸೃಷ್ಟಿಯೂ ನಿರಂತರ ಎಂಬುದು ನಿಸರ್ಗ ನಿಯಮ.

'ಸರ್ಪವದನ ಗ್ರಾಸವಾಗಿಹ ಕಪ್ಪೆ ಮಕ್ಷಿಕ ಭಕ್ಷಣವ ಬಯಸಿರ್ಪತೆರದಲಿ ಕಾಲವಶವಾಗಿರ್ಪ ಮಾನವ' ವನ್ನು ಕಂಡು ಹೆಡತಲೆಯ ಮೃತ್ಯು ನಗುವಳಂತೆ. ತನ್ನ ಹೊಟ್ಟೆಪಾಡಿಗಾಗಿ ಹಾರಾಡುತ್ತಿರುವ ನೊಣವನ್ನು ತಿನ್ನಲು ಕಪ್ಪೆಯೂ, ಆ ಕಪ್ಪೆಯನ್ನು ತಿನ್ನಲು ಸರ್ಪವೂ, ಸರ್ಪವನ್ನು ತಿನ್ನಲು ಮುಂಗುಸಿಯೂ, ಹೊಂಚು ಹಾಕುವುದನ್ನು ಕಂಡು ಮೃತ್ಯುದೇವತೆ ಅಣಕದ ನಗೆ ನಗದಿರಲು ಸಾಧ್ಯವೆ? **ಜೀವೋ ಜಿವಸ್ಯ ಜೀವನಂ** ॥ ಮರಿ ಮೀನನ್ನು ಸಣ್ಣ ಮೀನು, ಸಣ್ಣ ಮೀನನ್ನು ದೊಡ್ಡ ಮೀನು ನುಂಗುವಂತೆ, ಅತ್ಯಂತ ದುರ್ಬಲರನ್ನು ದುರ್ಬಲರೂ, ದುರ್ಬಲರನ್ನು ಸಶಕ್ತರೂ, ಸಶಕ್ತರನ್ನು ಮಹಾಸತ್ವರೂ ತುಳಿದು ಬದುಕುತ್ತಿರುವುದು ಕಣ್ಣಿಗೆ ಕಾಣುವ ಸತ್ಯ. ಹಾಗೆಂದು ಈ ಸತ್ಯವನ್ನು ನಂಬಿ

ಸುಮ್ಮನಿರಲು ಸಾಧ್ಯವೆ? ಇಲ್ಲ. ಅನ್ನ ಗಂಟಲಿಗೆ ಸಿಕ್ಕಿ ಸಾಯುವ ಭಯದಿಂದ ಊಟ ಬಿಟ್ಟವರಿಲ್ಲ. ದುರ್ಘಟನೆಯ ಭಯದಿಂದ ಪ್ರಯಾಣ ನಿಲ್ಲಿಸಿದವರಿಲ್ಲ, ಜಾರುವ ಭಯದಿಂದ ನಡೆಯದಿರಲೂ ಸಾಧ್ಯವಿಲ್ಲ. ಹಾಗಾದರೆ ನಾವು ಮಾಡಬೇಕಾದುದೇನು?

ಶಂಕರಾಚಾರ್ಯರು ಹೇಳುತ್ತಾರೆ **ಕಸ್ತ್ವಂ ಕೋಹಂ ಕುತ ಆಯಾತಃ ಕಾಮೇ ಜನನೀ ಕೋ ಮೇ ತಾತಃ॥** "ನಾನು','ನೀನು' ಎಂದು ವ್ಯವಹರಿಸಲ್ಪಡುವವರು ಯಾರು? ಆತ್ಮವೆ? ಶರೀರವೆ? ನಿತ್ಯವೆ? ಅನಿತ್ಯವೆ? ಈ 'ನಾನು' 'ನೀನು'ಗಳ ಪಯಣ ಎಲ್ಲಿಂದ? ಎಲ್ಲಿಗೆ? ಉತ್ತರಗಳನ್ನು ಚಿಂತಿಸಬೇಕು.

ಪ್ರತಿಯೊಂದು ಚಲನೆಯ ಹಿಂದೆ ಒಂದು ಶಕ್ತಿಯಿರಲೇಬೇಕು. ಹಾಗೆಯೇ ಈ ಹುಟ್ಟು ಸಾವುಗಳ ನಿರಂತರ ಕ್ರಿಯೆಯ ಹಿಂದೆಯೂ ಇದ್ದು ಒಂದು ಅಗೋಚರ ಶಕ್ತಿ ಜಗತ್ತನ್ನು ನಿಯಂತ್ರಿಸುತ್ತದೆ. ಇದನ್ನೇ ನಂಬಿ ಸಾವಿಗೆ ಅಂಜದೆಯೂ, ನಿಷ್ಕ್ರಿಯನಾಗದೆಯೂ, ಬುದ್ಧಿಜೀವಿಯಾದ ಮಾನವ ತನ್ನ ಚಿಂತನಶೀಲತೆಯನ್ನು ಬೆಳೆಸಿಕೊಂಡು, ಬದುಕಿನ ಮಹತ್ವವನ್ನರಿತು, ಸಮಸ್ತ ಜೀವಿಗಳಿಗೂ ಬದುಕಲು ಇರುವ ಹಕ್ಕನ್ನು ಗೌರವಿಸಿ, ಸರ್ವ ಸಮಭಾವನೆಯಿಂದ, ಫಲಾಫಲಗಳಗೊಡವೆಯಿಲ್ಲದೇ, ಕರ್ತವ್ಯ ದೃಷ್ಟಿಯಿಂದ ಮಾತ್ರವೇ ವ್ಯವಹರಿಸುವುದರಿಂದ ಸುಖ–ಸಂತೋಷ ಸಿಕ್ಕಿತು.

ಗೀತಾ ಸಂದೇಶ

ಜಾಗತಿಕ ಸಾಹಿತ್ಯದಲ್ಲಿ ಭಗವದ್ಗೀತೆಗೆ ಅತಿಮಹತ್ವದ ಸ್ಥಾನವಿದೆ. ಮತ–ತತ್ವ, ದೇಶ–ಕಾಲಗಳ ಭೇದವಿಲ್ಲದೆ ಸಾರ್ವತ್ರಿಕವಾಗಿ, ಸಾರ್ವಕಾಲಿಕವಾಗಿ ಅನ್ವಯಿಸಲಾಗುವ ಅರ್ಥವಿಶೇಷ ಹೊಂದಿರುವುದೇ ಇದರ ವೈಶಿಷ್ಟ್ಯ. **ಯೋ ಯಥಾ ಮಾಂ ಪ್ರಪದ್ಯಂತೇ ತಾಂಸ್ತ ಥೈವ ಭಜಾಮ್ಯಹಮ್॥** ಎಂಬ ಗೀತೆಯ ಉಕ್ತಿಯಂತೆ ಯಾರ್‍ಯಾರು ಯಾವ್ಯಾವ ದೃಷ್ಟಿಯಲ್ಲಿ ಈ ಭಗವದ್ಗೀತೆಯನ್ನು ಕಾಣುತ್ತಾರೋ, ಅರ್ಥೈಸುತ್ತಾರೋ ಹಾಗೆಯೇ ಅದು ಕಾಣಿಸುತ್ತದೆ. ರಬ್ಬರಿನಂತೆ ಯಾರು ಯಾವ ಕಡೆಗೂ ಎಳೆದಾಡಬಹುದು. ಸಂನ್ಯಾಸಿಗಳಿಗೆ, ಯೋಧರಿಗೆ, ವಿವಿಧ ವೃತ್ತಿಯವರಿಗೆ, ಆಬಾಲವೃದ್ಧರಿಗೆ, ಸ್ತ್ರೀಪುರುಷರಿಗೆ, ಜಗತ್ತಿನ ಎಲ್ಲ ವರ್ಗದ ಜನರಿಗೆ ಗೀತಾಮೃತರಸ ರುಚಿಸುತ್ತದೆ.

ಗಾಂಧೀಜಿ, ತಿಲಕ್ ಮೊದಲಾದ ಸಮಾಜ ಸುಧಾರಕರಿಗೆ ಗೀತೆಯನ್ನು ಬಿಟ್ಟಿರಲು ಸಾಧ್ಯವಾಗುತ್ತಿರಲಿಲ್ಲ. ಸಾಂಖ್ಯ, ಯೋಗ, ವೇದಾಂತ ಎಲ್ಲವೂ ಇದರಲ್ಲಿ ಅಡಕವಾಗಿವೆ. ಜ್ಞಾನ–ಕರ್ಮ–ಉಪಾಸನೆ–ಕರ್ಮ–ಸಂನ್ಯಾಸ ಮೊದಲಾದ ಯೋಗಗಳಿಗೆ, ಇದು ಮೂಲವಾಗಿದೆ. ದ್ವೈತ–ಅದ್ವೈತ–ಶುದ್ಧಾದ್ವೈತ. ವಿಶಿಷ್ಟಾದ್ವೈತ ಮೊದಲಾದ ಮತಾನುಯಾಯಿಗಳು ಇದಕ್ಕೆ ಭಾಷ್ಯ ಬರೆದು ತಮ್ಮ ತಮ್ಮ ಮತೀಯ ಸಿದ್ಧಾಂತಗಳನ್ನು

ಪ್ರತಿಪಾದಿಸಿದ್ದಾರೆ. ಆದುದರಿಂದ ಜಗತ್ತಿಗೆ ಮಾನವ ಸಂದೇಶವನ್ನು ಬೀರುವಲ್ಲಿ ಭಗವದ್ಗೀತೆಯ ಮಹತ್ವದ ಅರಿವಾಗುತ್ತದೆ. **ಮದ್ಯಾಜೀ ಮಾಂ ನಮಸ್ಕುರು ಯಾಂತಿ ಮದ್ಯಾಜಿನೋಪಿ ಮಾಂ।**

...ಎಂಬ ವಾಕ್ಯಗಳಲ್ಲಿ ಮದ್ಯ ಮತ್ತು ಅಜ ಶಬ್ದಗಳ ಸಮಸ್ತ ಪದದ ಮುಂದೆ ವತ್ವರ್ಥೀಯ 'ಇನಿ' ಪ್ರತ್ಯಯ ಸೇರಿಸಿ **"ಮದ್ಯಮಾಂಸ ಸೇವಿಸಿ ನಮಸ್ಕರಿಸು"** ಎಂಬಂತೆ ಅರ್ಥೈಸಿ ಗೀತೆಗೆ ಅಪಚಾರವೆಸಗುವವರೂ ಇದ್ದಾರೆ. ತಾತ್ಪರ್ಯವೆಂದರೆ ಭಗವದ್ಗೀತೆ ಎಲ್ಲರನ್ನೂ ತನ್ನೆಡೆಗೆ ಆಕರ್ಷಿಸುತ್ತದೆ.

"**ಕರ್ಮಣ್ಯೇ ವಾಧಿಕಾರಸ್ತೇ**" ಫಲಾಫಲಗಳ ನಿರಿಕ್ಷೆಯಿಲ್ಲದೆ ಪ್ರಾಮಾಣಿಕ ಕರ್ತವ್ಯ ನಿರ್ವಹಣೆ, "ಕ್ಷುದ್ರಂ ಹೃದಯ ದೌಬಲ್ಯಂ" ಆತ್ಮವಿಶ್ವಾಸ, "ಜಾತಸ್ಯ ಹಿಧ್ರುವೋ ಮೃತ್ಯುಃ ಧ್ರುವಂ ಜನ್ಮ ಮೃತಸ್ಯ ಚ" ಹುಟ್ಟುಸಾವುಗಳ ಅನಿವಾರ್ಯತೆ, ವಾಸಾಂಸಿ ಜೀರ್ಣಾಸಿ ಯಥಾ ವಿಹಾಯ ನವಾನಿಗೃಹ್ಣಾತಿ ನರೋಪರಾಣಿ" ಸಾವಿನ ರಹಸ್ಯ ಮೊದಲಾದ ಸನಾತನ ಸತ್ಯವನ್ನು, ವಿಶ್ವಮಾನವ ಸಂದೇಶವನ್ನು ಜಗತ್ತಿಗೆ ಸಾರುವುದರಿಂದಲೇ ಗೀತೆಗೆ ವಿಶ್ವಸಾಹಿತ್ಯದಲ್ಲಿ ಶ್ರೇಷ್ಠ ಸ್ಥಾನ.

I live, yet not I, but god in me. ನಾನು ಬದುಕಿದ್ದೇನೆ, ಆದರೆ ನನ್ನಲ್ಲಿ ಅಹಂಕಾರವಿಲ್ಲ, ನನ್ನ ಅಂತರಂಗದಲ್ಲಿ ಭಗವಂತ ನೆಲೆಸಿದ್ದಾನೆ– ಯುರೋಪಿನ ವಿಜ್ಞಾನಿ ರಿಕೇಜಕ್ Recejacನ ಈ ಉದ್ಗಾರಗಳು ನಮ್ಮ ಭಗವದ್ಗೀತೆಯಿಂದ ಪ್ರಭಾವಿತವಾದುವುದುಗಳು.

ವಿಶ್ವಕ್ಕೆ ತತ್ವ ಜ್ಞಾನದ ಬೆಳಕನ್ನು ತೋರುವ ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವ, ಭಗವದ್ಗೀತೆ ಮತ್ತು ವೇದೋಪನಿಷತ್ತುಗಳಿಂದ ಅತ್ಯಂತ ಪ್ರಭಾವಿತರಾದ ಪ್ರೊಫೆಸರ್ ಮ್ಯೆಕ್ಸ್ ಮುಲರ್‌ರವರು ಭಾರತೀಯ ಸಂಸ್ಕೃತಿಯನ್ನು ಎಲ್ಲಾ ರಾಷ್ಟ್ರಗಳ ಸಂಸ್ಕೃತಿಗಳ ಜನನಿಯೆಂದು ಮುಕ್ತಕಂಠದಿಂದ ಪ್ರಶಂಸಿಸಿರುವುದು ಅತಿಶಯೋಕ್ತಿಯಲ್ಲ.

ಶ್ರೀಯುತರು 1858ರಲ್ಲಿ ವಿಕ್ಟೋರಿಯಾ ಮಹಾರಾಣಿಯವರಿಗೆ ಬರೆದ ಒಂದು ಪತ್ರದಲ್ಲಿ ಹೀಗೆ ಉಲ್ಲೇಖಿಸುತ್ತಾರೆ.

"ಸೆಮೆಟಿಕ್, ಗ್ರೀಕ್ ಮತ್ತು ರೋಮನ್ನರ ವಿಚಾರಧಾರೆಗಳಲ್ಲಿ ವಿಹರಿಸುವ ಯುರೋಪಿಯನ್ನರು ಆಧ್ಯಾತ್ಮಿಕ ಬದುಕಿನ ಮತ್ತು ಮಾನವೀಯ ಮೌಲ್ಯಗಳ ವಿಕಾಸಕ್ಕೆ ಯಾವ ಸಾಹಿತ್ಯವನ್ನು ಆಶ್ರಯಿಸಬೇಕೆಂಬ ನನ್ನ ಪ್ರಶ್ನೆಗೆ ನನಗೆ ಸಿಗುವ ಉತ್ತರವೆಂದರೆ ಭಾರತೀಯ ಸಾಹಿತ್ಯ.

"If I were asked under what sky the human mind has most fully developed some of its choicest gifts, has most deeply, pondernd on the greatest problems of life and has found solutions of some of them which well deserve the attention even of those who have studied Pla to and Kant, I should point to India."

"ಪ್ಲೇಟೋ ಮತ್ತು ಕಾಂಟ್ ರಂತಹ ದಾರ್ಶನಿಕರ ತತ್ವಗಳ ಅಧ್ಯಯನ ಮಾಡುವವರನ್ನೂ ತನ್ನೆಡೆಗೆ ಆಕರ್ಷಿಸುವಂತಹ, ತಾತ್ವಿಕ ಪ್ರಶ್ನೆಗಳಿಗೆ ಪರಿಹಾರ ನೀಡುವ ಬೌದ್ಧಿಕ ವಿಕಾಸ ಹೊಂದಿದ ರಾಷ್ಟ್ರದ ಬಗ್ಗೆ ನನ್ನನ್ನು ಕೇಳಿದರೆ, ನಾನು ಭಾರತದ ಕಡೆಗೆ ಬೊಟ್ಟು ಮಾಡುತ್ತೇನೆ**"**. ಮ್ಯಾಕ್ಸ್ ಮುಲ್ಲರ್‌ರವರ ಈ ಉದ್ಗಾರದಲ್ಲೂ ಅತಿಶಯೋಕ್ತಿಯಿಲ್ಲ.

ಜಗತ್ತಿಗೇ ಆದರ್ಶದ ಕಂಪನ್ನು ಬೀರಿದ ಈ ಭವ್ಯ ಸಂಸ್ಕೃತಿ ನಮ್ಮದೆಂಬುದೇ ನಮಗೆ ಹೆಮ್ಮೆ.

ಶಾಂತಿ ಮಂತ್ರ

ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ।

ಅಭ್ಯುತ್ಥಾನ ಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥ ಎಂಬ ಗೀತಾಚಾರ್ಯನ ಉಪದೇಶದಂತೆ ಭಾರತ ಭೂಮಿಯಲ್ಲಿ ಧರ್ಮ–ನ್ಯಾಯ ನೀತಿಯನ್ನುದ್ಧರಿಸಲು ಆಗಾಗ ಭಗವಂತನು ಅವತರಿಸುತ್ತಾನೆ. ಅಂತೆಯೇ 02.10.1869ರಲ್ಲಿ ಗುಜರಾತಿನಲ್ಲಿ ಒಂದು ಮಹಾಚೈತನ್ಯದ ಆವಿರ್ಭಾವವಾಯಿತು. **ಯದ್ಯದ್ವಿಭೂತಿಮತ್ಸತ್ವಂ ಶ್ರೀ ಮದೂರ್ಜಿತ ಮೇವ ವಾ। ತತ್ತದೇವಾವಗಚ್ಛ ತ್ವಂ ಮಮತೇ ಜೋಂಶಸಂಭವಂ** ॥ ಎಂಬ ಗೀತಾ ವಾಕ್ಯದಂತೆ ಗಾಂಧೀಜಿಯವರಿಗೆ ಅವತಾರ ಪುರಷನೆಂಬ ಬಿರುದು ಅನ್ವರ್ಥ. ಸತ್ಯ–ಅಹಿಂಸೆ–ನ್ಯಾಯ–ನೀತಿಗಳೆಂಬ ಆಯುಧಗಳಿಂದ ಬ್ರಿಟಿಷರನ್ನು ಓಡಿಸಿದ ಇವರ ಸಾಧನೆ ಇವರನ್ನು ದೈವತ್ವಕ್ಕೇರಿಸಿದೆ. ಭಾರತದ ರಾಜನೈತಿಕ ಕ್ಷೇತ್ರದಲ್ಲಿ ಅದೆಷ್ಟೋ ಮಂದಿ ಮಹಾಪುರಷರು ಉದಯಿಸಿರಬಹುದು. ಮುಂದೆಯೂ ಉದಯಿಸಬಹುದು. ಆದರೆ ಜಾಗತಿಕ ಸಂಸ್ಕೃತಿಯ ಮೇಲೆ ಬೆಳಕನ್ನು ಬೀರುವ ಧ್ರುವನಕ್ಷತ್ರವೆಂದರೆ ಮಹಾತ್ಮಾಜೀಯೊಬ್ಬರೇ.

ಧರ್ಮೋ ರಕ್ಷತಿಃ ರಕ್ಷಿತಃ ॥ ಎಂಬುದು ಭಾರತೀಯ ಧರ್ಮದ ತಿರುಳು ಅಧರ್ಮದಿಂದ, ಅನೀತಿಯಿಂದ ಎಂದೂ ಉನ್ನತ ಆದರ್ಶಗಳನ್ನು ಸಾಧಿಸಲಾಗದು. ಮೋಹಗ್ರಸ್ತವಾದ ಅಪವಿತ್ರ ಸಾಧನಗಳನ್ನೇ ಆದರ್ಶವೆಂದು ಕುಣಿಯುತ್ತಿರುವ ಜಗತ್ತಿಗೆ ಶಾಂತಿ, ಶಿಸ್ತು, ಸಾತ್ವಿಕತೆಯ ಸಾಮರ್ಥ್ಯವನ್ನು ವಿಶದೀಕರಿಸಿದುದರಿಂದ ಇವರಿಗೆ ರಾಷ್ಟ್ರಪಿತನೆಂಬ ಬಿರುದು ಸಾರ್ಥಕ. ಬಿಳಿಯರು ಗಾಂಧೀಜಿಯವರನ್ನು ಅವಹೇಳನಗೈದು, ಬಡಿದು, ಹಲ್ಲುಮುರಿದು ಅರೆಜೀವಗೊಳಿಸಿದರು. ಆದರೂ ಗಾಂಧೀಜಿಯವರು 'ಶಾಂತಿಮಂತ್ರ' ವನ್ನು ಬಿಡಲಿಲ್ಲ. ಸತ್ಯಾಗ್ರಹ ದುರ್ಬಲ್ ಏವಂ ಕಾಯರತಾ ಕಾಶಸ್ತ್ರ ನಹೀಂ । ವಹ್ ಸಬಲ್ ಏವಂ ಮನಸ್ವೀಕಾ ವಜ್ರ ಕವಚ್ ಹೈ ॥ ಅಂದರೆ ಸತ್ಯಾಗ್ರಹವೆಂಬುದು ಅಶಕ್ತರ ಮತ್ತು ಹೇಡಿಗಳ ಆಯುಧವಲ್ಲ. ಅದು ಬಲಿಷ್ಠರ ಮತ್ತು ಅಚಲ ವಿಶ್ವಾಸದ ಅಭೇದ್ಯ ಕವಚವಾಗಿದೆ ಎಂಬುದೇ ಅವರ ತತ್ವಾಗಿತ್ತು.

ಅನ್ಯಾಯವನ್ನು ವಿರೋಧಿಸಿದರೂ ಅನ್ಯಾಯಿಗಳ ಬಗೆಗೆ ಸದ್ಭಾವನೆ ಮತ್ತು ಪ್ರೇಮವೇ ಅವರ ಪ್ರತೀಕಾರವಾಗಿತ್ತು. ದಂಡ ಪ್ರಯೋಗದಿಂದ ದ್ವೇಷದ ಬೀಜವನ್ನು ಕಿತ್ತೊಗೆಯಲು ಸಾಧ್ಯವಾಗುವುದಿಲ್ಲವೆಂದು ಅವರು ಹೇಳುತ್ತಿದ್ದರು. ಆದುದರಿಂದ ಅವರು ಬೋ ಅರ್ ಯುದ್ಧದಲ್ಲಿ ಬೇಷರತ್ತಾಗಿ ಸ್ವತಃ ಸ್ವಯಂ ಸೇವಕರಾಗಿ ದುಡಿದು ವರ್ಣದ್ವೇಷಿಗಳಾದ ಆಂಗ್ಲರನ್ನು ಅಚ್ಚರಿಗೊಳಿಸಿದರು.

ಯಾವುದೇ ಕಾರ್ಯದ ಬಾಹ್ಯ ಸ್ವರೂಪವನ್ನು ಅಳೆಯದೆ ಕೇವಲ ಆತ್ಮಸ್ಥೈರ್ಯ ದಿಂದ ಕರ್ಮಣ್ಯೇವಾಧಿಕಾರಸ್ತೇ ಎಂಬ ಧ್ಯೇಯವಾಕ್ಯದೊಂದಿಗೆ ಪ್ರಳಯ ಮಾರುತನಂತೆ ಮುನ್ನುಗ್ಗಿ ಪ್ರವಾಸೀ ಭಾರತೀಯ ಸಮಸ್ಯೆ, ಖಿಲಾಫತ್ ಚಳುವಳಿ, ಅಸಹಯೋಗ ಆಂದೋಳನ, ಗ್ರಾಮರಾಜ್ಯ ಹಾಗೂ ಇನ್ನಿತರ ಸಮಸ್ಯೆಗಳೊಂದಿಗೆ ಏಕಾಂಗಿ ವೀರನಾಗಿ ಹೋರಾಡಿದ ಯುಗಪುರುಷರೆಂದು ಇವರನ್ನು ಕರೆಯುವುದು ಅತ್ಯಂತ ಉಚಿತ. ಆದುದರಿಂದ ಇವರ ಆತ್ಮಕಥೆ ಭಾರತದ ಮಹಾಪುರಾಣಗಳ ಸಾಲಿಗೆ ಸೇರಿದೆ.

ಆದರೆ ಇಂದು ಅವರ ಆದರ್ಶಗಳು ಗಾಳಿಗೆ ತೂರಲ್ಪಟ್ಟಿರುವುದೊಂದು ವಿಡಂಬನೆ. ಅಂದು ಇವರು ಕಟ್ಟಿ ಬೆಳೆಸಿದ ಕಾಂಗ್ರೆಸ್ 'ಓ' ಆಗಿ 'ಆರ್' ಆಗಿ 'ಐ' ಆಗಿ 'ಕೆ' ಆಗಿ ಬಹುರೂಪಿಯಾಗಿದೆ. ಸ್ವದೇಶಿ ಆಂದೋಲನ ತನ್ನ ಮಹತ್ವ ಕಳೆದುಕೊಂಡಿದೆ. ಕವಿ ಗೋಪಾಲಕೃಷ್ಣ ಅಡಿಗರ ಮಾತಿನಲ್ಲಿ 'ಪಡುವಲದ ಗಾಳಿ ಆಡಿದರೆ ತೂಗುವುದಟ್ಟೆ' ಎಂಥ ಮಾರ್ದನಿ, ಎಂಥ ನಕಲು ಕುಣಿತ" ಎಂಬಂತೆ ಈಗ ನಾವು ಪಾಶ್ಚಾತ್ಯರ ಅನುಕರಣೆ ಯಲ್ಲೇ ಬದುಕಿನ ಸಾರ್ಥಕತೆಯನ್ನು ಕಂಡುಕೊಳ್ಳಲು ತೊಡಗಿದ್ದೇವೆ.

ಇಲ್ಲಿ ನೆರಳಿತ್ತು, ಹಸುರೆಲೆ ತಳಿರು ಹೂ ಹಣ್ಣು, ಕೋಗಿಲೆಯ ಸರವಿತ್ತು, ಗಿಳಿಯ ನಿಲಯ, ಇಲ್ಲಿ ಮಿಡಿದಿತ್ತು ಕೋದಂಡ, ಮೊಳಗಿತ್ತಿಲ್ಲಿ ಪಾಂಚಜನ್ಯವು, ಚಕ್ರ ತಿರುಗುತ್ತಿತ್ತು". 'ಇತ್ತು' ಗಳ ಧ್ವಜವ ಹಿಡಿದೆತ್ತಿನಿಲ್ಲೊ ಮಗೂ, "ಇದೆ" ಯ ಹೃದ್ರಾವ ಬೇಡ ನಿನಗೆ' ಅಡಿಗರ 'ಇಂದು ನಮ್ಮೀ ನಾಡು' ಕವನದ ಸಾಲುಗಳು.

ಪ್ರಾಚೀನ ವೈಭವದ ಬೆಳಕಿನಲ್ಲಿ, ಗಾಂಧೀಜಿಯವರಂತಹ ಮಹನೀಯರ ಆದರ್ಶಗಳ ನೆನಪಿನಲ್ಲಿ ನಾವು ಮೈಮರೆತಿದ್ದೇವೆ. ವರ್ತಮಾನದ ಕಲ್ಪನೆಯಿಲ್ಲದೆ 'ಇತ್ತು' ಗಳನ್ನೆ ಹಿಡಿದು ಜೋತಾಡುವುದನ್ನು ನೋಡಿ ಮರುಗಲು ಈಗ ಗಾಂಧೀಜಿಯವರು ಬದುಕಿಲ್ಲ ದಿರುವುದೇ ನಮ್ಮ ಸುದೈವ. ಇಂದಿನ ಕೆಲವು ರಾಜಕಾರಣಿಗಳ ಧಮನಿಗಳಲ್ಲಿ ನಿರಂತರ ಹರಿಯುವ ಸ್ವಾರ್ಥ, ವಂಚನೆ, ಭ್ರಷ್ಟಾಚಾರಗಳ ಪ್ರವಾಹವನ್ನು ಕಂಡು ವಿಷಾದಿಸುವ ಮೊದಲೇ ಗೋಡಸೆಯ ಗುಂಡಿಗೆ ಬಲಿಯಾದುದು ವಿಧಿಯ ಅಣಕ.

ಜಗತ್ತಿಗೆ ಸ್ವಾವಲಂಬನೆ, ಆಸ್ತಿಕತೆ, ಭಗವನ್ನಾಮದ ಮಹಿಮೆಯನ್ನು ಬೋಧಿಸಿದ, ಸತ್ಯ–ಅಹಿಂಸೆಯ ಮಾರ್ಗವನ್ನು ತೋರಿಸಿದ, ಸತ್ಯಾಗ್ರಹದ ದಿವ್ಯಾಸ್ತ್ರವನ್ನು ನೀಡಿ ದೀನದಲಿತರಲ್ಲಿ ಚೈತನ್ಯದ ಚಿಲುಮೆಯನ್ನುಕ್ಕಿಸಿದ, ವಿರೋಧಿಗಳ ಮನದಾಳದಲ್ಲಿ ಶಾಂತಿಯ ಮಂತ್ರವನ್ನೂ ದಿದ ಆ ದಿವ್ಯ ಚೇತನದ ಸಿದ್ಧಿ ಸಾಧನೆಗಳ ಮಧುರ ನೆನಪೊಂದೇ ಇಂದು ಕ್ಷೋಭೆಯ ಬೆಂಕಿಯಲ್ಲಿ ಬೇಯುತ್ತಿರುವ ಜಗತ್ತಿಗೆ ಶಾಂತಿಯ ತಂಪನ್ನೀಯಬಲ್ಲದು.

ಹಿಂದೂ ಸಂಸ್ಕೃತಿ

ಅನೇಕ ವಿದೇಶೀಯರ ಮತ್ತು ವಿವಿಧ ಮತಾನುಯಾಯಿಗಳ ಆಡಳಿತದಲ್ಲಿದ್ದರೂ ನಮ್ಮದೇ ದೇಶದ ಸಂಸ್ಕೃತಿ ತನ್ನತನವನ್ನು ಕಳೆದುಕೊಂಡಿಲ್ಲ ಎಂಬುದೇ ಇದರ ಹೆಗ್ಗಳಿಕೆ. ನಮ್ಮ ಸಂಸ್ಕೃತಿ ಅಂದರೆ ಭಾರತೀಯ ಸಂಸ್ಕೃತಿ. ಅದೇ ಹಿಂದೂ ಸಂಸ್ಕೃತಿ ಹಿಂದುಗಳೆಂದರೆ ಯಾರು? **ಗೋಷು ಭಕ್ತಿ ಭವೇದ್ಯಸ್ಯ ಪ್ರಣವೇ ಚ ದೃಢಾ ಮತಿಃ ಪುನರ್ಜನ್ಮನಿ ವಿಶ್ವಾಸಃ ಸವೈ ಹಿಂದು ರಿತಿ ಸ್ಮೃತಃ॥**

ಗೋವುಗಳಲ್ಲಿ ಭಕ್ತಿ, 'ಓಂ' ಕಾರದಲ್ಲಿ ಗೌರವ, ಪುನರ್ಜನ್ಮದಲ್ಲಿ ವಿಶ್ವಾಸ ಇರುವ ಸಿಖ್, ಜೈನ, ಬೌದ್ಧ ಮೊದಲಾದ ಎಲ್ಲರೂ ಹಿಂದುಗಳು. ಇವರೆಲ್ಲರ ಸಂಸ್ಕೃತಿಯೇ ಹಿಂದೂ ಸಂಸ್ಕೃತಿ, ಅದೇ ಭಾರತೀಯ ಸಂಸ್ಕೃತಿ.

ಮಾಧವ ದಿಗ್ವಿಜಯದಲ್ಲಿ ಹಿಂದೂ ಶಬ್ಧದ ವಿವರಣೆ ಹೀಗಿದೆ ಓಂಕಾರ ಮೂಲ ಮಂತ್ರಾಢ್ಯಃ ಪುನರ್ಜನ್ಮ ದೃಢಾ ಶಯಃ। ಗೋಭಕ್ತೋ ಭಾರತ ಗುರುಃ ಹಿಂದುಃ ಹಿಂಸನ ದೂಷಕಃ॥

ಸನಾತನಿಗಳೆಲ್ಲರೂ ಮಂತ್ರಗಳ ಮೊದಲು 'ಓಂ' ಕಾರವನ್ನು ಉಚ್ಚರಿಸುತ್ತಾರೆ. ಸ್ವಾಮಿ ದಯಾನಂದರು ಸತ್ಯಾರ್ಥ ಪ್ರಕಾಶದಲ್ಲಿ ಓಂ ಕಾರವನ್ನೇ ಪರಮಾತ್ಮನೆಂದು ಹೆಸರಿಸು ತ್ತಾರೆ. "**ಏಕ್ ಓಂಕಾರ್ ಸದ್ಗುರು ಪ್ರಸಾದ್**" ಎಂಬುದು ಸಿಖ್ಖರ ಧರ್ಮ ಗ್ರಂಥದ ಮೊದಲ ಮಂಗಲಾಚರಣೆ. ಓಂ ನಮೋ ಅರಿಹಂತಾಣಮ್, ಓಂ ಮಣಿ ಪದ್ಮೋ ಹುಂ ಎಂದು ಗುರುಮಂತ್ರ, ಪ್ರಧಾನ ಮಂತ್ರಗಳುಳ್ಳ ಜೈನರೂ ಬೌದ್ಧರೂ ಸೇರಿದಂತೆ 'ಹಿಂ' ಸೆಯನ್ನು 'ದೂ'ಷಿಸುವ ಎಲ್ಲರೂ ಹಿಂದುಗಳೇ. ಇವರು ವಾಸಿಸುವ ದೇಶದ ಸಂಸ್ಕೃತಿಯೇ ಹಿಂದೂ ಸಂಸ್ಕೃತಿ–ಭಾರತೀಯ ಸಂಸ್ಕೃತಿ.

ಗೋವನ್ನು ಕುರಿತಾದ ಹಿಂ ಕೃಣ್ವತೀವಸುಪತ್ನೀ...... "ದು" ಹಾಮಶ್ವಿಭ್ಯಾಂ.....

ಈ ಋಂಗ್ಮಂತ್ರದ ಮೊದಲ ಮತ್ತು ಮೂರನೆಯ ಪಾದದ ಆದ್ಯಕ್ಷರಗಳ ಸಂಯೋಗ ದಿಂದ "ಹಿಂದು" ಶಬ್ದದ ವ್ಯುತ್ಪತ್ತಿಯನ್ನು ಹೇಳುವ ಸನಾತನಿಗಳು "ವೇದಕಾಲೀನ ನಡೆ–ನುಡಿ ಆಚಾರ ವಿಚಾರಗಳಲ್ಲಿ ಶ್ರದ್ಧೆಯುಳ್ಳವರೆಲ್ಲರೂ ಹಿಂದುಗಳು. ಇವರ ಸಂಸ್ಕೃತಿಯೇ ಹಿಂದೂ ಸಂಸ್ಕೃತಿ, ಅದೇ ಭಾರತೀಯ ಸಂಸ್ಕೃತಿ" ಎಂದು ವ್ಯಾಖ್ಯಾನಿಸುತ್ತಾರೆ.

ಬೃಹಸ್ಪತ್ಯಾಗಮದಲ್ಲಿ ಹಿಂದುಸ್ಥಾನದ ವಿಸ್ತಾರ ಕುರಿತಾದ ಒಂದು ಶ್ಲೋಕ

ಹಿಮಾಲಯಂ ಸಮಾರಭ್ಯ ಯಾವದ್ಬಿನ್ದು   ಸರೋವರಮ್ ।
ತಂ ದೇವ ನಿರ್ಮಿತಂ ದೇಶಂ ಹಿಂದುಸ್ಥಾನಂ ಪ್ರಚಕ್ಷತೇ ॥

ಅರ್ಥಾತ್'ಹಿ'ಮಾಲಯ ಶಬ್ದದ ಆದ್ಯಕ್ಷರ ಬಿಂದು ಶಬ್ದದ ಅಂತ್ಯಾಕ್ಷರಗಳ ಸಮಾಹಾರ ರೂಪವೇ ಹಿಂದು, ಬಿಂದು ಸರೋವರವೆಂದರೆ ಕನ್ಯಾಕುಮಾರಿಯ

ಮಹಾಸಾಗರ. ಸನಾತನಿಗಳ ಶಬ್ದಗಳಲ್ಲಿ ಆಸೇತು ಹಿಮಾಚಲ ಅಂದರೆ ಹಿಮಾಲಯ ದಿಂದ ಕನ್ಯಾಕುಮಾರಿಯ ತನಕ ವಿಸ್ತೃತವಾದ ಪವಿತ್ರ ನೆಲವೇ ಹಿಂದುಸ್ಥಾನ. ಇಲ್ಲಿಯ ನಿವಾಸಿಗಳೆಲ್ಲರೂ ಹಿಂದುಗಳು. ಇವರ ಸಂಸ್ಕೃತಿಯೇ ಭಾರತೀಯ ಸಂಸ್ಕೃತಿ.

ಇಲ್ ಅಲ್ಲಾಹ್ ಎಂದು ಮಸೀದಿಯಲ್ಲಿ ಸರ್ವಜ್ಞನನ್ನು ಕುರಿತು ಪ್ರಾರ್ಥಿಸುವ ನಿರ್ಗುಣೋಪಾಸನೆ, ಮೋಹರಂ ಹಬ್ಬದಲ್ಲಿ ಮೂರ್ತಿ ಪೂಜೆಯನ್ನು ಸಂಕೇತಿಸುವ ಕೈಯ ಮೆರವಣಿಗೆ, ಅಗ್ನಿಹೋತ್ರದಂತೆ ಒಂಬತ್ತು ದಿನ ಕುಂಡದಲ್ಲಿ ಅಗ್ನಿರಕ್ಷಣೆ, ಆತ್ಮದ ಅಮರತ್ವವನ್ನು ಸಾರುವಂತಹ ಧೂಪ–ಶರ್ಕರ ನಿವೇದನೆ–ಪುಷ್ಪಾರ್ಪಣೆಯೊಂದಿಗೆ ಸಮಾಧಿ ಪೂಜೆ, ಭಗವನ್ನಾಮ ಸಂಕೀರ್ತನೆಯ ಖವ್ವಾಲಿ ಗಾಯನ–ಮೊದಲಾದ ಮುಸ್ಲಿಂ ಭಾಂಧವರ ಆಚರಣೆಗಳೆಲ್ಲವೂ ಹಿಂದೂ ಸನಾತನಿಗಳ ಆಚರಣೆಯನ್ನು ಹೋಲುತ್ತವೆ. ಆದುದರಿಂದ ಇವರ ಸಂಸ್ಕೃತಿ ಹಿಂದೂ ಸಂಸ್ಕೃತಿಗಿಂತ ಬೇರೆಯಲ್ಲ. ಸಿಂಧು ನದಿಯಿಂದ ಹಿಂದುಮಹಾಸಾಗರದವರೆಗೆ ವಿಸ್ತೃತವಾದ ಪುಣ್ಯ ಭೂಮಿಯೇ ಭಾರತ. ಇಲ್ಲಿನ ನಿವಾಸಿಗಳ ಸಂಸ್ಕೃತಿಯೇ ಭಾರತೀಯ ಸಂಸ್ಕೃತಿ.

ಸಮ್ ಉಪಸರ್ಗದೊಂದಿಗೆ ಕೃ ಧಾತುವಿಗೆ ಭೂಷಣಾರ್ಥದಲ್ಲಿ ಸುಟ್ ಆಗಮವಾಗಿ ಕ್ತಿನ್ ಪ್ರತ್ಯಯ ಸೇರಿ ಸಂಸ್ಕೃತಿ ಶಬ್ದದ ವ್ಯುತ್ಪತ್ತಿಯಾಗುತ್ತದೆ. ಭೂಷಣಪ್ರಾಯವಾದ, ಸಮೀಚೀನವಾದ ಕಾರ್ಯ ಅಥವಾ ನಡವಳಿಕೆಯೇ ಸಂಸ್ಕೃತಿ. ಪಶುಪಕ್ಷಿಗಳ ಚೇಷ್ಟೆಗಳು ಸ್ವಾಭಾವಿಕವಾದುದರಿಂದ ಅವುಗಳ ವರ್ತನೆಯನ್ನು ಸಂಸ್ಕೃತಿಯೆಂದು ಹೇಳುವಂತಿಲ್ಲ. ಆದರೆ ಮನುಷ್ಯ ಮಾತ್ರ ಸಮೀಚೀನ ಅಸಮೀಚೀನ–ಎರಡೂ ರೀತಿಯ ಚೇಷ್ಟೆಗಳನ್ನು ಮಾಡಬಲ್ಲ. ಆದುದರಿಂದ ಮಾನವನ–ಶೋಭಾಯಮಾನವಾದ, ಯೋಗ್ಯವಾದ ದೇಹ–ಇಂದ್ರಿಯಗಳ ಚೇಷ್ಟೆಗಳೇ ಆಚಾರ, ಮಾನಸಿಕ ಚೇಷ್ಟೆಗಳೇ ವಿಚಾರ. ಮಾನವ ಜಾತಿಯ ಸರ್ವತೋಮುಖವಾದ ಏಳಿಗೆಗೆ ಕಾರಣವಾದ ಆಚಾರ ವಿಚಾರಗಳೇ ಸಂಸ್ಕೃತಿ–ಮನುಷ್ಯನನ್ನು ಆತ್ಮವಿಕಾಸದ ತುತ್ತ ತುದಿಗೇರಿಸುವುದೇ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯ. ಈ ಸಂಸ್ಕೃತಿಯ ಮೂಲ–ವೇದಗಳು, ಉಪನಿಷತ್ತುಗಳು, ಮತ್ತು ಪುರಾಣವೇ ಮೊದಲಾದ ವಿಶ್ವ ಸಾಹಿತ್ಯ, ಜಗತ್ತಿನ ಎಲ್ಲ ದೇಶಗಳ ಸಂಸ್ಕೃತಿಗಿಂತ ಭಾರತೀಯ ಸಂಸ್ಕೃತಿ ಸರ್ವಶ್ರೇಷ್ಠವೆಂಬುದೇ ನಮಗೆ ಹೆಮ್ಮೆ.

ದಾನ–ಧರ್ಮ

ಪಾಪ ಪುಣ್ಯಗಳ ಕಲ್ಪನೆಯೊಂದಿಗೆ, ದಾರಿದ್ರ್ಯದ ಕಾರಣವನ್ನು ಹೇಳುವ ಒಂದು ಸೂಕ್ತಿ

ಅ ದಾನ ದೋಷೇಣ ಭವೇದ್ದರಿದ್ರಃ ದಾರಿದ್ರ್ಯದೋಷೇಣ ಕರೋತಿ ಪಾಪಂ ।
ಪಾಪಾತ್ಪ್ರಭೂತಂ ನರಕಂ ಪ್ರಯಾತಿ ಪುನರ್ದ್ರರಿದ್ರಃ ಪುನರೇವ ಪಾಪೀ ॥

ದಾನ ಮಾಡದವನು ದರಿದ್ರನಾಗುತ್ತಾನೆ. ಬಡತನವು ಪಾಪ ಕಾರ್ಯಗಳಿಗೆ ಪ್ರೇರಿಪಿಸುತ್ತದೆ. ಪಾಪದಿಂದ ನರಕ ಪ್ರಾಪ್ತಿಯಾಗುತ್ತದೆ. ಪುನಃ ದಾರಿದ್ರ್ಯ ಮತ್ತು ಪಾಪಗಳ ಚಕ್ರದಲ್ಲಿ ಸುತ್ತುತ್ತಾನೆ.

'ದಾನ' ಎಂದರೆ ಪ್ರತಿಫಲಾಪೇಕ್ಷೆಯಿಂದ ಮಂತ್ರಪೂರ್ವಕವಾಗಿ ನೀಡುವುದು. ಧರ್ಮದಲ್ಲಿ ಪ್ರತಿಫಲಾಪೇಕ್ಷೆ ಇಲ್ಲ. ಆದರೆ ರೂಢಿಯಲ್ಲಿ ಈ ಎರಡೂ ಪದಗಳು "ಇತರರಿಗೆ ನೀಡುವುದು" ಎಂಬ ಸಾಮಾನ್ಯ ಅರ್ಥದಲ್ಲಿ ಬಳಕೆಯಲ್ಲಿರುವುದರಿಂದ, ತನ್ನಲ್ಲಿರುವುದನ್ನು ದಾನ–ಧರ್ಮಗಳ ಮೂಲಕ ವಿನಿಯೋಗಿಸುವುದರಿಂದ ಸುಖ–ಸಂತೋಷ ಮತ್ತು ತೃಪ್ತಿ ಸಿಗುತ್ತದೆ.

ಆಗ ಬಾ, ಈಗ ಬಾ, ಹೋಗಿ ಬಾ ಎನ್ನದೇ
ಆಗಲೇ ಕರೆದು ಕೊಡುವವನ ಧರ್ಮ ಹೊ–
ನ್ನಾಗದೇ ಬಿಡದು,
ಕೊಟ್ಟದ್ದು ತನಗೆ ಬೈತಿಟ್ಟದ್ದು ಪರರಿಂಗೆ
ಕೊಟ್ಟು ನಾ ಕೆಟ್ಟೆನೆನಬೇಡ ಅದು ಮುಂದೆ
ಕಟ್ಟಿದಾ ಬುತ್ತಿ

ಎಂಬ ಸರ್ವಜ್ಞನ ವಚನಗಳಲ್ಲಿ ದಾನ–ಧರ್ಮಗಳ ಸ್ವರೂಪ–ಮಹತ್ವಗಳ ವಿವರಣೆ ಇದೆ.

ಮಾಯೆ ಮತ್ತು ಅತಿಆಸೆ ಎಂಬೆರಡು ಮನುಷ್ಯನಲ್ಲಿರುವ ದಾನ ಬುದ್ಧಿಗೆ ಅಡ್ಡಿಯುಂಟು ಮಾಡುತ್ತವೆ. ತನ್ನ ಸಾಮಾನ್ಯ ಅವಶ್ಯಕತೆಗಳಿಗೆ ತಕ್ಕಷ್ಟನ್ನು ಮಾತ್ರ ಸಂಗ್ರಹಿಸುವ ಆಸೆ ಮನುಷ್ಯನಿಗೆ ಅಗತ್ಯ. ಏಕೆಂದರೆ ಆಸೆಯೇ ಮನುಷ್ಯನ ಬದುಕಿನ ಮೂಲ. ಆದರೆ ಅತಿ ಆಸೆಗೆ ಬಲಿಯಾಗಿ, ಆತ್ಮವಂಚನೆಗೈದು, ಕುಟುಂಬಕ್ಕೆ ದ್ರೋಹ ಬಗೆದು, ಸಮಾಜಘಾತುಕತನದಿಂದ ಸಂಗ್ರಹಿಸಿದ ದ್ರವ್ಯವನ್ನು ಯಾರೂ ತನ್ನೊಡನೆ ಪರಲೋಕಕ್ಕೆ ಒಯ್ಯುವುದಿಲ್ಲ ಎಂಬುದಕ್ಕೆ ಸರ್ವಜ್ಞ ಹೇಳಿದ ಮಾತಿದು

ಉಣ್ಣದೊಡವೆಯ ಗಳಿಸಿ ಮಣ್ಣೊಳಗೆ ಬೈತಿಟ್ಟು
ಚೆನ್ನಾಗಿ ನೆಲವ ಸಾರಿಸಿದವನ ಬಾಯೊಳಗೆ
ಮಣ್ಣು ಕಾಣಯ್ಯ –

ಪ್ರತಿಯೊಬ್ಬನೂ ತನ್ನ ಆದಾಯದ ನಿರ್ದಿಷ್ಟ ಪ್ರಮಾಣವನ್ನು ಮಾತ್ರ ದಾನ ಧರ್ಮಾದಿಗಳಿಗೆ ವಿನಿಯೋಗಿಸಬೇಕೇ ಹೊರತು, ತನ್ನಲ್ಲಿರುವುದೆಲ್ಲವನ್ನೂ ಎಲ್ಲರಿಗೂ

ಹಂಚುವುದಲ್ಲ, ಎಲ್ಲರೂ ಎಲ್ಲವನ್ನೂ ಸ್ವೀಕರಿಸಲು ಅರ್ಹರೂ ಇರುವುದಿಲ್ಲ ಕೊಳಕು ಪಾತ್ರೆಯಲ್ಲಿ ನೊರೆ ಹಾಲನ್ನು ಹಾಕಿದಂತೆ.

ಯಾವಾಗಲೂ ಎಲ್ಲರಿಗೂ ಎಲ್ಲವೂ ಅವಶ್ಯಕವಿರುವುದಿಲ್ಲ. ನಮ್ಮಲ್ಲಿ ಇದೆಯೆಂದ ಮಾತ್ರಕ್ಕೆ ಅವಶ್ಯಕತೆಯಿಲ್ಲದಿರುವವರಿಗೆ ನೀಡುವುದು ವ್ಯರ್ಥ. ಮಹಾಕವಿ ರಾಘವಾಂಕನ ಮಾತುಗಳಲ್ಲಿ ಹೇಳುವುದಾದರೆ ದರಿದ್ರನಿಗೆ ಆನೆದೊರಕಿದರೆ, ಅದನ್ನವನು ಸಾಕಲಾರ, ಬಾಯಾರಿದವನಿಗೆ ತುಪ್ಪ ದೊರಕಿದರೆ ಬಾಯಾರಿಕೆ ತಣಿಯದು, ಮಹಾರೋಗಿ ರಂಭೆಯನ್ನು ಉಪಭೋಗಿಸಲಾರ, ಮರಣ ಶಯ್ಯೆಯಲ್ಲಿರುವವನಿಗೆ ಅರಸುಪಟ್ಟ ದೊರಕಿದರೆ ಪ್ರಯೋಜನವಿಲ್ಲ.

ಅನರ್ಹರಿಗೆ ನೀಡುವುದೂ, ಅನರ್ಹರು ಸ್ವೀಕರಿಸುವುದೂ ಅಪರಾಧ. ಅಂತೆಯೇ ಅರ್ಹರಾದವರಿಗೆ ನೀಡದಿರುವುದೂ ದ್ರೋಹವೇ ಸರಿ. ಸಮುದ್ರದಲ್ಲಿ ಮುಳುಗುತ್ತಿರುವವನಿಗೆ ದೋಣಿಯನ್ನೂ, ದರಿದ್ರನಿಗೆ ಬಂಗಾರವನ್ನೂ ರೋಗಿಗೆ ಅಮೃತಸದೃಶವಾದ ಔಷಧವನ್ನು ನೀಡಿದಂತೆ ಮಾಡುವ ದಾನ ಸಾರ್ಥಕ.

ತನ್ನೆದುರಿನ ಹಾಲನ್ನೇ ನೋಡುತ್ತಿರುವ ಬೆಕ್ಕು ಹಿಂದಿರುವ ದೊಣ್ಣೆಯಿಂದ ಬರುವ ಆಪತ್ತನ್ನು ಕಾಣಲಾರದು. ಅಂತೆಯೇ ಕಡುಲೋಭಿಯಾದ ಮನುಷ್ಯ ಅಡ್ಡದಾರಿಯಿಂದ ಸಂಪಾದಿಸಿದ ಹಣದ ರಾಶಿಯನ್ನೇ ನೋಡುತ್ತಿರುತ್ತಾನೆಯೇ ಹೊರತು ಅದರಿಂದ ಸಂಭವಿಸಬಹುದಾದ ಆಪತ್ತನ್ನು ಊಹಿಸುವುದಿಲ್ಲ.

ಲೋಭಾವಿಷ್ಟೋ ನರಃ ವಿತ್ತಂ ವೀಕ್ಷತೇ ನ ಸ ಚಾಪದಂ ॥
ದುಗ್ಧಂ ಪಶ್ಯತಿ ಮಾರ್ಜಾರಃ ನ ತಥಾ ಲಗುಡಾಹತಿಂ ॥
ದಾನದ ಬಗೆಗಿನ ಸಂಸ್ಕೃತ ಸುಭಾಷಿತವೊಂದು ಹೀಗಿದೆ.
ದೇಯಂ ಭೋಹ್ಯಧನೇ ಧನಂ ಸುಕೃತಿಭಿಃ
ನೋ ಸಂಚಿತಂ ಸರ್ವದಾ (ತಿಷ್ಠತೀತಿ ಶೇಷಃ)
ಶ್ರೀಕರ್ಣಸ್ಯ ಬಲೇಶ್ಚ ವಿಕ್ರಮಪತೇಃ
ಅದ್ಯಾಪಿ ಕೀರ್ತಿಃ ಸ್ಥಿತಾ ।
ಆಶ್ಚರ್ಯಂ ಮಧು ದಾನಭೋಗ ರಹಿತಂ
ನಷ್ಟಂ ಚಿರಾತ್ ಸಂಚಿತಂ
ನಿರ್ವೇದಾದಿತಿ ಪಾಣಿ ಪಾದಯುಗಲಂ
ಧರ್ಷಂ ತೃಹೋ ಮಕ್ಷಿಕಾಃ ॥

ಕೂಡಿಟ್ಟ ಹಣವನ್ನು ದಾನ ಮಾಡಬೇಕು. ಹಾಗೆ ಮಾಡದಿದ್ದರೆ ಉಳಿಯುವುದಿಲ್ಲ. ಕರ್ಣ, ಬಲಿಚಕ್ರವರ್ತಿ, ವಿಕ್ರಮಾದಿತ್ಯರಂತಹ ದಾನಶೂರರ ಕೀರ್ತಿ ಇಂದಿಗೂ ಉಳಿದಿದೆ. ತಾವೂ ಸೇವಿಸದೆ, ಇತರರಿಗೂ ನೀಡದೆ ಸಂಗ್ರಹಿಸಿದ ಜೇನು ಇತರರ ಪಾಲಾಗಿ ದುಃಖಪಡುವ ಜೇನ್ನೊಣಗಳಂತೆ, ಸಕಾಲದಲ್ಲಿ ಯೋಗ್ಯರಾದವರಿಗೆ ಸೂಕ್ತ ದಾನ–ಧರ್ಮ ನೀಡದವರು ಪಶ್ಚಾತ್ತಾಪದಿಂದ ಕೈ ಕೈ ಹೊಸಕಿಕೊಳ್ಳಬೇಕಾಗುತ್ತದೆ.

ಪುನರ್ಜನ್ಮ

ವಿಜ್ಞಾನ ಮತ್ತು ಅಧ್ಯಾತ್ಮ ಒಂದಕ್ಕೊಂದು ಪೂರಕ. ಇಂದು ನಾವು ಬದುಕಿನ ಹಲವು ಸಮಸ್ಯೆಗಳಿಗೆ ವೈಜ್ಞಾನಿಕ ಪರಿಹಾರ ಕಂಡುಕೊಂಡಿದ್ದರೂ ಹುಟ್ಟುಸಾವಿನ ರಹಸ್ಯವನ್ನು ಮಾತ್ರ ಭೇದಿಸಲು ಸಮರ್ಥರಾಗಿಲ್ಲ. ನಮ್ಮ ಭಾರತೀಯ ತತ್ವಜ್ಞಾನಿಗಳ ಆಧ್ಯಾತ್ಮಿಕ ದೃಷ್ಟಿಗೆ ಈ ರಹಸ್ಯವೂ ಗೋಚರಿಸಿದೆ. ಆದ್ದರಿಂದ ವಿಜ್ಞಾನದ ತುತ್ತ ತುದಿಯಿಂದಲೇ ಅಧ್ಯಾತ್ಮದ ಪ್ರಾರಂಭ ಎಂಬ ಮಾತು ಅರ್ಥಪೂರ್ಣ.

ಕಸ್ತರ್ವ ಕೋ ಹಂ ಕುತ ಆಯಾತಃ ನೀನು ಯಾರು? ನಾನು ಯಾರು? ಎಲ್ಲಿಂದ ಬಂದುದು? ಎಲ್ಲಿಗೆ ಪಯಣ? ಎಂಬ ಆದಿಶಂಕರರ ಚಿಂತನೆಯೊಂದಿಗೆ ಹುಟ್ಟಿನ ಜಿಜ್ಞಾಸೆ ಪ್ರಾರಂಭವಾಗುತ್ತದೆ. ಪುನರಪಿ ಜನನಂ ಪುನರಪಿಮರಣಂ ಪುನರಪಿ ಜನನೀ ಜಠರೇ ಶಯನಂ ಮತ್ತೆ ಹುಟ್ಟು, ಮತ್ತೆ ಸಾವು, ಮತ್ತೆ ಗರ್ಭವಾಸ, ಹೀಗೆ ಹುಟ್ಟು ಸಾವಿನ ಚಕ್ರದಲ್ಲಿ ಪ್ರತಿಯೊಂದು ಜೀವಿ ತೊಳಲಾಡುತ್ತದೆ. ಜೀವಿತಾವಧಿಯಲ್ಲಿನ ಕರ್ಮಪರಿಪಾಕದಿಂದ ಗರ್ಭಸ್ಥವಾದ ಪಿಂಡ ಅನುಭವಿಸುವ ಕಷ್ಟವನ್ನು ವರ್ಣಿಸಲಾಗದೆಂದು ಆಚಾರ್ಯರು ಹೇಳುತ್ತಾರೆ. ಆದೌಕರ್ಮ ಪ್ರಸಂಗಾತ್ ಕಲಯತಿಕಲುಷಂ ಮಾತೃ ಕುಕ್ಷೌ ಸ್ಥಿತಂ ಮಾಂ । ವಿಣ್ಮೂತ್ರಾಮೇಧ್ಯಮಧ್ಯೇ ವ್ಯಥಯತಿನಿತರಾಂ ಚಾಠರೋಜಾತವೇವಾಃ ॥

“ಮಾತೃಗರ್ಭದಿಂದ ಹೊರಬಂದ ಕೂಡಲೇ ಶಿಶು ಅಳುವುದೇಕೆ? ಆನ್ಮಾಂತರದ ಸ್ಮರಣೆಯಿಂದಾಗಿ ಕರ್ಮಫಲವನ್ನನುಭವಿಸಬೇಕಾದ ಭಯವಿರಬಹುದೆ?

ಗರ್ಭಸ್ಥವಾಗಿರುವಾಗಲೇ ಶಿಶುವಿನ ಸಂಸ್ಕಾರಕ್ಕೆ ನಮ್ಮ ಪ್ರಾಚೀನ ಮಹರ್ಷಿಗಳು ಬಹಳ ಮಹತ್ವ ನೀಡಿದ್ದಾರೆ. ಗರ್ಭಾದಾನವೆಂಬ ಸಂಸ್ಕಾರದ ಮೂಲಕ ಋತುಚಕ್ರದ ಯೋಗ್ಯದಿನದಲ್ಲಿ ದೂರ್ವಾರಸಸೇಚನ, ಮಂತ್ರೋಚ್ಚಾರಣೆ ಮುಂತಾದಂತೆ ವೈಜ್ಞಾನಿಕವಾಗಿ ಗರ್ಭವನ್ನು ಶುದ್ಧೀಕರಿಸಲಾಗುವುದು. ನಂತರ ಇಲ್ಲಿ ಬೆಳೆಯುವ ಶಿಶುವಿಗೆ 'ಪುಂಸವನ' ಸಂಸ್ಕಾರ, ವೀಣಾವಾದನ, ಸಾಮಗಾನದ ಮಧುರ ಶ್ರವಣ, ಮಂತ್ರ ಪಠನ.

ಹರಿದ್ವೇಷಿಯಾದ ಹಿರಣ್ಯಕಶಿಪುವಿನ ಮಗ ಪ್ರಹ್ಲಾದನಿಗೆ ಕಯಾದುವಿನ ಗರ್ಭದಲ್ಲಿರುವಾಗಲೇ ನಾರದರಿಂದ ಹರಿಭಕ್ತಿಯ ಉಪದೇಶದ ಪರಿಣಾಮ ತಿಳಿಯದವರಿಲ್ಲ. ಉತ್ತರೆಯ ಗರ್ಭದಲ್ಲಿದ್ದ ಅಭಿಮನ್ಯುವಿಗೆ ಚಕ್ರವ್ಯೂಹ ಯುದ್ಧದ ಮಾಹಿತಿಯನ್ನು ಶ್ರೀಕೃಷ್ಣ ಉಪದೇಶಿಸಿದ ಘಟನೆ ಮಹಾಭಾರತದಲ್ಲಿ ವರ್ಣಿತವಾಗಿದೆ. ಹೀಗೆ ಗರ್ಭದಲ್ಲಿರುವಾಗಿನ ನೆನಪು, ಸಂಸ್ಕಾರದ ಪ್ರಭಾವ ವ್ಯಕ್ತಿಯ ಮೇಲೆ ಸ್ಪಷ್ಟವಾಗಿ ಬೀರುತ್ತದೆಂಬುದು ವೈಜ್ಞಾನಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಸಮ್ಮತವಾಗಿದೆ.

ಆದಿಶಂಕರರು ಜನ್ಮಾಂತರದ ಕರ್ಮಾವಿಪಾಕದಿಂದಾಗಿ ಪ್ರಾಪ್ತವಾದ ಭಗಂಧರ ರೋಗವನ್ನು ಉಪಸಂಹರಿಸಿಕೊಳ್ಳಲು ಸಾಧ್ಯವಿದ್ದಿದ್ದರೂ ಮತ್ತೊಮ್ಮೆ ಹುಟ್ಟಿ ಅನುಭವಿಸುವ ಬದಲು ಪೂರ್ತಿ ಅನುಭವಿಸಿಯೇ ಬ್ರಹ್ಮೈಕ್ಯರಾದರು.

ಯೌವನ, ಧನ, ಆಧಿಕಾರಗಳ ಮದದಿಂದ ಇತರೆ ಪ್ರಾಣಿ ವರ್ಗಕ್ಕೆ ಯಾವುದೇ ರೀತಿಯ ಕೆಡುಕನ್ನು ಬಯಸಿದರೂ ಅದರ ಫಲವನ್ನು ಈಗಲೋ ಜನ್ಮಾಂತರದಲ್ಲೋ ಅನುಭವಿಸಲೇ ಬೇಕಾಗುವುದು. ಆದುದರಿಂದ ಯಾವಾಗಲೂ ಪರಹಿತವನ್ನೇ ಬಯಸಬೇಕು.

ಶಿಕ್ಷಣ ಅಂದು–ಇಂದು

ಸ್ವಸ್ತಿ! ಪ್ರಜಾಭ್ಯಃ ಪರಿಪಾಲಯಂತಾಂ ನ್ಯಾಯೇನ ಮಾರ್ಗೇಣ ಮಹೀಂ ಮಹೀಶಾಃ' ಎಂಬುದಾಗಿ ಒಂದು ವರ್ಗದ ಜನ ಯಾವಾಗಲೂ ಹರಸುತ್ತಲೇ ಇದ್ದ ಕಾಲವೊಂದಿತ್ತು. 'ರಾಜರು ನ್ಯಾಯ ಮಾರ್ಗದಲ್ಲಿ ರಾಜ್ಯವಾಳುತ್ತಿರಲಿ, ಪ್ರಜೆಗಳಿಗೆ ಒಳಿತಾಗಲಿ! ಎಂಬುದೇ ಇವರ ನಿತ್ಯದ ಹರಕೆ. ಅಂದರೆ ರಾಜರಿರುವುದು ಪ್ರಜೆಗಳನ್ನು ರಂಜಿಸಲು, ತಾನು ನ್ಯಾಯ ಮಾರ್ಗದಲ್ಲಿದ್ದು ಪ್ರಜೆಗಳಿಗೆ ನ್ಯಾಯದಾನ ಮಾಡಲು ಮತ್ತು ಪ್ರಜೆಗಳನ್ನು ಸುಖವಾಗಿರಿಸಲು. ಅಂದು ರಾಜಕುಮಾರರಿಗೆ ರಾಜೋಚಿತವಾದ ಶಿಕ್ಷಣ ದೊರೆಯುತ್ತಿತ್ತು. ಅಲ್ಲದೆ ವಸಿಷ್ಠ, ವಿದ್ಯಾರಣ್ಯ, ಸಮರ್ಥರಾಮದಾಸರಂತಹ ಮಹಾಮಹಿಮರ ಮಾರ್ಗದರ್ಶನ, ಬೋಧನೆಯೂ ದೊರೆಯುತ್ತಿತ್ತು. ರಾಜರು ಪ್ರಜೆಗಳಿಗಾಗಿ, ಪ್ರಜೆಗಳು ರಾಜರಿಗಾಗಿ ಎಲ್ಲರೂ ಎಲ್ಲರಿಗಾಗಿ ಎಂಬುದೇ ಎಲ್ಲರ ಬದುಕಿನ ಧ್ಯೇಯವಾಗಿತ್ತು. ಆದರೆ ಈಗ ರಾಜರೂ ಇಲ್ಲ, ವಸಿಷ್ಠರಂತಹ ಗುರುಗಳೂ ಇಲ್ಲ.

ಎಲ್ಲರೂ ಎಲ್ಲರಿಗಾಗಿ ಬದುಕುವ ಗುರಿಯನ್ನು ತೋರಿಸುವುದೇ ಅಂದಿನ ಶಿಕ್ಷಣದ ಉದ್ದೇಶವಾಗಿತ್ತು. ನೈತಿಕತೆ ಈ ಶಿಕ್ಷಣದ ತಳಹದಿಯಾಗಿತ್ತು. ರಾಮಾಯಣ, ಮಹಾಭಾರತ, ಭಾಗವತಗಳಲ್ಲಿನ ಆದರ್ಶದ ತುಣುಕುಗಳಿರುವ ಪಠ್ಯಪುಸ್ತಕಗಳಿದ್ದುವು. ಉಪನಿಷತ್ತುಗಳಲ್ಲಿನ ತೇಷಾಂ ತ್ವಯಾಸನೇ ನ ಪ್ರಶ್ವಸಿತವ್ಯಮಂ। ಎಂಬ ಉಪದೇಶ ವಾಕ್ಯದಂತೆ ಗುರುಗಳ ಆಸನದ ಸಮೀಪದಲ್ಲಿ ಜೋರಾಗಿ ಉಸಿರು ಬಿಡಲಾರದಷ್ಟು ಗುರುಗಳ ಬಗ್ಗೆ ಭಯ ಭಕ್ತಿಯನ್ನಿರಿಸಿದ್ದ ಶಿಷ್ಯರಿದ್ದರು "ಅವಾನೂಚಾನಮವಶಿಷ್ಯಂ" ಎಂದು ಶಿಷ್ಯ ಪರಂಪರೆಯ ಶ್ರೇಯಸ್ಸನ್ನೇ ನಿರಂತರ ಚಿಂತಿಸುವ ಗುರುವೃಂದವಿತ್ತು. ರಾಜರ, ಶ್ರೀಮಂತರ, ಗಣ್ಯರ ಪೋಷಣೆಯಲ್ಲಿದ್ದ ಗುರುಗಳು ಸ್ವತಂತ್ರ ಬದುಕನ್ನು ರೂಪಿಸುವ ಶಿಕ್ಷಣ ನೀಡಿ ತರಬೇತುಗೊಳಿಸುತ್ತಿದ್ದರು. ಇಂತಹ ಶಿಕ್ಷಣ ಪಡೆಯಲು ವಿದೇಶಿಯರೂ ಹಾತೊರೆಯುತ್ತಿದ್ದ ಕಾಲವಿತ್ತೆಂದು ಇತಿಹಾಸ ಹೇಳುತ್ತದೆ.

ಈಗಿನ ಸಾರ್ವಜನಿಕ ಶಿಕ್ಷಣಕ್ಕೆ ಗೊತ್ತು ಗುರಿಯಿಲ್ಲ. ಎಲ್ಲರಿಗೂ ಎಲ್ಲ ಶಿಕ್ಷಣಕ್ಕೂ ಸಮಾನ ಅವಕಾಶ. "ಗೋಲ್ ಸೂರಾಖ್ ಮೇಂ ಚೌಕೋರ್ ಖೂಂಟಾ" ಎಂಬ ಮಾತು ಈಗಿನ ಶಿಕ್ಷಣಕ್ಕೆ ಪೂರ್ಣ ಅನ್ವಯಿಸುತ್ತದೆ. ಉರುಟಾದ ರಂಧ್ರದಲ್ಲಿ ಚೌಕದ ಮೊಳೆ ಕೀಲಿಸಿದರೆ ರಂಧ್ರವೂ ಮುಚ್ಚುವುದಿಲ್ಲ. ಮೊಳೆಯೂ ಭದ್ರವಾಗುವುದಿಲ್ಲ. ಹಾಗೆಯೇ ತನಗೆ ಅಭಿರುಚಿಯಿಲ್ಲದ, ಬೌದ್ಧಿಕ ಸಾಮರ್ಥ್ಯಕ್ಕೆ ಹೊಂದಿಕೆಯಾಗದ ಯಾವುದೋ ಶಿಕ್ಷಣ ಪಡೆಯಲು ಬಲಾತ್ಕಾರದ ಒತ್ತಡಕ್ಕೆ ಸಿಲುಕಿ ಪಡೆದ ಪದವಿಯಿಂದ ಶಿಕ್ಷಿತನಿಗೆ ನಿರಾಸೆ, ಸಮಾಜಕ್ಕೆ ಅಪಾಯ. ಈ ಶಿಕ್ಷಣದಿಂದ ಬದುಕನ್ನು ಸಾಗಿಸುವ ಧೈರ್ಯ ಬರುವುದಿಲ್ಲ. ಇದೇ ಇಂದಿನ ಶಿಕ್ಷಣದ ದುರಂತ.

ವಿದ್ಯಾಭ್ಯಾಸವನ್ನು ತಪಸ್ಸೆಂದು ತಿಳಿದು ತಮ್ಮ ಅಭಿರುಚಿಗೆ ತಕ್ಕ ವಿಷಯಗಳನ್ನಾಯ್ದುಕೊಂಡು ಶ್ರದ್ಧೆಯಿಂದ ಅಧ್ಯಯನ ಮಾಡುವ ವಿದ್ಯಾರ್ಥಿಗಳಿದ್ದರು. ಇಂತಹ ವಿದ್ಯಾರ್ಥಿಗಳನ್ನು ತಮ್ಮ ಸ್ವಂತ ಮಕ್ಕಳಂತೆ ಪ್ರೀತಿಸಿ ತರಬೇತುಗೊಳಿಸುವ ಪ್ರಾಮಾಣಿಕರೂ ವಿದ್ಯಾಪ್ರೇಮಿಗಳೂ, ವಿಷಯದ ಮೇಲೆ ಪ್ರಭುತ್ವವುಳ್ಳ ಶಿಕ್ಷಕರೂ ಇದ್ದರು ತೇ ಹಿ ನೋ ದಿವಸಾಃ ಗತಾಃ ॥ ಅಂತಹ ದಿನಗಳು ಕಳೆದು ಹೋದುವು. ಉಳಿದುದು ಮಧುರ ಸ್ಮೃತಿ ಮಾತ್ರ.

ಆಸೆ

'ಆಸೆಯೇ ದುಃಖಕ್ಕೆ ಮೂಲ' ಎಂದು ಭಗವಾನ್ ಬುದ್ಧರಂತಹ ಜ್ಞಾನಿಗಳು ಹೇಳಿದ್ದರೂ ಆಸೆಯೇ ಇಲ್ಲದ ಮನುಷ್ಯನ ಜೀವಿತಕ್ಕೆ ಅರ್ಥವಿಲ್ಲ. ಮಾನವನ ಬದುಕಿನ ಸ್ಫೂರ್ತಿಯ ಸೆಲೆಯೇ ಆಸೆ. ನನಗೆ 'ಬಡತನವನ್ನು ಕೊಡು' ಎಂದು ದಾಸರು ಭಗವಂತನನ್ನು ಬೇಡುತ್ತಾರೆ. ಏಕೆಂದರೆ ಬಡತನದಲ್ಲಿದ್ದಾಗ ಮಾತ್ರ ಭಗವಂತನ ನೆನಪು ಉಳಿಯುತ್ತದಂತೆ. ಸಾಯಿಂ ಇತನಾ ದೀಜಿಯೇ ಜಾಮೇಂ ಕುಟುಂಬ ಸಮಾಯ್, ಮೈಂ ಭೀ ಭೂಖಾನಾ ರಹೂಂ ಸಾಧುನ ಭೂಖಾ ಜಾಯ್" ಓ ದೇವರೆ, ನನಗೆ ಎರಡು ಹೊತ್ತು ಊಟಕ್ಕೆ ಮತ್ತು ಅತಿಥಿಗಳಾಗಿ ಬರುವ ಸಂತರ ಉಪಚಾರಕ್ಕೆ ಸಾಕಾಗುವಷ್ಟು ಮಾತ್ರ ಕೊಡು' ಎಂದು ಸಂತರು ಬೇಡುತ್ತಾರೆ. ದಾಸರ, ಸಂತರ, ಈ ಕೋರಿಕೆಗಳೂ ಒಂದು ವಿಧವಾದ ಆಸೆಯೇ. ನಾಳಿನ ಚಿಂತನೆಯೂ ಮುಂದಿನ ಸುಖದ ಚಿಂತೆಯೂ ಆಸೆಯ ಇನ್ನೊಂದು ಮಗ್ಗಲು.

ರಾತ್ರಿರ್ಗ ಮಿಷ್ಯತಿ ಭವಿಷ್ಯತಿ ಸುಪ್ರಭಾತಂ ಭಾಸ್ವಾನುದೇಷ್ಯತಿ ಹಸಿಷ್ಯತಿ ಪಂಕಜ ಶ್ರೀಃ। ಇತ್ಥಂ ವಿಚಿಂತಯತಿ ಕೋಶಗತೇ ದ್ವಿರೇಫೇ ಹಾ ಹಂತ! ಹಂತ! ನಳಿನೀಂ ಗಜ ಉಜ್ಜಹಾರ ॥ ಹಗಲಿನಲ್ಲಿ ಸಂಭ್ರಮದಿಂದ ಅಡ್ಡಾಡುತ್ತಿದ್ದ ಒಂದು ದುಂಬಿ ಕಮಲವೊಂದರ ಮಧುವನ್ನು ಹೀರುತ್ತಿರುವಾಗಲೇ ಕತ್ತಲಾಗಿ ಕಮಲ ಮುದುಡಿತು. ಆ ದುಂಬಿ ನಾಳಿನ ಬಗ್ಗೆ ಹೀಗೆ ಚಿಂತಿಸುತ್ತದೆ. "ರಾತ್ರಿ ಕಳೆದು ಬೆಳಗಾಗುತ್ತದೆ. ಸೂರ್ಯೋದಯವಾಗುತ್ತದೆ. ಕಮಲ ಅರಳುತ್ತದೆ. ಆಗ ನಾನು ಸ್ವಚ್ಛಂದವಾಗಿ ಹಾರುತ್ತಾ ಮಧು ಹೀರಲು ತೊಡಗುತ್ತೇನೆ" ಅಷ್ಟರಲ್ಲೇ ಎಲ್ಲಿಂದಲೋ ಬಂದ ಒಂದು ಆನೆ ಆ ಕಮಲವನ್ನೇ ಕಿತ್ತೆಸೆಯುತ್ತದೆ. ನಮ್ಮ ಬದುಕೂ ಹೀಗೇ. ನಾನು ಶ್ರೀಮಂತನಾಗಬೇಕು. ಮಹಡಿ ಮನೆ ಕಟ್ಟಿಸಬೇಕು. ಸುಖ ಸಂಸಾರ ನಡೆಸಬೇಕು. ಕಾರು, ಸುಖಾಸನ, ಬಣ್ಣದ ಟಿ.ವಿ. ಬೇಕು – ಹೀಗೆ ಅಜ್ಞಾನದ ಮುಸುಕಿನೊಳಗಿದ್ದು, ಆಶಾಗೋಪುರ ಕಟ್ಟುತ್ತೇವೆ. ಆದರೆ ನಮ್ಮ ಹಿಂದಿನ ಕಾಣದ ಕೈ ನಮಗರಿವಿಲ್ಲದಂತೆ ತನ್ನ ಕೈವಾಡ ನಡೆಸುತ್ತದೆ. ಇದ್ದಕ್ಕಿದ್ದಂತೆ ದುಃಖ ಕೂಪದಲ್ಲಿ ಬಿದ್ದು ಒದ್ದಾಡುತ್ತೇವೆ. ದೈವಬಲವಿಲ್ಲದೆ ನಮ್ಮ ಯಾವುದೇ ಆಸೆ

ಫಲಿಸುವುದಿಲ್ಲ. Man proposes god disposes ಎಂಬ ಆಂಗ್ಲ ಗಾದೆಯ ಅಭಿಪ್ರಾಯ ಇದೇ ಅಲ್ಲವೆ?

ಈಗ ನಮ್ಮ ಚಿಂತನೆಯ ಜಾಡನ್ನು ಬದಲಿಸಬೇಕು. ಗೃಹೀತ. **ಇವ ಕೇಶೇಷು ಮೃತ್ಯುನಾ ಧರ್ಮ ಮಾಚರೇತ್।** ಎಂಬಂತೆ ಯಾವುದೇ ಕ್ಷಣದಲ್ಲಿ ಸಾವನ್ನು ಸ್ವಾಗತಿಸಲು ಸಿದ್ಧರಾಗಿದ್ದು ಧರ್ಮಕಾರ್ಯದಲ್ಲಿ ಪ್ರವೃತ್ತರಾಗಬೇಕು. 'ಆಶೆ' ಯೆಂಬ ಕುದುರೆಗೆ 'ಮಿತಿ' ಯೆಂಬ ಕಡಿವಾಣ ತೊಡಿಸಿ ಹತೋಟಿಗೆ ತರಬೇಕು. "ಬೇಕು" ಗಳನ್ನು ಕಡಿತಗೊಳಿಸಿ ಆಧ್ಯಾತ್ಮಿಕ ಚಿಂತನೆಯತ್ತ ಒಲವು ಹೆಚ್ಚಿಸಿಕೊಳ್ಳಬೇಕು. ಆಗ ಭೋಗ ಜೀವನ, ಕೀಳು ಮನರಂಜನೆ ಮುಂತಾದ ಅವಶ್ಯಕತೆಗಳು ತಾನಾಗಿ ಕಡಿಮೆಯಾಗುತ್ತವೆ.

ಪ್ರಾಚೀನ ಮಹರ್ಷಿಗಳು ತಮ್ಮ ಗುರುಕುಲದ ಅಥವಾ ಕುಟುಂಬದ ಸರ್ವಸದಸ್ಯರಿಗೆ ಕೇವಲ ಮೂರು ದಿನಗಳಿಗಾಗುವಷ್ಟು ಆಹಾರ ಪದಾರ್ಥ ಸಂಗ್ರಹಿಸಿಡುತ್ತಿದ್ದರಂತೆ. ಅವರು ನಿತ್ಯ ತೃಪ್ತರು ತೃಪ್ತಿಯಿಂದಲೇ ನಿಜವಾದ ಆನಂದ ಸಿಗುತ್ತದೆ. ಒಮ್ಮೆ ಧರ್ಮಮೂಲವಾದ ಆನಂದ ದೊರಕಿತೆಂದರೆ ತ್ಯಾಗ ಬುದ್ಧಿ ಜಾಗೃತವಾಗುತ್ತದೆ. ಭಗವಂತನ ಈ ಸೃಷ್ಟಿಯ ನೆಲ, ಜಲ, ಗಾಳಿ, ಬೆಳಕು, ಫಲ-ಪುಷ್ಪ ಮುಂತಾದ ಎಲ್ಲವೂ ಎಲ್ಲರಿಗಾಗಿ, ಎಲ್ಲರೂ ನನ್ನಂತೆ ಇವನ್ನು ಉಪಭೋಗಿಸಲು ಅಧಿಕಾರಿಗಳು ಎಂಬ ಸರ್ವ ಸಮಭಾವವೇ ತೃಪ್ತಿಯ ಮೂಲ, ಅದೇ ಸುಖ.

ರಾಮರಾಜ್ಯ

ನಮ್ಮ ದಾಸ್ಯದ ಕಗ್ಗತ್ತಲೆ ಹರಿದು ಸ್ವಾತಂತ್ರ್ಯದ ಸೂರ್ಯೋದಯವಾಗಿ 50 ವರ್ಷಗಳು ಸಂದರೂ ನಾವು ಆ ಸ್ವಾತಂತ್ರ್ಯದ ಪೂರ್ಣ ಸವಿಯನ್ನುಣ್ಣುವ ಕಾಲ ಇನ್ನೂ ಬಂದಿಲ್ಲ ಎಂಬುದು ಎಲ್ಲರ ಅನಿಸಿಕೆ. ಮಹಾತ್ಮಾಗಾಂಧಿ, ಸರದಾರ್ ಪಟೇಲ್, ತಿಲಕ್ ಮೊದಲಾದ ಮಹನೀಯರ ತ್ಯಾಗ-ಬಲಿದಾನ-ಸಾಹಸಗಳ ಕತೆಗಳನ್ನು ಮೆಲುಕು ಹಾಕುವುದರಲ್ಲೇ ನಾವು ಬದುಕನ್ನು ಸವೆಸುತ್ತಿದ್ದೇವೆಯೇ ಹೊರತು ಆ ಕನಸಿನ ರಾಮರಾಜ್ಯವನ್ನು ಸೃಷ್ಟಿಸಲು ನಮ್ಮಿಂದ ಸಾಧ್ಯವಾಗಿಲ್ಲ.

ರಾಮಾಯಣಗಳಲ್ಲಿ ವರ್ಣಿಸಿರುವ ರಾಮರಾಜ್ಯದಲ್ಲಿ ಕಳ್ಳರ ಕಾಟವಿಲ್ಲದುದರಿಂದ ಮನೆಗಳಿಗೆ ಬೀಗವಿಲ್ಲ, ಕಿರಿಯರಿಗಾಗಿ ಹಿರಿಯರು ದುಃಖಿಸುವ ಪ್ರಸಂಗವಿಲ್ಲ. ಅತಿವೃಷ್ಟಿ-ಅನಾವೃಷ್ಟಿ-ಅಕಾಲ ಮರಣಗಳಿಲ್ಲ, ಯಾಚಕರಿಲ್ಲ, ನಿಂದಕರಿಲ್ಲ, ಎಲ್ಲರೂ ಪರಮ ಸುಖಿಗಳು, ಸಂತೋಷಿಗಳು, ತಪಸ್ವಿಗಳೂ, ನಿಸ್ವಾರ್ಥಿಗಳೂ, ಸಾತ್ವಿಕರೂ, ದೇಶಪ್ರೇಮಿಗಳೂ, ಹಿತಚಿಂತಕರೂ ಆದ ವಸಿಷ್ಠರಂತಹ ರಾಜಗುರು-ಮಹಾಮಂತ್ರಿಗಳ ಬುದ್ಧಿಶಕ್ತಿಯೇ ಈ ರಾಮರಾಜ್ಯದ ತಳಹದಿ.

ಚಾಣಕ್ಯ, ವಿದ್ಯಾರಣ್ಯ, ಸಮರ್ಥ ರಾಮದಾಸರಂತಹ ಮಹಾಮಹಿಮರ ತ್ಯಾಗ, ನಿಷ್ಠೆ, ಬುದ್ಧಿ ಕೌಶಲದಿಂದಾಗಿ ಚಂದ್ರಗುಪ್ತನ ಮೌರ್ಯ ಸಾಮ್ರಾಜ್ಯ, ಹರಿಹರರಿಂದ ಮೊದಲ್ಗೊಂಡ ವಿಜಯನಗರ ಸಾಮ್ರಾಜ್ಯ, ಛತ್ರಪತಿ ಶಿವಾಜಿಯ ಮರಾಠಾ ಸಾಮ್ರಾಜ್ಯಗಳು ಉದಯವಾದುವು. ಹೀಗೆ ಆಧ್ಯಾತ್ಮಿಕ ಬುನಾದಿಯ ಮೇಲೆ ಬೆಳೆದು ಬಂದ ರಾಜಕಾರಣ ಮಾತ್ರ ಯಶಸ್ವಿಯಾದುದು ನಮ್ಮ ದೇಶದ ಐತಿಹಾಸಿಕ ಸತ್ಯ. ಆಧ್ಯಾತ್ಮಿಕ ಹಿನ್ನೆಲೆಯಿಲ್ಲದ ರಾಜಕಾರಣ ಬಹುಕಾಲ ಬಾಳದು.

ಕಷ್ಟಾರ್ಜಿತ ಸ್ವಾತಂತ್ರ್ಯವನ್ನುಳಿಸಿಕೊಂಡು ರಾಮರಾಜ್ಯವನ್ನಾಗಿ ಪರಿವರ್ತಿಸುವ ಸವಾಲನ್ನೆದುರಿಸುವುದೇ ನಮ್ಮ ಈಗಿನ ದೊಡ್ಡ ಸಮಸ್ಯೆ. ಆಧ್ಯಾತ್ಮಿಕ ಶಕ್ತಿಯಿಲ್ಲದೇ ಪರಿಹಾರ ಅಸಾಧ್ಯ. ಆಧ್ಯಾತ್ಮಿಕ ಮೌಲ್ಯವನ್ನು ಸಾರುವ ಒಂದು ಸಂಗತಿ 'ದೀನೇ ಇಲಾಹಿ' ಯ ಪ್ರಚಾರದ ಮೂಲಕ ಭಾರತೀಯ ಸಂಸ್ಕೃತಿಯ ಮೇಲೆ ಪ್ರಭಾವ ಬೀರಲು ಅಕ್ಬರ್ ಬಾದಶಹ ನಡೆಸಿದ ಪ್ರಯತ್ನ ಇತಿಹಾಸ ಪ್ರಸಿದ್ಧ. ಈ ಅಂದೋಲನದ ಪರಿಣಾಮವಾಗಿ "ದಿಲ್ಲೀಶ್ವರೋ ವಾ ಜಗದೀಶ್ವರೋವಾ" ಎಂಬ ಪ್ರಶಂಸಾ ವಾಕ್ಯಗಳೂ ಹೊರಟವು. ಆದರೆ ಭಾರತದ ಆಧ್ಯಾತ್ಮಿಕ ಶಕ್ತಿಯಿಂದ ಆಕರ್ಷಿತನಾಗಿ ಸ್ವಯಂ ಹಿಂದೂ ಸಂಸ್ಕೃತಿಯ ಅಲೆಯಲ್ಲಿ ತೇಲುವಂತಾದ, ನಿರಾಕಾರವಾದಿಗಳಾದ ಮುಸ್ಲಿಂ ಬಂಧುಗಳು ಮೂರ್ತಿ ಪೂಜೆಗೆ ಸಹಕರಿಸತೊಡಗಿದರು. ಹೀಗೆ ಭಾರತದ ಆಧ್ಯಾತ್ಮಿಕ ಶಕ್ತಿ ಎಲ್ಲ ಮತೀಯ ಭಾವನೆಗಳನ್ನು ತನ್ನಲ್ಲಿ ಜೀರ್ಣಿಸಿಕೊಳ್ಳುವಷ್ಟು ಪ್ರಬಲವಾಗಿದ್ದ ಕಾಲವೊಂದಿತ್ತು.

(Rev. Sherring) ರೆವರೆಂಡ್ ಶೆರ್ರಿಂಗ್ ರ Castes amd Tribes of India ದಲ್ಲಿನ ಈ ಪಂಕ್ತಿಗಳನ್ನು ಕೇಳಿ.

The Mohamedans have themselves become Hinduized and have been brought into the meshes of Caste.

ಆದರೆ ಈಗ! ನಮ್ಮ ಆಧ್ಯಾತ್ಮಿಕ ಶಕ್ತಿಯ ಮೂಲವನ್ನು ನಾವೇ ಎಲ್ಲೋ ಹಡುಕುವ ಸ್ಥಿತಿಗೆ ತಲಪಿದ್ದೇವೆ.

ಎಲ್ಲರಲ್ಲೂ ಅಸೂಯೆ ಹುಟ್ಟಿಸುವ ನಮ್ಮ ಆಧ್ಯಾತ್ಮಿಕ ಸಂಪತ್ತು ಇವತ್ತು ಉಪೇಕ್ಷೆಗೊಳಗಾಗಿದೆ. ವೇದ ಉಪನಿಷತ್ತು, ದರ್ಶನ, ಸಾಹಿತ್ಯ, ಭಾಗವತ, ರಾಮಾಯಣ, ಮಹಾಭಾರತ ಮೊದಲಾದ ಅಮೂಲ್ಯ ಗ್ರಂಥ ರಾಶಿಗಳಲ್ಲಿ ಅಡಗಿರುವ ತತ್ವ ಉಪದೇಶಗಳು ಈಗಿನ ಆದರ್ಶವಾದಿಗಳನ್ನು, ರಾಷ್ಟ್ರ ನಿರ್ಮಾಪಕ ಯುವಪೀಳಿಗೆಯನ್ನು, ಸಮಾಜ ಸೇವಕ ಧುರೀಣರನ್ನು ಸೋಂಕುತ್ತಿಲ್ಲ. ಸೋಕಿದರೂ ಅವರಿಗೆ ರುಚಿಸುತ್ತಿಲ್ಲವೆಂಬುದೇ ನಮ್ಮ ಸಾಮಾಜಿಕ ಅಧಃಪತನಕ್ಕೆ ಮೂಲಕಾರಣ ವಿರಬಹುದೇ ಎಂಬುದನ್ನು ಚಿಂತಿಸುವ ಕಾಲವೀಗ ಬಂದಿದೆ.

ನಮ್ಮ ಆಧ್ಯಾತ್ಮಿಕ ಮೌಲ್ಯವನ್ನು ನೆನಪಿಸಿಕೊಂಡು, ಪೋಷಿಸಿ, ರಾಜಕಾರಣದಲ್ಲಿ ಬೆರೆಸಿ ಮನ್ನಡೆದರೆ ಮಾತ್ರ ನಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಶಕ್ತಿಯೂ, ರಾಮರಾಜ್ಯ ನಿರ್ಮಾಣ ಮಾಡುವ ಸಾಮರ್ಥ್ಯವೂ ಬಂದೀತು.

ಸ್ತ್ರೀ ಸಮಾನತೆ

ತನ್ನ ಆಧ್ಯಾತ್ಮಿಕ ತಳಹದಿಯಿಂದಾಗಿ ಭಾರತಕ್ಕೆ ಜಗತ್ತಿನಲ್ಲಿ ತನ್ನದೇ ಆದ ವೈಶಿಷ್ಟ್ಯವಿದೆ. ತ್ರಿಕಾಲದರ್ಶಿಗಳಾದ ಮಹರ್ಷಿಗಳಿಂದ ಆಧುನಿಕ ವಿಚಾರವಾದಿಗಳ ತನಕ ಸ್ತ್ರೀ ಪುರುಷ ಸಮಾನತೆಯ ಭಾವನೆಯನ್ನು ಕಾಣುತ್ತೇವೆ.

ಸೃಷ್ಟಿಯ ಆದಿಯಲ್ಲಿ ಪರಮಾತ್ಮ ಪುರುಷ ಮತ್ತು ನಾರೀ ರೂಪಗಳಲ್ಲಿ ಎರಡಾಗಿ ತನ್ನನ್ನು ವಿಭಾಗಿಸಿಕೊಂಡನೆಂದು ಮನುಸ್ಮೃತಿಯಲ್ಲಿದೆ. "ಪ್ರಕೃತಿಂ ಪುರುಷಂ ಚೈವ ವಿದ್ಧ್ಯನಾದೀ ಉಭಾವಪಿ" ಎಂದು ಗೀತೆಯಲ್ಲಿ ಹೇಳಿದ ಎರಡು ಭಾಗಗಳಲ್ಲಿ "ಸ್ತ್ರಿ ರೂಪೇ ವಾಮ ಭಾಗಾಂಶಃ ದಕ್ಷಿಣಾಂಶಃ ಪುಮಾನ್ ಸ್ಮೃತಃ" ಎಂಬುದಾಗಿ ದೇವೀ ಭಾಗವತದಲ್ಲಿ ವಾಮಭಾಗವು ಸ್ತ್ರೀಯೆಂದೂ ದಕ್ಷಿಣಭಾಗವು ಪುರುಷಾಂಶವೆಂದೂ ವರ್ಣಿತವಾಗಿದೆ. ಎಷ್ಟೋ ಸಾವಿರಕ್ಕೊಂದೆಂಬ ಅಪವಾದ ಬಿಟ್ಟರೆ, ಸಾಮಾನ್ಯ ಮನುಷ್ಯನ ಎಡಭಾಗದಲ್ಲಿ ಹೃದಯವಿರುವುದರಿಂದ, ವಾಮಾಂಗಿಯೆನಿಸಿದ ಸ್ತ್ರೀಗೆ ಕೋಮಲತ್ವ ಮತ್ತು ಪ್ರಾಶಸ್ತ್ಯ ಔಚಿತ್ಯಪೂರ್ಣ. ಸ್ತ್ರೀ ಸಮಸ್ತ ಶಕ್ತಿಯ ಮೂರ್ತಿಯೆಂದು ವರ್ಣಿಸಲ್ಪಟ್ಟಿದ್ದಾಳೆ. ದ್ವಿಚಕ್ರ ವಾಹನದ ಎರಡು ಗಾಲಿಗಳಂತೆ ಸ್ತ್ರೀ ಪುರುಷರಲ್ಲಿ ಸಮಾನತೆಯಲಿಲ್ಲದಿದ್ದರೆ ಗಾಡಿ ಮುಗ್ಗರಿಸುತ್ತದೆ.

'ನರಂ ನಾರೀ ಪ್ರೋದ್ಧರತಿ ಮಜ್ಜಂತಂ ಭವ ವಾರಿಧೌ, ಏತತ್ಸಂದರ್ಶ ನಾರ್ಥಾಯ ತಥಾಚಕ್ರೇಭವೋದ್ಭವಃ" – ಭವಸಾಗರದಲ್ಲಿ ಮುಳುಗುವ ಪುರುಷನನ್ನು ಸ್ತ್ರೀಯು ಉದ್ಧರಿಸುತ್ತಾಳೆಂಬ ತತ್ವವನ್ನು ಜಗತ್ತಿಗೆ ಸಾರಲು ಶಿವನು ನಾಟಕವಾಡಿದ" ಎಂಬುದಾಗಿ ಸ್ಕಂದಪುರಾಣದ ಕುಮಾರಿಕಾಖಂಡದಲ್ಲಿ ವರ್ಣಿತವಾಗಿದೆ. "ಆದ್ಯಪ್ರಭೃತ್ಯವನತಾಂಗಿ ತವಾಸ್ಮಿದಾಸಃ" ತಪಸ್ಸಿನಿಂದ ನೀನು ನನ್ನು ಕೊಂಡುದರಿಂದ ನಾನು ಇಂದಿನಿಂದ ನಿನ್ನ ದಾಸನಾಗಿದ್ದೇನೆ ಎಂದು ಶಿವಪಾರ್ವತಿಯನ್ನ ಕುರಿತು ಹೇಳಿದಂತೆ ಕಾಳಿದಾಸ ಕುಮಾರ ಸಂಭವ ಕಾವ್ಯದಲ್ಲಿ ವರ್ಣಿಸಿದ್ದಾನೆ.

ಆದರೆ ಪಾಶ್ಚಾತ್ಯ ಶಿಕ್ಷಣದ ಪ್ರಭಾವದಿಂದ ಇತ್ತೀಚೆಗೆ ಭಾರತದಲ್ಲೂ ಸ್ತ್ರೀ ಸಮಾನತೆಯ ಆಂದೋಲನ ಹಬ್ಬುತ್ತಿದೆ. ಭಾರತದ ನಾರಿಯು ಸಮಾನತೆಯ ಅಧಿಕಾರ ಬೇಡುವ–ನೀಡುವ ಮಟ್ಟಕ್ಕಿಂತ ಅತ್ಯುನ್ನತ ಸ್ಥಿತಿಯಲ್ಲಿದ್ದಾಳೆ. ಜಗತ್ತಿಗೇ ಉಣಡಿಸುವ 'ಅನ್ನಪೂರ್ಣೆ'ಯನ್ನಾಗಿ ನಾವು ಅವಳನ್ನು ಕಾಣಬೇಕು. ತಂದೆ–ಪತಿ ಮೊದಲಾದವರ ಸೇವೆ ಮಾಡುವ 'ದೇವಿ' ಯೆಂದೂ, ಮಕ್ಕಳನ್ನು ಪ್ರೀತಿಯಿಂದ ಶುಶ್ರೂಷೆಗೈಯುವ ವಾತ್ಸಲ್ಯಮಯಿ ಜಗನ್ಮಾತೆಯೆಂದೂ ಗುರುತಿಸಬೇಕು. ವ್ಯಕ್ತಿ, ಸಮಾಜ, ಪರಿವಾರ, ಸಮಾಜ, ದೇಶ, ಜಗತ್ತಿಗೆ ಎಲ್ಲರಿಗೂ ಅವರವರ ಪಾಲನ್ನು ನೀಡುವ ಭಾರತೀಯ ನಾರಿ ಯಾರಲ್ಲೂ ಯಾವುದನ್ನೂ ಕೈಚಾಚಿ ಬೇಡುವ ಅಗತ್ಯವಿಲ್ಲ. ಸೃಷ್ಟಿಯ ನಿಯಮದಂತೆ ಸ್ತ್ರೀಪುರುಷರ ಅಂಗರಚನೆಯಲ್ಲಿ ಭೇದವಿರುವುದರಿಂದ ಅವರಿಗೆ ಪ್ರತ್ಯೇಕ

ಮಹತ್ವವಿದ್ದರೂ ಈ ಎರಡೂ ಶಕ್ತಿಗಳೂ ಪರಸ್ಪರ ಪೂರಕ. ಒಬ್ಬರು ಇನ್ನೊಂದು ಕ್ಷೇತ್ರವನ್ನು ಅತಿಕ್ರಮಿಸಿದರೆ ಅಸಫಲತೆ ನಿಶ್ಚಿತ.

"ಅನ್ವಾಸಿತಮರುಂಧತ್ಯಾ ಸ್ವಾಹಯೇವ ಹವಿರ್ಭುಜಂ" ಎಂದು ರಘುವಂಶದ ಮೊದಲನೇ ಸರ್ಗದಲ್ಲಿ ವಸಿಷ್ಠರಿಗೆ ಸರಿಸಮನಾಗಿ ಅರುಂಧತಿ ಯಾಜ್ಞಿಕ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ವರ್ಣನೆಯಿದೆ. ಸ್ತ್ರೀ ಸಮಾನತೆಗೆ, ಸ್ತ್ರೀ ಶಿಕ್ಷಣಕ್ಕೆ ಇದಕ್ಕಿಂತ ಉತ್ತಮ ಉದಾರಹರಣೆ ಸಿಗಲಾರದು. ಸ್ತ್ರೀಯನ್ನು ಪತ್ನೀ ರೂಪದಲ್ಲಿ, ಮಾತೃರೂಪದಲ್ಲಿ, ಪತಿವ್ರತೆಯ ರೂಪದಲ್ಲಿ ಕಾಣದೆ ಕೇವಲ ಕಾಮ ಪಿಪಾಸೆಯಿಂದ ಉಪಭೋಗ್ಯಳಾಗಿ ಕಾಣುವುದೇ ಭಾರತದ ಇಂದಿನ ಆಧ್ಯಾತ್ಮಿಕ ಅವನತಿಗೆ ಕಾರಣವಾಗಿದೆ.

ಪಾರ್ವತಿಯ ಮುಂಗುರುಳಲ್ಲಿ ಪಾರಿಜಾತದ ಮಾಲೆಯಿದ್ದರೆ, ಶಿವ ರುಂಡಮಾಲಾಧರ, ಪಾರ್ವತಿ ದಿವ್ಯಾಂಬರಧಾರಿಣಿಯಾಗಿದ್ದರೆ, ಶಿವ ದಿಗಂಬರ– ಆದರೂ ಶಿವಪಾರ್ವತಿಯರು ಆದರ್ಶ ದಂಪತಿಗಳು, ಅರ್ಧನಾರೀಶ್ವರರು, ಏಕದೇಹಿಗಳು. ಭಾರತಿಯ ಮಹಿಳೆಗೆ ಆಕೆಯ ಸಹನೆ, ವಾತ್ಸಲ್ಯ, ಕ್ಷಮಾಶೀಲತೆ, ಔದಾರ್ಯ, ತ್ಯಾಗ ಮೊದಲಾದ ಆದರ್ಶ ಗುಣಗಳಿಂದ ಸ್ವಾಭಾವಿಕವಾಗಿ ಗೌರವಯುತವಾದ ಉನ್ನತ ಸ್ಥಾನ ದೊರಕಿದೆಯೇ ಹೊರತು ಸಹಜ ಪ್ರಾಪ್ತವಾದ ಅದನ್ನು ಪಡೆಯಲು ಅವಳು ಯಾವುದೇ ಸಂಘರ್ಷದ ಹಾದಿಯನ್ನು ತುಳಿಯಲಿಲ್ಲ.

ವೇದ ಸಂದೇಶ

ಸಮಸ್ತ ಜಗತ್ತೇ ನಿದ್ರಿಸುತ್ತಿದ್ದ ಆ ಕಾಲದಲ್ಲೂ ಭಾರತ ಎಚ್ಚರವಾಗಿದ್ದು ತನ್ನ ಜ್ಞಾನ ಪ್ರಭೆಯನ್ನು ಪಸರಿಸುತ್ತಿತ್ತೆಂದು ನಾವು ಈಗಲೂ ಹೆಮ್ಮೆಯಿಂದ ಬೀಗುತ್ತಿದ್ದೇವೆ. ನಮ್ಮ ಆ ಜ್ಞಾನದೀವಿಗೆಯ ಮತ್ತೊಂದು ಹೆಸರೇ 'ವೇದಗಳು' 'ವೇದೋಽಖಿಲೋ ಧರ್ಮ ಮೂಲಂ" ಎಂಬ ಸ್ಮೃತಿ ವಾಕ್ಯಕ್ಕೆ

ಸಮಸ್ತ ಧರ್ಮಗಳಿಗೆ ಸಂಸ್ಕೃತಿಗೆ, ಆಚಾರವಿಚಾರಗಳಿಗೆ 'ನಮ್ಮ ವೇದಗಳೇ ಆಧಾರ' ಎಂಬ ವಿಸ್ತೃತವಾದ ಅರ್ಥವ್ಯಾಪ್ತಿಯಿದೆ. ಯಹೂದ್ಯರು, ಕ್ರೈಸ್ತರು, ಮುಸ್ಲಿಮರೇ ಮೊದಲಾದಂತೆ ಜಗತ್ತಿನ ಪ್ರಾಯಶಃ ಎಲ್ಲ ಮತಾನುಯಾಯಿಗಳೂ ತಮ್ಮ ಧರ್ಮಗ್ರಂಥಗಳಿಗೆ ದೈವತ್ವವನ್ನು ಆರೋಪಿಸುವುದು ರೂಢಿ. ಹಾಗೆಯೇ ವೇದಗಳೂ 'ಅಪೌರುಷೇಯ' ಎಂದು ಹೇಳಿಸಿಕೊಳ್ಳುತ್ತವೆ.

"ಯಾರೂ ಯಾರಿಗೂ ಹೊಸ ವಿಜ್ಞಾನವನ್ನು ಕಲಿಸಲಾರ, ಆದರೆ ಮರೆತಿರುವ ಜ್ಞಾನವನ್ನು ನೆನಪಿಗೆ ತರುವುದಷ್ಟೆ ಗುರುವಿನ ಕೆಲಸ" ಎಂಬುದು ಸಾಕ್ರೇಟಿಸ್‌ನ ಉಕ್ತಿ. ಕಾಲ ಮತ್ತು ಪರಿಸರದ ಒತ್ತಡದಿಂದ ಇನ್ನಿತರ ಪ್ರಾಣಿಗಳಂತೆ ಮನುಷ್ಯನೂ ಸಹ ಜ್ಞಾನ ಸ್ವಭಾವ ಮತ್ತು ಶಕ್ತಿಗಳನ್ನು ಜನ್ಮ ಸಹಜವಾಗಿ ಪಡೆಯುತ್ತಾನೆ. ಸಂತ ತುಕಾರಾಮ,

ಮಹಾತ್ಮಾ ಕಬೀರ, ಸರ್ವಜ್ಞ ಕವಿ ಮೊದಲಾದ ಮಹನೀಯರು ಸಾಂಪ್ರದಾಯಿಕ ಶಿಕ್ಷಣವನ್ನು ಪಡೆಯದೆಯೂ ತತ್ವಜ್ಞಾನಿಗಳಾದಂತೆ, ಹಿಸ್ನಾಟಿಸಂಗೊಳಗಾದ ವ್ಯಕ್ತಿ ಮಾಂತ್ರಿಕನ ಸಂದೇಶದಂತೆ ಅದೇ ಮಾಂತ್ರಿಕನ ಭಾಷೆಯನ್ನು ಅರ್ಥೈಸಿಕೊಂಡು ವ್ಯವಹರಿಸುವಂತೆ, ಪ್ರಾಚೀನ ಮಹರ್ಷಿಗಳು ನಿರಂತರ ಚಿಂತನೆಯಿಂದ, ಏಕಾಗ್ರತೆ ಯಿಂದ, ಅಂತಃಕರಣವನ್ನು ಜಾಗ್ರತಗೊಳಿಸಿ, ಸ್ವಂತ ಸಂಕಲ್ಪ ಶಕ್ತಿಯಿಂದ ಮಂತ್ರ ದ್ರಷ್ಟಾರರಾದರು. ಈ ಮಂತ್ರಗಳು ಮಂದೆ ಋಷಿ ಪ್ರಣೀತವೆಂದು ಪ್ರಚಲಿತವಾದುವು.

ಮೇಲೆ ಪ್ರಸ್ತಾಪಿಸಿದಂತೆ, ಈ ವೇದಗಳಲ್ಲಿ ರಾಷ್ಟ್ರೀಯ ಭಾವೈಕ್ಯ, ಸರ್ವಸಮಾನತೆ, ಪಶು–ಸಸ್ಯ ಸಮೃದ್ಧಿ ಮೊದಲಾದ ಉದಾತ್ತ ಭಾವನೆಗಳು ಅಡಕವಾಗಿವೆ.

ದೇಶಪ್ರೇಮವನ್ನು ಕುರಿತಂತೆ ಯಜುರ್ವೇದದ ಒಂದು ಮಂತ್ರದ ಭಾವಾರ್ಥ ಹೀಗಿದೆ

"ನನ್ನ ಈ ಭಾರತ ವರ್ಷ ಇಡೀ ಜಗತ್ತಿನಲ್ಲಿ ನನಗೆ ಪ್ರಿಯವಾದದು. ಓ ದೇವರೆ, ಇದರ ಹಿರಿಮೆಯನ್ನು ಕಾಪಾಡು".

"ಈ ದೇಶವನ್ನು ರಕ್ಷಿಸುವವರು ಸರಿಯಾದ ಆಯುಧಗಳನ್ನು ಹೊಂದಿ ಗುರಿ ಸಾಧಕರಾಗಿರಲಿ. ಇಲ್ಲಿನ ಹಸುಗಳು ಕ್ಷೀರ ಪ್ರವಾಹವನ್ನು ಹರಿಸಲಿ. ಎತ್ತುಗಳು ಹೆಚ್ಚು ಭಾರ ಹೊರಲು ಸಮರ್ಥವಾಗಲಿ. ಕುದುರೆಗಳು ಕಠಿಣ ಮಾರ್ಗದಲ್ಲೂ ವಾಯು ವೇಗದಿಂದ ಸಂಚರಿಸಲಿ. ಪತಿವ್ರತೆಯರೂ ಸದ್ಗುಣಿಗಳೂ ರೂಪಸಿಯರೂ ಆದ ತರುಣಿ ಸ್ತ್ರೀಯರು ರಥಾರೂಢರಾದ ವೀರಯೋಧರ ಗುಣಗಾನ ಮಾಡಿ ದಿಂಗತದಲ್ಲಿ ಪ್ರತಿಧ್ವನಿಸಲಿ. ಯಜ್ಞ ಯಾಗಾದಿಗಳು ನಿರಂತರ ನಡೆಯಲಿ. ತರುಣರು ಸುಶಿಕ್ಷಿತರೂ, ವಿಚಾರಶೀಲರೂ, ಸಭ್ಯರೂ, ಸುದೃಢರೂ ಆಗಿ ಭವ್ಯ ರಾಷ್ಟ್ರ ನಿರ್ಮಾಣದ ಶಕ್ತಿ ಪಡೆಯಲಿ. ಸಕಾಲದಲ್ಲಿ ಮಳೆಯಾಗಲಿ. ಅನ್ನ ಸಮೃದ್ಧಿಯಾಗಲಿ. ಸಸ್ಯಗಳಲ್ಲಿ ಫಲಗಳು ಹೇರಳವಾಗಿ ಮಾಗಲಿ, ನಮಗೆಲ್ಲರಿಗೂ ಕ್ಷೇಮವಾಗಲಿ".

ಇಂತಹ ಆದರ್ಶ ಉದಾತ್ತಭಾವನೆಗಳನ್ನು ಸಾರುವ ಸಾಹಿತ್ಯ ಜಗತ್ತಿನಲ್ಲಿ ಬೇರೊಂದಿಲಾರದು.

ಇದೇ ಅರ್ಥವನ್ನು ಧ್ವನಿಸುವ ಒಂದು ಶ್ಲೋಕ ಹೀಗಿದೆ.

ಕಾಲೇವರ್ಷತು ಪರ್ಜನ್ಯಃ ಪೃಥಿವೀ ಸಸ್ಯಶಾಲಿನೀ ।
ದೇಶೋಯಂ ಕ್ಷೋಭ ರಹಿತಃ ಸಜ್ಜನಾಃ ಸಂತು ನಿರ್ಭಯಾಃ॥

ಇಂದು ಸಕಾಲಿಕ ಮಳೆ ತೀರಾ ಅಗತ್ಯ. ಜಲಸಮೃದ್ಧಿಯಿಲ್ಲದೇ ಬದುಕಿನ ಅನಿವಾರ್ಯತೆಯೆನಿಸಿದ ವಿದ್ಯುತ್ತಿನ ಅಭಾವದಿಂದ ಜನ ಕಂಗಾಲಾಗಿದ್ದಾರೆ, ರಾಜಕೀಯ, ನೈಸರ್ಗಿಕ, ಆರ್ಥಿಕ ಕ್ಷೋಭೆಯಿಂದ ತಲ್ಲಣಿಸುತ್ತಿದ್ದಾರೆ. ಸಜ್ಜನರಿಗೆ ಕಾಲವಿಲ್ಲ, ವೈಜ್ಞಾನಿಕ ಸಾಧನಗಳಿಂದ ಸುಖ ಸಿಗುತ್ತಿಲ್ಲ.

ಆದುದರಿಂದ ವೇದಗಳಲ್ಲಿ ಉಕ್ತವಾದ ಸಂದೇಶಗಳನ್ನು ಗ್ರಹಿಸಿ, ಧರ್ಮಮಾರ್ಗದಲ್ಲಿ ಪ್ರವೃತ್ತರಾಗಿ ಸುಖ–ಸಂಪತ್ತನ್ನು ಪಡೆಯಬೇಕು.

ಧರ್ಮ

"ಧರ್ಮೋ ರಕ್ಷತಿ ರಕ್ಷಿತಃ" ನಾವು ಧರ್ಮವನ್ನು ರಕ್ಷಿಸಿದರೆ ಅದೇ ಧರ್ಮ ನಮ್ಮನ್ನು ರಕ್ಷಿಸುತ್ತದೆ– ಎಂಬುದು ಆರ್ಯೋಕ್ತಿ. ನಾವು 'ಧರ್ಮ' ಮತ್ತು 'ಮತ' ವನ್ನು ಒಂದಾಗಿ ಭಾವಿಸಿ ಗೊಂದಲದಲ್ಲಿ ಬೀಳುವುದುಂಟು. 'ಧರ್ಮ' ವೇ ಬೇರೆ. 'ಮತ' ವೇ ಬೇರೆ. 'ಮತ' ವೆಂಬುದು ಅವರವರ ನಂಬಿಕೆಗೆ ಸಂಬಂಧಿಸಿದುದು.

'ಧರ್ಮ' ಎಂದರೇನು? 'ಧ್ರಿಯತೇ' ಇತಿ ಧರ್ಮಃ" ಎಂದು ಈ ಧರ್ಮ ಎಂಬ ಪದದ ವ್ಯುತ್ಪತ್ತಿಯನ್ನು ಹೇಳಲಾಗುತ್ತದೆ. ಮನುಷ್ಯನನ್ನು ಆತನ ಮಾನವೀಯ ಗುಣಗಳಿಂದ, 'ಮನುಷ್ಯತ್ವ' ದಿಂದ ಕೆಳಕ್ಕೆ ಬೀಳದಂತೆ ಎತ್ತಿ ಹಿಡಿಯುವುದೇ ಧರ್ಮ. ಇದನ್ನು ವ್ಯಾಖ್ಯಾನಿಸುವುದು ಬಹಳ ಕಷ್ಟ. ಏಕೆಂದರೆ ಇದರ ವ್ಯಾಪಕತೆ ಬಹಳ ವಿಸ್ತಾರವಾದುದು. ಆದ್ದರಿಂದ ಇದೇ ಧರ್ಮ ಎಂದು ನಿರ್ದಿಷ್ಟವಾಗಿ ಹೇಳಲಾಗದು. ವ್ಯಕ್ತಿ, ಕಾಲ, ಗುಣಗಳನ್ನನುಸರಿಸಿ ಧರ್ಮದ ಸ್ವರೂಪವನ್ನು ಪ್ರತ್ಯೇಕವಾಗಿ ವ್ಯಾಖ್ಯಾನಿಸಬೇಕು. 'ಮಾನವ ಧರ್ಮ', ಪಶುಧರ್ಮ, ಪಕ್ಷಿಧರ್ಮ, ಚೋರಧರ್ಮ, ಸ್ತ್ರೀಧರ್ಮ, ಪುರುಷಧರ್ಮ, – ಹೀಗೆ ಧರ್ಮದ ಜಾಲ ಸಮಸ್ತ ಜಗತ್ತನ್ನು ಆವರಿಸಿದೆ.

ವೇದವ್ಯಾಸರು ವಿಷಾದದಿಂದ ಹೇಳುತ್ತಾರೆ

ಊರ್ಧ್ವ ಬಾಹುರ್ವಿರೋಮ್ಯೇಷಃ ನ ಹಿ ಕಶ್ಚಿತ್ ಶೃಣೋತಿ ಮಾಮ್

ಧರ್ಮಾದರ್ಥಶ್ಚ ಕಾಮಶ್ಚ ಸಕಿಮರ್ಥಂ ನ ಸೇವ್ಯತೇ ॥

(ಪುರುಷಾರ್ಥ ಚತುಷ್ಟಯಗಳಲ್ಲಿ ಧರ್ಮದಿಂದಲೇ ಅರ್ಥಕಾಮಗಳು ಸಿದ್ಧಿಸುತ್ತವೆಂದು ತೋಳುಗಳನ್ನೆತ್ತಿ ಕೂಗಿದರೂ ಯಾರೂ ಕೇಳುವುದಿಲ್ಲವೆ?)–

ವೇದಗಳನ್ನು ಸಮಗ್ರವಾಗಿ, ಕ್ರಮವಾಗಿ ಸಂಪಾದಿಸಿದ, ಪಂಚಮ ವೇದವೆಂಬ ಮಹಾಭಾರತದಂತಹ ಮೇರುಕೃತಿಯನ್ನು ಸಾಹಿತ್ಯ ಪ್ರಪಂಚಕ್ಕೆ ಕೊಡುಗೆಯಾಗಿ ಅರ್ಪಿಸಿದ ವೇದವ್ಯಾಸರ ಈ ಕೊರಗು ಎಷ್ಟು ಅರ್ಥಪೂರ್ಣ?

ದಯೆಯೇ ಧರ್ಮದ ಮೂಲವಯ್ಯಾ, ಎಂದು ಬಸವಣ್ಣನವರು ಹೇಳುವಂತೆ, ಜಗತ್ತಿನ ಪ್ರಾಣಿವರ್ಗದಲ್ಲಿ ಅತಿಶ್ರೇಷ್ಠನೆನಿಸಿದ ಮನುಷ್ಯ ಇತರ ಜೀವಿಗಳ ಮೇಲೆ ತೋರಿಸುವ ದಯೆಯೇ ಧರ್ಮದ ಮೂಲ.

ಮನು ಮಹರ್ಷಿಗಳು ಧರ್ಮವನ್ನು ಹೀಗೆ ನಿರೂಪಿಸುತ್ತಾರೆ "ಅಹಿಂಸಾ ಸತ್ಯಮಸ್ತೇಯಂ ಶೌಚಮಿಂದ್ರಿಯ ನಿಗ್ರಹಃ"

ಬೌದ್ಧರೂ ಜೈನರೂ ಹೇಳುವಂತೆ ಅಹಿಂಸೆಯೇ ಮೊದಲ ಧರ್ಮ. ಸತ್ಯವಾದಿತ್ವ, ಕಳ್ಳತನ ಮಾಡದಿರುವುದು, ಅಂತರಂಗ ಬಹಿರಂಗ ಶುದ್ಧಿ, ಇಂದ್ರಿಯಗಳ ಹತೋಟಿ ಇವೇ ಧರ್ಮದ ಸಾರ.

ಕಳಬೇಡ, ಕೊಲ ಬೇಡ, ಹುಸಿಯ ಮಡಿಯಲು ಬೇಡ, ಅನ್ಯರಿಗೆ ಅಸಹ್ಯಪಡಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ ಎಂಬ ಬಸವಣ್ಣನವರ ವಚನದಲ್ಲಿ 'ಧರ್ಮ'ದ ರಹಸ್ಯ ಅಡಗಿದೆ.

ಈ 'ಧರ್ಮ' ದ ಮೂಲ ಯಾವುದು?

'ವೇದೋ ऽಖಿಲೋ ಧರ್ಮ ಮೂಲಂ', "ತದ್ವಿದಾಂ ಚ ಸ್ಮೃತಿಶೀಲೇ" ಗೌತಮ ಧರ್ಮ ಸೂತ್ರಗಳು.

ಭಾರತೀಯರ ಧರ್ಮಕ್ಕೆ ವೇದಗಳೇ ಮೂಲ, ವೇದಾಧ್ಯಯನ ಸಂಪನ್ನರ, ಸಾಧು ಸಂತರ ಸದಾಚರಣೆಯೇ ಧರ್ಮದ ಮೂಲ. **"ಮಹಾಜನೋ ಯೇನಗತಃ ಸ ಪಂಥಾಃ"** ಮಹಾಪುರುಷರು ನಡೆದದಾರಿಯೇ ಧರ್ಮ, ಅದೇ ಆದರ್ಶ. ರಾಮಕೃಷ್ಣ ಪರಮಹಂಸ, ಸ್ವಾಮಿವಿವೇಕಾನಂದ, ರಮಣ ಮಹರ್ಷಿ, ಮಹಾತ್ಮಾಗಾಂಧಿ, ಏಸುಕ್ರಿಸ್ತ, ಮಹಮ್ಮದ್ ಪೈಗಂಬರ್, ಸರ್ವಜ್ಞ, ಬಸವಣ್ಣನಂತಹ ಮಹಾಮಹಿಮರ ನಡೆ–ನುಡಿಯೇ ಧರ್ಮ.

ಅಧರ್ಮಾಚರಣೆಯಿಂದಲೂ ಏಳ್ಗೆ ಪಡೆದ ರಾವಣ–ದುರ್ಯೋಧನರಂತಹವರ ಉದಾಹರಣೆಗಳೂ ನಮ್ಮ ಸಾಹಿತ್ಯ ಲೋಕದಲ್ಲಿವೆ. ಪುಲಸ್ತ್ಯ ಬ್ರಹ್ಮನ ವಂಶಜ, ವೇದಾಧ್ಯಯನ ಸಂಪನ್ನ, ದೇವತೆಗಳನ್ನು ಜಯಿಸಿದ ಮಹಾಬಲಶಾಲಿ, ಹತ್ತು ತಲೆ–ಇಪ್ಪತ್ತು ತೋಳುಗಳುಳ್ಳ ರಾವಣ ಸುವರ್ಣನಗರಿಯೆನಿಸಿದ ಲಂಕೆಯನ್ನಾಳಿದ. ಸುರ ಸುಂದರಿಯೆಂದು ವಾಲ್ಮೀಕಿಗಳಿಂದ ವರ್ಣಿಸಲ್ಪಟ್ಟ ಮಂಡೋದರಿ ಈತನ ಪಟ್ಟ ಮಹಿಷಿ. ಇಷ್ಟೆಲ್ಲ ಮೆರೆದಾಡಿದ ರಾವಣ–ಪರಸತೀ ವ್ಯಾಮೋಹದಿಂದಾಗಿ, ಹುಲುಮಾನವನಾದ. ರಾಮನಿಂದ, ಅನಾಗರಿಕರಾದ ವಾನರರಿಂದ, ಸರ್ವನಾಶ ಹೊಂದಿದ. ಒಮ್ಮೆ ಅಭಿವೃದ್ಧಿ ಉತ್ತುಂಗ ಶಿಖರಕ್ಕೇರಿ ಅಧಃಪತನ ಹೊಂದುವ ಅಧರ್ಮಾಚರಣೆಗೆ ಇದು ಒಂದು ಉದಾಹರಣೆ.

ಇನ್ನೊಂದು ಉದಾಹರಣೆ ದುರ್ಯೋಧನನದು. ಹಸ್ತಿನಾವತಿಯ ಅಧಿಕಾರವನ್ನು ತನ್ನದಾಗಿಸಿಕೊಂಡು, ಪಾಂಡವರನ್ನು ಹೊರದಬ್ಬಿ, ಗದ್ದುಗೆಯಲ್ಲಿ ಮೆರೆದ. ಭೀಷ್ಮ, ದ್ರೋಣ, ಕರ್ಣ, ಶಲ್ಯ ಮೊದಲಾದ ಮಹಾಪರಾಕ್ರಮಿಗಳಿಂದ ಕೂಡಿದ ಹನ್ನೊಂದು ಅಕ್ಷೋಹಿಣೀ ಬಲದೊಡನೆ ಏಳು ಅಕ್ಷೋಹಿಣೀ ಸೈನ್ಯ ಬಲವುಳ್ಳ ಪಾಂಡವರ ಮೇಲೆ ಯುದ್ಧ ಸಾರಿದ ಪರಿಣಾಮ ಎಲ್ಲರಿಗೂ ತಿಳಿದಿದೆ. **"ಯತೋ ಧರ್ಮಃ, ತತೋ ಜಯಃ"** ದುರ್ಯೋಧನನ ಅಪರಾಧವೇನು? ತಂದೆಯ ಅಧಿಕಾರವನ್ನು ತನ್ನದೆಂದು ಸ್ವಯಂ ಘೋಷಿಸಿಕೊಂಡ ಅಧಿಕಾರ ಲಾಲಸೆ, ನಾದಿನಿಯಾದ ದ್ರೌಪದಿಗೆ ತುಂಬಿದ ಸಭೆಯಲ್ಲಿ ಮಾಡಿದ ಅಪಮಾನ, ದಾಯಾದಿಗಳ ಹಕ್ಕಿನ ರಾಜ್ಯವನ್ನು ನುಂಗಿದುದು,–ಇಷ್ಟೆ ಅಲ್ಲವೆ?

ಹೀಗೆ 'ಇದೇ ಧರ್ಮ' ಎಂದು ನಿರೂಪಿಸುವುದು ಕಷ್ಟವಾದರೂ ಭಾರತೀಯರಾದ ನಾವು ಪ್ರಾಚೀನ ಸಾಹಿತ್ಯಗಳನ್ನೋದಿಯೋ, ಮಹಾಪುರುಷರ ಆದರ್ಶಗಳನ್ನು ಸರಿಸಿಯೋ ನಮಗರಿವಿಲ್ಲದೆಯೇ ಧರ್ಮ ಪಕ್ಷಪಾತಿಗಳಾಗಿ ಧರ್ಮ ಮಾರ್ಗದಲ್ಲಿಯೇ ನಡೆಯುತ್ತ ಬಂದಿದ್ದೇವೆ.

ಯತ್ರ ನಾರ್ಯಸ್ತು ಪೂಜ್ಯಂತೇ

ಯತ್ರನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ । ಯತ್ರೈತಾಸ್ತುನ ಪೂಜ್ಯಂತೇ ಸರ್ವಾಸ್ತಾಃ ವಿಫಲಾಃ ಕ್ರಿಯಾಃ । ಎಂಬ ಮನುಸ್ಮೃತಿಯ ಶ್ಲೋಕದಲ್ಲಿ ಪ್ರಾಚೀನ ಕಾಲದ ಸ್ತ್ರೀಯರ ಬಗೆಗಿನ ಗೌರವ ವ್ಯಕ್ತವಾಗುತ್ತದೆ. ನಾರಿಯರಿಗೆ ಗೌರವವಿರುವಲ್ಲಿ ದೇವತೆಗಳು ನಲಿಯುತ್ತಾರೆ, ಸ್ತ್ರೀಯರಿಗೆ ಗೌರವ ಸಲ್ಲದ ಎಲ್ಲ ಕಾರ್ಯಗಳೂ ವಿಫಲವಾಗುತ್ತವೆ.

'ಮಾತೃದೇವೋಭವ' ಎಂಬ ತೈತ್ತರೀಯೋಪನಿಷತ್ತಿನ ಮಂತ್ರ ತಾಯಿಯನ್ನು ದೇವರೆಂದು ತಿಳಿಯುವಂತೆ ಉಪದೇಶಿಸುತ್ತದೆ. ಜಗತ್ತಿನ 'ಆದಿಶಕ್ತಿ' ಸ್ತ್ರೀ ವಾಚಕ. ವೈದಿಕ ಕಾಲದ ಮೈತ್ರೇಯಿ, ಗಾರ್ಗೇಯಿ ಮೊದಲಾದ ವಿದುಷಿಯರು ಮಂತ್ರದ್ರಷ್ಟಾರರಾದ ಮಹರ್ಷಿಗಳೊಡನೆ ಶಾಸ್ತ್ರ ವಿಚಾರವಾಗಿ ಚರ್ಚೆ ನಡೆಸುವಷ್ಟು ಜ್ಞಾನಿಗಳಾಗಿದ್ದರು; ಮಹರ್ಷಿಗಳ ಸಮಾನ ಗೌರವಕ್ಕೆ ಅರ್ಹರಾಗಿದ್ದರು. 'ಶ್ರದ್ಧಾ' ಮತ್ತು 'ಮನು' ವಿನಿಂದ ಸೃಷ್ಟಿ ಪ್ರಾರಂಭವಾಯಿತೆಂದೂ ಹೇಳುತ್ತಾರೆ. ಪ್ರಾಚೀನ ಮಹಾಕಾವ್ಯಗಳಲ್ಲಿ ಸ್ತ್ರೀವರ್ಣನೆಗಿರುವ ಪ್ರಾಶಸ್ತ್ಯ ಪುರುಷ ವರ್ಣನೆಗಿಲ್ಲ. ರಾಮಾಯಣ, ಮಹಾಭಾರತ ಮೊದಲಾದ ಮಹಾಕಾವ್ಯಗಳ ರಚನೆಯ ಮೂಲಪ್ರೇರಣೆಯ ಹಿನ್ನೆಲೆಯಲ್ಲಿ ಸೀತೆ ಮತ್ತು ದ್ರೌಪದಿಯರಂತಹ ಆದರ್ಶ ಮಹಿಳೆಯರಿದ್ದಾರೆ. ಹೀಗೆ ಪಿತೃ ಪ್ರಧಾನವಾದ ಕೌಟುಂಬಿಕ ವ್ಯವಸ್ಥೆಗೂ ಪುರುಷ ಪ್ರಧಾನವಾದ ಸಾಮಾಜಿಕ ವ್ಯವಸ್ಥೆಗೂ ಪ್ರಾಚೀನ ಕಾಲದಿಂದಲೂ ಹೊಂದಿಕೊಂಡಿರುವ ನಾವು ಮಹಿಳೆಗೆ ಅತ್ಯಂತ ಗೌರವದ ಸ್ಥಾನ ನೀಡಿದ್ದೇವೆ.

ಮಧ್ಯಕಾಲದಲ್ಲಿ ಜೀಜಾಬಾಯಿ, ಲಕ್ಷ್ಮೀಬಾಯಿ, ಓಬವ್ವ, ಚನ್ನಮ್ಮ ಮೊದಲಾದ ವೀರವನಿತೆಯರೂ, ಮೀರಾಬಾಯಿ, ಅಕ್ಕಮಹಾದೇವಿ ಮೊದಲಾದ ಭಕ್ತ ಸಂನ್ಯಾಸಿನಿಯರೂ ಹೊನ್ನಮ್ಮ ಮೊದಲಾದ ಕವಯಿತ್ರಿಗಳೂ ಸ್ತ್ರೀ ಸಮುದಾಯದ ತಿಲಕಪ್ರಾಯರಾಗಿ, ಗೌರವಾದರಗಳಿಗೆ ಪಾತ್ರರಾಗಿ ಮೆರೆದಿದ್ದಾರೆ.

ಆಧುನಿಕ ಲಲನೆಯರು ಶೈಕ್ಷಣಿಕ, ರಾಜಕೀಯ, ತಾಂತ್ರಿಕ, ವೈದ್ಯಕೀಯ, ಸೈನ್ಯ ಮೊದಲಾದಂತೆ ಬದುಕಿನ ಸಮಸ್ತ ಕ್ಷೇತ್ರಗಳಲ್ಲೂ ತಮ್ಮ ಪ್ರತಿಭೆಯನ್ನು ಮೆರೆದು ಪುರುಷರನ್ನು ಹಿಮ್ಮೆಟ್ಟಿಸುವಷ್ಟು ಮುಂದುವರಿದಿದ್ದಾರೆ. ಮಹಾರಾಷ್ಟ್ರದ ಬೊಂಬಾಯಿ, ಪೂನಾ ಮೊದಲಾದ ಹಲವೆಡೆಗಳಲ್ಲಿ ಉಪನಯನ, ಮದುವೆ, ಹೋಮ–ಹವನಾದಿಗಳನ್ನು ಮಾಡಿಸಲು ಮಂತ್ರಜ್ಞೆಯರಾದ ಪುರೋಹಿತೆಯರ ವರ್ಗಗಳು ರೂಪುಗೊಳ್ಳುತ್ತಿವೆಯೆಂದೂ ಕೇಳಿಬರುತ್ತಿದೆ. ಅಂದಮೇಲೆ

ಪಿತಾ ರಕ್ಷತಿ ಕೌಮಾರೇ ಭರ್ತಾ ರಕ್ಷತಿ ಯೌವನೇ । ಸುತಾ ರಕ್ಷಂತಿ ವಾರ್ಧಕ್ಯೇ ನ ಸ್ತ್ರೀ ಸ್ವಾತಂತ್ರ್ಯಮರ್ಹತಿ ॥

(ಎಳವೆಯಲ್ಲಿ ತಂದೆ, ತಾರುಣ್ಯದಲ್ಲಿ ಪತಿ, ಮುಪ್ಪಿನಲ್ಲಿ ಮಕ್ಕಳ ರಕ್ಷಣೆಯಲ್ಲಿರುವ ಮಹಿಳೆಗೆ ಸ್ವಾತಂತ್ರ್ಯವಿಲ್ಲ) ಎಂಬ ಮನುಸ್ಮೃತಿಯ ವಚನ ತನ್ನ ಯಥಾರ್ಥತೆಯನ್ನೂ

ಔಚಿತ್ಯವನ್ನೂ ಈಗ ಕಳೆದುಕೊಂಡಿದೆ. ಪರಿಸರದ ಪ್ರಭಾವದಿಂದಲೋ, ಮಾನಸಿಕ ಒತ್ತಡದಿಂದಲೋ ಮಹಿಳೆಯರನ್ನು ಕಡೆಗಾಣಿಸುವ, ಶೋಷಿಸುವ ಪುರುಷರು ಇಲ್ಲವೇ ಇಲ್ಲವೆಂಬುದು ನನ್ನ ವಾದವಲ್ಲ. ಎಲ್ಲ ಪುರುಷರಿಂದ ಎಲ್ಲ ಮಹಿಳೆಯರ ಶೋಷಣೆ ನಡೆಯುತ್ತಿವೆ ಎಂಬ ಸಾರ್ವತ್ರೀಕರಣ (Generalisation)ಮಾತ್ರ ಅರ್ಥಹೀನ.

ಸ್ತ್ರೀ ಪುರುಷರು ಸಮಾನರೆ? ಅಲ್ಲ ಮತ್ತು ಹೌದು. ಸ್ತ್ರೀ ಧರ್ಮ, ಪುರುಷ ಧರ್ಮ ಒಂದಕ್ಕೊಂದು ಭಿನ್ನವಾಗಿರುವುದರಿಂದ ಇಬ್ಬರಲ್ಲಿ ಸರ್ವ ಸಮಾನತೆ ಎಂದೆಂದಿಗೂ ಸಾಧ್ಯವಿಲ್ಲ ಎಂಬುದು ವೈಜ್ಞಾನಿಕ ಸತ್ಯ. ಸವಲತ್ತುಗಳ ದೃಷ್ಟಿಯಿಂದ ಮಾತ್ರ ಇಬ್ಬರೂ ಸಮಾನರಾಗಿರಬೇಕೆಂಬುದು ವ್ಯವಹಾರ ಧರ್ಮ. ಇದನ್ನು ಎಲ್ಲರೂ ಪಾಲಿಸಬೇಕು. ಸಹಸ್ರಾರು ವರ್ಷಗಳಿಂದ ಬೆಳೆದು ಬಂದ ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಬದಲಾಯಿಸಲು ಸಾಧ್ಯವಿಲ್ಲದಷ್ಟು ನಾವು ಪುರುಷ ಪ್ರಧಾನವಾದ ಕೌಟುಂಬಿಕ ವ್ಯವಸ್ಥೆಗೆ ಹೊಂದಿಕೊಂಡಿದ್ದೇವೆ. ವಯಸ್ಸು, ಆದಾಯ, ರೂಪ, ಎತ್ತರ, ಶೈಕ್ಷಣಿಕ ಅರ್ಹತೆ, ಸಾಮಾಜಿಕ ಸ್ಥಾನಮಾನ, ಬಲ–ಗಳಲ್ಲಿ ತನಗಿಂತ 'ಕಡಿಮೆ' ಯೆನಿಸುವ ಪುರುಷನನ್ನು ತನ್ನ ಬಾಳಸಂಗಾತಿಯಾಗಿ ಆರಿಸಿಕೊಳ್ಳಲು ಯಾವ ವಧುವೂ ಸಿದ್ಧಳಿದ್ದಾಳೆಂದು ನಿರೀಕ್ಷಿಸುವುದು ಮೂರ್ಖತನವಾದೀತು. ಎಲ್ಲದರಲ್ಲಿ ತನಗಿಂತ ಪುರುಷ ಮೇಲಿನವ ನಾಗಿರಬೇಕೆಂಬ ಔದಾರ್ಯ ಮತ್ತು ಸ್ವಯಂಪ್ರೇರಿತ ಸರ್ವ ಸಮರ್ಪಣಭಾವವೇ ಮಹಿಳೆಯನ್ನು ಭಾರತದಲ್ಲಿ ಅತ್ಯುನ್ನತ ಸ್ಥಾನಕ್ಕೇರಿಸಿದೆ.

ಶಿಕ್ಷಣ

"**ಶ್ರೀ ಗುರುಭ್ಯೋ ನಮಃ**" ಎಂದು ಗುರುವಂದನೆಯೊಂದಿಗೆ ಪ್ರಾಚೀನ ಕಾಲದ ಗುರುಕುಲದಲ್ಲಿ ಅಂದಿನ ಅಧ್ಯಯನ ಪ್ರಾರಂಭವಾಗುತ್ತಿತ್ತು. ಆಗಿನ ಶಿಕ್ಷಣದ ಕೇಂದ್ರ 'ಗುರು', ಗುರು ಬೋಧಿಸಬೇಕು, ಗುರುವಿಗೆ ವಿಧೇಯನಾಗಿ ಶಿಷ್ಯ ಅಧ್ಯಯನ ಮಾಡಬೇಕು. 'ಶಿಷ್ಯಸ್ತೇ ಹಂ ಶಾಧಿ ಮಾಂ ತ್ವಾಂ ಪ್ರಪನ್ನಂ' ಎಂಬ ಗೀತಾ ವಾಕ್ಯದಂತೆ ಶಿಷ್ಯ ಜಿಜ್ಞಾಸುವಾಗಿ ಗುರುವನ್ನು ಆಶ್ರಯಿಸಿ, ಆತನ ಅಂಕೆಯಲ್ಲಿದ್ದು ಕಲಿಯಬೇಕು. 'ಗು' ಕಾರ ಸ್ತ್ವಂಧಕಾರಃ ಸ್ಯಾತ್ 'ರು' ಕಾರ ಸ್ತನ್ನಿವರ್ತಕಃ" ಎಂಬ ಅರ್ಥಕ್ಕನುಗುಣವಾಗಿ ಗುರು ಶಿಷ್ಯನ ಅಜ್ಞಾನದ ಅಂಧಕಾರವನ್ನು ತೊಲಗಿಸಿ, ಆತನ ಹೃದಯ ದೇಗುಲದಲ್ಲಿ ಜ್ಞಾನಜ್ಯೋತಿಯನ್ನು ಬೆಳಗಿಸುವುದಲ್ಲದೆ ಆತನನ್ನೂ ಗುರುವನ್ನಾಗಿ ಮಾಡುತ್ತಿದ್ದ ಆತನಿಗೆ ಆಚಾರವನ್ನು ಬೋಧಿಸುವುದಲ್ಲದೆ ಸ್ವತಃ ಆಚರಣೆಯಿಂದ ಶಿಷ್ಯನನ್ನು ಪರಿಪೂರ್ಣ ಜ್ಞಾನಿಯನ್ನಾಗಿ ರೂಪುಗೊಳಿಸುವುದರಿಂದ 'ಆಚಾರ್ಯ' (ಆಚಿನೋತ್ಯಾಚಾರಾನ್, ಸ್ವಯಮಾಚರತಿ ಚ) ಎಂಬ ಹೆಸರು ಅನ್ವರ್ಥವಾಗಿತ್ತು. ಇಂತಹ ಗುರುವಿಗೆ ಶಿಷ್ಯ ಸ್ವಯಂ

ಪ್ರೇರಣೆಯಿಂದ ತನ್ನನ್ನು ತಾನೇ ಗುರುವಿಗೆ ಅರ್ಪಿಸಿಕೊಳ್ಳುತ್ತಿದ್ದ. ದಾಸರು ಇದನ್ನೇ 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂದು ಹಾಡಿದರು.

ನಾನಕ್‌ರವರು ಹೇಳುತ್ತಾರೆ.

"ಗುರುಗೋವಿಂದ್ ದೊಲೂ ಖಡ್ಯೆ ಕಾಕೇ ಲಾಗೌಪಾಈ,

.... **ಗುರುಗೋವಿಂದ್ ದಿಯೋ ಬತಾಈ।**

ಗುರು ಸನ್ನಿಧಿಯಲ್ಲೇ ಭಗವಂತನೂ ಪ್ರತ್ಯಕ್ಷನಾದರೆ ಮೊದಲು ಗುರುವಿಗೆ ಪ್ರಣಾಮ ಸಲ್ಲಿಸಬೇಕು. ಏಕೆಂದರೆ ಈ ಭಗವಂತನ ಅಸ್ತಿತ್ವ/ಸ್ವರೂಪಗಳನ್ನು ತಿಳಿಸುವವನು ಗುರು ವಲ್ಲವೆ? ಅಂದಿನ ಗುರುಕುಲದಲ್ಲಿ ಜಿತೇಂದ್ರಿಯನಾಗಿ ಬ್ರಹ್ಮಚರ್ಯದಲ್ಲಿದ್ದು ತನ್ನ ಅಭಿರುಚಿಗೆ ತಕ್ಕಂತೆ ಬದುಕಿಗೆ ಉಪಯುಕ್ತವೆನಿಸಿದ ಶಿಕ್ಷಣವನ್ನು ಪಡೆದ ಪ್ರತಿಯೊಬ್ಬನೂ ಧೈರ್ಯವಾಗಿ ಜೀವನವನ್ನೆದುರಿಸಲು ಸಮರ್ಥನಾಗಿದ್ದ. ವಿದ್ಯೆಯಿಂದ ವಿನಯವನ್ನೂ, ವಿನಯದಿಂದ ಯೋಗ್ಯತೆಯನ್ನೂ, ಯೋಗ್ಯತೆಯಿಂದ ಸಂಪತ್ತನ್ನೂ ಗಳಿಸಿ ಸುಖಜೀವನ ನಡೆಸುತ್ತಿದ್ದ. ಹೀಗೆ ಸುಖ ಜೀವನಕ್ಕೆ ಆಧಾರವೆನಿಸಿದ ವಿದ್ಯೆ ಪ್ರಾಚೀನ ಗುರುಕುಲಗಳಲ್ಲಿ ದೊರಕುತ್ತಿತ್ತು.

ಆದರೆ ಈಗ "ವಿದ್ಯಾರ್ಥಿ ಕೇಂದ್ರಿತ ಶಿಕ್ಷಣ ಪದ್ಧತಿಯಲ್ಲಿ ನಾವು ಎಲ್ಲೋ ಎಡವಿ ದ್ದೇವೆಯೇ ಎನಿಸುತ್ತದೆ. ತಂದೆ ಮಕ್ಕಳಂತಿರಬೇಕಿದ್ದ ಗುರುಶಿಷ್ಯರ ಮಧುರ ಸಂಬಂಧ ಕೆಟ್ಟಿದೆ. "ನಮ್ಮ ಕಾಲದಲ್ಲಿ ಹೀಗಿರಲಿಲ್ಲ" ಎಂದು ಅಜ್ಜ ನಮ್ಮ ತಂದೆಗೂ, ನಮ್ಮ ತಂದೆ ನಮಗೂ ಹೇಳಿದುದನ್ನೇ ನಾವು ನಮ್ಮ ಮಕ್ಕಳಿಗೂ, ಶಿಷ್ಯರಿಗೂ ಹೇಳುವಷ್ಟು ಕಾಲ ಬದಲಾಗುತ್ತಲೇ ಇದೆ. ಆಸನದಲ್ಲಿ ಕುಳಿತ ಗುರುಗಳು ಏಕಾಗ್ರತೆಯಿಂದ ನಿಂತು ಕೇಳುತ್ತಿರುವ ಶಿಷ್ಯನಿಗೆ ಉಪದೇಶಿಸುತ್ತಿದ್ದ ದೃಶ್ಯ ಬದಲಾಗಿ ಆರಾಮಾಸನದಲ್ಲಿ ಕುಳಿತು ಸಹ ವಿದ್ಯಾರ್ಥಿ–ವಿದ್ಯಾರ್ಥಿನಿಯರೊಂದಿಗೆ ಲಲ್ಲೆ ಹೊಡೆಯುತ್ತಿರುವ ಶಿಷ್ಯರೆದುರು ನಿಂತು ಕಂಠ ಶೋಷಣೆ ಮಾಡುವ ಬೋಧಕನ ದಯನೀಯ ಸ್ಥಿತಿ ಕಣ್ಣಿಗೆ ಕಟ್ಟುತ್ತಿದೆ.

ಶ್ರದ್ಧಾಪೂರ್ಣವಾದ ನಿರಂತರ ಅಧ್ಯಯನದಿಂದ ಎಂತಹ 'ದಡ್ಡನೂ ಬುದ್ಧಿವಂತ ನಾಗಬಲ್ಲನೆಂಬುದನ್ನು ಕಬೀರದಾಸರು ದೃಷ್ಟಾಂತದೊಂದಿಗೆ ಹೇಳುತ್ತಾರೆ.

ಕರತ್ ಕರತ್ ಅಭ್ಯಾಸ್ ತೇ ಜಡಮತಿ ಹೋತ್ ಸುಜಾನ್, ರಸರೀ ಆವತ್ ಜಾತ್ ತೇ ಸಿಲ್ ಪರ್ ಹೋತ್ ನಿಸಾನ್ ॥

ಹಗ್ಗದ ನಿರಂತರ ಉಜ್ಜುವಿಕೆಯಿಂದ ಕಲ್ಲೂ ಸವೆಯುವಂತೆ ಏಕಾಗ್ರತೆಯಿಂದ ಕೂಡಿದ ನಿರಂತರ ಅಧ್ಯಯನದಿಂದ ಎಂತಹ ದಡ್ಡನೂ ಬುದ್ಧಿವಂತನಾಗಲು ಸಾಧ್ಯ ಎಂಬುದು ಕಬೀರರ ಉಕ್ತಿಯ ಸಾರಾಂಶ.

ಹಾಗಾದರೆ ನಿರಂತರ ಅಧ್ಯಯನದಲ್ಲಿ ತಲ್ಲೀನರಾದ ವಿದ್ಯಾರ್ಥಿಗಳಿಗೂ ಇಂದಿನ ಶಿಕ್ಷಣದಲ್ಲಿ ಆಸಕ್ತಿ ಹುಟ್ಟದಿರಲು ಕಾರಣವಿರಬೇಕಲ್ಲ !

ಪ್ರಾಚೀನ ಗುರುಕುಲಗಳಲ್ಲಿ ಇದ್ದಂತೆ ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲದ ಅತಿಹೆಚ್ಚಿನ ಅನುಕೂಲತೆಗಳು ಇಂದಿನ ವಿದ್ಯಾರ್ಥಿಗಳಿಗಿವೆ. ವಿದ್ಯಾಲಯದಲ್ಲಿ ಕೂರಲು ಪೀಠಗಳು, ಬರೆಯಲು ಡೆಸ್ಕುಗಳು, ಮನೆಯಲ್ಲಿ ಮುದ್ದಿಸುವ ತಂದೆ ತಾಯಂದಿರು, ವಿದ್ಯುದ್ದೀಪ, ಅತಿ ಸಮೀಪದಲ್ಲೇ ವಿದ್ಯಾಲಯ, ಟಿ.ವಿ., ರೇಡಿಯೋ ಮೊದಲಾದಂತೆ ಮನರಂಜನೆಯ ಸಾಧನಗಳು, ಆಟೋಟಗಳಿಗೆ ವಿಪುಲಾವಕಾಶ–ಮೊದಲಾದ ಸವಲತ್ತುಗಳು ಹಿಂದಿನ ಗುರುಕುಲದ ವಿದ್ಯಾರ್ಥಿಗಳಿಗಿರಲಿಲ್ಲ. ಈ ಎಲ್ಲ ಅನುಕೂಲತೆಗಳ ನಡುವೆಯೂ ಇಂದಿನ ವಿದ್ಯಾರ್ಥಿಗಳಲ್ಲಿ ಅನಾಸಕ್ತಿ, ಅಸಫಲತೆ–ಏಕೆ?

ಸುಖ ಮತ್ತು ವಿದ್ಯೆ ಎರಡರಲ್ಲಿ ಯಾವುದಾದರೊಂದನ್ನು ಮಾತ್ರ ವಿದ್ಯಾರ್ಥಿ ಆಯ್ಕೆ ಮಾಡಿಕೊಳ್ಳಬೇಕು. ಇಂದಿನ 'ಸುಖ' ದ ವಾತಾವರಣವೇ ವಿದ್ಯಾರ್ಥಿಗಳ ಅಸಫಲತೆಗೆ ಕಾರಣವೆನ್ನೋಣವೆ? ಅಥವಾ ನೀರಸವಾದ ಪಠ್ಯವಸ್ತುವೆ? 'ಗುರಿ' ಯಿಲ್ಲದ ಶಿಕ್ಷಣ ಕ್ರಮವೆ? ತನಗೇ ಅರ್ಥವಾಗದ ವಿಷಯವನ್ನು ವಿದ್ಯಾರ್ಥಿಯ ತಲೆಗೆ ತುರುಕಲು ತಿಣುಕುವ ಕೆಲವು ಅಧ್ಯಾಪಕರೆ? ವಿದ್ಯಾರ್ಥಿಗಳನ್ನು ಸುಧಾರಣೆಯ ನೆಪದಲ್ಲಿ ಬಲಿಪಶುವನ್ನಾಗಿಸುವ ಕೆಲವು ರಾಜಕಾರಣಿಗಳೆ? ಅಂತೂ ಎಲ್ಲೋ ಎಡವಟ್ಟಾಗಿದೆ ಎಲ್ಲಿ?

ಗೃಹಿಣೀ

ಬೆಚ್ಚನಾ ಮನೆಯಾಗೆ। ವೆಚ್ಚಕ್ಕೆ ಹೊನ್ನಾಗೆ ಇಚ್ಚೆಯಾನವರಿವ ಸತಿಯಾಗೆ ಸ್ವರ್ಗಕ್ಕೆ ಕಿಚ್ಚುಹಚ್ಚೆಂದು ಸರ್ವಜ್ಞ ಹೇಳುತ್ತಾನೆ. ಅನುಕೂಲೆಯಾದ ಸತಿ ಸ್ವರ್ಗ ಸುಖಕ್ಕಿಂತ ಹೆಚ್ಚಿನ ಸುಖ ನೀಡಬಲ್ಲಳು. 'ಗೃಹಿಣೀ ಗೃಹಮುಚ್ಯತೇ' ಎಂಬುದು ಸಂಸ್ಕೃತದ ನುಡಿ. ಗೃಹಿಣಿಯೇ ಮನೆ. ತನ್ನ ಗಂಡನ–ಮನೆತನದ ಗೌರವಕ್ಕೆ, ಗಂಡನ ಆಯವ್ಯಯಗಳಿಗೆ, ಆಗುಹೋಗುಗಳಿಗೆ ಹೊಂದಿಕೊಂಡು ನಗುತ್ತ, ನಗಿಸುತ್ತ, ನಲಿಯುತ್ತಿರುವುದೇ ನಿಜವಾದ ಭಾರತೀಯ ಗೃಹಿಣಿಯ ಲಕ್ಷಣ.

ಸಂಸ್ಕೃತ ಚಂಪೂ ರಾಯಾಯಣದಲ್ಲಿ ಆದರ್ಶ ಗೃಹಿಣಿಯ ಲಕ್ಷಣಗಳನ್ನು ಪರಿಚಯಿಸುವ ಒಂದು ಶ್ಲೋಕವಿದೆ. ಸೀತೆಯನ್ನು ರಾವಣ ಕದ್ದೊಯ್ದ ನಂತರ ಆಕೆಯ ಆದರ್ಶವನ್ನು, ಗೃಹಿಣಿಯ ಲಕ್ಷಣಗಳನ್ನು ನೆನೆದು ಶ್ರೀರಾಮಚಂದ್ರ ಹೀಗೆ ಶೋಕಿಸುತ್ತಾನೆ.

ಆಧೌಸಿದ್ಧೌಷಧಿಂವಹಿತಾ ಕೇಲಿಕಾಲೇ ವಯಸ್ಯಾ ಪತ್ನೀ ತ್ರೇತಾಯಜನ ಸಮಯೇ ಕ್ಷತ್ರಿಯಾಣ್ಯೇವಯುದ್ಧೇ। ಶಿಷ್ಯಾ ದೇವದ್ವಿಜಪಿತೃ ಸಮಾರಾಧನೇ ಬಂಧು ರಾರ್ತೌ ಸೀತಾ ಸಾಮೇ ಶಿಶಿರಿತ ಮಹಾಕಾನನೇಕಾ ನಜಾತಾ॥

ಆಧಿ ಎಂದರೆ ಮಾನಸಿಕ ವ್ಯಥೆ. ಮನೋವ್ಯಥೆಯನ್ನು ಹೋಗಲಾಡಿಸುವ ಸಿದ್ಧೌಷಧವಾಗಿಯೂ, ರತಿ ಕ್ರೀಡೆಯಲ್ಲಿ ಗೆಳತಿಯಾಗಿಯೂ, ದೇವಪಿತೃ ಕಾರ್ಯಗಳಲ್ಲಿ

ಶಿಷ್ಯಳಂತೆಯೂ, ದುಃಖದಲ್ಲಿ ಬಂಧುವಾಗಿಯೂ, ವ್ಯವಹರಿಸುತ್ತಿದ್ದ ಆ ಸೀತೆಯನ್ನು ನೆನೆದು ದುಃಖಿಸುತ್ತಾನೆ. ಗೃಹಿಣಿಯಾದವಳು ಯಾವ ಯಾವ ಸಂದರ್ಭದಗಳಲ್ಲಿ ಹೇಗೆ ಹೇಗೆ ವರ್ತಿಸಬೇಕು ಎಂಬುದು ಇಲ್ಲಿ ಸ್ಪಷ್ಟವಿದೆ. ಇಲ್ಲಿನ ಇನ್ನೊಂದು ಸ್ವಾರಸ್ಯವೆಂದರೆ ಅರಮನೆಯಲ್ಲಿರಬಹುದಾದ ಯಾವುದೇ ಸೌಕರ್ಯಗಳಿಲ್ಲದೆಯೂ, ಅರಣ್ಯವಾಸದಲ್ಲೂ ಸೀತೆ ಶ್ರೀರಾಮನ ಇಚ್ಛಾನುವರ್ತಿನಿಯಾಗಿ ಆದರ್ಶ ಸತಿಯಾಗಿದ್ದಳೆಂಬುದು. ಕಾಳಿದಾಸನ ಪ್ರಸಿದ್ಧ ಸಂಸ್ಕೃತ ನಾಟಕ ಶಾಕುಂತಲದ ನಾಲ್ಕನೇ ಅಂಕದಲ್ಲಿ ಪತಿಗೃಹಕ್ಕೆ ತೆರಳುತ್ತಿರುವ ಶಕುಂತಲೆಗೆ ಕಣ್ವರ ಉಪದೇಶ ಹೀಗಿದೆ.

ಶುಶ್ರೂಷಸ್ವಗುರೂನ್ ಕುರುಪ್ರಿಯಸಖೀವೃತ್ತಿಂ ಸಪತ್ನೀಜನೇ
ಭರ್ತುರ್ವಿಪ್ರಕೃತಾಪಿ ರೋಷಣತಯಾಮಾ ಸ್ಮಪ್ರತಿಪಂಗಮಃ।
ಭೂಯಿಷ್ಠಂ ಭವದಕ್ಷಿಣಾ ಪರಿಜನೇ ಭಾಗ್ಯೇಷ್ವನು ತ್ಸೇಕಿನೀ
ಯಾಂತ್ಯೇವಂ ಗೃಹಿಣೀ ಪದಂ ಯುವತಯಃ ವಾಮಾಃ ಕುಲಸ್ಯಾಧಯಃ ॥

ಇಲ್ಲಿ ವರ್ಣಿತವಾದ ಆದರ್ಶ ಅರಣ್ಯವಾಸಿನಿಯಾದ ಸೀತೆಯ ಆದರ್ಶಕ್ಕಿಂತ ಭಿನ್ನವಾದುದು. ಶಕುಂತಳೆ ಅರಮನೆಗೆ ಹೊರಟವಳು. ಅರಮನೆಯ ಸನ್ನಿವೇಶದಲ್ಲಿ ಆಕೆ ಸದ್ಗೃಹಿಣಿಯಾಗಿ ಹೇಗೆ ವರ್ತಿಸಬೇಕೆಂದು ಇಲ್ಲಿ ನಿರೂಪಿತವಾಗಿದೆ.

ಕುಟುಂಬದ ಗುರುಹಿರಿಯರನ್ನು ಗೌರವಿಸಬೇಕು. ರಾಜನ ಸಪತ್ನಿಯರಲ್ಲಿ ಗೆಳೆತನದಿಂದಿರಬೇಕು. (ಏಕೆಂದರೆ ರಾಜನಿಗೆ ಈ ಪಟ್ಟ ಮಹಿಷಿಯಲ್ಲದೆ ಇತರೆ ಅನೇಕ ಪತ್ನಿಯರಿರಬಹುದು). ರಾಜಕಾರ್ಯದ ಒತ್ತಡದಿಂದ ಕೋಪಿಸಿಕೊಳ್ಳಬಹುದಾದ ಗಂಡನಿಗೆ ಎದುರಾಡಬಾರದು, ಸೇವಕವರ್ಗದವರಲ್ಲಿ ದಾಕ್ಷಿಣ್ಯವುಳ್ಳವಳಾಗಿರಬೇಕು, ಎಲ್ಲಕ್ಕಿಂತ ಮಿಗಿಲಾಗಿ ಅರಣ್ಯವಾಸಿನಿಯಾಗಿದ್ದ ನೀನು ಹಸ್ತಿನಾವತಿಯ ಚಕ್ರವರ್ತಿಯ ಪಟ್ಟದರಸಿಯಾದೆನೆಂಬ 'ಭಾಗ್ಯ'ಕ್ಕಾಗಿ ಅತ್ಯುತ್ಸಾಹಿತಳಾಗಬಾರದು. ಅಂದರೆ 'ಬಂದದ್ದೆಲ್ಲಾ ಬರಲಿ, ಗೋವಿಂದನ ದಯೆಯೊಂದಿರಲಿ" ಎಂಬಂತೆ ಪಟ್ಟಮಹಿಷಿ ಪದವಿಯನ್ನೂ, ಅರಣ್ಯವಾಸವನ್ನೂ, ಪ್ರಿಯ ಸಮಾಗಮವನ್ನೂ ವಿಯೋಗವನ್ನೂ ಸಮನಾಗಿ ಸ್ವೀಕರಿಸ ಬೇಕು. ಇದು ಗೃಹಿಣಿಯ ಲಕ್ಷಣ. ಇದಕ್ಕೆ ವ್ಯತಿರಿಕ್ತವಾಗಿ ವರ್ತಿಸುವವರು ಕುಲನಾಶಕ್ಕೆ ಕಾರಣರಾಗುತ್ತಾರೆ.

ಪ್ರಾಚೀನರು ಪ್ರಾತಃಸ್ಮರಣೆಯಲ್ಲಿ ಐವರು ಆದರ್ಶ ಗೃಹಿಣಿಯರನ್ನು ನೆನಪಿಸಿ ಕೊಳ್ಳುತ್ತಾರೆ.

ಅಹಲ್ಯಾ ದ್ರೌಪದೀ ಸೀತಾ ತಾರಾ ಮಂದೋದರಿ ತಥಾ।
ಪಂಚಕಂ ನಾ ಸ್ಮರೇನ್ನಿತ್ಯಂ ಮಹಾ ಪಾತಕನಾಶನಮ್॥

ಶಾಪಗ್ರಸ್ತಳಾಗಿ ಜಡತ್ವನ್ನು ಪಡೆದರೂ ಭಗವಂತನ ಸಾಕ್ಷಾತ್ಕಾರ ಪಡೆದ ಮಹಾಮಹಿಳೆ ಅಹಲ್ಯೆ.

ಯಾವುದೇ ವಿರಸಕ್ಕೆಡೆಯಾಗದಂತೆ ಐವರು ಗಂಡಂದಿರೊಡನೆ ಸುಖೀ ಸಂಸಾರ ವನ್ನು ಸಾಗಿಸಿದ ಚತುರ ಮಹಿಳೆ ದ್ರೌಪದಿ.

ನಾನು ತಾಟಕಿಯಂತೆ, ಸಪ್ತಸಾಲಗಳಂತೆ, ತ್ರಿಲೋಕ ಪ್ರಸಿದ್ಧನಾದ ವಾಲಿಯಂತೆ ಸುಲಭವಾಗಿ ನಿನ್ನ ಬಾಣಗಳಿಂದ ಹತಳಾಗುವವಳಲ್ಲ, ವಜ್ರಕ್ಕಿಂತ ಕಠಿಣವಾದ ನನ್ನ ಹೃದಯ ವನ್ನು ಭೇದಿಸುವವರೆಗೆ ನಿನ್ನ ಧನುರ್ಬಾಣಗಳೂ, ಕೋದಂಡರಾಮನೆಂಬ ನಿನ್ನ ಬಿರುದೂ ವ್ಯರ್ಥವೆಂದೂ ಅರ್ಯಕುಲದ ರಾಮನಿಗೆ ಸವಾಲೆಸೆದ ವಾನರ ಸ್ತ್ರೀ ತಾರೆ.

ದುರಾಚಾರಿಯಾದ ರಾವಣನ ಧರ್ಮಪತ್ನಿಯಾಗಿ ತಾನು ಸೇರಿದ ಪುಲಸ್ತ್ಯ ಬ್ರಹ್ಮನ ವಂಶ ಗೌರವಕ್ಕೆ ಕುಂದಾಗದಂತೆ ವರ್ತಿಸಿದ ಸಾಧ್ವಿ ಶಿರೋಮಣಿ ಮಂಡೋದರಿ.

ಹೀಗೆ ಈ ಐವರೂ ಆದರ್ಶ ಗೃಹಿಣಿಯರು. ಮರಾಠಾ ಸಾಮ್ರಾಜ್ಯ ಸ್ಥಾಪಕನಾದ ಶಿವಾಜಿಯ ಬದುಕನ್ನು ರೂಪಿಸಿದ ಜೀಜಾಬಾಯಿ, ಸಮರಾಂಗಣದಲ್ಲಿ ಸಾಹಸವನ್ನು ಮೆರೆದ ಝಾಂಸಿರಾಣಿ ಲಕ್ಷ್ಮೀಬಾಯಿ ಮೊದಲಾದವರೂ ಆದರ್ಶ ಗೃಹಿಣಿಯರು. ಇಂತಹ ಮಹಾ ಮಹಿಳೆಯರ ಧ್ಯೇಯ-ಆದರ್ಶಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಸಂಸಾರವೆಂಬ ಎರಡು ಚಕ್ರದ ಒಂದು ಗಾಲಿಯಾಗಿ ಗಂಡನೊಡನೆ ಸರಿಸಮನಾಗಿ ಮುಂದುವರಿಯುವವಳೇ ಆದರ್ಶ ಗೃಹಿಣಿ. ಹಾಗಲ್ಲದೆ ಸ್ವೇಚ್ಛಾಚಾರಿಣಿ ಯಾಗಿ, ಕಲಹಪ್ರಿಯಳಾದವಳಿರುವ ಮನೆ ಕುರುಕ್ಷೇತ್ರವೆನಿಸುತ್ತದೆ. ಅಂತಹ ಮಹಿಳೆ ಯಿಂದ ಆಗೃಹ ಮುಚ್ಚುತ್ತೆ.

ಆತ್ಮ ವಿಶ್ವಾಸ

ಉದ್ಧರೇ ದಾತ್ಮನಾತ್ಮಾನಂ ಎಂಬ ಆರ್ಯೋಕ್ತಿಯೊಂದುಂಟು. ಅಂದರೆತನ್ನನ್ನು ತಾನೇ ಉದ್ಧರಿಸಿಕೊಳ್ಳಬೇಕು. ಪ್ರತಿಯೊಂದಕ್ಕೂ ಪರಾವಲಂಬನೆ ಸಲ್ಲದು ಎಂದರ್ಥ. ಈಗೀಗ ಮನುಷ್ಯನ ಬದುಕು ಅತ್ಯಂತ ಸಂಕೀರ್ಣವಾಗುತ್ತಿದೆ. ಆತ ಸಮಾಜದಲ್ಲಿ ಸುಖವಾಗಿ ಬದುಕಬೇಕಾದರೆ ಆತ್ಮವಿಶ್ವಾಸವೊಂದೇ ಅವಲಂಬನೆ. ತನ್ನ ಸಾಮರ್ಥ್ಯದ ಬಗ್ಗೆ, ತನ್ನ ಕಾರ್ಯ ವೈಖರಿಯ ಬಗ್ಗೆ ಪ್ರತಿಯೊಬ್ಬನಿಗೂ ವಿಶ್ವಾಸವಿರಬೇಕು. ಇಂತಹ ಆತ್ಮ ವಿಶ್ವಾಸ ವಿಲ್ಲದವ ಹೇಡಿಯಾಗಿ ಯಾವುದೇ ಕಾರ್ಯನಿರ್ವಹಿಸಲು ಅಸಮರ್ಥನಾಗುತ್ತಾನೆ.

ಒಬ್ಬ ಸುಭಾಷಿತಕಾರನ ಮಾತು ಹೀಗಿದೆ.
ಪ್ರಾರಭ್ಯತೇ ನ ಖಲು ವಿಘ್ನಭಯೇನ ನೀಚೈಃ
ಪ್ರಾರಭ್ಯ ವಿಘ್ನನಿಹತಾಃ ವಿರಮಂತಿ ಮಧ್ಯಾಃ।
ವಿಘ್ನೈಃ ಪುನಃ ಪುನರಪಿ ಪ್ರತಿ ಹನ್ಯ ಮಾನಾಃ
ಪ್ರಾರಬ್ಧ ಮುತ್ತಮ ಜನಾ ನ ಪರಿತ್ಯಜಂತಿ॥

ಉತ್ತಮ, ಮಧ್ಯಮ, ಅಧಮರ ಲಕ್ಷಣವನ್ನು ಹೇಳುವುದೇ ಈ ಶ್ಲೋಕದಲ್ಲಿ ಕವಿಯ ಆಶಯ. ಅಂತೆಯೇ ಆತ್ಮವಿಶ್ವಾಸವಿಲ್ಲದ ಒಬ್ಬ ಮನುಷ್ಯ ಮುಂದೆ ಬರಲಿರುವ

ಆತಂಕಗಳಿಗೆ ಹೆದರಿ ಯಾವುದೇ ಕಾರ್ಯದಲ್ಲಿ ಪ್ರವೃತ್ತನಾಗುವುದಿಲ್ಲ. ಅರ್ಧವಿಶ್ವಾಸದಿಂದ ಕಾರ್ಯ ಪ್ರಾರಂಭಿಸಿ ಮುಂದೆ ಅಡ್ಡಿಯುಂಟಾದೊಡನೆ ತಮ್ಮ ಪ್ರಯತ್ನವನ್ನೇ ನಿಲ್ಲಿಸುವವರು ಕೆಲವರು, ನಿಜವಾದ ಆತ್ಮವಿಶ್ವಾಸವುಳ್ಳವನು ಎಲ್ಲ ಅಡೆತಡೆಗಳನ್ನು ಮೆಟ್ಟಿ ನಿಂತು ಕಾರ್ಯ ಸಾಧಿಸುತ್ತಾನೆ. ಆದ್ದರಿಂದ ಆತ್ಮವಿಶ್ವಾಸ ಮತ್ತು ಪ್ರಯತ್ನ-ಸಫಲತೆಯ ಎರಡು ಹೆದ್ದಾರಿಗಳು.

ಆತ್ಮವಿಶ್ವಾಸಕ್ಕೆ ಸಂಬಂಧಿಸಿದಂತೆ ಮೂವರು ಮಹಾಪುರಷರ ಜೀವನದ ದೃಷ್ಟಾಂತ ವನ್ನು ನೀಡುತ್ತೇನೆ.

ಮಹಾಭಾರತದ ಅರ್ಜುನ ತ್ರಿಲೋಕವೀರನೆಂಬ ಖ್ಯಾತಿವೆತ್ತವನು. ಇವನನ್ನು ಯಾರಾದರೂ ಹೊಗಳಿದರೆ ಕೆಲಸ ಕೆಟ್ಟಿತೆಂದೇ ಅರ್ಥ. ಬದಲಾಗಿ, ಯಾರಾದರೂ ನಿಂದಿಸಿದರೆ ಈತನ ಹುರುಪು ಹೆಚ್ಚುತ್ತದೆ. ಕರ್ಣನಿಂದ ಪೆಟ್ಟು ತಿಂದ ಯುಧಿಷ್ಠಿರ ಅರ್ಜುನನ ಗಾಂಡೀವವನ್ನು ಎಸೆಯುವಂತೆ ಮೂದಲಿಸಿ, ಕರ್ಣ ಜಯದ್ರಥರ ಪರಾಕ್ರಮ ವನ್ನು ಹೊಗಳಿ ಅವರನ್ನು ಸೋಲಿಸಲು ಅರ್ಜುನನಿಂದಲೂ ಅಸಾಧ್ಯ ಎಂದು ಒಡ್ಡಿದ ಸವಾಲೇ ಅರ್ಜುನನಲ್ಲಿದ್ದ ಹಟವನ್ನೂ, ಆತ್ಮವಿಶ್ವಾಸವನ್ನೂ ಜಾಗ್ರತಗೊಳಿಸುತ್ತದೆ. ಮುಂದೆ ಅರ್ಜುನ ಕರ್ಣ ಜಯದ್ರಥರನ್ನು ಸಂಹರಿಸುತ್ತಾನೆ.

ಇನ್ನೊಂದು ಉದಾಹರಣೆ ಕರ್ಣನದು. ಈತನ ಪರಾಕ್ರಮಕ್ಕೆ ಸರಿಸಾಟಿ ಯಾರೂ ಇಲ್ಲ. ಆದರೆ ಶಲ್ಯನ ನಿಂದೆಯಿಂದ ಈತನ ಆತ್ಮವಿಶ್ವಾಸ ಕುಗ್ಗುತ್ತದೆ. ಪರಿಣಾಮವಾಗಿ ಆತನಿಗೆ ಸೋಲುಂಟಾಗುತ್ತದೆ. ಸಾವು ಸಂಭವಿಸುತ್ತದೆ.

ಮತ್ತೊಬ್ಬ ಮಹಾಪುರಷ ಆಂಜನೇಯ. ಸಮುದ್ರ ಲಂಘನದ ಬಗ್ಗೆ ಕಪಿವೀರ ರೆಲ್ಲರೂ ತಂತಮ್ಮ ಪರಾಕ್ರಮ/ಸಾಮರ್ಥ್ಯವನ್ನು ಚರ್ಚಿಸುತ್ತಿರುವಾಗ ಈತ ಮೌನಿ. ಈತನ ಸಾಮರ್ಥ್ಯವನ್ನು ಇತರೆ ವಾನರ ವೀರರು ಹೊಗಳಿದ ನಂತರವೇ ಇವನಿಗೆ ತನ್ನ ಸಾಮರ್ಥ್ಯದ ಅರಿವಾಗಿ ಸಮುದ್ರ ದಾಟುವ ಆತ್ಮವಿಶ್ವಾಸ ಬಲಿತುದು.

ಹೀಗೆ ಕೆಲವರಿಗೆ ನಿಂದೆಯಿಂದ ಆತ್ಮವಿಶ್ವಾಸ ಹೆಚ್ಚುತ್ತದೆ. ಮತ್ತೆ ಕೆಲವರಿಗೆ ನಿಂದೆಯಿಂದ ಆತ್ಮವಿಶ್ವಾಸ ಕುಗ್ಗುತ್ತದೆ. ಕೆಲವರ ಆತ್ಮವಿಶ್ವಾಸ ಹೆಚ್ಚಬೇಕಾದರೆ ಅವರನ್ನು ಚೆನ್ನಾಗಿ ಹೊಗಳಬೇಕಾಗುತ್ತದೆ.

ಕ್ಷೋಭೆಯಿಂದಲೂ ತನ್ನತನದ ಅರಿವಾಗಿ ಆತ್ಮವಿಶ್ವಾಸ ಜಾಗ್ರತವಾಗುವುದೆಂಬ ಸಂಸ್ಕೃತ ಸುಭಾಷಿತವೊಂದಿದೆ. **ಜ್ವಲತಿ ಚವಿತೇಂಧನೋಗ್ನಿ ವಿಪ್ರಕೃತಃ ಪನ್ನಗಃ ಣಾಂಕುರುತೇ ಪ್ರಾಯಃ ಸ್ವಂಮಹಿಮಾನಂ ಕ್ಷೋಭಾತ್ ಪ್ರತಿಪದ್ಯತೇ ಜಂತುಃ॥** ಕೊಳ್ಳಿಯನ್ನು ಚೆನ್ನಾಗಿ ಅಲುಗಾಡಿಸುವುದರಿಂದ ಬೆಂಕಿ ಪ್ರಜ್ವಲಿಸುತ್ತದೆ. ರೇಗಿಸಿದ ಸರ್ಪ ಹೆಡೆಯೆತ್ತಿ ಬುಸುಗುಟ್ಟುತ್ತದೆ. ಹಾಗೆಯೇ ಮನುಷ್ಯ ಕ್ಷೋಭೆಗೊಳಗಾದಾಗಲೂ ಆತ್ಮ ಚಿಂತನೆಯಿಂದ ಸ್ವಸಾಮರ್ಥ್ಯವನ್ನರಿತು ವಿಶ್ವಾಸ ಹೆಚ್ಚಿಸಿಕೊಳ್ಳುತ್ತಾನೆ.

ಇಂದಿನ ವಿದ್ಯಾರ್ಥಿಗಳಿಗೆ ಬರುವ ಪರೀಕ್ಷಾ ಜ್ವರದ ಮೂಲ ಕಾರಣ ಆತ್ಮವಿಶ್ವಾಸದ

ಕೊರತೆ. ಪರೀಕ್ಷೆಗಾಗಿ ಚೆನ್ನಾಗಿ ಪೂರ್ವಸಿದ್ಧತೆ ಮಾಡಿದ ವಿದ್ಯಾರ್ಥಿ ವಿಶ್ವಾಸದಿಂದ ಪರೀಕ್ಷೆಯನ್ನು ಎದುರಿಸುತ್ತಾನೆ. ಪೂರ್ವಸಿದ್ಧತೆಯಿಲ್ಲದ ವಿದ್ಯಾರ್ಥಿ ಪರೀಕ್ಷೆಯ ಹೆಸರು ಕೇಳಿದೊಡನೆಯೇ ಧೈರ್ಯಗುಂದುತ್ತಾನೆ.

ನೀರಿನಲ್ಲಿ ಈಜುವ, ಮುಳುಗೇಳುವ ಜಲಚರಗಳನ್ನೂ, ಆಕಾಶದಲ್ಲಿ ತೇಲುವ–ಹಾರಾಡುವ ಖೇಚರಗಳನ್ನು ನೋಡಿ ಮನುಷ್ಯ ಅಸೂಯೆಪಡುತ್ತಿದ್ದ ಕಾಲವೊಂದಿತ್ತು. ಆದರೆ ಈಗ ಮನುಷ್ಯ ನಿರಂತರ ಪ್ರಯತ್ನದಿಂದ ಜಲಚರಗಳನ್ನೂ ಖೇಚರಗಳನ್ನೂ ಜಯಿಸಿ, ವೈಜ್ಞಾನಿಕ ಕ್ಷೇತ್ರದಲ್ಲಿ ಕ್ರಾಂತಿಯೆಬ್ಬಿಸಿದ್ದಾನೆ. ಇದನ್ನೇ ದೃಷ್ಟಾಂತವಾಗಿಟ್ಟು ಕೊಂಡು ಪ್ರತಿಯೊಬ್ಬನೂ ತನ್ನ ಸಾಮರ್ಥ್ಯದಲ್ಲಿ ವಿಶ್ವಾಸವನ್ನಿಟ್ಟು ನಿರಂತರ ಪ್ರಯತ್ನ ಶೀಲನಾಗಿ ಆತ್ಮೋದ್ಧಾರ ಮಾಡಿಕೊಳ್ಳಬೇಕು.

ಘಂಟಾನಾದ – ಶಂಖಧ್ವನಿ

ಆಗಮಾರ್ಥಂತು ದೇವಾನಾಂ ಗಮನಾರ್ಥಂತು ರಕ್ಷಸಾಂ।
ಕುರ್ವೇ ಘಂಟಾರವಂ ರಮ್ಯಂ ದೇವತಾಹ್ವಾನ ಲಾಂಛನಂ॥

ಎಂದು ಸನಾತನಿಗಳು ಭಗವಂತನ ಆರಾಧನೆಯಲ್ಲಿ ಘಂಟಾನಾದ ಮಾಡುವು ದುಂಟು. ದೇವಾಲಯಗಳಲ್ಲಿ ದೊಡ್ಡ ಘಂಟೆಗಳನ್ನು ಧ್ವನಿ ಮಾಡುವುದೂ ಉಂಟು. ಪೂಜೆಯ ನೆಪದಲ್ಲೋ, ಅಥವಾ ಮುಸ್ಸಂಜೆಯಲ್ಲೋ ಶಂಖವನ್ನು ಊದುವ ಸಂಪ್ರದಾಯ ಈಗಲೂ ಕೆಲವರ ಮನೆಯಲ್ಲಿದೆ.

"ಸ್ವಾಮೀ, ಯಾಕೆ ಈ ಘಂಟೆ ಹೊಡೆಯುತ್ತೀರಿ? ಶಂಖ ಯಾಕೆ ಊದುತ್ತೀರಿ? ಎಂದು ಯಾರನ್ನಾದರೂ ಕೇಳಿ.

"ಏನೋಪ್ಪ, ನಮ್ಮ ತಾತ–ಮುತ್ತಾತನ ಕಾಲದಿಂದ ನಡೆದುಕೊಂಡು ಬಂದಿದೆ. ನಮಗೇನ್ ನಷ್ಟ ಹೇಳಿ, ನಾವೂ ಹಾಗೇ ಮಾಡೋಣ" ಎಂದು ಹೇಳುವ ಸಂಪ್ರದಾಯ ವಾದಿಗಳು ಕೆಲವರು.

"ಥತ್, ಇದೆಲ್ಲಾ ನಾನ್ಸೆನ್ಸ್ ಕಣ್ರೀ. ಒಂದಕ್ಕೂ ಅರ್ಥ ಇಲ್ಲ. ಏನೋ ನಂ ಫಾದರ್‌ಗೆ ಸಿಟ್ಟು ಬರುತ್ತೇಂತ ಸುಮ್ನಿದೀನಿ. ಬೆಳಿಗ್ಗೆ–ಸಾಯಂಕಾಲ ಒಂದಷ್ಟೊತ್ತು ಕಾನ್ಸೆಂಟ್ರೇಟ್ ಮಾಡಿ ಓದೋಣಾಂದ್ರೆ ಡಿಸ್ಟರ್ಬೆನ್ಸ್ ಆಗುತ್ತೇರೀ" ಎಂದು ಹಳಹಳಿಸುವ ಎಳಸುಗಳು ಕೆಲವರು. "ಪಡುವಲದ ಗಾಳಿಗೆ ತೂಗುವುದು ಅಟ್ಟೆ" ಎಂದು ಕವಿ ಗೋಪಾಲಕೃಷ್ಣ ಅಡಿಗರು ಹೇಳುವಂತೆ ಇವರು ಪಾಶ್ಚಾತ್ಯ ಸಂಸ್ಕೃತಿಯ ಬಿರುಗಾಳಿಯಲ್ಲಿ ಹಾರುತ್ತಾ ಭಾರತೀಯ ವಿಚಾರಧಾರೆಯನ್ನೂ ನಮ್ಮ ಶ್ರೇಷ್ಠ ಪರಂಪರೆಯನ್ನೂ ಅಪಹಾಸ್ಯದ ಕಣ್ಣಲ್ಲಿ ಕಾಣುವವರು.

ಮೂರನೆಯ ವರ್ಗದವರು ಅರ್ಥವಾದಿಗಳು. ಹಳೆಯದೆಲ್ಲವನ್ನು ತಿರಸ್ಕರಿಸದೆ, ಹೊಸದೆಲ್ಲವನ್ನು ನಿರ್ದುಷ್ಟವೆಂದು ಗ್ರಹಿಸದೇ ಚಿಕಿತ್ಸಕ ಬುದ್ಧಿಯವರು ಹೇಳುವುದು ಹೀಗೆ. "ಇದರಲ್ಲೇನೋ ರಹಸ್ಯವಿರಬೇಕು. ನಮಗೆ ಗೊತ್ತಿಲ್ಲವೆಂದ ಮಾತ್ರಕ್ಕೆ ಅಲ್ಲಗೆಳೆಯ ಬಾರದು" ಇಂತಹ ವಿಚಾರಶೀಲ ವ್ಯಕ್ತಿಗಳಿಂದ ಮಾತ್ರ ಆಚಾರ–ವಿಚಾರಗಳ ವೈಜ್ಞಾನಿಕ ಮಹತ್ವದ ಚಿಂತನೆನಡೆಯುತ್ತದೆ. ಅವೈಜ್ಞಾನಿಕವಾದ ಯಾವುದೇ ಸಂಗತಿಯೂ ಇಲ್ಲದಿರುವುದೇ ಭಾರತೀಯರ ಆಚಾರ ಸಂಹಿತೆಯ ವೈಶಿಷ್ಟ್ಯ. ಆದರೆ "ಎಲ್ಲ ಬಲ್ಲವರಿಲ್ಲ, ಬಲ್ಲವರು ಬಹಳಿಲ್ಲ" ಎಂಬಂತೆ ನಮಗೆ ಅರ್ಥವಾಗದ ವಿಚಾರಗಳನ್ನೆಲ್ಲ ಅವೈಜ್ಞಾನಿಕ ವೆಂದೇ ನಾವು ಅನಿವಾರ್ಯವಾಗಿ ತರ್ಕಿಸುವುದು ಸಹಜವಾಗಿದೆ.

ಘಂಟಾನಾದದಿಂದ ಭಗವಂತನು ಸಂತುಷ್ಟನಾಗುತ್ತಾನೆ, ಭೂತ–ಪ್ರೇತ–ರಾಕ್ಷಸರು ಓಡುತ್ತಾರೆ, ಪಾಪ–ದುಷ್ಟಾರಿಷ್ಟ ನಿವೃತ್ತಿಯಾಗುತ್ತದೆ ಎಂಬುದು ನಂಬಿಕೆ. ಹಿಂದೂ, ಬೌದ್ಧ, ಜೈನ, ಕ್ರೈಸ್ತ ಮಂದಿರಗಳಲ್ಲಿ ನಿಯತಕಾಲದಲ್ಲಿ ಪೂಜೆಯಲ್ಲಿ ಬಾರಿಸುವ ಘಂಟೆಯಿಂದ ನಾಗರಿಕರಿಗೆ ಸಮಯದ ಅರಿವಾಗುತ್ತದೆ. ಇದು ಲೌಕಿಕ ಪ್ರಯೋಜನ. ಭಾರತದಲ್ಲಲ್ಲದೆ ಬರ್ಮಾ, ಚೀನಾ, ಜಪಾನ್, ಈಜಿಪ್ತ್, ರೋಮ್, ಫ್ರಾನ್ಸ್, ರಷ್ಯಾ, ಇಂಗ್ಲೆಂಡ್ ಮೊದಲಾದ ವಿದೇಶಗಳಲ್ಲೂ ಘಂಟಾವಾದನದ ಸಂಪ್ರದಾಯವುಂಟು.

ತಾಮ್ರ ಮತ್ತು ತವರದ ಮಿಶ್ರಲೋಹವಾದ ಕಂಚಿನಿಂದ ಘಂಟೆಯನ್ನು ತಯಾರಿಸ ಲಾಗುತ್ತದೆ. ಈ ಪ್ರತ್ಯೇಕ ಲೋಹಗಳ ವಿದ್ಯುತ್ ಪರಿವಹನ ಮತ್ತು ಶಕ್ತಿಸಂಚಯದ ಗುಣ ಘಂಟೆಯಲ್ಲೂ ಇರುತ್ತದೆ. ಈ ಘಂಟೆಗೆ ಏಟು ತಗಲಿದಾಗ ವಿದ್ಯುತ್ ಶಕ್ತಿಯ ಸಂಗ್ರಹ ವಾಗುತ್ತದೆ. ಮಹಾಪುರುಷರು ದೇವಾಲಯದಲ್ಲಿ ಮರದ ಪಾದುಕೆಗಳನ್ನು ಧರಿಸಿ ಸಂಚರಿ ಸುವುದರಿಂದ ಈ ವಿದ್ಯುತ್ತು ಅವರ ಪಾದಗಳ ಮೂಲಕ ಭೂಮಿಗೆ ಹರಿಯದೇ ಅವರ ಶರೀರದಲ್ಲಿ ವ್ಯಾಪಿಸಿ ಶಕ್ತಿವಂತರನ್ನಾಗಿಸುತ್ತದೆ. ಘಂಟಾನಾದದಿಂದ ಮತ್ತು ಘಂಟಾಜಲ ಪಾನದಿಂದ ಶೀಘ್ರವಾಗಿಯೂ ಸುಖವಾಗಿಯೂ ಪ್ರಸವವಾಗುತ್ತದೆಂಬ ಪ್ರಾಚೀನರ ಮಾತಿಗೆ ವೈಜ್ಞಾನಿಕ ತಳಹದಿಯುಂಟು.

ಸಂಧ್ಯಾ ಸಮಯದಲ್ಲಿ ದೇವಾಲಯದಲ್ಲೋ ಮನೆಗಳಲ್ಲೋ ಶಂಖನಾದ ಗೈಯುವ ರಹಸ್ಯ ಮತ್ತುಷ್ಟು ಸ್ವಾರಸ್ಯಪೂರ್ಣವಾಗಿದೆ. ಶಂಖದ ಧ್ವನಿ ತರಂಗಗಳು ಎಷ್ಟು ದೂರ ವ್ಯಾಪಿಸುತ್ತವೆಯೋ ಅಷ್ಟು ದೂರದಲ್ಲಿರುವ ಸಾಂಕ್ರಾಮಿಕ ರೋಗಾಣುಗಳೋ, ವಿಷಾಣುಗಳೂ ದೂರವಾಗಿ ವಾಯುಮಮಡಲ ಶುದ್ಧವಾಗುತ್ತದೆಂದು ವಿಜ್ಞಾನದ ಪ್ರೊಫೆಸರ್ ಜಗದೀಶಚಂದ್ರ ವಸು ಎಂಬ ಮಹನೀಯರು ತಮ್ಮ ಪ್ರಯೋಗಗಳಿಂದ ಸಿದ್ಧಪಡಿಸಿದ್ದಾರೆ.

ಹಿಂದಿಯಲ್ಲಿ **"ಶಂಖ್ ಬಾಜೇ, ಭೂತ್ ಭಾಗೇ"** ಎಂಬ ಗಾದೆಯೊಂದುಂಟು. ಸಂಧ್ಯಾ ಕಾಲದಲ್ಲಿ ವಾತಾವರಣದಲ್ಲಿ ವ್ಯಾಪಿಸಿರುವ ವಿವಿಧ ರೋಗಾಣುಗಳೇ ಸೂಕ್ಷ್ಮ ಭೂತಗಳು. ಪ್ರತಿದಿನ ನಿಯತಕಾಲಿಕ ಶಂಖನಾದದಿಂದ ಈ ರೋಗಾಣು ರೂಪದ ಭೂತಗಳು ದೂರವಾಗುತ್ತವೆಂಬುದು ವೈಜ್ಞಾನಿಕ ಸತ್ಯ.

ಶಂಖ ಪ್ರಾಣಿಯೊಂದರ ಚಿಪ್ಪು. ಅಶುದ್ಧ ಎಂಬ ವಾದಕ್ಕೆ ಇದು ಅಪವಾದ. ಗೋವಿನ

ಮೂತ್ರ, ನೊಣಗಳ ಎಂಜಲು–ಜೇನುತುಪ್ಪ, ಕೀಟವೊಂದರ ದೇಹದಿಂದ ಸ್ರವಿಸಿದ ರಸ–ರೇಶ್ಮೆ–ಇವೆಲ್ಲ ನಮಗೆ ಪವಿತ್ರವಲ್ಲವೆ?

ದಿನದಲ್ಲಿ ನಾಲ್ಕಾರು ಬಾರಿ ಶಂಖವನ್ನೂದುವುದರಿಂದ, ಶಂಖದಲ್ಲಿರಿಸಿದ ಶುದ್ಧ ಜಲಪಾನದಿಂದ, ಶಂಖ ಭಸ್ಮ ಸೇವನೆಯಿಂದ, ಚಿಕ್ಕ ಚಿಕ್ಕ ಶಂಖಗಳ ಮಾಲೆಯನ್ನು ಧರಿಸುವುದರಿಂದ ಮೂಕತ್ವ ಪರಿಹಾರವಾಗಿ ಮಾತು ಬರುತ್ತದೆಂದು ಹಿರಿಯರು ಹೇಳುವುದರಲ್ಲಿ ಅರ್ಥವಿದ್ದೀತು. ಅನೇಕ ರೋಗಗಳ ಪರಿಹಾರಕ್ಕೆ ಶಂಖವನ್ನು ತೇಯ್ದು ಹಚ್ಚುವುದು ರೂಢಿಯಲ್ಲಿದೆ.

ಆಯು, ಬಲ, ತೇಜಸ್ಸಿನ ವೃದ್ಧಿಗಾಗಿ ಶಂಖವನ್ನು ಧರಿಸಬೇಕೆಂದು ಅಥರ್ವವೇದದಲ್ಲಿ **ತತ್‌ತೇ ಬಧ್ನಾಮಿ ಆಯುಷೇವರ್ಚಸೇ ಬಲಾಯ ದೀರ್ಘಾಯುತ್ವಾಯ ಶತಶಾರದಾಯ** ಮೊದಲಾದ ಮಂತ್ರಗಳಲ್ಲಿ ಪ್ರಸ್ತಾಪಿಸಲ್ಪಟ್ಟಿದೆ.

ಗುಲ್ಮ ಮೊದಲಾದ ರೋಗಗಳ ಪರಿಹಾರಕ್ಕೆ ಶಂಖ ದ್ರವವನ್ನು, ಅಶ್ಮರೀರೋಗಾದಿಗಳ ಪರಿಹಾರಕ್ಕೆ ಶಂಖಭಸ್ಮವನ್ನೂ ಉಪಯೋಗಿಸಬೇಕೆಂದು ಆಯುರ್ವೇದದಲ್ಲಿ ಪ್ರಸ್ತಾಪವಿದೆಯೆಂಬುದಾಗಿ ಹೇಳುತ್ತಾರೆ.

ಹೀಗೆ ನಮ್ಮ ಪ್ರಾಚೀನರ ಪ್ರತಿಯೊಂದು ಆಚರಣೆಯೂ ವೈಜ್ಞಾನಿಕ ತಳಹದಿಯ ಮೇಲೆ ರೂಢಿಗೆ ಬಂದಿದೆ.

ದೇವರು

ಅಯ್ಯೋ ದೇವರೆ, ದೇವರೇ ಕಾಪಾಡಪ್ಪ, ದೇವರ ದಯೆಯಿಂದ ಪಾರಾದೆ. – ಹೀಗೆ ನಾವು ಹಲವು ಸಂದರ್ಭಗಳಲ್ಲಿ ವಿವಿಧ ರೀತಿಯಲ್ಲಿ ಉದ್ಗರಿಸುತ್ತೇವೆ. ದೇವರ ಅವಲಂಬನೆಯಿಲ್ಲದೆ ನಮ್ಮ ಬದುಕಿಗೆ ಅರ್ಥವಿಲ್ಲ. (ಅಂದ ಮೇಲೆ ನಮ್ಮ ಸಮಸ್ತ ಚಟುವಟಿಕೆಗಳಿಗೂ ದೇವರಿಗೂ ಸಂಬಂಧವಿದೆಯೆಂದಾಯಿತು). ಹಾಗಾದರೆ ಈ 'ದೇವರು' ಅಂದರೆ ಯಾರು? ಎಂಬ ಪ್ರಶ್ನೆ ಸಹಜವಾಗಿ ಏಳುವುದಿಲ್ಲವೆ?

ಯಾವುದೇ ಸಂಗತಿಯನ್ನು ಮೂರು ರೀತಿಯಲ್ಲಿ ಅರಿತುಕೊಳ್ಳಲು ಸಾಧ್ಯ. ಮೊದಲನೆಯದು ಪ್ರತ್ಯಕ್ಷ, ಎರಡನೆಯದು ಅನುಮಾನ, ಮುರನೆಯದು ಆಪ್ತವಾಕ್ಯ. ತಾರ್ಕಿಕರು ಹೀಗೆ ಹೇಳುತ್ತಾರೆ. – ಪ್ರತ್ಯಕ್ಷಂ ಪ್ರಮಾಣಂ, ಅನುಮಾನಂ ಪ್ರಮಾಣಂ, ಆಪ್ತವಾಕ್ಯಂ ಪ್ರಮಾಣಂ.

ನಮ್ಮ ಕಣ್ಣಿಗೆ ಕಾಣುವ ಗಿಡ, ಮರ, ಬಳ್ಳಿ, ಕಲ್ಲು, ಮುಳ್ಳು, ದ್ವಿಪದಿ, ಚತುಷ್ಪದಿ – ಎಲ್ಲ ಚರಾಚರ ಸಂಗತಿಗಳನ್ನು 'ಇದೆ' ಯೆಂದು ಪ್ರಮಾಣೀಕರಿಸಿ ನಾವು ನಂಬಬಹುದು. ಆದರೆ ಇವುಗಳನ್ನೇ 'ದೇವರು' ಎಂದು ನಂಬಲು ಎಲ್ಲರೂ ಸಿದ್ಧರಿಲ್ಲ.

ದೇವರಿದ್ದಾನೆ – ಹಾಗಿದ್ದಾನೆ – ಹೀಗಿದ್ದಾನೆ ಎಂಬ ಅನುಮಾನವನ್ನೂ ನಾವು ನಂಬುವ ಸ್ಥಿತಿಯಲ್ಲಿಲ್ಲ. ಪ್ರತ್ಯಕ್ಷವನ್ನೇ ಪ್ರಮಾಣೀಕರಿಸದೆ ನಂಬದ ಮೇಲೆ ನಾವು ಅನುಮಾನವನ್ನು ನಂಬುತ್ತೇವೆಯೆ? ಆದುದರಿಂದ ಅನುಮಾನದಿಂದಲೂ ನಮಗೆ ದೇವರ ಅಸ್ತಿತ್ವದ ಅರಿವಾಗಲಾರದು.

ನಮ್ಮ ಜನ್ಮಕ್ಕೆ ಕಾರಣರಾದ ತಂದೆ–ತಾಯಿಗಳು 'ಇದ್ದಾರೆ' ಅವರು–ಇಂತವರು' ಎಂಬ ಆಪ್ತವಾಕ್ಯವನ್ನು ನಾವು ನಂಬುತ್ತೇವೆ. ಏಕೆಂದರೆ ಜನ್ಮಕ್ಕೆ ಕಾರಣರಾದ ತಂದೆ–ತಾಯಿಗಳು ಇರಲೇಬೇಕು. ವಿವೇಚನಾ ಶಕ್ತಿಯ ಬೆಳವಣಿಗೆಯ ಹೊತ್ತಿಗೆ ಇತರರ ಮಾತಿನಿಂದಲೇ ನಾವು ನಮ್ಮ ತಂದೆ ತಾಯಿಗಳನ್ನು 'ಇಂತಹರು' ಎಂಬ ನಿರ್ಧಾರಕ್ಕೆ ಬಂದಿರುತ್ತೇವೆ. ಇದೇ ರೀತಿಯ ಪ್ರಮಾಣಗಳಿಂದ ನಾವು ದೇವರ ಅಸ್ತಿತ್ವವನ್ನು ಒಪ್ಪಬೇಕು.

ನಮ್ಮ ಕಣ್ಣಿಗೆ ಕಾಣುವ ಸಮಸ್ತ ಚರಾಚರಗಳ ನಿರ್ಮಾಣಕ್ಕೆ/ಸೃಷ್ಟಿಗೆ ಕಾರಣವಾದ ಒಂದು ಸಂಗತಿ ಮಾನವಾತೀತ ಶಕ್ತಿಯಿರಲೇಬೇಕು. ತಾರ್ಕಿಕರು ಇದಕ್ಕೆ ಕಾರ್ಯ–ಕಾರಣ ಸಂಬಂಧವೆನ್ನುತ್ತಾರೆ. (ಒಂದು ಕಾರ್ಯ ನಮ್ಮೆದುರಿಗಿರುವಾಗ ಅದಕ್ಕೊಂದು ಕಾರಣವಿರಲೇಬೇಕು.) ಈ ವಿಚಿತ್ರವಾದ ಜಗತ್ತು ನಮ್ಮ ಲೌಕಿಕ ಚಕ್ಷುಸ್ಸಿಗೆ ಗೋಚರವಾಗುವ ಸತ್ಯ. ಈ ದೃಗ್ಗೋಚರ ಸತ್ಯಕ್ಕೆ ಒಂದು ಕಾರಣ ಅಂದರೆ ಸೃಷ್ಟಿಗೆ ಕಾರಣನಾದವನೊಬ್ಬನಿರಲೇಬೇಕು. ಇವನೇ **"ದೇವರು"**. ಈತನನ್ನು Lord Almighty "ಸರ್ವಶಕ್ತ,"ಇಲ್ ಅಲ್ಲಾಹ್ "ಸರ್ವಜ್ಞ", ನಿರ್ಗುಣ, ನಿರಾಕಾರ, ನಿರಾಲಂಬ, ಅನಾದ್ಯಂತ ಎಂದು ವಿವಿಧ ರೀತಿಯಲ್ಲಿ ಗುರುತಿಸುತ್ತೇವೆ.

ಹಾಗಾದರೆ ಆತನ ಕೆಲಸವಾದರೂ ಏನು? ಈತ ಕರ್ತುಂ, ಅಕರ್ತುಂ, ಅನ್ಯಥಾ ಕರ್ತುಂ ಶಕ್ತ. ಅಂದರೆ ಆತ ತಾನು ಏನನ್ನೂ ಮಾಡಲು ಶಕ್ತ, ಹಾಗೆಯೇ ತಾನು ಯಾವುದೇ ಕಾರ್ಯವನ್ನು ನಿರ್ವಹಿಸದೇ ಇರಲೂಬಹುದು ಏಕೆ ಇಂತಹ ಕೆಲಸವನ್ನು ನಿರ್ವಹಿಸಿಲ್ಲ–ಎಂದು ಆತನನ್ನು ಪ್ರಶ್ನಿಸುವವರು ಯಾರೂ ಇಲ್ಲ. ಅಂತೆಯೇ ಒಂದನ್ನು ಇನ್ನೊಂದು ರೀತಿಯಲ್ಲಿ ಪರಿವರ್ತಿಸಿ ನಿರ್ವಹಿಸಲೂ ಆತ ಶಕ್ತ, ಈ ವಿಶಿಷ್ಟ ಸಾಮರ್ಥ್ಯದಿಂದಲೇ ಆತ ಜಗತ್ತನ್ನು ಸೃಷ್ಟಿಸಿ, ಪೋಷಿಸಿ ಲಯಗೊಳಿಸುವ ಆಟ ಆಡುತ್ತಾನೆ.

ಮರಳದಿಣ್ಣೆಯಲ್ಲಿ ಗುಬ್ಬಚ್ಚಿಗೂಡನ್ನು ಕಟ್ಟಿ ಮಕ್ಕಳು ಆಟ ಆಡುತ್ತಾರೆ. ಆ ಗೂಡು ಮಕ್ಕಳ ಸೃಷ್ಟಿ. ಅದು ಬಹಳ ಕಾಲ ಹಾಗೆಯೇ ಇರಬೇಕೆಂದೂ ಅವರು ಬಯಸುತ್ತಾರೆ. ಅಲ್ಲಿನ ಚಿಪ್ಪುಗಳಿಂದ ಆ ಗೂಡನ್ನು ಸಿಂಗರಿಸುತ್ತಾರೆ. ಸ್ವಲ್ಪಕಾಲದ ನಂತರ ಅವರೇ ಅದನ್ನು ಹಾಳುಗೆಡವಿ ಅಲ್ಲಿಂದ ಹೊರಡುತ್ತಾರೆ ಅಥವಾ ಅವರ ಕಣ್ಣೆದುರಿನಲ್ಲೇ ಅದು ಸಮುದ್ರದ ತೆರೆಗಳಿಂದ ಮರಳ ರಾಶಿಯಾಗುತ್ತದೆ.

ಹಾಗೆಯೇ ಈ ವಿಶ್ವ ಸೃಷ್ಟಿಕರ್ತನ ಒಂದು ಲೀಲೆ. ಅವನು ಬೇಕಾದಂತೆ ಸೃಷ್ಟಿಸಬಲ್ಲ, ಸೃಷ್ಟಿಸದಿರಲೂ ಬಲ್ಲ, ಕಾಯಬಲ್ಲ, ಬದಲಿಸಬಲ್ಲ, ಸುಮ್ಮನಿರಬಲ್ಲ. ಮಕ್ಕಳಿಗೆ ಆಟದಿಂದ

ಒದಗುವ ರಂಜನೆ, ತೃಪ್ತಿಯಂತೆಯೇ ಸೃಷ್ಟಿ ಸ್ಥಿತಿ ಲಯಗಳಿಂದ ದೇವರಿಗೆ ತೃಪ್ತಿ, ರಂಜನೆ, ತನ್ನ ಸೃಷ್ಟಿಯ ಬಗ್ಗೆ ಆತನಿಗೆ ಅಭಿಮಾನವಿರುವುದರಿಂದಲೇ ಆ ಕ್ರಿಯೆ ನಿರಂತರ ಶಾಶ್ವತವಾಗಿ ನಡೆಯುತ್ತಿರಬೇಕೆಂದು ಆತನ ಇಚ್ಛೆ. ತನ್ನ ಇಚ್ಛಾಶಕ್ತಿಯಿಂದಲೇ ಆತ ಸೃಷ್ಟಿ ಸ್ಥಿತಿ ಲಯಗಳನ್ನು ನಿರ್ವಹಿಸುತ್ತಾನೆ, ಆತ ಎಂದೆಂದಿಗೂ ತನ್ನ ಸೃಷ್ಟಿಗೆ ಅನ್ಯಾಯ ಮಾಡುವುದೂ ಇಲ್ಲ. ಉಪದ್ರವ ಕೊಡುವುದೂ ಇಲ್ಲ. ಜಗತ್ತಿನ ತಂದೆಯಾದ ಈತ ತನ್ನ ಸೃಷ್ಟಿಗೆ/ಮಕ್ಕಳಿಗೆ ಉಪದ್ರವ ನೀಡುತ್ತಾನೆಂಬ ಮಾತು ಅರ್ಥಹೀನ. ಈತ ತಾನೇ ಸೃಷ್ಟಿಸಿದ ಜಗತ್ತನ್ನು ತನ್ನಿಚ್ಛೆಯಂತೆ ನಿಯಂತ್ರಿಸುತ್ತಾನಾದುದರಿಂದ ಸರ್ವಶಕ್ತನೆಂಬ ಹೆಸರು ಈತನಿಗೆ ಅನ್ವರ್ಥ.

ಈ ದೇವರ ಅದ್ಭುತ ಸೃಷ್ಟಿ ಸಾಮರ್ಥ್ಯಕ್ಕೆ 'ಮಾನವ' ಸರ್ವಶ್ರೇಷ್ಠ ಉದಾಹರಣೆ. ಒಂದನ್ನೊಂದು ಹೋಲುವ, ಒಂದೇ ಅಳತೆಯ ಒಂದೇ ಗಾತ್ರದ, ಒಂದೇ ಆಕಾರದ–ಬಣ್ಣದ ಮಾನವ ನಿರ್ಮಿತವಾದ ಕುರ್ಚಿ, ಮೇಜು, ಬೆಂಚು, ಕಿಟಕಿ ಇತ್ಯಾದಿಗಳನ್ನು ಸಾಲಾಗಿ/ಒಟ್ಟಾಗಿ ಜೋಡಿಸಿದ್ದರೆ ಒಂದನ್ನೊಂದು ಪ್ರತ್ಯೇಕಿಸಿ ಗುರುತಿಸಲು ಸಾಧ್ಯವಿಲ್ಲ.

ಆದರೆ ಲಕ್ಷ ಜನರ ಗುಂಪಿನಲ್ಲೂ ಪ್ರತಿಯೊಬ್ಬನನ್ನು ಪ್ರತ್ಯೇಕವಾಗಿ ಗುರುತಿಸಬಹುದು. ಒಬ್ಬ ಮನುಷ್ಯನನ್ನು ಎಲ್ಲ ರೀತಿಯಲ್ಲೂ ಸಂಪೂರ್ಣ ಹೋಲುವ ಇನ್ನೊಬ್ಬ ಈ ದೇವರ ಭಗವಂತನ ಸೃಷ್ಟಿಯಲ್ಲಿಲ್ಲ. ಇದು ದೇವರ ಸೃಷ್ಟಿ ಸಾಮರ್ಥ್ಯಕ್ಕೆ/ಕೌಶಲಕ್ಕೆ ಒಂದು ಉದಾಹರಣೆ. ಅದನ್ನೇ ದಾಸರು ಕೊಂಡಾಡುತ್ತಾರೆ – ನಿನ್ನ ಸಮಾನರುಂಟೇ ದೇವಾ! ರಕ್ಷಿಸು ನಮ್ಮ ನವವರತ.

ಬದುಕು ಒಂದು ಚಿಂತನೆ

ಶಿಕ್ಷೆ ವಿಧಿಸಲು ತೀರ್ಮಾನಿಸಿದ ರಾಜನನ್ನು ಕುರಿತು ಕವಿಯೊಬ್ಬ ಹೇಳಿದನೆಂಬ ಒಂದು ಚಾಟು ಶ್ಲೋಕ ಹೀಗಿದೆ.

ಭಟ್ಟಿರ್ನಷ್ಟೋ ಭಾರವಿಶ್ಚಾಪಿ ನಷ್ಟಃ
ಭಿಕ್ಷುರ್ನಷ್ಟೋ ಭೀಮಸೇನೋಪಿನಷ್ಟಃ।
ಭುಕ್ಕುಂಡೋಹಂ ಭೂಪತಿಸ್ತ್ವಂ ಹಿ ರಾಜನ್
ಭಭ್ಭಾವಲ್ಯಾಂ ಅಂತಕಃ ಸನ್ನಿವಿಷ್ಟಃ

ಭ, ಭಾ, ಭಿ, ಭೀ ಆದ್ಯಕ್ಷರದ ನಾಮಾಂಕಿತರಾದ ಭಟ್ಟಿ, ಭಾರವಿ, ಭಿಕ್ಷು, ಭೀಮಸೇನರು ಸತ್ತರು. 'ಭುಕ್ಕುಂಡ' ನೆಂಬ 'ಭು' ಕಾರಾದಿನಾಮನಾದ ನಾನು ಸತ್ತರೆ

ಮುಂದಿನ ಸರದಿ 'ಭೂ' ಪತಿಗಳಾದ ನಿಮ್ಮದು. ನಮ್ಮನ್ನು ಸಾಯಿಸುವವರೂ ಸಾವಿನ ಸರದಿಯಲ್ಲಿರಲೇಬೇಕಾದುದು ಯಮಶಾಸನ ಎಂಬ ಧ್ವನ್ಯರ್ಥ ಇಲ್ಲಿ ಪ್ರಸ್ತುತ.

ಇಂದ್ರಿಯಗಳ ಮೇಲೆ ಹತೋಟಿ ಇಲ್ಲದೆ ಕ್ಷಣಿಕ ಆವೇಶಕ್ಕೆಕ್ಕೊಳಗಾಗಿ, ಒತ್ತೆಯಾಳಾಗಿರಿಸಿಕೊಂಡೋ ಅಥವಾ ಎಲ್ಲೆಂದರಲ್ಲಿ, ನಿರ್ಭಯವಾಗಿ ಯಾರನ್ನು ಬೇಕಾದರೂ ಸಾಯಿಸುವ ಅನೇಕ ಕ್ರೂರ ವಿಧಾನಗಳನ್ನು ನಾವು ಕಲಿತಿದ್ದೇವೆ. ನಮಗೂ ಅಂತಹ ಸಾವು ಬಂದೀತು ಎಂಬ ಭಾವನೆ ಇಂದು ನಮಗಿಲ್ಲವಾಗಿದೆ. ಯಕ್ಷನ ಪ್ರಶ್ನೆಗೆ ಉತ್ತರಿಸುತ್ತ ಧರ್ಮರಾಯನೂ ಉತ್ತರಿಸುತ್ತಾನೆ–ಪ್ರತಿದಿನ ಅಸಂಖ್ಯ ಜೀವಿಗಳ ಸಾವನ್ನು ಕಣ್ಣಾರೆ ನೋಡುತ್ತಿದ್ದರೂ ಜನರು ತಾವು ಚಿರಂಜೀವಿಗಳೆಂದು ಭ್ರಮಿಸುತ್ತಿರುವುದೇ ಆಶ್ಚರ್ಯ.

ಮುಂದೊಂದುದಿನ ಈ ಭ್ರಮೆಯು ಪರಾಕಾಷ್ಠೆಗೇರಿ ಅಂಗಿಯನ್ನು ಹರಿದು ಜೇಬಿನ ಹಣವನ್ನು ಕಸಿಯುವ, ಇನ್ನೊಬ್ಬನ ಊಟದ ತಟ್ಟೆಯನ್ನೆಳೆದು ಉಣ್ಣುವ, ತನಗಿಲ್ಲದುದೆಲ್ಲವನ್ನೂ ಇತರರಿಂದ ದೋಚುವ, ಬಲಾತ್ಕರಿಸುವ, ಲೂಟಿ ಮಾಡುವ ಘಟನೆಗಳು ರಾಜಾರೋಷವಾಗಿ ನಡೆದರೆ ಆಶ್ಚರ್ಯವಿಲ್ಲ. ದರೋಡೆ, ಅತ್ಯಾಚಾರ, ಭ್ರಷ್ಟಾಚಾರ–ಅಪ್ರಾಮಾಣಿಕತೆಗಳನ್ನೇ ಮೈಗೂಡಿಸಿಕೊಂಡ ಬಹುಸಂಖ್ಯಾಕರಿಂದ ನಿರ್ದೋಷಿಗಳೂ, ನಿಷ್ಕಪಟಿಗಳೂ, ಪ್ರಾಮಾಣಿಕರೂ ಎನಿಸಿಕೊಂಡ ಅಲ್ಪಸಂಖ್ಯಾಕರು ಶಿಕ್ಷಿಸಲ್ಪಡುವ ಕಾಲ ದೂರವಿರಲಾರದು.

ಈ ಕ್ಷೋಭೆ, ಅತೃಪ್ತಿ, ಮನೋವಿಕಾರಗಳಿಗೆ ಮುಖ್ಯವಾಗಿ ಎರಡು ಕಾರಣಗಳು ಸ್ಪಷ್ಟ. ಜನಸಂಖ್ಯಾ ಸ್ಫೋಟ ಮೊದಲನೆಯದು. ಆದರ್ಶಗಳ ಕೊರತೆ ಎರಡನೆಯದು. ಅಶನ–ವಸನ–ಪ್ರವೃತ್ತಿ–ನೌಕರಿಗಳಂತಹ ಸಂಗತಿಗಳಲ್ಲಿರುವ ಅವಕಾಶಗಳಿಗಿಂತ ಹೆಚ್ಚಿನ ಜನಸಂಖ್ಯೆಯಿಂದಾಗಿ, ಅವಕಾಶ ವಂಚಿತರಾದ ಜನರಲ್ಲಿ ಅಶಾಂತಿ, ಅತೃಪ್ತಿ, ಆಕ್ರೋಶ, ದ್ವೇಷ, ಅಸೂಯೆ, ಅಪ್ರಾಮಾಣಿಕತೆ, ಅಪನಂಬಿಕೆ ಮೊದಲಾದ ಎಲ್ಲ ದುರ್ಭಾವನೆಗಳೂ ಉದಯಿಸುವುದು ಸ್ವಾಭಾವಿಕ. ಸಂಯಮಿಗಳಾದ ಋಷಿ–ಮುನಿಗಳಂತೆ, ಪಶು–ಪಕ್ಷಿ ಸಂಕುಲದಲ್ಲೂ ಸಹಜವಾದ–ಕುಟುಂಬ ಯೋಜನೆಯನ್ನು ಸ್ವಯಂ ಸ್ಫೂರ್ತಿಯಿಂದ ಅನುಸರಿಸುವುದು ಇದಕ್ಕೆ ಪರಿಹಾರ.

ನಮಗಿಂದು ಆದರ್ಶದ ಬೆಳಕೇ ಗೋಚರಿಸುತ್ತಿಲ್ಲ. "ಸ್ವಸ್ತಿ ಪಂಥಾ ಮನುಚರೇಮ ಸೂರ್ಯಾ ಚಂದ್ರಮಸಾವಿವ" – ಸಮಸ್ತ ಜೀವರಾಶಿಗೆ ಹಗಲಿರುಳೂ ಬೆಳಕನ್ನು ನೀಡುವ ಸೂರ್ಯಚಂದ್ರರಂತೆ ಒಳ್ಳೆಯ ಮಾರ್ಗದಲ್ಲಿ ಪ್ರಗತಿಯತ್ತ ಮುನ್ನಡೆಯೋಣ ಎಂಬುದು ವೇದದ ಸಂದೇಶ. ಸರ್ವಸಮಭಾವದಿಂದ, ಸಮರ್ಪಣ ಭಾವದಿಂದ, ಜಗತ್ತನ್ನು ಬೆಳಗಿಸುವ ಆದರ್ಶ ಪುರುಷರು ನಮಗೀಗ ಬೇಕು. ಶ್ರೇಷ್ಠರ ಆಚರಣೆಯನ್ನು ಇತರರು ಅನುಸರಿಸುತ್ತಾರೆ. ಅವರ ಆದರ್ಶ ನಮಗೆ ಪ್ರಮಾಣ ಎಂಬುದು ಗೀತೆಯ ಉಪದೇಶ. ವೇದ–ಪುರಾಣಗಳ ಕಾಲದ ಮಹಾಪುರುಷರ ಬದುಕಿನ ಆದರ್ಶದ ಚಿತ್ರಣಗಳು ಯುವ ಪೀಳಿಗೆಗೆ ದೊರಕದಂತೆ ಶಿಕ್ಷಣ ಕ್ಷೇತ್ರದಿಂದ ಮರೆಯಾಗುತ್ತಿವೆ. ಪ್ರಚಲಿತ ವಿದ್ಯಮಾನಗಳ

ಹಿನ್ನೆಲೆಯಲ್ಲಿ ಅನುಕರಿಸಲು, ಅನುಸರಿಸಲು ಯೋಗ್ಯರಾದ ಮಹಾಪುರಷರನ್ನು ಹುಡುಕಲು ಹಗಲು ದೀವಟಿಗೆ ಬೇಕಾದೀತು.

ಹೀಗೆ ದಾರಿ ತಪ್ಪಿದ ಬದುಕಿಗೆ ಆಧ್ಯಾತ್ಮಿಕ ಚಿಂತನೆಯೇ ನೆಲೆ. ವೈರಾಗ್ಯ ಈ ನೆಲೆಗೆ ಸಹಕಾರಿ. ಬದುಕಿನ ಕ್ಷಣಿಕತೆಯ ಕಲ್ಪನೆಯೇ ವಿರಕ್ತಿಯ ಮೂಲ. ಛತ್ರದಲ್ಲೋ, ಹೋಟೆಲ್ ನಲ್ಲೋ ತಂಗಿದ್ದಕ್ಕಾಗಿ ಇನಾಮನ್ನೋ, ಬಾಡಿಗೆಯನ್ನೋ ನೀಡಿ, ನೆನಪನ್ನುಳಿಸಿ, ಋಣ ತೀರಿಸಿ ಹೊರಡುವಂತೆ, ಇಹಲೋಕ ಯಾತ್ರೆಯನ್ನು ಮುಗಿಸುವ ಮೊದಲು, ದಾನ ಧರ್ಮಾದಿ ಸತ್ಕಾರ್ಯಗಳ ನೆನಪನ್ನುಳಿಸಿ, ಸದಾಚಾರ–ಆದರ್ಶಗಳ ಮೂಲಕ ಸಮಾಜದ ಋಣ ತೀರಿಸಿ, ಪುಣ್ಯದ ಬುತ್ತಿಯೊಂದಿಗೆ ಲೋಕಾಂತರಕ್ಕೆ ಪಯಣಿಸುವ ಯೋಚನೆ–ಯೋಜನೆಗಳೇ ಪ್ರಸ್ತುತ ಸುಖ–ತೃಪ್ತಿ–ಸಂತೋಷಗಳನ್ನು ನೀಡಬಲ್ಲವು.

ವಿಧಿ

ಅಯಮಮೃತ ನಿದಾನಂ ನಾಯಕೋಪ್ಯೋಷಧೀನಾಂ
ಶತಭೀಷಗನುಯಾತಃ ಶಂಭು ಮೂರ್ತೋ ವತಂಸಃ।
ವಿರಹಯತಿ ನಚೈನಂ ರಾಜಯಕ್ಷ್ಮಾ ಶಶಾಂಕಂ
ಹತವಿಧಿಪರಿಪಾಕಃ ಕೇನ ವಾಲಂಘನೀಯಃ

ಈ ಚಂದ್ರ ಅಮೃತಮಯ ಕಿರಣಗಳುಳ್ಳವನು, ಸಸ್ಯಗಳ ಔಷಧೀಯ ಗುಣಗಳನ್ನು ಹೆಚ್ಚಿಸುವ ಔಷಧಗಳೊಡೆಯ, ಈತನ ಹಿಂದೆ 'ಶತಭಿಷಕ್'–ನೂರಾರು ವೈದ್ಯರು. (ಅಂದರೆ–'ಶತಭಿಷಾ' ನಕ್ಷತ್ರದಿಂದ ಅನುಸರಿಸಲ್ಪಡುವವನು), ಪ್ರಳಯರುದ್ರನ ತಲೆಯ ಮೇಲಿರುವವನು ಆದರೂ ಈತನನ್ನು 'ರಾಜಯಕ್ಷ್ಮಾ' ಕ್ಷಯರೋಗ ಬಿಡದು. ಆದುದರಿಂದ ಕೃಷ್ಣಪಕ್ಷದ 15 ದಿನಗಳಲ್ಲಿ ಈತ ಕ್ಷೀಣಿಸುತ್ತಾ ಹೋಗುತ್ತಾನೆ. ಇದನ್ನೇ 'ವಿಧಿ' ಯೆನ್ನುವುದು. ಇಷ್ಟು ಸಮರ್ಥನಾದ ಚಂದ್ರನನ್ನೇ ಬಿಡದ ಈ "ವಿಧಿ" ಅದೃಷ್ಟ ಅಥವಾ "ದುರದೃಷ್ಟ" ಯಾರನ್ನು ತಾನೆ ಬಿಟ್ಟೀತು? ಜಗತ್ತಿಗೆ ಸಮಸ್ತವನ್ನು ನೀಡಲು ಸಮರ್ಥನಾದ ಈಶ್ವರನೂ ಭಿಕ್ಷೆ ಬೇಡುತ್ತಾ ಅಲೆದಾಡಿದುದು ಈ 'ವಿಧಿ'ಯ ಕೈವಾಡವೇ ಅಲ್ಲವೆ.

'ವಿಧಿವಶ' ಎಂಬಲ್ಲಿ 'ವಿಧಿ' ಎಂಬುದಕ್ಕೆ 'ಸಾವು' ಎಂಬ ಅರ್ಥವಾಗುತ್ತದೆ. ಈ ಅರ್ಥ ನಮಗೆ ಪ್ರಕೃತ ವಿವಕ್ಷಿತವಲ್ಲ.

ಡಿ.ವಿ.ಜಿ. ಯವರು ಹೇಳುವಂತೆ ನಮ್ಮ ಬದುಕು ಒಂದು ಜಟಕಾ ಬಂಡಿ. ಈ ಬದುಕಿನ ಬಂಡಿ ಅದರ ಸಾಹೇಬನಾದ 'ವಿಧಿ'ಯ ಇಚ್ಛೆಯಂತೆಯೇ ಚಲಿಸಬೇಕು. ಎಲ್ಲರ ಮೇಲೆ 'ಸಾಹೇಬಗಿರಿ'ಯನ್ನು ಮಾಡುವ ಈ 'ವಿಧಿ' 'ಅ–ದೃಷ್ಟ'. ಅಂದರೆ ಸಾಮಾನ್ಯ ಕಣ್ಣಿಗೂ, ದೂರದೃಷ್ಟಿಗೂ, ಊಹೆಗೂ ಗೋಚರವಾಗದುದು. ಮದುವೆ ಮನೆ ಮಸಣವಾಗುವುದು, ಸಿರಿವಂತ ದರಿದ್ರನಾಗುವುದು, ಬಡವನಿಗೆ ಲಾಟರಿ ಲಕ್ಷ್ಮಿ ಒಲಿಯುವುದು, ತೀವ್ರ ಅಪಘಾತದಲ್ಲಿ ಏನೂ ಆಗದೆ ಬದುಕಿ ಉಳಿಯುವುದು ಇವೆಲ್ಲವೂ ಈ ವಿಧಿಯ ಆಟ.

ವಿಧಿಯ ಆಟದಂತೆ ಎಲ್ಲವೂ ನಡೆದೇ ತೀರುತ್ತದೆಂದು ಅದೃಷ್ಟದ ಮೇಲೆಯೇ ಭಾರ ಹಾಕಿ ಕೈಕಟ್ಟಿ ಸಮ್ಮನೇ ಕುಳಿತುಕೊಳ್ಳುವುದು ಸಲ್ಲದು. ಅದೃಷ್ಟವನ್ನು ಪರೀಕ್ಷಿಸುತ್ತಾ ಸುಮ್ಮನೆ ಮಲಗಿದ ಸಿಂಹದ ಬಾಯೊಳಗೆ ಮೃಗಗಳು "**ನ ಹಿ ಸಪ್ತಸ್ಯ ಸಿಂಹಸ್ಯ ಪ್ರವಿಶಂತಿ ಮುಖಂ ಮೃಗಾಃ** ॥ ತಾವಾಗಿ ಬಂದು ಬೀಳುವುದಿಲ್ಲ. ಬೇಟೆಯಾಡುವುದು ಅನಿವಾರ್ಯ.

ಎಲ್ಲವನ್ನೂ ವಿಧಿಯ ಹೆಗಲ ಮೇಲಿರಿಸಿ ವಾದಿಸುವುದೇ "ಅದೃಷ್ಟವಾದ". ಸದ್ಯದಲ್ಲೇ ಪ್ರಳಯ ಆಗಿಯೇ ಆಗುತ್ತದೆ. ಜಗತ್ತೇ ನಶ್ವರ. ನಾವೆಲ್ಲ ಒಂದಲ್ಲ ಒಂದು ದಿನ ಸಾಯುವವರೇ ಎಲ್ಲ ಅವರವರ ಹಣೆಯಲ್ಲಿ ಬರೆದಂತೆಯೇ ಆಗುತ್ತದೆ ಎಂಬ ಅದೃಷ್ಟ ವಾದುದಲ್ಲಿ ಹುರುಳಿಲ್ಲ ವಿಧಿಯ ಆಟಕ್ಕಿಂತ ಪುರುಷ ಪ್ರಯತ್ನವೇ ಮಿಗಿಲು ಎಂಬ ಅಭಿಪ್ರಾಯದ ಒಂದು ಸುಭಾಷಿತ ಹೀಗಿದೆ .

ಉದ್ಯೋಗಿನಂ ಪುರಷಸಿಂಹಮುಪೈತಿ ಲಕ್ಷ್ಮೀ :
ದೈವೇನ ದೇಯಮಿತಿ ಕಾಪುರುಷಾವದಂತಿ।
ದೈವಂ ನಿಹತ್ಯಕುರು ಪೌರುಷಮಾತ್ಮ ಶಕ್ತ್ಯಾ
ಯತ್ನೇಕೃತೇ ಯನಿ ನಸಿಧ್ಯತಿ ಕೋತ್ರದೋಷಃ ॥

ಭಗವದ್ಗೀತೆಯ **ಕರ್ಮಣ್ಯೇವಾಧಿಕಾರಸ್ತೇ** ಎಂಬ ಕರ್ಮಯೋಗವೂ ಇದನ್ನೇ ಹೇಳುತ್ತದೆಯಷ್ಟೆ.

ಹೀಗೆ ಮನುಷ್ಯನ ಬದುಕಿನಲ್ಲಿ ವಿಧಿಯ ಪಾತ್ರ ಅತ್ಯಂತ ಮಹತ್ವದ್ದು. ಆದರೆ ಕಾಣದ ವಿಧಿಯನ್ನೇ ನಂಬಿ ಹೇಡಿಯಂತೆ ಕುಳಿತಿರಬಾರದು. ಕರ್ತವ್ಯನಿರತನಾಗಿರಬೇಕು. ಪ್ರಯತ್ನಶೀಲನಾಗಿ ವಿಧಿಯನ್ನು ಒಲಿಸಿಕೊಳ್ಳಬೇಕು.

ವೇದಗಳು

ಪರ ಪ್ರತ್ಯಯನೇಯ ಬುದ್ಧಿಯವರು ಕೆಲವರಿರುತ್ತಾರೆ. ಅಂದರೆ ಇವರು ಯಾವುದನ್ನೂ ವಿಮರ್ಶಿಸುವುದಿಲ್ಲ. ಇತರರು ಹೇಳುವ ಮಾತುಗಳನ್ನೇ ಸಂಪೂರ್ಣ ನಂಬುವ ಬುದ್ಧಿ ಇವರದು. ಹಾಗೆಯೇ ವೇದಗಳು, ಪುರಾಣಗಳು ಯಾವುದೋ ಒಂದು ವರ್ಗದ ಜನರಿಗೆ ಮಾತ್ರ ಮೀಸಲು ಎಂಬ ಭಾವನೆ ಅನೇಕರಲ್ಲಿದೆ. ಆದರೆ ನಮ್ಮ ವೇದ. ಪುರಾಣ ಮೊದಲಾದ ಪ್ರಾಚೀನ ಗ್ರಂಥಗಳಲ್ಲಿ ಅಡಕವಾಗಿರುವ ಸಮಸ್ತ ವಿಷಯಗಳೂ ಸಾರ್ವತ್ರಿಕವೂ ಸಾರ್ವಕಾಲಿಕ ಸತ್ಯವೂ ಆಗಿವೆ ಎಂಬುದನ್ನು ವಿಮರ್ಶಿಸಿದಾಗ ಮಾತ್ರ ತಿಳಿಯಲು ಸಾಧ್ಯ.

ಜ್ಞಾನಾರ್ಥಕ ಕ್ರಿಯಾಪದದಿಂದ 'ವೇದ' ಶಬ್ದದ ವ್ಯುತ್ಪತ್ತಿಯನ್ನು ಹೇಳಲಾಗುತ್ತದೆ. ವೇದಗಳನ್ನು ಅಪೌರುಷೇಯ ಎಂದು ಪರಂಪರಾನುಯಾಯಿಗಳು ಹೇಳುವುದುಂಟು. ಚತುರ್ಮುಖ ಬ್ರಹ್ಮನ ಬ್ರಹ್ಮಾಂಡ ಸೃಷ್ಟಿಯೊಂದಿಗೇ ಆತನ ಮುಖಗಳಿಂದ ವೇದಗಳು ಹೊರಹೊಮ್ಮಿದುವು ಎಂಬ ಮಾತಿನಲ್ಲಿ ವೇದಗಳ ಬಗ್ಗೆ ಅಪಾರ ಗೌರವ, ಶ್ರದ್ಧೆ, ಪಾವಿತ್ರ್ಯ ಮೊದಲಾದ ಭಾವನೆಗಳು ಅಡಕವಾಗಿದೆ.

ವೇದದ ಸಣ್ಣ ಘಟಕಕ್ಕೆ 'ಮಂತ್ರ' ವೆಂದು ಹೆಸರು. **ಮನನಾತ್ ಮಂತ್ರಾಃ**. ಋಷಿಗಳಿಗೆ 'ಮುನಿ'ಗಳು ಅಂದರೆ ಮನನಶೀಲರು ಎಂದೂ ಹೆಸರಿಗೆ **ಋಷಯಸ್ತು ತಪಸ್ತೇಪುಃ ಸರ್ವೇಸ್ವರ್ಗ ಜಿಗೀಷವಃ** ಎಂಬ ಖಿಲಮಂತ್ರದಂತೆ ಬದುಕಿನ ಸುಖಸಂಪತ್ತುಗಳಿಗಾಗಿ ಸರ್ವಶಕ್ತನನ್ನು ಕುರಿತು ನಿರಂತರ ಚಿಂತನೆಯ ಫಲವೇ ಈ ಮಂತ್ರಗಳು. ಹೀಗೆ ನಿರಂತರ ಚಿಂತನೆಯಿಂದ ಮಾನವ ಜೀವನದ ರಹಸ್ಯವನ್ನು ಮಂತ್ರರೂಪದಲ್ಲಿ ಕಂಡುಹಿಡಿದು ದರಿಂದ ವಿಶ್ವಾಮಿತ್ರ, ವಸಿಷ್ಠ ಮೊದಲಾದವರು ಮಂತ್ರದ್ರಷ್ಟಾರರಾದ ಋಷಿಗಳಾದರು.

ವೇದಗಳಲ್ಲಿ ಅಡಕವಾದ ಪವಿತ್ರವಾದ ಆಧ್ಯಾತ್ಮಿಕ ಭಾವನೆಗಳಿಗೆ ಆಧುನಿಕ ವಿಚಾರ ವಾದಿಗಳಿಂದ ಆಘಾತವಾಗಬಾರದೆಂಬುದಕ್ಕಾಗಿ ಆಪೌರುಷೇಯತ್ವದ ವಜ್ರಕವಚ ತೊಡಿಸಿದರೂ ಇಲ್ಲಿ ಪ್ರತಿಪಾದಿತವಾದ ವಿಷಯಗಳು ಜೀವವಿಕಾಸದ ಭವ್ಯಪರಂಪರೆ ಯನ್ನೂ ಮಾನವನ ಬದುಕಿನ ಸಮಸ್ತ ಆಗುಹೋಗುಗಳನ್ನೂ, ವೈಜ್ಞಾನಿಕ ಸತ್ಯವನ್ನೂ, ಪಾರಲೌಕಿಕ ವೈಚಾರಿಕ ಸಿದ್ಧಾಂತಗಳನ್ನೂ ಪ್ರತಿಬಿಂಬಿಸುತ್ತವೆ.

ಋಗ್ವೇದದಲ್ಲಿ ಅನೇಕ ಅಲೌಕಿಕ ವ್ಯಕ್ತಿಗಳ ಆಚಾರ ವಿಚಾರ ಹಾಗೂ ಅವರ ಬದುಕಿನ ಘಟನೆಗಳನ್ನೊಳಗೊಂಡ ಹಲವು ಕಥೆಗಳಲ್ಲದೆ ಅಗ್ನಿ, ವಾಯು ಮೊದಲಾದ ಪಂಚಭೂತಗಳ ಆರಾಧನೆಗೆ ಸಂಬಂಧಿಸಿದ ಸ್ತೋತ್ರಗಳೂ ಇವೆ. ಸುಮಾರು ನಾಲ್ಕೂವರೆ ಸಾವಿರ ವರ್ಷಗಳ ಭಾರತೀಯ ಸಂಸ್ಕೃತಿಯ ವಿಕಾಸದ ಭವ್ಯ ಇತಿಹಾಸದ ಮನೋಜ್ಞ ಚಿತ್ರಣವಿದೆ. ಮಾನವ ಜೀವನ ವಿಕಾಸಕ್ಕೆ ಮಹರ್ಷಿಗಳ ತ್ಯಾಗ–ತಪಸ್ಸಿನ ಕಾಣ್ಕೆಯಿದೆ. ತತ್ಕಾಲೀನ ಸಾಮಾಜಿಕ ಪರಿಸ್ಥಿತಿಯ ದಿವ್ಯದರ್ಶನವಿದೆ.

"ಇಂದ್ರ ಶ್ರೇಷ್ಠಾನಿ ದ್ರವಿಣಾನಿ ದೇಹಿ" ಎಂಬ ಮಂತ್ರದಲ್ಲಿ ನಮಗೆ ಸುಖಸಂಪತ್ತನ್ನು ನೀಡುವಂತೆ ಇಂದ್ರನೊಡನೆ ಪ್ರಾರ್ಥನೆಯಿದೆ. "ದೈವೀ 'ಸ್ವಸ್ತಿರಸ್ತುನಃ ಸ್ವಸ್ತಿ ರ್ಮಾನುಷೇಭ್ಯಃ", "ಶಂ ನೋ ಅಸ್ತು ದ್ವಿಪದೇ ಶಂ ಚತುಷ್ಪದೇ" "ನಮಗೆ ಒಳಿತಾಗಲಿ, ಎರಡು ಕಾಲಿನವರಿ ಗಲ್ಲದೆ, ಚತುಷ್ಪಾದಿಗಳಾದ ಪಶುಗಳಿಗೂ ಒಳಿತಾಗಲಿ" ಎಂದು ಹಾರೈಸುವ ಈ ಮಂತ್ರಗಳ ಸರಳಾರ್ಥ ಸ್ಪಷ್ಟವಿದೆ.

ನಮೋ ಬ್ರಹ್ಮಣೇ ನಮೋ ಅಸ್ತ್ವಗ್ನಯೇ ನಮಃ ಪೃಥಿವ್ಯೈ ನಮ ಓಷಧೀಬ್ಯಃ ನಮೋ ವಾಚೇನಮೋ ವಾಚಸ್ಪತಯೇ ನಮೋ ವಿಷ್ಣವೇ ಮಹತೇ ಕರೋಮಿ॥ ಈ ಮಂತ್ರದಲ್ಲಿ ಎಲ್ಲರಿಗೂ ನಮಸ್ಕಾರವಿದೆ.

ಸಮಾನೋಮಂತ್ರಃ ಸಮಿತಿಃ ಸಮಾನೀ ಸಮಾನಂ ಮನಃ ಸಹಚಿತ್ತಮೇಷಾಂ।
ಸಮಾನಂ ಮಂತ್ರಮಭಿಮಂತ್ರಯೇವಃ ಸಮಾನೇನವೋ ಹನಿಷಾ ಜಹೋಮಿ॥
ಸಮಾನೀವ ಆಕೂತಿಃ ಸಮಾನಾ ಹೃದಯಾನಿವಃ।
ಸಮಾನಮಸ್ತು ವೋ ಮನೋ ಯಥಾ ವಃ ಸುಸಹಾಸತಿ॥

ಈ ಮಂತ್ರಗಳಲ್ಲಿ ಸರ್ವಸಮಾನತೆ, ಅಖಂಡತೆ ಮತ್ತು ಭಾವೈಕ್ಯದ ಸಂದೇಶವಿದೆ.

ಹೀಗಿದ್ದರೂ ಈ ವೇದಗಳು ಜನಸಾಮಾನ್ಯರನ್ನು ತಲಪದೆ, ಸಾರ್ವತ್ರಿಕ ಸಂದೇಶವನ್ನು ಬೀರದೆ ಕೇವಲ ಕೆಲವೇ ವೈದಿಕ ವಿದ್ವಾಂಸರ ವಶದಲ್ಲೇ ಉಳಿಯಲು ಕಾರಣವೇನು?

ಅರ್ಥೈಸಲು ಸುಲಭ ಸಾಧ್ಯವಲ್ಲದ ಈ ವೇದಮಂತ್ರಗಳ ಅರ್ಥ ವಿವರಣೆಗೆ ಪ್ರತ್ಯೇಕ ಪರಿಭಾಷಾಶಾಸ್ತ್ರವಿದೆ.

ಮಂತ್ರೋಹಿನಃ ಸ್ವರತೋ ವರ್ಣತೋವಾ, ಮಿಥ್ಯಾಪ್ರಯುಕ್ತೋ ನ ತಮರ್ಥಮಾಹುಃ
ಸವಾಗ್ವಜ್ರೋಯಜಮಾನಂಹಿನಸ್ತಿ ಯಥೇಂದ್ರಶತ್ರುಃ ಸ್ವರತೋಪರಾಧಾತ್॥

ಉದಾತ್ತ–ಅನುದಾತ್ತ–ಸ್ವರಿತ ಪ್ರಚಯವೆಂಬ ಸ್ವರಪ್ರಕ್ರಿಯೆಗಳಿಗೆ ವೇದೋಪನಿಷತ್ತು ಗಳಲ್ಲಿ ಅತ್ಯಂತ ಮುಖ್ಯ ಸ್ಥಾನವಿದ್ದು ಸ್ವರಹೀನವಾದ ವೇದೋಚ್ಚಾರಣೆಯಿಂದ ಅರ್ಥ ವ್ಯತ್ಯಾಸವಾಗಿ ವ್ಯಕ್ತಿಯ ನಾಶವಾಗುವ ಎಚ್ಚರಿಕಯಿದೆ. ಆದುದರಿಂದ ಪೂರ್ವಸಂಸ್ಕಾರ ವಿಲ್ಲದೆ, ವೇದಾಧ್ಯಯನಾಧಿಕಾರವಿಲ್ಲದವರು ಈ ಮಂತ್ರಗಳನ್ನು ಅಧ್ಯಯನ ಮಾಡುವ ದುಃಸಾಹಸಕ್ಕೆ ತೊಡಗುವುದಿಲ್ಲ.

'We have all heard and read about the ancient religions of India. It is the land of the great Vedas, the most remarkable works containing not only religions ideas on a perfect life, but also facts which all the science has since proved true. Electricity, Radium, Electronic, Airships all seem to be known to the sires who found the Vedas" ಶ್ರೀಮತಿ ವ್ಹೀಲರ್ ವಿಲ್ಲಾಕ್ಸ್ ಎಂಬ ಅಮೇರಿಕದ ವಿದುಷಿಯ ಈ ಉದ್ಗಾರದಿಂದ ನಾವು ನಮ್ಮ ವೈದಿಕ ಪರಂಪರೆಯ ಬಗ್ಗೆ ಹೆಮ್ಮೆಪಡಬೇಕಾಗಿದೆ.

ಸ್ತ್ರೀ ಧರ್ಮ

ಸ್ತ್ರೀಣಾಮಶಿಕ್ಷಿತ ಪಟುತ್ವಮಮಾನು ಷೀಷು ಸಂದಶ್ಯತೇ ಕಮುತಯಾಃ ಪ್ರತಿ ಬೋಧ ವತ್ಯಃ। ಪ್ರಾಗಂತರಿಕ್ಷಗಮನಾತ್ ಸ್ವಮಪತ್ಯಜಾತಂ ಅನ್ಯೈಃ ದ್ವಿಜೈಃ ಪರ ಭೃತಃ ಖಲು ಪೋಷಯಂತಿ॥ ಹೆಣ್ಣು ಕೋಗಿಲೆ ತನ್ನ ಮರಿಗಳನ್ನು ಕಾಗೆಯ ಗೂಡಿನಲ್ಲಿ ಸಾಕುತ್ತದೆ. ಇಂತಹ 'ಅಶಿಕ್ಷಿತಪಟುತ್ವ' ಕಲಿಸದೇ ಬರುವ ಬುದ್ಧಿ ಕೌಶಲ ಮಾನವೇತರ ಹೆಣ್ಣಿಗೂ ಸ್ವಾಭಾವಿಕ. ಅಂದ ಮೇಲೆ ನಾಗರಿಕ ಸಂಸ್ಕಾರವುಳ್ಳ ಕುಶಾಗ್ರ ಬುದ್ಧಿಯ ಸ್ತ್ರೀಯರ ಬಗ್ಗೆ ಹೇಳಬೇಕಾದುದಿಲ್ಲ ಎಂಬುದು ಕಾಳಿದಾಸನ ಅಭಿಜ್ಞಾನ ಶಾಕುಂತಲ ನಾಟಕದ ಒಂದು ಸಂದರ್ಭ.

ಪ್ರಾಚೀನ ಕಾಲದಿಂದಲೂ ಭಾರತೀಯ ನಾರಿಗೆ ಅತಿಮಹತ್ವ ಮತ್ತು ಗೌರವದ ಸ್ಥಾನವಿದೆ. ಶಂಕರಾಚಾರ್ಯರು ಕುಪುತ್ರೋಜಾಯೇತಕ್ವಚಿದಪಿ ಕುಮಾತಾ ನಭವತಿ। .ಎಂದು ಮಾತೃಸ್ಥಾನದಲ್ಲಿರುವ ಸ್ತ್ರೀ ಎಂದಿಗೂ ಕೆಟ್ಟವಳಾಗಲಾರಳು ಎಂದು ಹೇಳುತ್ತಾರೆ.

ಭಾರತದ ಧಾರ್ಮಿಕ ಮತ್ತು ಐತಿಹಾಸಿಕ ಪರಂಪರೆಯಲ್ಲಿ ಸ್ತ್ರೀಧರ್ಮಕ್ಕೆ ಪ್ರತ್ಯೇಕ ಮಹತ್ವವುಂಟು. ಪನ್ನಾದಾಸಿ ಎಂಬವಳು ರಾಜಕುಮಾರನನ್ನು ಕಾಪಾಡಲು ತನ್ನ ಔರಸ ಪುತ್ರನನ್ನೇ ಬಲಿಕೊಟ್ಟ ಕಥೆ ಎಲ್ಲರಿಗೂ ತಿಳಿದಿದೆ. ಅಕ್ಕಮಹಾದೇವಿ ಐಹಿಕ ಸುಖಭೋಗಗಳಲ್ಲಿ ಯಾವುದೇ ಆಸಕ್ತಿಯಿಲ್ಲದಿದ್ದರೂ ತನ್ನ ತಂದೆತಾಯಿಯರ ಆಪತ್ತಿನ ನಿವಾರಣೆಗಾಗಿ, ಅವರ ತೃಪ್ತಿಗಾಗಿ ಚಂಡಕೌಶಿಕನನ್ನು ಮದುವೆಯಾಗಲು ಸಮ್ಮತಿಸುತ್ತಾಳೆ. ಇವಳ ತ್ಯಾಗ ಅಸಾಧಾರಣವಾದುದು. ಗೋರಿ ಮಹಮ್ಮದನ ಕಾಮತೃಷೆಗೆ ಬಲಿಯಾದ ಪದ್ಮಿನಿ ತನ್ನ ಮಾನ ರಕ್ಷಣೆಗಾಗಿ ಸತಿಯಾಗುತ್ತಾಳೆ. ಅಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಸ್ತ್ರೀಧರ್ಮದ ಆದರ್ಶವನ್ನುಳಿಸಲು ಇವಳ ಆತ್ಮಾರ್ಪಣೆ ಅನಿವಾರ್ಯವಾಗಿತ್ತು.

ಲಕ್ಷ್ಮೀಶನ ಜೈಮಿನಿ ಭಾರತದಲ್ಲಿ ಸೀತಾ ಪರಿತ್ಯಾಗದ ಸನ್ನಿವೇಶ ತುಂಬ ಮಾರ್ಮಿಕವಾಗಿದೆ. 'ಏಕೆ ನಿಂದಿಹೆ, ಪೋಗು, ಸೌಮಿತ್ರಿ! ಕೋಪಿಸನೆ ಕಾಕುತ್ಸ್ಥನಿಲ್ಲಿತಳುವಿ ದೊಡೆ ನೆರಪುಂಟು ತನಗೀ ಕಾಡೊಳು ಗ್ರಜಂತುಗಳಲ್ಲಿ ರಘುನಾಥನೇ ಕಾಕಿಯಾಗಿರ್ಪನು'

ಸೀತೆಯನ್ನು ಭಾರತದ ಆದರ್ಶನಾರಿಯೆಂದು ವರ್ಣಿಸುವಲ್ಲಿ ಕವಿ ಪೂರ್ಣ ಯಶಸ್ವಿಯಾಗಿದ್ದಾನೆ. ಸೀತೆಯಲ್ಲದೆ ಬೇರಾವುದೇ ಮಹಿಳೆ ತನ್ನ ಗಂಡನಿಂದ ಈ ರೀತಿ ಶೋಷಣೆಗೊಳಗಾಗಿದ್ದರೆ ಆಕೆಯ ಪ್ರತಿಕ್ರಿಯೆಯನ್ನು ಊಹಿಸಲಾಗದು. ಆದರೆ ಕಾಡಿನ ಉಗ್ರಮೃಗ ಪಕ್ಷಿಗಳ ಸಹವಾಸದಲ್ಲಿರುವ ಅನಿವಾರ್ಯತೆಗೆ ಹೊಂದಿಕೊಳ್ಳುವ ಚಿತ್ತ ಸ್ಥೈರ್ಯವನ್ನು ತಂದುಕೊಂಡ ಸೀತೆ ರಾಮನ ಏಕಾಕಿತನಕ್ಕಾಗಿ ಚಿಂತಿಸುತ್ತಾಳೆ. ಕಲ್ಲುಗಳೂ ಕರಗುವ ದಯನೀಯ ಸ್ಥಿತಿಯಲ್ಲಿದ್ದ ಈಕೆಯ ಮನಸ್ಸು ಅರಮನೆಯ ಸುಖ ವೈಭವದಲ್ಲಿರುವ ರಾಮನಿಗಾಗಿ ದುಃಖಿಸುತ್ತದೆ. ಇದೇ ಸೀತೆಯ ಆದರ್ಶ." ಹಾ ರಾಮಾ, ಎಂದು ಸೀತೆ ಬಾಯಳಿದತ್ತಳ್" ಎಂಬ ಕವಿ ಪ್ರಯೋಗದಲ್ಲಿ ಸೀತೆ ಗಂಡನ ಹೆಸರನ್ನೆತ್ತಿ ಕೂಗಬಹುದೆ ಎಂಬ ಬಗ್ಗೆ ಕೆಲವರಿಗೆ ಮುಜುಗರವಾಗಬಹುದಲ್ಲವೆ.

ಶ್ರೇಯಸ್ಸನ್ನು ಬಯಸುವವರು ಯಾರ್‍ಯಾರ ಹೆಸರನ್ನು ಕೂಗಿ ಕರೆಯಬಾರದೆಂಬುದಕ್ಕೊಂದು ಸೂಕ್ತಿ

ಆತ್ಮನಾಮ ಗುರೋರ್ನಾಮ ನಾಮಾತಿ ಕೃಪಣಸ್ಯ ಚ।
ಶ್ರೇಯಸ್ಕಾಮೋ ನಗೃಹ್ಣೀಯಾತ್ ಜ್ಯೇಷ್ಠಾಪತ್ಯ ಕಳತ್ರಯೋಃ॥

ಗುರು, ಜಿಪುಣಾಗ್ರೇಸರ, ಹಿರಿಯ ಸಂತಾನ, ಮತ್ತು ಪತ್ನಿ ಇವರನ್ನು ಹೆಸರು ಹಿಡಿದು ಕೂಗಬಾರದೆಂದಿದೆ. ಗಂಡನನ್ನು ಕೂಗಿ ಕರೆಯಬಾರದೆಂದು ಇಲ್ಲಿ ಹೇಳಿಲ್ಲ. ಆದರೆ ಧರ್ಮಪತ್ನಿಯ ಹೆಸರನ್ನು ಹಿಡಿದು ಕೂಗಿಕರೆಯುವುದು ಶ್ರೇಯಸ್ಕರವಲ್ಲವೆಂದು ಹಿರಿಯರ ಹೇಳಿಕೆ. ವಧುವನ್ನು ಗಂಡನ ಮನೆಯಲ್ಲಿ ನಾಮಕರಣದ ಹೆಸರಿಗಿಂತ ಭಿನ್ನವಾದ ಹೆಸರಿನಲ್ಲಿ ಕರೆಯುವ ರೂಢಿ ಅನೇಕರಲ್ಲಿದೆ. ಹಾಗೆಯೇ ಹೆಸರು ಹೇಳಿ ಕರೆಯದೆ ಮಗು, ಮಾಣಿ, ಅಪ್ಪಿ, ಪುಟ್ಟ ಮೊದಲಾದ ಅಡ್ಡ ಹೆಸರಿನಿಂದ ಹಿರಿಯ ಮಕ್ಕಳನ್ನು ಸಂಬೋಧಿಸಲು ಇದೇ ಕಾರಣ.

ಒಂದು ದಾರುಣ ಘಟನೆ. ಮಹಾಭಾರತದ ಯುದ್ಧದ ನಂತರ ಕೌರವ ಪಕ್ಷದಲ್ಲುಳಿದವರು ಕೃಪ, ಕೃತವರ್ಮ, ಅಶ್ವತ್ಥಾಮ ಮತ್ತು ವಿದುರ. ತಮ್ಮ ಪಕ್ಷದಲ್ಲುಳಿದ ಸಾತ್ಯಕಿ ಮತ್ತು ಕೃಷ್ಣರೊಡನೆ ಬೇರೆ ಕಡೆಗೆ ಹೋಗಿದ್ದ ಪಾಂಡವರು ಪ್ರಾತಃಕಾಲ ಶಿಬಿರಕ್ಕೆ ಹಿಂದಿರುಗುವಾಗ ದ್ರೌಪದಿಯ ಐವರು ಮಕ್ಕಳೂ ಅಶ್ವತ್ಥಾಮನ ಕೋಪಾಗ್ನಿಗೆ ಆಹುತಿಯಾಗಿದ್ದರು. ಮಕ್ಕಳ ಶರೀರವನ್ನಪ್ಪಿದ ದ್ರೌಪದಿ ದುಃಖದ ಕಟ್ಟೆಯೊಡೆದು ಮೂರ್ಛಿತಳಾಗುತ್ತಾಳೆ. ಅರ್ಜುನ ತಡಮಾಡದೇ ಅಶ್ವತ್ಥಾಮನನ್ನು ಬಂಧಿಸಿ ಎಳೆದು ತಂದು ದ್ರೌಪದಿಯ ಎದುರು ನಿಲ್ಲಿಸುತ್ತಾನೆ. "ಕೊಲೆಗೆ ಕೊಲೆಯೇ ಪ್ರತೀಕಾರ. ಈತನ ತಲೆಯನ್ನೀಗಲೇ ಕಡಿಯಬೇಕು" ಎಂದು ಭೀಮ ಕೋಪದಿಂದ ಕಿಡಿಗಾರುತ್ತಾ ಅಬ್ಬರಿಸುತ್ತಿರುವಾಗ ದ್ರೌಪದಿ ಕತ್ತಿಯನ್ನು ಹಿರಿದು ಅಶ್ವತ್ಥಾಮನ ತಲೆ ಕಡಿಯಬೇಕಾಗಿತ್ತಲ್ಲವೆ? ಆದರೆ ಆಕೆ, ಎಲ್ಲರನ್ನೂ ಶಾಂತಗೊಳಿಸುತ್ತಾ ಹೇಳುತ್ತಾಳೆ. "ಪುತ್ರ ವಧೆಯ ದುಃಖದ ಆಳ ಎಷ್ಟೆಂಬುದು ನನಗೆ ಅನುಭವವಾಗಿದೆ. ಈತನ ತಾಯಿ ಕೃಪಿ ನಮಗೆ ಗುರುಪತ್ನಿ. ಆಕೆಗೆ ಪುತ್ರವಿಯೋಗದ ದುಃಖವನ್ನು ನೀಡಬಾರದು. ಆದುದರಿಂದ ಇವನನ್ನು ಬಿಡಿ." ಎಂದು ಹೇಳುತ್ತಾಳೆ.

ತನ್ನ ಐವರು ಮಕ್ಕಳ ಶವವನ್ನು ನೋಡುತ್ತಾ ಪುತ್ರಘಾತಕನನ್ನು ಕ್ಷಮಿಸುವ ದ್ರೌಪದಿಯ ಔದಾರ್ಯಕ್ಕೆ ಎಲ್ಲೆಯೆಲ್ಲಿದೆ? "ಕ್ಷಮಯಾಧರಿತ್ರೀ" ಎಂಬುದು ಆದರ್ಶ ಮಹಿಳೆಯರ ಲಕ್ಷಣಗಳಲ್ಲೊಂದು. ಸೀತಾ, ದ್ರೌಪದಿಯಂತಹ ಆದರ್ಶ ಪಾತ್ರಗಳಿಂದಲೇ ರಾಮಾಯಣ ಮಹಾಭಾರತಗಳಿಗೆ ಆ ಹಿರಿಮೆ. ಈ ಗ್ರಂಥಗಳು ನಮಗೆ ಆದರ್ಶವೆಂಬುದೇ ನಮಗೆ ಹೆಮ್ಮೆ.

ಹೆಣ್ಣಿನಿಂದಲೆ ಇಹವು, ಹೆಣ್ಣಿನಿಂದಲೆ ಪರವು
ಹೆಣ್ಣಿಂದ ಸಕಲ ಸಂಪದವು ಹೆಣ್ಣೊಲ್ಲ
ದಣ್ಣಗಳು ಯಾರೆಂದು . . . . ಸರ್ವಜ್ಞಪ್ರಶ್ನಿಸುತ್ತಾನೆ.

ನಾರಿ ಪರರಿಗುಪಕಾರಿ, ಸ್ವರ್ಗಕೆ ದಾರಿ, ಸಕಲರಿಗೆ ಹಿತಕಾರಿ. ಆದುದರಿಂದ ಆಕೆಯನ್ನು ಗೌರವಿಸಬೇಕು. ಮುನಿದರೆ ನಾರಿಯೇ ಮಾರಿ......... ಯೆಂಬುದನ್ನು ಮರೆಯಬಾರದೆಂಬ ಸರ್ವಜ್ಞನ ಎಚ್ಚರಿಕೆ ಅರ್ಥಪೂರ್ಣ.

ಭಕ್ತಿ

ಭಗವಂತನ ಸಾಕ್ಷಾತ್ಕಾರಕ್ಕೆ ಎರಡು ಮಾರ್ಗಗಳು– ಕರ್ಮಮಾರ್ಗ ಮತ್ತು ಭಕ್ತಿಮಾರ್ಗ. ಕರ್ಮಮಾರ್ಗ ದುರ್ಗಮವಾದುದು. ನಿರಂತರ ಸಾಧನೆ–ಕರ್ಮಾನುಷ್ಠಾನದ ಮೂಲಕ ಸವೆಸಬೇಕಾದ ಈ ದಾರಿ ಕಠಿಣವಾದುದು. ಆದರೆ ಭಕ್ತಿಮಾರ್ಗ ಸರಳ, ಸುಲಭ. ವೇದಕಾದಲ್ಲಿ ಕರ್ಮಕಾಂಡಕ್ಕೆ ಪ್ರಥಮ ಪ್ರಾಶಸ್ತ್ಯವಿದ್ದಿದ್ದರೂ ಭಕ್ತಿಮಾರ್ಗ ಪೂರ್ಣ ಮುಚ್ಚಿರಲಿಲ್ಲ.

ಸವಿತಾಪಶ್ಚಾತಾತ್ ಸವಿತಾಪುರಸ್ತಾತ್ ಸವಿತೋತ್ತರಾತ್ತಾತ್ ಸವಿತಾಧರಾತ್ತಾತ್ ।
ಸವಿತಾನಃ ಸುವತು ಸರ್ವತಾ ತಿಂ ಸವಿತಾನೋ ರಾಸತಾಂ ದೀರ್ಘಮಾಯುಃ ॥

ಹಿಂದೆ, ಮುಂದೆ ಎಲ್ಲೆಡೆಯಲ್ಲಿರುವ ಸವಿತೃ ದೇವನು ನಮ್ಮೆಲ್ಲ ಆಶೆಗಳನ್ನು ಪೂರೈಸಲಿ. ದೀರ್ಘಾಯುಷ್ಯವನ್ನು ನೀಡಲಿ. ಎಂಬ ಋಗ್ವೇದದ ಹತ್ತನೇ ಮಂಡಲದ ಈ ಮಂತ್ರದಲ್ಲಿ ಸರ್ವವ್ಯಾಪಕನಾದ ಭಗವಂತನು ತನ್ನನ್ನು ಅನುಗ್ರಹಿಸಿಯೇ ಅನುಗ್ರಹಿಸುತ್ತಾನೆಂಬ ಭರವಸೆ ವ್ಯಕ್ತವಾಗುತ್ತದೆ. 'ಎಡಕೆ ವಿಠಲ, ಬಲಕೆ ವಿಠಲ' ಎಂಬ ಪುರಂದರ ದಾಸರ ಕೀರ್ತನೆ ಈ ಮಂತ್ರಾರ್ಥವನ್ನು ಧ್ವನಿಸುತ್ತದೆ, ಭಗವಂತನ ಸರ್ವವ್ಯಾಪಕತೆಯಲ್ಲಿ ಪೂರ್ಣ ನಂಬಿಕೆ ವ್ಯಕ್ತವಾಗುತ್ತದೆ.

ಭೋಜರಾಜನ ಚಂಪೂರಾಮಾಯಣದಲ್ಲಿನ ಒಂದು ಪ್ರಸಂಗ ತುಂಬ ಸ್ವಾರಸ್ಯಪೂರ್ಣವಾಗಿದೆ. ಶ್ರೀರಾಮಚಂದ್ರ ಕಾಡಿಗೆ ಹೊರಟಿದ್ದಾನೆ. ಗಂಗಾ ನದಿಯನ್ನು ದಾಟಬೇಕು. ದಶರಥನ ಮಿತ್ರನಾದ ನಿಷಾದರಾಜ ಗುಹ ನಾವೆಯನ್ನು ಹತ್ತಿಸುವ ಮೊದಲು ಶ್ರೀರಾಮನ ಕಾಲು ತೊಳೆಯುತ್ತಾ ಹೇಳುತ್ತಾನೆ.

'ಹೇರಾಮ, ನಿನ್ನ ಪಾದಧೂಳಿಯಲ್ಲಿ ಕಲ್ಲನ್ನು ಹೆಣ್ಣನ್ನಾಗಿಸುವ ಶಕ್ತಿಯಿದೆಯಂತೆ. ನನ್ನಲ್ಲಿರುವುದು ಮರದ ಒಂದೇ ದೋಣಿ. ಕಲ್ಲಿಗೂ ಮರಕ್ಕೂ ವ್ಯತ್ಯಾಸವೇನು? ನಿನ್ನ ಚರಣರೇಣು ಸ್ಪರ್ಶದಿಂದ ಮರದ ಈ ದೋಣಿ ಹೆಣ್ಣಾದರೆ ನನ್ನ ಗತಿಯೇನು?

ಕ್ಷಾಲಯಾಮಿ ತವ ಪಾದಪಂಕಜಂ ನಾಥದಾರುದೃಷದೋಃ ಕಿಮಂತರಮ್।
ಮಾನುಷೀಕರಣಚೂರ್ಣಮಸ್ತಿ ತೇ ಪಾದಯೋರಿತಕಥಾ ಪ್ರಥೀಯಸೀ ।

ಪಾದಪ್ರಕ್ಷಾಲನದ ಕೈಂಕರ್ಯದೊಂದಿಗೆ ಶ್ರೀರಾಮನ ಅಹಲ್ಯೋದ್ಧರಣದ ಮಹಿಮೆಯನ್ನು ಕೊಂಡಾಡುವ ಕಾಡಾಡಿಯಾದ, ನವನಾಗರಿಕತೆಯ ಸೋಂಕಿಲ್ಲದ ಗುಹನ ಭಕ್ತಿಯ ಪರಾಕಾಷ್ಠೆಗೆ, ಭಾವಪರವಶತೆಗೆ, ಇದೊಂದು ಸುಂದರ ಉದಾಹರಣೆ.

ದಾಸರು ಹೇಳುತ್ತಾರೆ **'ನೀನ್ಯಾಕೊ, ನಿನ್ನ ಹಂಗ್ಯಾಕೊ: ನಿನ್ನ ನಾಮದ ಬಲವೊಂದಿದ್ದರೆ ಸಾಕೊ"** ಇವರಿಗೆ ಭಗವಂತನ ನಾಮಸ್ಮರಣೆ ಮಾತ್ರದಿಂದಲೇ ಎಲ್ಲವನ್ನೂ ಸಾಧಿಸುವ ಭರವಸೆ.

ಭಕ್ತಿಗೆ ಒಲಿದ ಭಗವಂತ ಭಕ್ತರ ಮನೆಯನ್ನು ಕಾಯಲೂ ಸಿದ್ಧನಾಗುತ್ತಾನೆ. ಆದರೆ ಆ ಭಕ್ತಿ ನಿರ್ಮಲವಾಗಿರಬೇಕು. ದುರಾಸೆಯಿಂದ ಕೂಡಿರದ ಸಾತ್ವಿಕ ಭಕ್ತಿಯಾಗಿರಬೇಕು.

ಭಗವಂತನ ದಾಸನ ದಾಸನ ದಾಸನದಾಸರೆಂದು ಹೇಳಿಕೊಳ್ಳುವ ಭಕ್ತರಿದ್ದಾರೆ. ದಾಸರೆಂಬ ಮೆಟ್ಟಲುಗಳನ್ನೇರುತ್ತಾ ಭಗವಂತನನ್ನು ತಲುಪುವ ಈ ಭಕ್ತಿಯ ಪ್ರಮಾಣವನ್ನು ಅಳೆಯುವುದು ಹೇಗೆ?

ಅಲೌಕಿಕ ಭಕ್ತಿಯೊಂದಿಗೆ ಲೌಕಿಕ ಭಕ್ತಿಯನ್ನು ಸಮನ್ವಯಗೊಳಿಸುವ ಮೀರಾ ಬಾಯಿಯ ಭಕ್ತಿಯ ವಿಧವೇ ಪ್ರತ್ಯೇಕ. ಶ್ರೀಕೃಷ್ಣನನ್ನೇ ತನ್ನ ಪತಿಯೆಂದು, ಸರ್ವಸ್ವವೆಂದು ತಿಳಿದು ಆತನ ತುಷ್ಟಿಗಾಗಿ ಬಾಹ್ಯ ಪ್ರಪಂಚವನ್ನೇ ಮರೆತು ಸಮಸ್ತ ಚೇಷ್ಟಿತಗಳನ್ನೂ ಅರ್ಪಿಸುವ ಈಕೆಯ ಭಕ್ತಿಗೆ ಹೋಲಿಕೆಯಿಲ್ಲ.

ಭೀಮ ಭಕ್ತಿಯೆಂಬುದೊಂದಿದೆ. ಅರ್ಜುನ ಕಠಿಣ ತಪಸ್ಸಿನಿಂದ ಈಶ್ವರನನ್ನೊಲಿಸಿಕೊಂಡು ಪಾಶುಪತಾಸ್ತ್ರವನ್ನು ಸಂಪಾದಿಸಿದ. ಹೊಟ್ಟೆಬಾಕನಾದ ಭೀಮನನ್ನು ಅರ್ಜುನನ ಸಾಧನೆಯ ನೆಪದಲ್ಲಿ ಅಪಹಾಸ್ಯ ಮಾಡುತ್ತಾರೆ. ಆಗ ಭೀಮ ತನ್ನ ಗದೆಯನ್ನು ಗರಗರನೆ ತಿರುಗಿಸಿ ಮೇಲಕ್ಕೆಸೆದನಂತೆ. **"**ಹೇ ಈಶ್ವರ, ನೀನೀಗಲೇ ಪ್ರತ್ಯಕ್ಷನಾಗಿ ನನಗೆ ವರವನ್ನು ಕರುಣಿಸಬೇಕು. ಇಲ್ಲವಾದರೆ, ಕೆಳಗೆ ಬೀಳುತ್ತಿರುವ ಈ ಗದೆಗೆ ಎದೆಯೊಡ್ಡಿ ಆತ್ಮಾರ್ಪಣಗೈಯುತ್ತೇನೆಂದು ಕೂಗಿದನಂತೆ. ಈಶ್ವರ ತತ್‌ಕ್ಷಣವೇ ತನ್ನ ರುದ್ರಶಕ್ತಿಯನ್ನು ಅನುಗ್ರಹಿಸಿದನಂತೆ. ದುಶ್ಯಾಸನ ವಧೆಯ ಸಂದರ್ಭದಲ್ಲಿ ಭೀಮ ಈ ರುದ್ರಾವತಾರ ತಳೆದು ಅಟ್ಟಹಾಸಗೈದ. ಈ ಭೀಮಭಕ್ತಿಗೆ ಸರಿಸಾಟಿಯಾದ ಭಕ್ತಿ ಯಾವುದಿದೆ?

ಕಲ್ಲು ಇಟ್ಟಿಗೆಗಳಿಂದ ಕಟ್ಟಡ ನಿರ್ಮಿಸಿಕೊಂಡು ಅದರ ಎತ್ತರದಲ್ಲಿ ನಿಂತು ಕಿರಿಚುವಷ್ಟು ಭಗವಂತ ಕಿವುಡನಲ್ಲ ಎಂದು ಸಂತ ಕಬೀರರು ಡಾಂಭಿಕ ಭಕ್ತಿಯನ್ನು ಖಂಡಿಸುತ್ತಾರೆ. ಮೂರ್ತಿಪೂಜಕ ಡಾಂಭಿಕರನ್ನೂ ಅವರು ಬಿಟ್ಟಿಲ್ಲ. **"ಪಾಹನ ಪೂಜೈಹರಿ ಮಿಲೈ ತೋಮೈಂ ಪೂಜೂಂ ಪಹಾರ್। ತಾತೇಯಾ ಚಾಕೀಭಲಾ ಪೀಸ್ ಖಾಯ್ ಸಂಸಾರ್"**

ಏಕಾಗ್ರತೆಯಿಲ್ಲದೆ ಕಲುಷಿತ ಹೃದಯದಿಂದ ಶಾಲಗ್ರಾಮಾದಿ ಶಿಲೆಗಳನ್ನು ಪೂಜಿಸುವುದಕ್ಕಿಂತ ಮಹಾಪರ್ವತವನ್ನೇ ಪೂಜಿಸುವುದು ಒಳ್ಳೆಯದು. ಅಥವಾ ಬೀಸುಕಲ್ಲನ್ನಾದರೂ ಪೂಜಿಸಿದರೆ ಹಿಟ್ಟು ಬೀಸುವ ಪ್ರಯೋಜನಕ್ಕಾದರೂ ಬಂದೀತು ಅತಿರೇಕದ ಭಕ್ತಿಯನ್ನು ಖಂಡಿಸುವ ಕಬೀರರು ನಿರ್ಮಲ ಭಕ್ತಿಯ ಪ್ರತಿಪಾದಕರು.

ಭಕ್ತಮಾರ್ಕಂಡೇಯ ಯಮನನ್ನು ಸೋಲಿಸಿ ಮೃತ್ಯಂಜಯನಾದ. ಪ್ರಹ್ಲಾದ ಎಳವೆಯಲ್ಲೇ ಭಗವಂತನನ್ನೊಲಿಸಿಕೊಂಡು ತಂದೆಗೆ ಶ್ರೀಹರಿಯ ಭಕ್ತಿಯ ಸಂದೇಶವನ್ನು ಸಾರಿದ. ಭಕ್ತ ಧ್ರುವ ಶಾಶ್ವತ ಪದವಿಗೇರಿದ ಎಂಬ ಪೌರಾಣಿಕ ಕಥಾನಕಗಳಲ್ಲಿ ಭಕ್ತಿಯ ಹಿರಿಮೆಯನ್ನು ಕಾಣಬಹುದು.

ಪ್ರತಿಯೊಂದು ಕ್ರಿಯೆಗೆ ಪ್ರತಿಕ್ರಿಯೆಯಿರುವಂತೆ, ಪ್ರಯತ್ನಕ್ಕೆ ಪ್ರತಿಫಲವಿರುವಂತೆ ನಿರ್ಮಲ ಭಕ್ತಿಗೆ ಭಗವಂತ ಒಲಿಯುವುದರಲ್ಲಿ ಸಂದೇಹವಿಲ್ಲವೆಂಬ ನಂಬಿಕೆಯೇ ಮಾನವ ಸುಖದ ಊರುಗೋಲು. ಹಾಗಲ್ಲದೆ ಭಗವಂತನೊಲುಮೆ ಸಿದ್ಧಿಸದಿದ್ದರೆ ನಮ್ಮ ಭಕ್ತಿ ಆಡಂಬರದ್ದಿರಬೇಕೆಂದೇ ತಿಳಿಯಬೇಕು. ಏಕೆಂದರೆ ಆಡಂಬರದ ಭಕ್ತಿಗೆ ಭಗವಂತನೆಂದಿಗೂ ಒಲಿಯಲಾರ.

ಯಜ್ಞಗಳು

ಯಜ ದೇವಪೂಜಾ ಸಂಗತಕರಣ ದಾನೇಷು ಎಂಬ ಕ್ರಿಯಾಪದದಿಂದ 'ಯಜ್ಞ' ಶಬ್ದ ನಿಷ್ಪತ್ತಿಯಾಗಿದೆ. 'ಯಜ್ಞ' ಎಂಬುದು ಭಗವಂತನನ್ನು ಪೂಜಿಸುವ ಒಂದು ವಿಧಾನ. ಅನೇಕ ಫಲಪ್ರಾಪ್ತಿಗಾಗಿ ವಿವಿಧ ಯಜ್ಞಗಳನ್ನು ಅನುಷ್ಠಿಸಲಾಗುತ್ತದೆ". "ಚಕ್ಷುಷ್ಕಾಮಂ ಯಾಜಯಾಂ ಚಕಾರ" ಎಂಬ ಮಹಾಭಾಷ್ಯದ ವಚನದಂತೆ ನೇತ್ರದೃಷ್ಟಿ ಪ್ರಾಪ್ತಿಯೂ ಯಜ್ಞದ ಫಲಗಳಲ್ಲೊಂದು. ಅಧಿಕಾರ ಪ್ರಾಪ್ತಿಗಾಗಿಯೂ ಯಜ್ಞವುಂಟೆಂದು ಸೂತ್ರ ಭಾಷ್ಯದ "ಗ್ರಾಮ ಕಾಮೋಯಜೇತ" ಎಂಬ ವಾಕ್ಯ ಹೇಳುತ್ತದೆ. ಮಳೆಗಾಗಿ 'ಶಾರೀರೀ ಇಷ್ಟಿ', ತೇಜಸ್ಸು, ಪಶು–ಲಕ್ಷ್ಮೀಪ್ರಾಪ್ತಿ, ಬ್ರಹ್ಮಹತ್ಯಾದೋಷ ನಿವೃತ್ತಿಗಾಗಿ 'ಅಶ್ವಮೇಧ' ಎಂಬ ಯಜ್ಞವನ್ನು, ಅಕಾಲಮೃತ್ಯು ಮತ್ತು ರಾಜ್ಯ ಸಂಕಟ ನಿವಾರಣೆಗಾಗಿ 'ರಾಜಸೂಯ' ಯಜ್ಞವನ್ನೂ ಮಾಡುತ್ತಾರೆ. ದರ್ಶನ ಭಾಷ್ಯದಲ್ಲಿ 'ಪುತ್ರಕಾಮೋ ಪುತ್ರೇಷ್ಟ್ಯಾ ಯಜೇತ' ಎಂದು ಹೇಳುವಂತೆ ಸಂತಾನಪ್ರಾಪ್ತಿಗಾಗಿ ಮಾಡಬೇಕಾದ ಯಜ್ಞದ ಉಲ್ಲೇಖವಿದೆ.

ವೈದ್ಯ ವಿಜ್ಞಾನದಲ್ಲೂ ಹೋಮದ ಬಗ್ಗೆ ಪ್ರಸ್ತಾಪವಿದೆ. "ದೇವ–ಗೋ–ಬ್ರಾಹ್ಮಣ ಸಿದ್ಧಾಚಾರ್ಯಾನ್ ಅರ್ಚಯೇತ್, ಅಗ್ನಿಮುಪಚರೇತ್" ಚರಕಸೂತ್ರ ಸ್ಥಾನ. 5–18 ಜಪಹೋಮೋಪಹಾರ–ಇಜ್ಯಾಂಜಲಿ ನಮಸ್ಕಾರ–ತಪೋನಿಯಮ ದಯಾದಾನ ದೀಕ್ಷಾಭ್ಯುಪಗಮ ದೇವತಾ ಬ್ರಾಹ್ಮಣ ಗುರುಪರೈರ್ಭವಿತವ್ಯಮ್" ಸುಶ್ರುತ ಸೂತ್ರ 6–21.

ಅಗ್ನಿಯಲ್ಲಿ ಹೋಮಿಸುವ ಮೂಲಕ ಪದಾರ್ಥಗಳು ನಷ್ಟವಾಗುತ್ತವೆ, ವ್ಯರ್ಥ ವಾಗುತ್ತವೆ ಎಂಬ ವೈಚಾರಿಕ ವಾದವೊಂದುಂಟು. ವೈಜ್ಞಾನಿಕವಾಗಿ ಹೇಳುವುದಾದರೆ ಅಗ್ನಿಯಲ್ಲಿ ಹೋಮಿಸುವುದರಿಂದ ಯಾವುದೇ ಪದಾರ್ಥದ ಔಷಧೀಯ ಗುಣ ನಷ್ಟವಾಗುವುದಿಲ್ಲ. ಆದರೆ ಸೂಕ್ಷ್ಮಾತಿಸೂಕ್ಷ್ಮ ಕಣಗಳಾಗಿ ಅದರ ಸತ್ವ ವಿಭಜಿಸಲ್ಪಟ್ಟು ಪರಿಸರವನ್ನು ಸುಲಭವಾಗಿ ವ್ಯಾಪಿಸುತ್ತದೆ. ಒಂದು ಗುಂಪಿನಲ್ಲಿರುವ 50 ಜನರನ್ನು ಓಡಿಸಲು ಪ್ರತಿಯೊಬ್ಬರಿಗೆ ಒಂದೊಂದು ಮೆಣಸಿನಕಾಯಿಯನ್ನು ತಿನ್ನಿಸುವುದಕ್ಕಿಂತ ಹತ್ತು ಮೆಣಸಿನಕಾಯಿಗಳನ್ನು ಬೆಂಕಿಯಲ್ಲಿ ಹಾಕುವುದು ಹೆಚ್ಚು ಪರಿಣಾಮಕಾರಿ ಮೆಣಸಿನ ಸತ್ವ ಸೂಕ್ಷ್ಮ ಕಣಗಳಾಗಿ ಪರಿಸರವನ್ನು ವ್ಯಾಪಿಸುವುದೇ ಇದಕ್ಕೆ ಕಾರಣ. ಹತ್ತು ಕೊಡದಷ್ಟು ಗಾತ್ರದ ನೀರಿನ ಶಕ್ತಿಗಿಂತ ಅಷ್ಟೇ ಗಾತ್ರದ ನೀರಿನ ಆವಿಯ ಶಕ್ತಿ ಹೆಚ್ಚು. ಔಷಧದ ಸೂಕ್ಷ್ಮಾತಿಸೂಕ್ಷ್ಮ ಶಕ್ತಿಯನ್ನು ಕ್ರೋಢೀಕರಿಸಿ ಶೀಘ್ರ ಪರಿಣಾಮಕ್ಕಾಗಿ ಇಂಜೆಕ್ಷನ್ ಚುಚ್ಚುತ್ತಾರೆ. ಹೀಗೆ ಅಗ್ನಿಯಲ್ಲಿ ಹೋಮಿಸಲ್ಪಟ್ಟು ಸೂಕ್ಷ್ಮರೂಪ ಹೊಂದಿ ಸತ್ವಶಾಲಿಯಾದ ಹವಿಸ್ಸು ಮಾತ್ರ ಅಣುರೇಣುತೃಣಕಾಷ್ಠಗಳಲ್ಲಿ ಸೂಕ್ಷ್ಮರೂಪದಿಂದ ವ್ಯಾಪಿಸಿರುವ ಭಗವಂತನನ್ನು ತಲಪಬಲ್ಲದು.

ಅಗ್ನಾಪ್ರಾಸ್ತಾಹುತೀಃ ಸಮ್ಯಾಗಾದಿತ್ಯ ಮುಪತಿಷ್ಠತೇ।
ಆದಿತ್ಯಾಜ್ಜಾಯತೇ ವೃಷ್ಟಿಃ ದೃಷ್ಟೇರನ್ನಂ ತತಃ ಪ್ರಜಾಃ ॥

ಎಂಬ ಮನುಸ್ಮೃತಿಯ ವಚನದಂತೆ ಅಗ್ನಿಯಲ್ಲಿ ಹೋಮಿಸಿದ ಪದಾರ್ಥಗಳ ಸತ್ವ

ಸೂಕ್ಷ್ಮರೂಪದಲ್ಲಿ ಪರಿಸರವನ್ನು ವ್ಯಾಪಿಸುತ್ತದೆ. ವಾತಾವರಣ ಶುದ್ಧವಾಗುತ್ತದೆ. ಸಕಾಲದಲ್ಲಿ ಸುವೃಷ್ಟಿಯಾಗಿ ಸಮೃದ್ಧಿಯುಂಟಾಗುತ್ತಿದೆ. ಆದರೆ ಅಗ್ನಿಯಲ್ಲಿ ಹೋಮಿಸುವ ಪದಾರ್ಥಗಳನ್ನು ಬೆಳೆಸಲು, ಪೋಷಿಸಲು, ಕೀಳಲು ಶಾಸ್ತ್ರೋಕ್ತವಾದ ವಿಧಾನವನ್ನು ಅನುಸರಿಸಬೇಕು ಮತ್ತು ಶುದ್ಧರಾಗಿ ಮಂತ್ರ ಪುರಸ್ಸರವಾಗಿ ಹೋಮಿಸಬೇಕು.

ನಮ್ಮ ಪ್ರಾಚೀನರ ಸಮಸ್ತ ಆಚರಣೆಗಳಿಗೂ ವೈಜ್ಞಾನಿಕ ಹಿನ್ನೆಲೆಯುಂಟು. ಆದರೆ ನಮ್ಮ ತಿಳುವಳಿಕೆಗೆ ನಿಲುಕದ ಸಂಗತಿಗಳನ್ನೆಲ್ಲ ನಾವು ಕಂದಾಚಾರವೆಂದು ಅಲ್ಲಗಳೆಯುತ್ತೇವೆ. "ಹಳೆ ಬೇರು ಹೊಸ ಚಿಗುರು ಕೂಡಿರಲು ಮರ ಸೊಗಸು" ಎಂದು ಡಿ.ವಿ.ಜಿ.ಯವರು ಹೇಳುವಂತೆ ನಮ್ಮ ಹಿರಿಯರ ಆಚರಣೆಗಳನ್ನು ಆಧುನಿಕ ವೈಜ್ಞಾನಿಕ ಸತ್ಯಗಳೊಂದಿಗೆ ಸಮನ್ವಯಗೊಳಿಸಿದಾಗ ಮಾತ್ರ ಋಷಿಮುನಿಗಳ ಉಕ್ತಿಗಳ ಯಥಾರ್ಥತೆಯ ಅರಿವಾಗುತ್ತದೆ.

ಯಜ್ಞದಲ್ಲಿ ಮೂರು ವಿಧಗಳಿವೆ : ಮೊದಲನೆಯದು ಆತ್ಮಯಜ್ಞ.ಹಲ್ಲುಗಳಿಂದ ಜಗಿದ ಪದಾರ್ಥದ ಕಣಗಳನ್ನು ಜಠರಾಗ್ನಿಯಲ್ಲಿ ಹೋಮಿಸಿ ಆತ್ಮನನ್ನು ತೃಪ್ತಿಗೊಳಿಸುವುದು. ಇದು ಸ್ವಾರ್ಥಪೂರಿತ.

ಎರಡನೆಯದು ಪಿತೃಯಜ್ಞ. ಇಲ್ಲಿ ಕವ್ಯವೇ ಆಹುತಿ.

ಮೂರನೆಯದು ಸಕಲ ಜೀವಿಗಳಿಗೂ ಸಮಸ್ತ ಜೀವಿಗಳಲ್ಲಿ ಅಡಗಿರುವ ಭಗವಂತ ನಿಗೂ ತೃಪ್ತಿಯಾಗುವ ದೇವಯಜ್ಞ. ಇದರಲ್ಲಿ ಕಮ್ಮಾರ, ಬಡಗಿ, ನೇಕಾರ, ಕುಂಭಕಾರ ಮೊದಲಾದಂತೆ ಸಮಾಜದ ಸಮಸ್ತ ವರ್ಗದವರಿಗೂ ಭಾಗವಹಿಸಲು ಸಮಾನ ಅವಕಾಶವಿದೆ. ಸಮಸ್ತ ಲೋಕಕಲ್ಯಾಣವೇ ಯಜ್ಞದ ಗುರಿ.

ತಮ್ಮ ಎಲ್ಲ ಕಾಮನೆಗಳ ಪೂರ್ತಿಗಾಗಿ, ಸಂಪತ್ಸಮೃದ್ಧಿಗಾಗಿ,

ಯತ್ಕಾಮಾಸ್ತೇ ಜುಹುಮಸ್ತನ್ನೋ ಅಸ್ತು
ವಯಂಸ್ಯಾಮ ಪತಯೋ ರಯೀಣಾಂ ॥

ಎಂದು ಎಲ್ಲರೂ ಯಜ್ಞ ಸ್ವರೂಪವನ್ನು ಪ್ರಾರ್ಥಿಸಿ ಹವಿಸ್ಸನ್ನು ಅರ್ಪಿಸಬೇಕೆಂಬು ದಾಗಿ ಋಗ್ವೇದದ 10ನೇ ಮಂಡಲದ 10ನೇ ಅನುವಾಕದ ಮಂತ್ರ ಹೇಳುತ್ತದೆ.

ಸಾಮಾನ್ಯ ಧರ್ಮ ವಿಶೇಷ ಧರ್ಮ

ಧರ್ಮಾಚರಣೆಯಲ್ಲಿ ಸಾಮಾನ್ಯ ಧರ್ಮ ಮತ್ತು ವಿಶೇಷ ಧರ್ಮ ಎಂದು ಎರಡು ಬಗೆ. ಸತ್ಯಂವದ, ಮಾತೃದೇವೋಭವ, ಪಿತೃದೇವೋಭವ, ಆಚಾರ್ಯದೇವೋಭವ – ಇತ್ಯಾದಿ ಉಪನಿಷದ್ವಾಕ್ಯಗಳ ಪಾಲನೆ–ಸತ್ಯವನ್ನೇ ಹೇಳುವುದು, ಮಾತಾಪಿತರನ್ನು, ಗುರುಗಳನ್ನು ದೇವರಂತೆ ಗೌರವದಿಂದ ಕಾಣುವುದು, ಅಹಿಂಸಾವ್ರತವನ್ನು ಪಾಲಿಸುವುದು–ಇವೆಲ್ಲ ಸಾಮಾನ್ಯಧರ್ಮಗಳು. ಅಂದರೆ ಶಾಸ್ತ್ರ ಸಮ್ಮತವಾದ, ಲೋಕೋಪಕಾರವಾದ, ಗೌರವಯುತವಾದ ಆಚರಣೆಗಳು, ಸಕಲಜೀವಿಗಳಿಗೆ ಹಿತವಾದ ನಡವಳಿಕೆ–ಇವು ಸಾಮಾನ್ಯ ಧರ್ಮ, ಕಳ್ಳತನವನ್ನು ಪ್ರೇರಿಪಿಸುವ ತಂದೆ ಮಾತನ್ನು

ಪಾಲಿಸದಿರುವುದು, ಕಳ್ಳರಿಂದ ಬಿಡುಗಡೆಗಾಗಿ ಸುಳ್ಳು ಹೇಳುವುದು–ವಿಶೇಷಧರ್ಮ. ಅಹಿಂಸೆಯೇ ಪರಮಧರ್ಮವೆಂದು ಹೇಳುವ ನಾವು ಲೋಕಕಂಟಕರಾದ ರಾಕ್ಷಸರ ಸಂಹಾರವನ್ನು ಹಿಂಸೆಯೆಂದು ಹೇಳುವುದಿಲ್ಲ. ಇದೂ ವಿಶೇಷಧರ್ಮ.

ಮಹಾಭಾರತದ ಕರ್ಣ ಪರ್ವದ 72ನೇ ಅಧ್ಯಾಯದಲ್ಲಿ ಕೃಷ್ಣ ಅರ್ಜುನನಿಗೆ ಹೀಗೆ ಉಪದೇಶಿಸುತ್ತಾನೆ.

ಭವೇತ್ಸತ್ಯಮವಕ್ತವ್ಯಂ ವಕ್ತವ್ಯಮನೃತಂ ಭವೇತ್ । ಯತ್ರಾನೃತಂ ಭವೇತ್ಸತ್ಯಂ ಸತ್ಯಂ ಚಾಪ್ಯನೃತಂ ಭವೇತ್॥ ಅಧರ್ಮಂ ಹಿ ನ ಪಶ್ಯಂತಿ ಮೃಷೋಕ್ತಂ ತತ್ರಪಂಡಿತಾಃ ಸರ್ವಥಾಭಿ ವದೇತ್ತತ್ತು ನಾನೃತಂ ಸ್ಯಾದ್ವಿ ಚಕ್ಷಣ ॥ ಯಃಸ್ತೇನೈಃ ಸಹ ಸಂಬಂಧಃ ಮುಚ್ಯತೇ ಶಪಥಾದಪಿ । ಭವೇತ್ತತ್ರಾನೃತಂ ಶ್ರೇಯಃ ಸತ್ಯಾದಿತಿ ವಿಚಾರಿತಮ್ ॥ ಸತ್ಯಂ ಧರ್ಮ ಇತಿಹ್ಯೇಕೆವದಂತಿ ಬಹವೋ ಜನಾಃ । ನ ಚ ಪಾರ್ಥಾಭ್ಯಸೂಯಾಮಿ ನೈತತ್ಸರ್ವತ್ರ ಶಿಷ್ಯತೇ ॥

ಅಂದರೆ ಸತ್ಯವನ್ನು ಹೇಳದೇ ಸುಳ್ಳನ್ನೇ ಹೇಳಬೇಕಾದ ಸಂದರ್ಭದಲ್ಲಿ ಸತ್ಯವನ್ನೇ ಸುಳ್ಳೆಂದೂ ಸುಳ್ಳನ್ನೇ ಸತ್ಯವೆಂದೂ ಭಾವಿಸಬೇಕು. ಸತ್ಯದ ಪರಿಪಾಲನೆಗಾಗಿ, ಮಾನವ ಧರ್ಮದ ಉಳಿವಿಗಾಗಿ ಹೇಳುವ ಸುಳ್ಳನ್ನು ಸುಳ್ಳೆಂದು ಪರಿಗಣಿಸಬಾರದು. ಸತ್ಯದ ಪರಿಪಾಲನೆಗಾಗಿ, ಮಾನವ ಧರ್ಮದ ಉಳಿವಿಗಾಗಿ ಹೇಳುವ ಸುಳ್ಳನ್ನು ಸುಳ್ಳೆಂದು ಪರಿಗಣಿಸಬಾರದು. ಆಣೆ–ಪ್ರಮಾಣಗಳ ಮೂಲಕ ಕಳ್ಳರಿಂದ ಬಿಡುಗಡೆಯಾಗುವ ಸನ್ನಿವೇಶದಲ್ಲಿ ಸುಳ್ಳನ್ನ ಹೇಳಬಹುದು. "ಸತ್ಯವೇ ಧರ್ಮ" ಎನ್ನುವ ಮಾತು ಎಲ್ಲ ಸಂದರ್ಭಗಳಲ್ಲೂ ಪ್ರಶಸ್ತವೆನಿಸುವುದಿಲ್ಲ.

ನ ಚ ತೇಭ್ಯೋ ಧನಂ ದೇಯಂ ಸತ್ಯಾದಿತಿ ಕಥಂ ಚ ನ। ಪಾಪೇಭ್ಯೋ ಪಿ ಧನಂ ದತ್ತಂ ದಾತಾರ ಮಪಿ ಪೀಡಯೇತ್॥ ತಸ್ಮಾತ್ ಧರ್ಮಾರ್ಥಂ ಅನೃತಂ ಉಕ್ತ್ವಾ ನಾನೃತವಾಗ್ ಭವೇತ್

ಅರ್ಥಾತ್ ದಾನ ಮಾಡುವುದು ಪರಮ ಪುಣ್ಯಕರವೆಂದು ತಿಳಿದು ಪಾಪಿಗೆ ದಾನ ನೀಡಬಾರದು. ಇದರಿಂದ ಆತನ ಪಾಪಾಚರಣೆಗೆ ನಾವೇ ಮತ್ತಷ್ಟು ಪ್ರೋತ್ಸಾಹ ನೀಡಿದಂತಾಗುತ್ತದೆ. ಅವನಿಗಲ್ಲದೆ ಇತರರಿಗೂ ನಮ್ಮ ದಾನದ ದೆಸೆಯಿಂದ ಹಾನಿಯುಂಟಾಗುತ್ತದೆ. ಅಂತಹ ಪಾಪಿಗೆ ದಾನ ನೀಡುವುದಿಲ್ಲವೆಂದು ಹೇಳಿದರೆ ಸುಳ್ಳುಗಾರನಾಗುವುದಿಲ್ಲ.

ಇದೇ ಅಧ್ಯಾಯದಲ್ಲಿ ಸ್ವಾರಸ್ಯಕರವಾದ ಎರಡು ಕಥೆಗಳಿವೆ.

ಬಲಾಕನೆಂಬ ಒಬ್ಬ ಬೇಡನಿದ್ದ. ಹೆಂಡತಿ ಮಕ್ಕಳ ಹಾಗೂ ವೃದ್ಧ ಮಾತಾಪಿತರ ಉದರ ಪೋಷಣೆಗಾಗಿಯೂ ಅತಿಥಿ ಸತ್ಕಾರಕ್ಕಾಗಿಯೂ ಈತ ಪ್ರಾಣಿಗಳನ್ನು ಕೊಲ್ಲುತ್ತಿದ್ದನೇ ಹೊರತು ಪ್ರಾಣಿ ಹಿಂಸೆಯೇ ಈತನ ಚಟವಾಗಿರಲಿಲ್ಲ. ಒಂದು ದಿನ ಬೇಟೆಯಲ್ಲಿ ಈತ ವಿಚಿತ್ರವಾದ ಮೃಗವೊಂದನ್ನು ಕೊಂದ. ತತ್‌ಕ್ಷಣ ಈ ವ್ಯಾಧನನ್ನು ಸ್ವರ್ಗಕ್ಕೊಯ್ಯಲು ಆಕಾಶದಿಂದ ದಿವ್ಯ ರಥವೊಂದಿಳಿಯಿತು. ಕಾರಣವಿಷ್ಟೆ. ಈಶ್ವರನ ಶಾಪದಿಂದ ಕುರುಡಾಗಿದ್ದರೂ ದೇವತೆಗಳ ವರದಿಂದ ಕೊಬ್ಬಿದ್ದ ಆ ಮೃಗ ಸಮಸ್ತ ಜೀವರಾಶಿಯನ್ನು ಅಕಾರಣವಾಗಿ ಕೊಲ್ಲುವ ಸಾಮರ್ಥ್ಯ ಹೊಂದಿತ್ತು.

ಕೌಶಿಕನೆಂಬ ತಾಪಸನೊಬ್ಬನಿದ್ದ. ಊರಿನಿಂದ ದೂರದ ಕಾಡಿನ ನದೀ ತೀರದಲ್ಲಿ ತಪಸ್ಸು ಮಾಡುತ್ತಿದ್ದ. ಸತ್ಯವನ್ನೇ ಹೇಳುವುದು ಇವನ ವ್ರತ. ಕಳ್ಳರಿಗಂಜಿದ ಕೆಲವರು ಓಡುತ್ತಾ ಬಂದು ಈ ಕೌಶಿಕನ ಹಿಂದಿನಿಂದ ಕಾಡಿನಲ್ಲಿ ಅಡಗಿಕೊಂಡರು. ಅಷ್ಟರಲ್ಲಿ ಕಳ್ಳರ ಗುಂಪು ಅಲ್ಲಿಗೇ ಓಡಿ ಬಂತು. "ಈಗಷ್ಟೆ ಈ ಕಡೆ ಓಡಿ ಬಂದವರು ಎಲ್ಲಿ ಅಡಗಿದ್ದಾರೆ?" ಎಂದು ಕಳ್ಳರು ಕೌಶಿಕನನ್ನು ಪ್ರಶ್ನಿಸಿದರು. ಸತ್ಯವ್ರತನಾದ ಕೌಶಿಕ ನಿಜವನ್ನೇ ಅರುಹಿದ. ಆ ಕಳ್ಳರು ಎಲ್ಲರನ್ನೂ ಕೊಂದು ಅವರ ಸಂಪತ್ತನ್ನು ಅಪಹರಿಸಿದರು. ಸತ್ಯವನ್ನೇ ಹೇಳಿದರೂ ಕೌಶಿಕನಿಗೆ ನರಕ ತಪ್ಪಲಿಲ್ಲ.

ಹೀಗೆ ಒಂದು ಪ್ರಾಣಿಯನ್ನ ಕೊಂದು ಅನೇಕ ಪ್ರಾಣಿಗಳ ಜೀವವುಳಿಸಿದ ಬಲಾಕನೆಂಬ ವ್ಯಾಧ ಪುಣ್ಯಲೋಕಕ್ಕೈದಿದ. ಅನೇಕ ಜನರ ಸಾವಿಗೆ ಕಾರಣವಾದದ್ದರಿಂದ ಸತ್ಯವನ್ನೇ ಹೇಳಿದರೂ ಕೌಶಿಕನಿಗೆ ನರಕ ಪ್ರಾಪ್ತಿಯಾಯಿತು. ಆದರೆ ಈ ಕಥಾನಕಗಳಿಂದ ಪ್ರಾಣಿಹಿಂಸೆಗೆ ಮತ್ತು ಸುಳ್ಳು ಹೇಳಲು ಪರವಾನಗಿ ಸಿಕ್ಕಂತಾಯಿತೆಂದು ತಿಳಿಯಬಾರದು. ಧರ್ಮ ಸೂಕ್ಷ್ಮವನ್ನರಿತು ಆಚರಿಸಬೇಕು.

ಪ್ರಿಯವಾದ ಸತ್ಯವನ್ನೆ ಹೇಳಬೇಕು. ಅಪ್ರಿಯವಾದ ಸತ್ಯವನ್ನು ಹೇಳಬಾರದು. ಪ್ರಿಯಂ ಚ ನಾನೃತಂ ಭೂಯಾತ್ ಅಂದರೆ ಪ್ರಿಯವಾದದ್ದಾದರೂ ಸುಳ್ಳನ್ನು ಹೇಳಬಾರದು. ಇದೇ ಧರ್ಮವೆಂಬುದು ವೇದವ್ಯಾಸರ ಮಾತು.

ಹಬ್ಬಗಳು

ನಮ್ಮ ಪ್ರತಿಯೊಂದು ಹಬ್ಬಗಳೂ ಆರ್ಯ ಸಂಸ್ಕೃತಿಯನ್ನು ಮತ್ತು ಭಾರತದ ಉಜ್ವಲ ಪರಂಪರೆಯನ್ನು ಜೀವಂತವಾಗಿರಿಸುವ ಪ್ರಧಾನ ಸಾಧನಗಳಾಗಿವೆ. ಪ್ರಾಚೀನ ಮಹರ್ಷಿಗಳು ಪ್ರತಿಯೊಂದು ಹಬ್ಬದ ಹಿನ್ನೆಲೆಯಲ್ಲೂ ಲೋಕಕಲ್ಯಾಣದ ವೈಜ್ಞಾನಿಕ ರಹಸ್ಯವನ್ನು ಕಂಡುಕೊಂಡಿದ್ದರು. ಆದರೆ ಆಂಗ್ಲ ಸಂಸ್ಕೃತಿಯಿಂದ ಪ್ರಭಾವಿತರಾದ ನಾವು ಇಂದು ನಮ್ಮ ಸಾಂಸ್ಕೃತಿಕ ಪರಂಪರೆಯನ್ನು ಮರೆತು ಯಾಂತ್ರಿಕತೆಯನ್ನು ಹಿಂಬಾಲಿಸುತ್ತಾ ಪ್ರತಿಯೊಂದು ಆಚಾರ ವಿಚಾರಗಳ ಔಚಿತ್ಯವನ್ನು ಪ್ರಶ್ನಿಸುವ ಮತ್ತು ಶಂಕಿತ ದೃಷ್ಟಿಯಿಂದಲೇ ನೋಡುವ ಹವ್ಯಾಸವನ್ನು ಬೆಳೆಸಿಕೊಳ್ಳುತ್ತಿರುವುದು ಎಂತಹ ವಿಪರ್ಯಾಸ!

ಮಳೆಗಾಲದಲ್ಲಿ ಬರುವ ಅನೇಕ ಹಬ್ಬಗಳು ಅಧ್ಯಯನ–ಅಧ್ಯಾಪನ ಮೊದಲಾದಂತೆ ವಿರಾಮ ಕಾಲದ ಸದುಪಯೋಗಕ್ಕಾಗಿ ಕಲ್ಪಿತವಾಗಿವೆ. ಸಂಚಾರಕ್ಕೆ ಯೋಗ್ಯವಲ್ಲದ ಈ ಕಾಲದಲ್ಲಿ ಯತಿಗಳು 'ಚಾತುರ್ಮಾಸ್ಯ' ದೀಕ್ಷೆ ವಹಿಸುತ್ತಾರೆ. ಗೃಹಸ್ಥರು ಮನೆಯಲ್ಲಿಯೇ ಉಳಿದು ಸಂಭ್ರದಿಂದ ಆಚರಿಸುವ ಅನೇಕ ಹಬ್ಬಗಳಿವೆ.–

ಶ್ರಾವಣೀ, ನಾಗಪಂಚಮಿ, ಗೌರೀತೃತೀಯಾ, ವಿನಾಯಕ ಚತುರ್ಥಿ ಮೊದಲಾದವು.

ಈ ಹಬ್ಬಗಳಲ್ಲಿ ಮಾಡುವ ವಿಶೇಷ ತಿಂಡಿಗಳೂ ಮಳೆಗಾಲದಲ್ಲಿ ನಾಲಗೆಗೂ, ದೇಹಕ್ಕೂ ಹಿತಕರವೆನಿಸಿ ಆರೋಗ್ಯದ ಸಮತೋಲನಕ್ಕೆ ಸಹಕಾರಿಯಾದುವುಗಳು.

ನಂತರದ ಹಬ್ಬಗಳ ಸ್ವರೂಪವೇ ಬೇರೆ. ಮಹಾನವಮಿ, ವಿಜಯದಶಮಿ, ಅಸತ್ಯದ ಮೇಲೆ ಸತ್ಯದ, ದುಷ್ಟಶಕ್ತಿಯ ಮೇಲೆ ಸಚ್ಛಕ್ತಿಯ, ಅಧರ್ಮದ ಮೇಲೆ ಧರ್ಮದ, ವಿಜಯದ ಸಂಕೇತ. ಮಳೆಗಾಲದಲ್ಲಿ ಹೊರಗೆ ಹೋಗಲಾರದ ರಾಜರು ಪ್ರಜಾ ಸಂರಕ್ಷಣೆಗಾಗಿ, ರಾಜ್ಯವಿಸ್ತಾರಕ್ಕಾಗಿ, ಪರಾಕ್ರಮವನ್ನು ಮೆರೆಯಲು, ವಿಜಯಯಾತ್ರೆಗೆ ಹೊರಡುವ ಕಾಲ ಸೂಚಕ ಹಬ್ಬಗಳಿವು.

ದೀಪಾವಳಿ ಮೊದಲಾದ ಮುಂದಿನ ಹಬ್ಬಗಳ ಸಂಭ್ರಮವೇ ಬೇರೆ. ಮಳೆಗಾಲದಲ್ಲಿ ವಾಣಿಜ್ಯ ವ್ಯವಹಾರಗಳು ಶಿಥಿಲವಾಗಿ ಈಗ ಬಿರುಸಿನಿಂದ ವ್ಯವಹಾರಿಕ ಚಟುವಟಿಕೆಗಳು ಪ್ರಾರಂಭವಾಗುತ್ತವೆ. ಹೊಲಗಳಲ್ಲಿ ಬೆಳೆದು ನಿಂತ ಫಸಲಿಗೆ ಕ್ರಿಮಿಕೀಟಗಳ ಬಾಧೆ. ಈ ಬಾಧೆಗಳ ನಿವೃತ್ತಿಗೆ ದೀಪ ಹಚ್ಚಬೇಕು, ಪಟಾಕಿ ಸಿಡಿಸಬೇಕು, ಕೇಕೆ ಹಾಕಿ ಕುಣಿಯಬೇಕು, ಪೈರು ನಾಶಕ ಪ್ರಾಣಿಗಳನ್ನು ಓಡಿಸಬೇಕು. ಇದೇ ದೀಪಾವಳಿ.

ವಾಣಿಜ್ಯೋದ್ಯಮಿಗಳು ವ್ಯಾಪಾರ ಕುದುರಿಸುವ ಸಮಯವಿದು. ಈ ಶರತ್ಕಾಲದಲ್ಲಿ ವ್ಯಾಪಾರದ ಉನ್ನತಿಗಾಗಿ ವಾಣಿಜ್ಯ ದೇವತೆಯಾದ ಲಕ್ಷ್ಮಿಯನ್ನು ಪೂಜಿಸಬೇಕು. ಸಿರಿದೇವಿಯನ್ನು ಸ್ವಾಗತಿಸಲು, ಪೂಜಿಸಲು, ಒಲಿಸಲು, ಮೈ–ಮನ–ಮನೆಗಳ ಮಾಲಿನ್ಯ ವನ್ನು ತೊಳೆಯಬೇಕು. ಮಳೆಯ ಕೊಳೆಯನ್ನು ತೊಳೆದು ಶರೀರದಲ್ಲಿನ ತೇಜಸ್ಸು ವೃದ್ಧಿಯಾಗಬೇಕು. ವಾತಾವರಣದ ರೋಗಾಣುಗಳ ನಾಶವಾಗಬೇಕು. ಇದಕ್ಕಾಗಿ ಸುಣ್ಣ–ಬಣ್ಣಗಳಿಂದ ಸಿಂಗರಿಸಬೇಕು. ಇದು ದೀಪಾವಳಿ.

ಹೋಳಿ ಹಬ್ಬದ ವಾತಾವರಣವೇ ಬೇರೆ. ನಿಸರ್ಗ ತನ್ನ ಜಡತೆಯನ್ನು ಕಳೆದು ಹೊಸ ರೂಪವನ್ನು ಧರಿಸುವ ಪರ್ವಕಾಲವಿದು. ಮರಗಿಡಗಳು ಫಲಪುಷ್ಪಗಳ ಭಾರದಿಂದ ಬಾಗಿ ಬಳುಕಿ ಸಮಸ್ತ ಜೀವರಾಶಿಗಳನ್ನು ತಮ್ಮತ್ತ ಆಕರ್ಷಿಸುತ್ತವೆ. ವರ್ಣಮಯವಾದ ಪ್ರಕೃತಿಯೊಂದಿಗೆ ಜನರು ಸಂಭ್ರಮೋಲ್ಲಾಸಗಳಿಂದ ಬಣ್ಣವನ್ನೆರಚಿ ಹೋಳಿಯನ್ನಾ ಚರಿಸುತ್ತಾರೆ. ಬೇಂದ್ರೆಯವರು ಹೇಳುವಂತೆ "ಹೊಸ ವರುಷಕೆ ಹೊಸ ಹರುಷವ, ಹೊಸತು ಹೊಸತು ತರುವ, ಮರಳಿ ಮರಳಿ ಬರುವ, 'ಯುಗಾದಿ' ಯ ಸ್ವಾಗತಕ್ಕೆ ಸಿದ್ಧರಾಗುತ್ತಾರೆ–ಕಾಸಿಲ್ಲದ ಜನರ ಕೈಯಲ್ಲೂ ಕಾಸು ಓಡಾಡುವ ಕಾಲವಿದು. ಆದ್ದರಿಂದ 'ವರ್ಷಾಂತ್ಯದ', 'ಯುಗಾದಿ'ಯ ಈ ಹಬ್ಬಗಳಲ್ಲಿ ಜನರ ಉತ್ಸಾಹ–ಸಂಭ್ರಮ–ಸಡಗರಗಳಿಗೆ ಮೇರೆಯಿಲ್ಲ.

'ಯುಗಾದಿ' ಯಂತೂ ಪ್ರತಿಯೊಬ್ಬ ಮನುಷ್ಯನ ಬದುಕಿನಲ್ಲಿ ಅತಿಮಹತ್ವದ ಹಬ್ಬ. 'ಬೇವು–ಬೆಲ್ಲ' ಸವಿಯುವ ಸಂಕೇತದ ಮೂಲಕ 'ಸುಖದುಃಖೇಸಮೇಕೃತ್ವಾ ಲಾಭಾ ಲಾಭೌ ಜಯಾ ಜಯೌ' ಎಂಬ ಗೀತಾ ವಾಕ್ಯದಂತೆ ಮುಂದೆ ಬರಲಿರುವ ಸುಖ–ದುಃಖ, ಲಾಭ–ನಷ್ಟವನ್ನು ಸಮಾನಭಾವದಿಂದ ಎದುರಿಸಲು ಮಾನಸಿಕವಾಗಿ ಸಿದ್ಧವಾಗುವ ಹಬ್ಬ.

ಮುಂದಿನ ಮಳೆಗಾಲಕ್ಕೆ ಧನಧಾನ್ಯಾದಿ ಸಂಚಯದೊಂದಿಗೆ, ಬಂಧುಬಾಂಧವರ ಮಿಲನ, ಊಟ–ಉಪಚಾರ, ಉಡುಗೊರೆ, ಶುಭಕಾಮನೆಗಳ ಮಹಾಪೂರವೇ ಈ ಯುಗಾದಿಯ ನಂತರ ಜನ ಜೀವನದಲ್ಲಿ ಹರಿದು ಬರುತ್ತದೆ. ಹೀಗೆ ನಮ್ಮ ಪ್ರತಿಯೊಂದು ಹಬ್ಬದ ವೈಜ್ಞಾನಿಕ ಮಹತ್ವವನ್ನರಿತು ಆಚರಿಸಿದರೆ ಔಚಿತ್ಯಪೂರ್ಣ. ಹಾಗಲ್ಲದಿದ್ದರೆ ಅದು ಕೇವಲ ಆಡಂಬರ ಮತ್ತು ಯಾಂತ್ರಿಕ.

ಕ್ಷಮಾ ಧರ್ಮ

ಧರ್ಮಾಚರಣೆಯಲ್ಲಿ ಕ್ಷಮೆಗೆ ವಿಶೇಷ ಮಹತ್ವವಿದೆ. ಅಹಂಕಾರ ವಶದಿಂದ ಮನುಷ್ಯ ಇತರರ ಒಂದು ಸಣ್ಣ ತಪ್ಪಿಗೆ ಸಿಟ್ಟಿಗೆದ್ದು ಅವರಿಗೆ ಕೇಡು ಬಯಸುವುದಲ್ಲದೆ ತಾನೂ ಮನಃಶಾಂತಿಯನ್ನು ಕಳೆದುಕೊಂಡು ದ್ವೇಷಾಗ್ನಿಯಲ್ಲಿ ಬೇಯುತ್ತಿರುತ್ತಾನೆ. ತಾನು ಪ್ರತೀಕಾರ ಮಾಡಲು ಸರ್ವಸಮರ್ಥನಾಗಿದ್ದರೂ ಅಪರಾಧಿಗೆ ಉಪಕಾರ ಮಾಡುವುದೇ ಕ್ಷಮಾ ಧರ್ಮ.

ಬುರಾ ಜೋ ಢೂಂಢನ ಮೈಂ ಚಲಾ ಬುರಾನ ಮಿಲಿಯಾ ಕೋ ಈ । ಜೋ ದಿಲ್ ಖೋಜಾ ಆಪನಾ ಮುಝುಸಾ ಬುರಾನ ಕೋ ಈ ॥ ಎಂದು ಮಹಾತ್ಮಾ ಕಬಿರರು ಹೇಳುತ್ತಾರೆ. ಅಂದರೆ ಕೆಟ್ಟವರನ್ನು ಹುಡುಕಲು ಹೊರಟ ಕಬೀರರಿಗೆ ಯಾರೂ ಕೆಟ್ಟವರು ಸಿಗಲೇ ಇಲ್ಲ. ಆತ್ಮಶೋಧನೆ ಮಾಡಿಕೊಂಡಾಗ ತನ್ನಷ್ಟು ಕೆಟ್ಟವರು ಯಾರೂ ಇಲ್ಲವೆಂದು ಪ್ರತಿಯೊಬ್ಬರಿಗೂ ಅರಿವಾಗುತ್ತದೆ. ಹಾಗೆಯೇ ಪ್ರತಿಯೊಬ್ಬನೂ "ನಾನೇ ಅವನಾಗಿದ್ದರೆ, ಈ ಸನ್ನಿವೇಶದಲ್ಲಿ ಏನು ಮಾಡುತ್ತಿದ್ದೆ":– ಎಂದು ಚಿಂತಿಸಬೇಕು. ಆಗ ಕೋಪ ತಣಿಯುತ್ತದೆ. ಅಪರಾಧಿಯ ತಪ್ಪನ್ನು ವಿಮರ್ಶೆ ಮಾಡಿ ಕ್ಷಮಿಸುವ ತಾಳ್ಮೆ ಉಂಟಾಗುತ್ತದೆ. ಕೋಪವಿದ್ದಲ್ಲಿ ಕ್ಷಮೆಯಿರಲು ಸಾಧ್ಯವಿಲ್ಲ. ಅದು ಅನರ್ಥಕ್ಕೆ ಮೂಲ. "ಕೂಪದೊಳು ನೇಣು ಹರಿದಂತೆ ನರರಕ್ಕೆ ಕೋಪಿ ತಾನಿಳಿವ" ಎಂದು ಸರ್ವಜ್ಞ ನರಕದ ಭಯವೊಡ್ಡಿ ಕೋಪವನ್ನು ತ್ಯಜಿಸುವಂತೆ ಪರ್ಯಾಯವಾಗಿ ತಿಳಿಸುತ್ತಾನೆ. ಕೋಪದಿಂದ ಪ್ರತೀಕಾರ–ಪ್ರತೀಕಾರದಿಂದ ಆತ್ಮಘಾತ–ಆತ್ಮವಿನಾಶದ ಈ ದಾರಿಯಲ್ಲಿ ಕ್ಷಮೆಗೆ ಅವಕಾಶವೇ ಇಲ್ಲ.

ದೇವತೆಗಳ ಕ್ರೋಧವನ್ನು ಪರೀಕ್ಷಿಸುವ ಸಲುವಾಗಿ ಒಮ್ಮೆ ಭೃಗು ಮಹರ್ಷಿಗಳು ಕೈಲಾಸ-ಸತ್ಯಲೋಕಗಳನ್ನು ಸುತ್ತಿ ವೈಕುಂಠಕ್ಕೆ ಬರುತ್ತಾರೆ. ಲಕ್ಷ್ಮಿಯ ತೊಡೆಯ ಮೇಲೊರಗಿದ್ದ ವಿಷ್ಣು ತತ್ ಕ್ಷಣದಲ್ಲಿ ತನ್ನನ್ನು ಸ್ವಾಗತಿಸಲು ಮುಂದಾಗಲಿಲ್ಲವೆಂಬ ಕ್ರೋಧದಲ್ಲಿ ಭೃಗು ಮಹರ್ಷಿಗಳು ವಿಷ್ಣುವಿನ ವಕ್ಷಃಸ್ಥಲಕ್ಕೆ ಒದೆಯುತ್ತಾರೆ. ಕೂಡಲೇ ಎದ್ದು ಕುಳಿತ ಭಗವಾನ್ ಮಹಾವಿಷ್ಣು ಭೃಗು ಮಹರ್ಷಿಯ ಚರಣ ನೀವುತ್ತಾ ವಿನಯದಿಂದ ಹೇಳುತ್ತಾನೆ "ನಿಮ್ಮ ಕುಸುಮ ಕೋಮಲ ಪಾದಗಳಿಗೆ ಅತಿ ಕಠಿಣವಾದ ನನ್ನ ಎದೆಯಿಂದ ನೋವಾಗಿದ್ದರೆ ಕ್ಷಮಿಸಿ" ಎಂದು ತನ್ನ ಎದೆಯ ಮೇಲೆ ಶಾಶ್ವತವಾಗಿ "ಭೃಗುಲತಾ" ಎಂಬ ಭೃಗುವಿನ ಚರಣ ಚಿಹ್ನವನ್ನುಳಿಸಿಕೊಳ್ಳುತ್ತಾನೆ. ಈ ಕಥಾನಕ ಕ್ಷಮಾಶೀಲತೆಗೆ ಸುಂದರ ಉದಾಹರಣೆ.

1908ನೇ ಜನವರಿಯ ಸಂಗತಿ. ಟ್ರಾನ್ಸ್ ವಾಲ್ ನಿಂದ ಭಾರತೀಯರನ್ನು ಹೊರ ಗೋಡಿಸುವ ನಿರ್ಣಯದ ವಿರುದ್ಧ ಮಹಾತ್ಮಾ ಗಾಂಧಿಯವರು ಚಳುವಳಿ ಪ್ರಾರಂಭಿಸಿ ದ್ದರು. ಗಾಂಧಿಯವರ ಕಕ್ಷಿಗಾರನಾಗಿದ್ದ ಮೀರ್ ಆಲಮ್‌ನನ್ನು ಪ್ರಚೋದಿಸಿ ಗಾಂಧೀಜಿಯ ಕೊಲೆಯ ಹುನ್ನಾರ ನಡೆಸಲಾಯಿತು. ಒಂದು ದಿನ ಗಾಂಧೀಜಿಯವರು ಬ್ರಾಡಿಸ್ ಚೌಕದಲ್ಲಿರುವ ಏಶಿಯಾ, ಟಿಕ್ ಕಚೇರಿಗೆ ಹೋಗುತ್ತಿದ್ದ ಸಮಯ ಸಾಧಿಸಿ ಮೀರ್ ಆಲಮ್ ದೊಣ್ಣೆಯಿಂದ ಹಲ್ಲೆ ಮಾಡಿದ. ಗಾಂಧೀಜಿ ಕುಸಿದು ಕವುಚಿ ಬಿದ್ದರು. ಕಲ್ಲಿಗೆ ಮುಖತಾಗಿ ತುಟಿ ಹರಿಯಿತು, ಹಲ್ಲು ಮುರಿಯಿತು. ಇಷ್ಟರಲ್ಲಿ ಇಸಪ್‌ಮಿಯಾಂ ಮತ್ತು ಥಂಬೀನಾಯ್ಡು ಬಂದು ಕೂಗೆಬ್ಬಿಸಿದ್ದರಿಂದ ಮೀರ್ ಆಲಮ್ ಮತ್ತವನ ಗೆಳೆಯರು ಓಟ ಕಿತ್ತರು. ಆದರೆ ಬಿಳಿಯರಿಂದ ದಸ್ತಗಿರಿಯಾದರು. ಮೂರ್ಛಾವಸ್ಥೆ ಯಲ್ಲಿದ್ದ ಗಾಂಧೀಜಿಯವರನ್ನು ಸಮೀಪದ ಗಿಪ್ಸನ್ ರವರ ಕಚೇರಿಗೆ ಒಯ್ದು ಚಿಕಿತ್ಸೆ ನೀಡಲಾಯಿತು. ಎಚ್ಚರಗೊಂಡೊಡನೆ ಗಾಂಧೀಜಿ ಕೇಳಿದ ಮೊದಲ ಪ್ರಶ್ನೆ "ಮಿರ್ ಆಲಮ್ ಮತ್ತು ಅವನ ಸಂಗಡಿಗರೆಲ್ಲಿ?

ವಿಷಯ ತಿಳಿದ ಗಾಂಧೀಜಿಯವರು ಕೂಡಲೇ ಅಟಾರ್ನಿ ಜನರಲ್‌ರವರಿಗೆ ತಂತಿ ಸಂದೇಶ ಕಲಿಸಿ ಮೀರ್ ಆಲಮ್ ಮತ್ತು ಆತನ ಸಂಗಡಿಗರು ಅಪರಾಧಿಗಳೆಂದು ತಾನು ಭಾವಿಸುವುದಿಲ್ಲವೆಂದೂ, ಅವರ ವಿರುದ್ಧ ಮೊಕದ್ದಮೆ ಹೂಡಬಾರದೆಂದೂ ತಿಳಿಸಿ ಅವರನ್ನು ಬಿಡುಗಡೆ ಮಾಡಿಸಿದರು. ಆದರೆ ಹಾಡಹಗಲಿನಲ್ಲೇ ಗಾಂಧೀಜಿಯ ಮೇಲೆ ಹಲ್ಲೆ ಮಾಡಿದ ಮಹಾಪರಾಧಿಗಳನ್ನು ಬಿಡುಗಡೆ ಮಾಡಬಾರದೆಂಬ ಸಾರ್ವಜನಿಕ ಹಿತಾಸಕ್ತಿಯ ಮತ್ತೊಂದು ಮೊಕದ್ದಮೆಯಲ್ಲಿ ಅವರು ಮತ್ತೆ ದಸ್ತಗಿರಿಯಾದರು. ಈ ಬಾರಿ ಗಾಂಧೀಜಿಯ ಪ್ರಯತ್ನ ಫಲಿಸದೆ ಮೂರು ತಿಂಗಳ ಸಜೆ ಅನುಭವಿಸಿದರು. ಜೇಲಿನಿಂದ ಹೊರಬಂದ ಮೀರ್ ಆಲಮ್ ಒಂದು ಸಭೆಯಲ್ಲಿ ಗಾಂಧೀಜಿಯವರನ್ನು ಭೇಟಿಯಾಗಿ ತನ್ನ ಅಪರಾಧಕ್ಕಾಗಿ ಕ್ಷಮೆಯಾಚಿಸಿದ. ಆಗ ಗಾಂಧೀಜಿಯವರು "ನಾನು

ನಿನ್ನನ್ನು ಎಂದೋ ಕ್ಷಮಿಸಿದ್ದೇನೆ. ಆನಂತರ ನಿನ್ನ ಬಗ್ಗೆ ಎಂದೂ ಯೋಚಿಸಿಯೇ ಇಲ್ಲ" ಎಂದರು. ಗಾಂಧೀಜಿಯ ಈ ಕ್ಷಮಾ ಗುಣ ಅನುಕರಣೀಯ.

ಸಮರ್ಥ ರಾಮದಾಸರು ಕೆಲವು ಅನುಯಾಯಿಗಳೊಂದಿಗೆ ಒಮ್ಮೆ ಶಿವಾಜಿಯ ಭೇಟಿಗೆ ಹೊರಟಿದ್ದರು. ಮಾರ್ಗದಲ್ಲೊಂದು ಕಬ್ಬಿನ ಗದ್ದೆಯಿತ್ತು. ಬಹಳ ಹಿಂದೆ ಹಿಂದೆ ನಡೆಯುತ್ತಿದ್ದ ರಾಮದಾಸರ ಕೆಲವು ಶಿಷ್ಯರು ಕಬ್ಬನ್ನು ಮುರಿದು ತಿನ್ನತೊಡಗಿದರು. ಯಜಮಾನ ಅಟ್ಟಿಸಿಕೊಂಡು ಬಂದಾಗ ಎಲ್ಲರೂ ಓಡಿಹೋದರು. ರಾಮದಾಸರು ಮಾತ್ರ ಅಲ್ಲೇ ನಿಂತರು. ಆ ಯಜಮಾನ ಇವರನ್ನು ಅವಾಚ್ಯ ಶಬ್ದಗಳಿಂದ ಬೈದುದಲ್ಲದೆ ದೊಣ್ಣೆಯಿಂದ ಥಳಿಸಿದ. ಜತೆಗಾರರ ತಪ್ಪಿಗೆ ತಾನೂ ಹೊಣೆಯೆಂದು ರಾಮದಾಸರು ಮಾತ್ರ ಏಟುಗಳನ್ನು, ಬೈಗುಳವನ್ನೂ ಸಹಿಸಿದರು. ಇವರ ಮೈಮೇಲಿನ ಗಾಯಗಳನ್ನು ಬಾಸುಂಡೆಗಳನ್ನು ನೋಡಿದ ಶಿವಾಜಿ ದೂತರ ಮೂಲಕ ವಿಷಯ ಸಂಗ್ರಹಿಸಿದ. ಮರಾಠಾ ಸೈನಿಕರು ಕಬ್ಬಿನ ಗದ್ದೆಯ ಯಜಮಾನನ್ನು ಎಳೆದು ತಂದರು.

"ಈತನನ್ನು ಕ್ಷಮಿಸು. ಆ ಹೊಲವನ್ನು ಈತನಿಗೆ ಬಹುಮಾನ ನೀಡು. ಇವನಿಗೆ ತೆರಿಗೆ ವಿನಾಯಿತಿ ನೀಡು" ಎಂದು ರಾಮದಾಸರು ಶಿವಾಜಿಗೆ ಆದೇಶ ನೀಡಿದರು.

ಇಂತಹ ಕ್ಷಮಾಶೀಲ ಆದರ್ಶ ಮಹಾಮಹಿಮರಿದ್ದರೆಂದೇ ನಮ್ಮ ಭಾರತೀಯ ಸಂಸ್ಕೃತಿ ಪತಾಕೆ ಈಗಲೂ ಹಾರುತ್ತಿದೆಯಲ್ಲವೆ?

ರಾಮಾಯ ರಾಮಭದ್ರಾಯ

ಭದ್ರೋ ಭದ್ರಯಾ ಸ ಚ ಮಾನ ಆಗಾತ್
ಸ್ವಸಾರಂ ಜಾರೋ ಅಭ್ಯೇತಿ ಪಶ್ಚಾತ್ ।
ಸುಪ್ರ ಕೇತೈರ್ದ್ಯುಭಿ ರಗ್ನಿರ್ವಿತಿಷ್ಠನ್
ಉಶದ್ಭಿರ್ವರ್ಣೈರಭಿ ರಾಮಮಸ್ಥಾತ್ ॥

ಎಂಬ ಋಗ್ವೇದದ ಹತ್ತನೇ ಮಂಡಲದ ಮಂತ್ರಕ್ಕೆ ಹೀಗೂ ವ್ಯಾಖ್ಯಾನಿಸುತ್ತಾರೆ.

ಭದ್ರಃ = ರಾಮಭದ್ರಃ, ಭದ್ರಯಾ = ಸೀತಯಾ ಸಹ, ಆಗಾತ್ = ವನಂ ಪ್ರಾಪ್ತಃ

ಸ್ವಸಾರಂ = ಸೀತಾಂ (ಗೃಹೀತುಂ), ಜಾರಃ = ರಾವಣಃ, ಪಶ್ಚಾತ್ = ರಾಮಪರೋಕ್ಷೇ, ಅಭ್ಯೇತಿ = ಆಗತಃ (ತತೋ ರಾವಣೇ ಹತೇ) ಅಗ್ನಿಃ = ಅಗ್ನಿದೇವತಾ ದ್ಯುಭಿಃ = ರಾಮದಾರೈಃ (ಸೀತಯಾಹಸಹಾ ರಾಮಮಭಿ = ಶ್ಯಾಮವರ್ಣಸ್ಯ ಶ್ರೀ ರಾಮಸ್ಯ ಅಭಿಮುಖಂ, ಅಸ್ಥಾತ್ = ಸ್ಥಿತಃ ।

ಶ್ರೀರಾಮನು ಸೀತೆಯೊಂದಿಗೆ ಕಾಡಿಗೆ ನಡೆದ, ರಾವಣನು ಸೀತೆಯನ್ನು ಅಪಹರಿಸಿದ, ರಾವಣನ ಮರಣಾನಂತರ ಅಗ್ನಿಯು ರಾಮಪತ್ನಿಯಾದ ಸೀತೆಯೊಂದಿಗೆ ರಾಮನೆದುರು ಪ್ರತ್ಯಕ್ಷನಾದ, ವೇದ ಮಂತ್ರದ ಈ ಕಥೆ ತುಲಸೀದಾಸರಿಂದ ರಾಮಚರಿತ ಮಾನಸವೆಂದೂ, ಮಹಾಕಾವ್ಯಗಳ ವಾಲ್ಮೀಕಿಗಳಿಂದ ಶ್ರೀಮದ್ರಾಮಾಣವೆಂದೂ ರೂಪದಲ್ಲಿ ವಿಸ್ತೃತಗೊಂಡಿತು.

'ವೇದೋಽಖಿಲೋ ಧರ್ಮಮೂಲಂ' ಎಂಬ ಗೌತಮ ಧರ್ಮಸೂತ್ರದಂತೆ ಮಾನವ ಧರ್ಮಕ್ಕೆ ವೇದಗಳೇ ಮೂಲ. ಆದರೆ ಈ ವೇದಗಳ ಅರ್ಥ ಜನಸಾಮಾನ್ಯರ ಬುದ್ಧಿಯ ಅಳತೆಗೆ ಸಿಗುವಂತಹುದಲ್ಲ. ಧರ್ಮದ ಅರ್ಥವನ್ನು ತನ್ನ ಆಚರಣೆಯಿಂದ ಮಾನವರಿಗೆ ಬೋಧಿಸುವುದಕ್ಕಾಗಿ ಭಗವಂತ ಚೈತ್ರಮಾಸದ ನವಮಿಯಂದು ಶ್ರೀರಾಮಚಂದ್ರನಾಗಿ ಅವತರಿಸಿದ. 'ರಾಮೋ ವಿಗ್ರಹವಾನ್ ಧರ್ಮಃ' ಅಂದರೆ ಶ್ರೀ ರಾಮನು ಧರ್ಮದ ಅವತಾರ, ಧರ್ಮದ ಮೂರ್ತಿ, ಮರ್ಯಾದಾ ಪುರುಷೋತ್ತಮ.

ಶ್ರೀರಾಮನ ಆದರ್ಶಗಳನ್ನು ಮೆಲುಕು ಹಾಕಿ ಅವುಗಳನ್ನು ಬದುಕಿನಲ್ಲಿ ಅಳವಡಿಸಿ ಕೊಳ್ಳುವುದೇ ರಾಮ ಜನ್ಮೋತ್ಸವವನ್ನು ಆಚರಿಸುವ ಉದ್ದೇಶ. ಚೈತ್ರ ಶು॥ ಪ್ರತಿಪತ್ ಮೊದಲ್ಗೊಂಡು ನವಮಿಯವರೆಗೆ 'ಗರ್ಭೋತ್ಸವ'ವೆಂದೂ ನವಮಿಯಿಂದ ಬಹುಳ ಬಿದಿಗೆಯವರೆಗೆ 'ಜನ್ಮೋತ್ಸವ' ವೆಂದೂ ಎರಡು ರೀತಿಯಲ್ಲಿ ಇದನ್ನು ಆಚರಿಸಲಾಗುತ್ತದೆ.

ರಾಮಾಯಣದ ಕತೆಯನ್ನು ತಿಳಿಯದವರು ಇಲ್ಲವೆಂದೇ ಹೇಳಬಹುದು. ಅವನ ಒಂದೆರಡು ಆದರ್ಶಗಳನ್ನು ನಿಮ್ಮ ಮುಂದಿರಿಸುತ್ತೇನೆ. ಗೋಸ್ವಾಮಿ ತುಲಸೀದಾಸರು ರಾಮನನ್ನು ಕಂಡ ರೀತಿ ಹೀಗಿದೆ:–

ಪ್ರಸನ್ನತಾಂ ಯಾ ನ ಗತಾಭಿಷೇಕತಃ
ತಥಾ ನ ಮಮ್ಲೌವನವಾಸ ದುಃಖತಃ।
ಮುಖಾಂಬುಜಶ್ರೀಃ ರಘುನಂದನಸ್ಯ ಸಾ
ಸದಾಸ್ತು ಮೇ ಮಂಜುಲಮಂಗಲಪ್ರದಾ ॥

ಒಂದು ಸಾಮಾನ್ಯ ಗದ್ದುಗೆಯನ್ನು ಪಡೆಯಲು, ಗದ್ದುಗೆಗೆ ಅಂಟಿಕೊಳ್ಳಲು ಇಂದಿನ ಕೆಲವು ರಾಜಕಾರಣಿಗಳು ನಡೆಸುವ ಸರ್ಕಸ್ಸನ್ನು ನೆನಪಿಸಿಕೊಳ್ಳಿ ಮತ್ತು ಗದ್ದುಗೆ ಯಿಂದಿಳಿದ ಮೇಲೆ ಅಥವಾ ಇಳಿಸಿದ ಮೇಲೆ ಅವರ ಮುಖಾರವಿಂದಗಳಿಂದ ಹೊರ ಬೀಳುವ ಹೇಳಿಕೆಯೆಂಬ ಅಣಿಮುತ್ತುಗಳನ್ನು ಜ್ಞಾಪಿಸಿಕೊಳ್ಳಿ. ಶ್ರೀರಾಮ ತನ್ನ ಮಹಾ ಸಾಮ್ರಾಜ್ಯ ಪಟ್ಟಾಭಿಷೇಕದ ಸಂದರ್ಭದಲ್ಲಿ ಸಂತಸಪಡಲೂ ಇಲ್ಲ, ವನವಾಸಕ್ಕೆ ತೆರಳುವಾಗ ದುಃಖಿಸಲೂ ಇಲ್ಲ. ಎರಡೂ ಸಂದರ್ಭಗಳಲ್ಲೂ ವಿಕಾರ ಹೊಂದದ ಶ್ರೀರಾಮನ ವದನಾರವಿಂದದ ಕಳೆ ತನಗೆ ಮಂಗಳವನ್ನುಂಟು ಮಾಡಲೆಂದು ತುಳಸೀ

ದಾಸರು ಪ್ರಾರ್ಥಿಸುತ್ತಾರೆ.

ಸ್ನೇಹಂ ದಯಾಂ ಚ ಸೌಖ್ಯಂ ಚ ಯದಿ ವಾ ಜಾನಕೀ ಮಪಿ।
ಆರಾಧನಾಯ ಲೋಕಸ್ಯ ಮುಂಚತೋ ನಾಸ್ತಿ ಮೇ ವ್ಯಥಾ ॥

ಎಂದು ಭವಭೂತಿ ಉತ್ತರ ರಾಮಚರಿತದಲ್ಲಿ ಶ್ರೀರಾಮನ ಬಾಯಿಯಿಂದ ಹೇಳಿಸುತ್ತಾನೆ.

ಅರ್ಧನಾರೀಶ್ವರನೆಂದು ಹೇಳಿಸಿಕೊಂಡ 'ಉಮಾಶಂಕರ' ನಂತೆ ಈತ 'ಸೀತಾರಾಮ' ಆದರೂ ತನ್ನ ಪ್ರಜೆಗಳ ಹಿತಕ್ಕಾಗಿ, ತೃಪ್ತಿಗಾಗಿ ತನ್ನ ಅರ್ಧಾಂಗಿನಿಯಾದ ಸೀತೆಯನ್ನು ತನ್ನ ಸಮಸ್ತ ಸುಖವನ್ನು ತ್ಯಾಗಮಾಡಿದ ಪ್ರಜಾವತ್ಸಲ. 'ರಂಜಯತಿ ಪ್ರಜಾನ್' ಪ್ರಜೆಗಳನ್ನು ರಂಜಿಸುವವನು ಎಂಬ ಅರ್ಥದಲ್ಲಿ ಈತ ಆದರ್ಶರಾಜ. ರಮಂತೇ ಯೋಗಿನಃ ಅಸ್ಮಿನ್ ಎಂಬ ವ್ಯುತ್ಪತ್ತಿಯಂತೆ 'ರಾಮ' ಎಂಬುದು ಈತನ ಅನ್ವರ್ಥನಾಮ. 'ರಾ' ಎಂಬುದಾಗಿ ಬಾಯಿ ಕಳೆದಾಗ ದೇಹದಿಂದ ಹೊರಟ ಮನಸ್ಸಿನ ಕಶ್ಮಲ ಮತ್ತೆ ದೇಹವನ್ನು ಪ್ರವೇಶಿಸದಂತೆ 'ಮ' ಎಂದು ತುಟಿಗಳನ್ನು ಮುಚ್ಚುವುದರ ಮೂಲಕ ನಿರಂತರ ರಾಮನಾಮ ಸ್ಮರಣೆಯಿಂದಲೇ ಮಾನಸಿಕ ಶಾಂತಿ. ರಾಮೋತ್ಸವ ದಲ್ಲಿ ರಾಮ ಭಜನೆ, ಅಖಂಡ ರಾಮನಾಮ ಸ್ಮರಣೆ ಔಚಿತ್ಯಪೂರ್ಣ.

ತಂದೆ ತಾಯಿಗಳೊಂದಿಗೆ, ಮಲತಾಯಂದಿರೊಡನೆ, ಪ್ರಜೆಗಳೊಡನೆ, ಪರಿಜನ ರೊಂದಿಗೆ, ಸಹೋದರರೊಂದಿಗೆ, ಮಿತ್ರರೊಂದಿಗೆ, ಶತ್ರುಗಳೊಡನೆ, ಗುರುಹಿರಿಯ ರೊಂದಿಗೆ, ಪರಿವಾರದ ಇತರೆ ಸದಸ್ಯರೊಂದಿಗೆ ಹೇಗೆ ವರ್ತಿಸಬೇಕೆಂದು ತನ್ನ ಆಚರಣೆಯಿಂದ ಬದುಕಿನುದ್ದಕ್ಕೂ ತೋರಿಸಿದ ಶ್ರೀ ರಾಮನ ಆದರ್ಶ ಅನುಕರಣೀಯ.

ಹತ್ತು ತಲೆ, ಇಪ್ಪತ್ತು ತೋಳುಗಳು, ಸುವರ್ಣ ನಗರ, ದೇವತೆಗಳನ್ನೂ ನಡುಗಿಸುವ ಪರಾಕ್ರಮ, ದೇವರ್ಷಿಗಳನ್ನು ಮೀರಿಸುವ ಪಾಂಡಿತ್ಯ, ಸೌಂದರ್ಯದಲ್ಲಿ ರತಿಯನ್ನು ಮೀರಿಸುವ ಪತ್ನಿ ಮೊದಲಾದಂತೆ ಅತಿಮಾನುಷ ಗುಣ–ಶಕ್ತಿಗಳಿದ್ದೂ, ಸೀತೆಯನ್ನು ಕಾಮಿಸಿದ ಅನೈತಿಕ ವ್ಯವಹಾರದಿಂದಾಗಿ ಅನಾಗರಿಕರಾದ ಕಪಿಗಳ ಸಹಾಯವುಳ್ಳ ಒಬ್ಬ ಸಾಮಾನ್ಯ ಮಾನವನಾದ ರಾಮನಿಂದ ಹತನಾದ ರಾವಣನಂತಾಗದೇ ಎಲ್ಲರೂ ಶ್ರೀರಾಮನಂತಿರಬೇಕೆಮಬುದೇ ರಾಮಾಯಣದ ಸಂದೇಶ, ರಾಮಾವತಾರದ ರಹಸ್ಯ.

ಧರ್ಮೋ ರಕ್ಷತಿ ರಕ್ಷಿತಃ

ತ್ಯಜಂತಿ ಮಿತ್ರಾಣಿ ಧನೈರ್ವಿಹೀನಂ ಪುತ್ರಾಶ್ಚ ದಾರಾಶ್ಚ ಸುಹೃಜ್ಜನಾಶ್ಚ।
ತಮರ್ಥವಂತಂ ಪುನರಾಶ್ರಯಂತೇ ಧನಂ ಹಿ ಲೋಕೇ ಪುರುಷಸ್ಯ ಬಂಧುಃ॥

ಎಂದು ಸುಭಾಷಿತಕಾರ ಹೇಳುತ್ತಾನೆ. ಜೇಬಿನಲ್ಲಿ ಹಣವಿಲ್ಲದವನನ್ನು ಯಾವ ಸ್ನೇಹಿತನೂ ಮಾತನಾಡಿಸುವುದಿಲ್ಲ. ಆಪ್ತೇಷ್ಟರೂ, ಹೆಂಡತಿ ಮಕ್ಕಳೂ ಹಣವಿಲ್ಲದವನನ್ನು ಬಿಟ್ಟೋಡುತ್ತಾರೆ. ಕಾರಣಾಂತರದಿಂದ ಅವನು ಧನವಂತನಾದರೆ ಅವನನ್ನು ಎಲ್ಲರೂ ಪುನಃ ಆಶ್ರಯಿಸುತ್ತಾರೆ. ಆದ್ದರಿಂದ ಹಣವೇ ಈ ಲೋಕದಲ್ಲಿ ಮನುಷ್ಯನ ನಿಜವಾದ ಬಂಧು. ಹಣವಿದ್ದರೆ ಎಲ್ಲವೂ ಉಂಟು. ಹಣವಿಲ್ಲದಿದ್ದರೆ ಯಾವುದೂ ಇಲ್ಲ. ಹಣದಿಂದ ಎಲ್ಲವನ್ನು ವಶಪಡಿಸಿಕೊಳ್ಳಬಹುದು.

ಆದರೆ ಈ ಹಣ ಅಂದರೆ 'ಅರ್ಥ' "ನಮಗೆ ಸುಖ ನೀಡುವುದಿಲ್ಲ" ಎಂಬುದು ಅನೇಕ ಸಿರಿವಂತರ ಅನುಭವ. ಭಾರತೀಯರಾದ ನಾವು ಐಹಿಕ ಸುಖವನ್ನು ಮಾತ್ರ ಸುಖವೆಂದು ನಂಬಿಲ್ಲ. ನಮಗೆ ಪಾರಲೌಕಿಕ ಸುಖವೂ ಬೇಕು. ಲೋಕಾಂತರವೊಂದುಂಟೆಂದು ನಮ್ಮ ದೃಢವಿಶ್ವಾಸ. ಆದುದರಿಂದ ಪಾರಲೌಕಿಕ ಸುಖಾಪೇಕ್ಷಿಗಳಾದ ನಮಗೆ ಈ ಲೌಕಿಕ ಸಂಪತ್ತಿನಿಂದ ಪ್ರಯೋಜನವಿಲ್ಲ. ನಾವು ಚತುರ್ವಿಧ ಪುರುಷಾರ್ಥಗಲನ್ನು ಹೆಸರಿಸುವ ಅನುಕ್ರಮದಲ್ಲಿ ಸಂಪತ್ತಿಗೆ ಅಂದರೆ 'ಅರ್ಥ'ಕ್ಕೆ ಎರಡನೆಯ ಸ್ಥಾನ. ಈ 'ಅರ್ಥ'ವು ಧರ್ಮಮೂಲವಾಗಿರಬೇಕು.

ಧನಾನಿ ಭೂಮೌ ಪಶವೋ ಹಿ ಗೋಷ್ಠೇ
ನಾರೀ ಗೃಹದ್ವಾರಿ ಸಖಾ ಶ್ಮಶಾನೇ।
ದೇಹಶ್ಚಿತಾಯಾಂ ಪರಲೋಕಮಾರ್ಗೇ
ಧರ್ಮಾನುಗೋಗಚ್ಛತಿ ಜೀವಏಕಃ॥

ಅಂದರೆ ಮನುಷ್ಯ ಸಂಪಾದಿಸಿದ ಲೌಕಿಕ "ಸಂಪತ್ತು ಕಾಲಾನುಕ್ರಮದಲ್ಲಿ ಮಣ್ಣು ಪಾಲಾಗುತ್ತದೆ. ಸರ್ವಜ್ಞನ ಮಾತಿನಲ್ಲಿ ಹೇಳುವುದಾದರೆ

"ಉಣ್ಣದೊಡವೆಯಗಳಿಸಿ ಮಣ್ಣೊಳಗೆ ಬೈತಿಟ್ಟು ಚೆನ್ನಾಗಿ ನೆಲವ ಸಾರಿಸಿದವನ ಬಾಯೊಳಗೆ ಮಣ್ಣು ಕಾಣಯ್ಯ".

ಯಾವ ಶ್ರೀಮಂತನೂ ತನ್ನ ದುಡಿಮೆಯ ಹಣದ ಗಂಟನ್ನು ತನ್ನೊಡನೆ ಒಯ್ಯಲಾರ. ಮನುಷ್ಯ ತನ್ನ ಜೀವಿತ ಕಾಲದಲ್ಲಿ ಸಾಕಿದ ಪ್ರಾಣಿಗಳೂ ಅಂತ್ಯಕಾಲದಲ್ಲಿ ಅವನೊಡನೆ ಬರಲಾರವು. ಹೆಂಡತಿ ಗಂಡನ ಸಾವಿನಲ್ಲಿ ಬಾಗಿಲತನಕ ಮಾತ್ರ ಬಂದಾಳು. ಗೆಳೆಯರಾಗಲೀ ಬಂಧುಗಳಾಗಲೀ ಚಿತೆಯ ತನಕ ಜತೆಯಲ್ಲಿ ಬಂದಾರು. ದೇಹ ಚಿತೆಯಲ್ಲಿ ಭಸ್ಮವಾಗುತ್ತದೆ. ಆದರೆ "ಧರ್ಮ" ಮಾತ್ರ ಪರಲೋಕದಲ್ಲೂ ಅವನನ್ನು ಅಗಲುವುದಿಲ್ಲ.

ಮಹಾಭಾರತದ ಸ್ವರ್ಗಾರೋಹಣ ಪರ್ವದ ಕಥೆ ಕೇಳಿ, ಸಶರೀರ

ಸ್ವರ್ಗಾರೋಹಣಾಕಾಂಕ್ಷಿಗಳಾದ ಪಾಂಡವರು ಒಂದು ನಾಯಿಯೊಂದಿಗೆ ಮುನ್ನಡೆಯುತ್ತಿದ್ದಾರೆ. ದ್ರೌಪದಿ, ಸಹದೇವ, ನಕುಲ, ಅರ್ಜುನ ಭೀಮರು ಒಬ್ಬೊಬ್ಬರಾಗಿ ಕುಸಿದು ಬೀಳುತ್ತಾರೆ. ಅರ್ಜುನನ ಮೇಲಿನ ವಿಶೇಷ ಪ್ರೀತಿಯ ಪಕ್ಷಪಾತ, ಪಾಂಡಿತ್ಯ, ಸೌಂದರ್ಯ, ಪರಾಕ್ರಮ, ಬಲಗಳ ಅಹಂಕಾರದಿಂದ ಕ್ರಮವಾಗಿ ಒಬ್ಬೊಬ್ಬರೂ ಅವಸಾನ ಹೊಂದಿದರೆಂದು ಸಮಾಧಾನದಿಂದ ಯುಧಿಷ್ಠಿರ ಏಕಾಕಿಯಾಗಿ ನಾಯಿಯೊಂದಿಗೆ ಮುನ್ನಡೆಯುತ್ತಿರುವಾಗ ಇಂದ್ರ ಪ್ರತ್ಯಕ್ಷನಾಗಿ ದಿವ್ಯ ರಥವನ್ನೇರುವಂತೆ ಧರ್ಮರಾಯನನ್ನ ಕೇಳಿದ. ಆದರೆ ನಾಯಿಯನ್ನು ರಥದೊಳಗೆ ಬಿಡಲಿಲ್ಲ. ಆಶ್ರಿತ ಧರ್ಮದ ಮಹತ್ವವನ್ನು ತಿಳಿಸುತ್ತಾ ಧರ್ಮರಾಯ ಹೇಳಿದ "ಈ ನಾಯಿ ನನ್ನನ್ನಾಶ್ರಯಿಸಿ ಇಲ್ಲಿಯ ತನಕ ನನ್ನ ಜತೆಯಲ್ಲೇ ಬಂದಿದೆ. ನನ್ನೊಡನಿರುವ ಈ ನಾಯಿಗೆ ಪ್ರವೇಶ ದೊರೆಯದಿರುವ ಸ್ವರ್ಗ ನನಗೂ ಬೇಡ. ಈ ತನಕ ನನ್ನ ಕಷ್ಟಸುಖಗಳಲ್ಲಿ ಭಾಗಿಯಾಗಿ ನನ್ನೇ ನಂಬಿ ಆಶ್ರಯಿಸಿರುವ ಈ ನಾಯಿಯನ್ನು ಇಲ್ಲೇ ಬಿಟ್ಟು ನಾನೊಬ್ಬನೇ ಸ್ವರ್ಗಕ್ಕೆ ಬರಲಾರೆ."–ಹೀಗೆ ನಿರಾಕರಿಸಿದ ಧರ್ಮರಾಯನೆದುರು ಶ್ವಾನರೂಪದಲ್ಲಿದ್ದ ಧರ್ಮ ದೇವತೆ ಪ್ರತ್ಯಕ್ಷಳಾಗಿ "ಯಾವುದೇ ಕಷ್ಟದಲ್ಲೂ ಧರ್ಮವನ್ನು ಬಿಡದ ನೀನೇ ಧನ್ಯ" ಎಂದಳಂತೆ. ಆದುದರಿಂದ ಈ ಲೋಕದಲ್ಲೂ ಲೋಕಾಂತರದಲ್ಲೂ ಧರ್ಮವೊಂದೇ ನಮಗೆ ಸಂಗಾತಿ.

ನೀತಿಕಾರನ ಉಕ್ತಿಯೊಂದನ್ನು ಉದಾಹರಿಸುತ್ತೇನೆ.

ವಿದ್ಯಾಮಿತ್ರಂ ಪ್ರವಾಸೇ ಚ ಭಾರ್ಯಾ ಮಿತ್ರಂ ಗೃಹೇಷು ಚ।
ವ್ಯಾಧಿತಸ್ಯೌಷಧಂ ಮಿತ್ರಂ ಧರ್ಮೋಮಿತ್ರಂ ಮೃತಸ್ಯ ಚ॥

ದೇಶಾಂತರದಲ್ಲಿ ವಿದ್ಯೆಯೇ ಮನುಷ್ಯನ ಸಂಗಾತಿ. ತಾನು ಕಲಿತ ಕುಶಲ ವಿದ್ಯೆಗಳಿಂದ ವಿದ್ಯಾವಂತ ಎಲ್ಲೂ ಬದುಕಬಲ್ಲ. ಮನೆಯಲ್ಲಿ ಗೃಹಿಣಿಯೇ ಸಂಗಾತಿ. ರೋಗಿಯ ಜತೆಗೆ ಬೇಕಾದುದು ಔಷದ. ಆದರೆ ಮಾನವನ ಜೀವಿತ ಕಾಲದಲ್ಲಲ್ಲದೇ ಸತ್ತಮೇಲೂ 'ಧರ್ಮ'ವೊಂದೇ ನಿಜವಾದ ಸಂಗಾತಿ.

ತಾನು ಇತರರಿಂದ ಏನನ್ನು ನಿರೀಕ್ಷಿಸುತ್ತಾನೋ ಅದನ್ನೇ ಇತರರೊಡನೆ ವ್ಯವಹರಿಸುವುದೇ ನಿಜವಾದ ಧರ್ಮ. ನಾವು ಇತರರಿಂದ ಕಟೂಕ್ತಿಗಳನ್ನು ಕೇಳಲು ಬಯಸುವುದಿಲ್ಲವೆಂದಾದರೆ ಇತರರನ್ನು ಬೈಯ್ಯಬಾರದು. ನಮ್ಮೊಡನೆ ಯಾರೂ ಸುಳ್ಳು ಹೇಳಬಾರದೆಂದಿದ್ದರೆ ನಾವೂ ಯಾರೊಡನೆಯೂ ಸುಳ್ಳು ಹೇಳಬಾರದು. ಕಲಬೆರಕೆ ವಸ್ತುಗಳನ್ನು ಬಳಸಲು ಇಷ್ಟವಿಲ್ಲದವರು ಅಂತಹ ವಸ್ತುಗಳನ್ನು ಮಾರಬಾರದು. ಅಹಿಂಸೆಯೇ ಪರಮ ಧರ್ಮವೆಂದು ತಿಳಿದು ಪ್ರಾಣಿ ಮಾತ್ರಕ್ಕೆ ದಯೆ–ದಾಕ್ಷಿಣ್ಯ–ಸುಖ–ಸಂತೋಷ ನೀಡಿದರೆ ನಮಗೂ ಸುಖ ಶಾಂತಿ ಸಿಗುತ್ತದೆ. ಇದೇ ಧರ್ಮದ ಫಲ.

ಹೀಗೆ ಧರ್ಮಾಚರಣೆಯಿಂದ ಮಾತ್ರ ನಾವು ಇಹ–ಪರಗಳೆರಡರಲ್ಲೂ ಸುಖ ಪಡೆಯಲು ಸಾಧ್ಯ. ನಾವು ಧರ್ಮವನ್ನು ಕಾಪಾಡಿದರೆ ಆ ಧರ್ಮ ನಮ್ಮನ್ನು ರಕ್ಷಿಸುತ್ತದೆ. ನಾವು ಧರ್ಮವನ್ನು ನಾಶಪಡಿಸಿದರೆ ನಮ್ಮ ವಿನಾಶ ಖಂಡಿತ. ಧರ್ಮ ಏವ ಹತೋ ಹಂತಿ. ಧರ್ಮೋ ರಕ್ಷತಿ ರಕ್ಷಿತಃ॥

॥ಶ್ರೀರಸ್ತು॥

ಗೋ ಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ

"ಲೋಕಾಃ ಸಮಸ್ತಾಃ ಸುಖಿನೋ ಭವಂತು" ಎಂಬುದು ಹಿರಿಯರ ಹಾರೈಕೆ. ಗೋಗ್ರಾಸವನ್ನು ನೀಡಿದ ನಂತರವೇ ಉಣ್ಣುವುದು ಇಂದಿಗೂ ರೂಢಿಯಲ್ಲಿದೆ. ಹಸುಗಳಿಗೂ ಬ್ರಾಹ್ಮಣರಿಗೂ ಶುಭವಾದರೆ ಲೋಕ ಸುಖ ಸಿದ್ಧಿಸುವುದು ಹೇಗೆ? ನಿರ್ದಿಷ್ಟ ವರ್ಣ ಲಕ್ಷ್ಣಗಳುಳ್ಳ ಹಸುಗಳ ಮೂತ್ರ, ಹಾಲು, ಮೊಸರು, ತುಪ್ಪ, ಸೆಗಣಿ ಇವುಗಳ ನಿಯತ ಪ್ರಮಾಣದ ಮಿಶ್ರಣವನ್ನು ಅಭಿಮಂತ್ರಿಸಿ ಪ್ರಾಶನ ಮಾಡುವುದರಿಂದ ದೇಹ ಶುದ್ಧಿಯಾಗುತ್ತದೆ. ಪಾಪ ಪರಿಹಾರವಾಗುತ್ತದೆಯೆಂಬುದೂ ನಂಬಿಕೆ. 'ಪಂಚಗವ್ಯಘೃತ' ಎಂಬುದಾಗಿ ಆಯುರ್ವೇದದ ಒಂದು ಔಷಧ (ವಂಧ್ಯಾತ್ವ ನಿವಾರಣೆಗೆ?) ಪ್ರಸಿದ್ಧವಾಗಿದೆ. ಪಂಚಾಮೃತವಿಲ್ಲದೆ ಭಗವಂತನ ಆರಾಧನೆ ಅಪೂರ್ಣ. ದೇವಪಿತೃ ಕಾರ್ಯಗಳಿಗೆ, ಯಜ್ಞಯಾಗಾದಿಗಳಿಗೆ ಹಸುವಿನ ಹಾಲು, ಮೊಸರು, ತುಪ್ಪ ಅನಿವಾರ್ಯ. ದೇಹದ ಪುಷ್ಟಿಗೆ, ಬಲವರ್ಧನೆಗೆ, ಬುದ್ಧಿಯ ಬೆಳವಣಿಗೆಗೆ (ಘೃತೇನ ವರ್ಧತೇ ಬುದ್ಧಿಃ) ಹಾಲು, ತುಪ್ಪ ಧಾರಾಳವಾಗಿ ಉಪಯೋಗಿಸಬೇಕು. ಪ್ರಾಚೀನ ಕಾಲದಲ್ಲಿ ಹಸುಗಳು ನಾಣ್ಯದ ಬದಲಿಗೆ ವಿನಿಮಯದ ಸಾಧನಗಳಾಗಿದ್ದುವು. ಪಶುಸಮೃದ್ಧಿಯಿಂದ ಒಬ್ಬನ ಶ್ರೀಮಂತಿಕೆಯನ್ನು ಅಳೆಯಲಾಗುತ್ತಿದ್ದ ಕಾಲವೊಂದಿತ್ತು. ಹೀಗೆ ಲೋಕದ ಜನರ ಇಹ–ಪರ ಸುಖಕ್ಕೆ, ಧಾರ್ಮಿಕ ವಿಧಿಗಳ ಆಚರಣೆಗೆ, ದೇವ–ಋಷಿ–ಪಿತೃಗಳ ತೃಪ್ತಿಗೆ, ಆಯುರಾರೋಗ್ಯ ವರ್ಧನೆಗೆ ಅನಿವಾರ್ಯವೆನಿಸಿದ ಹಸುಗಳನ್ನು ದೇವರೆಂದು ಪೂಜಿಸುವುದೂ ರೂಢಿಗೆ ಬಂತು. ಗೋದಾನಕ್ಕೆ ಸಮನಾದ ದಾನವಿಲ್ಲ ಎಂಬ ಭಾವನೆಯೂ ಬಲಿಯಿತು. ಪಶುಗಳ ಸಮೃದ್ಧಿಯಿಂದ ಲೋಕಕಲ್ಯಾಣ ಸಿದ್ಧಿಸುವುದು ಹೀಗೆ.

ಬ್ರಾಹ್ಮಣರ ಕುಶಲಕ್ಕೂ ಲೋಕಸುಖಕ್ಕೂ ಸಂಬಂಧ ಹೇಗೆ? ಸಂತೃಪ್ತ ಬದುಕನ್ನು ನಿರ್ವಹಿಸುತ್ತಾ, ಸಕಾಲದಲ್ಲಿ ಮಳೆ–ಬೆಳೆಯಾಗಲಿ, ಭೂಮಿ ಸಸ್ಯಶ್ಯಾಮಲೆಯಾಗಿ ಕಂಗೊಳಿಸಲಿ, ದೇಶದಲ್ಲಿ ಕ್ಷೋಭೆ, ಕ್ಷಾಮ–ಡಾಮರಗಳಿಲ್ಲದೆ ಸುಖಶಾಂತಿ ನೆಲೆಸಲಿ ಎಂದು ನಿತ್ಯ ಭಗವಂತನನ್ನು ಪ್ರಾರ್ಥಿಸುವವರು ಮತ್ತು ಪ್ರಾರ್ಥನೆ ಫಲಿಸದಿದ್ದಾಗ ತಮ್ಮ ತಪೋ ಅನುಷ್ಠಾನ ಬಲಗಳಿಂದ ದೇಶದಲ್ಲಿ ಸುಭಿಕ್ಷವನ್ನುಂಟು ಮಾಡುವ ಮಹಾಮಹಿಮರೇ ಬ್ರಾಹ್ಮಣರು 'ಮಮ ದೈವತಂ' ಎಂಬ ಭಗವದ್ ವಾಕ್ಯದಂತೆ ದೈವಪಟ್ಟಕ್ಕೇರಿಸಲ್ಪಟ್ಟಿದ್ದಾರೆ. ಆದ್ದರಿಂದ ಬ್ರಾಹ್ಮಣರು ಭೂ–ಸುರರು. ಇವರ ಸುಖವೇ ಲೋಕಸುಖ.

'ಬ್ರಹ್ಮ' ಎಂಬುದು ಬ್ರಾಹ್ಮಣ ಶಬ್ದದ ಮೂಲ. ಸಕಲ ಚರಾಚರಗಳಲ್ಲಿ ಅಡಗಿರುವ, ಜ್ಞಾನೈಕ ವೇದ್ಯನಾಗಿರುವ ಭಗವಂತನ ಸ್ವರೂಪವನ್ನು ಅರಿತವರು, ಬೋಧಿಸುವವರು–

ಬ್ರಾಹ್ಮಣರು. ಜ್ಞಾನ ರಾಶಿಯಾದ 'ಬ್ರಹ್ಮ' ಅಂದರೆ ವೇದಗಳನ್ನು ಅಧ್ಯಯನ ಮಾಡಿ ಅಧ್ಯಾಪನದೊಂದಿಗೆ ವೇದೋಕ್ತ ಕರ್ಮಾಂಗಗಳನ್ನು ಅರಿತು ವಿಧಿವತ್ತಾಗಿ ಮಾಡುವವರು ಮತ್ತು ಮಾಡಿಸುವವರು–ಬ್ರಾಹ್ಮಣರು. ಜಗತ್ತಿನಲ್ಲಿ ನ್ಯಾಯ, ನೀತಿ, ಸತ್ಯ, ಅಹಿಂಸೆ ಮೊದಲಾದ 'ಸತ್' ಗಳು ಧರ್ಮವನ್ನವಲಂಬಿಸಿವೆ. ವೇದಗಳು ಈ ಧರ್ಮಕ್ಕೆ ಮೂಲ. **(ವೇದೋಽಖಿಲೋ ಧರ್ಮ ಮೂಲಂ–ಗೌತಮ ಧರ್ಮಸೂತ್ರ)**. ವೇದಾಧ್ಯಯನ ಸಂಪನ್ನರಾಗಿ ಕಾಲಕಾಲಕ್ಕೆ ವೇದ ವಿಹಿತ ಧರ್ಮಾನುಷ್ಠಾನದಿಂದ ನಿಗ್ರಹಾನುಗ್ರಹ ಸಮರ್ಥರಾದ ಬ್ರಾಹ್ಮಣರು ಲೋಕದ ಸುಖವನ್ನೇ ಜೀವಿತದ ಧ್ಯೇಯವನ್ನಾರಿಸಿಕೊಂಡವರು.

'ಯಾವತೀರ್ವೈ ದೇವತಾಸ್ತಾಃ ಸರ್ವಾ ವೇದವಿದಿ ಬ್ರಾಹ್ಮಣೇ ವಸಂತಿ, ತಸ್ಮಾತ್ ಬ್ರಾಹ್ಮಣೇಭ್ಯೋ ವೇದವಿದ್ಭ್ಯೋ ದಿವೇ ದಿವೇ ನಮಸ್ಕುರ್ಯಾತ್, ನಾಶ್ಲೀಲಂ ಕೀರ್ತಯೇತ್, ಏತಾ ಏವ ದೇವತಾಃ ಪ್ರೀಣಾತಿ' ವೇದವಿತ್ತರಾದ ಬ್ರಾಹ್ಮಣರು ದೇವತಾ ಸ್ವರೂಪರು, ಇವರನ್ನು ದೇವರನ್ನು ಹೇಗೋ ಹಾಗೆಯೇ ವಂದಿಸಬೇಕು ಎಂದು ಯಜುರ್ವೇದದ ಒಂದು ಮಂತ್ರದಲ್ಲಿ ಹೇಳಲಾಗಿದೆ. ವಿರಾಟ್ ಪುರುಷನ ಸ್ವರೂಪವನ್ನು ವರ್ಣಿಸುವ ಒಂದು ಮಂತ್ರ "ಬ್ರಾಹ್ಮಣೋಽಸ್ಯ ಮುಖಮಾಸೀತ್" ಎಂದು ಹೇಳುತ್ತದೆ. ದೇಹದ ಎಲ್ಲ ಅಂಗಗಳೂ ಸಮಾನ. ಯಾವುದೇ ಅಂಗ ಊನವಾದರೂ ಮನುಷ್ಯ ಪರಿಪೂರ್ಣನಾಗಲಾರ. ಆದರೆ ಎಲ್ಲ ಇಂದ್ರಿಯಗಳೂ ಮುಖದಲ್ಲಿರುವುದರಿಂದ ಮುಖಕ್ಕೆ ಪ್ರಾಶಸ್ತ್ಯ.

ಎಲ್ಲ ವರ್ಗದ ಜನರೂ ಸಮಾನರು ದೇಹದ ವಿವಿಧ ಅಂಗ–ಅವಯವಗಳಿದ್ದಂತೆ. ಕೈ, ಕಾಲು, ಬೆರಳು, ಕಣ್ಣು,ಕಿವಿ,ಮೂಗು, ನಾಲಗೆ ಮೊದಲಾದ ಎಲ್ಲ ಅಂಗಾವಯವ ಗಳಿಂದ ಮಾತ್ರವೇ ಮನುಷ್ಯ ಪರಿಪೂರ್ಣ. ಇವು ಪ್ರತಿಯೊಂದೂ ತಮ್ಮದೇ ಆದ ಕಾರ್ಯ ವೈಖರಿಯಿಂದ ಬೇರೆ ಬೇರೆಯಾಗಿವೆ. ಒಂದರ ಕಾರ್ಯವನ್ನು ಇನ್ನೊಂದು ನಿರ್ವಹಿಸುವಂತಿಲ್ಲ. ಬಡಗಿ, ಕಮ್ಮಾರ, ಕುಂಬಾರ, ವೈದ್ಯ, ದಾದಿ, ವ್ಯಾಪಾರಿ, ಅಧಿಕಾರಿ, ರಾಜಕಾರಣಿ, ತಂದೆ–ಮಗ ಮೊದಲಾದಂತೆ ಎಲ್ಲರೂ ಸಮಾಜದ ಅನಿವಾರ್ಯ ಅಂಗಗಳಂತಿದ್ದರೂ, ಗುಣ–ಲಕ್ಷಣ ಸ್ಥಾನಮಾನಗಳಿಂದ ಪ್ರತ್ಯೇಕವಾಗಿ ಗುರುತಿಸಲ್ಪಡು ತ್ತಾರೆ. ಹಾಗೆಯೇ ಬ್ರಾಹ್ಮಣನು ತನ್ನ ಪರಂಪರಾಗತ ಸದಾಚಾರ ನಿಷ್ಠೆಯಿಂದಲೂ, ಬೌದ್ಧಿಕ ವಿಕಾಸದಿಂದಲೂ, ಲೋಕಹಿತಕಾರಿಯಾದ ಧಾರ್ಮಿಕ ಚಿಂತನೆಯಿಂದಲೂ, ದೈನಂದಿನ ಚಟುವಟಿಕೆ–ಜೀವನ ವಿಧಾನಗಳಿಂದಲೂ, ಸತ್ಸಂಗ, ಸದ್ವಿವೇಕ ಮೊದಲಾದ ವಿಶಿಷ್ಟ ಗುಣಗಳಿಂದಲೂ ಸಮಾಜದಲ್ಲಿ ವಿಶೇಷವಾಗಿ ಗುರುತಿಸಲ್ಪಡಬೇಕು. ಹೀಗೆ ಬ್ರಾಹ್ಮಣರಿಂದ ಲೋಕಸುಖ.

ಬ್ರಾಹ್ಮಣನಿಗೆ 'ದ್ವಿಜ' ನೆಂದೂ ಹೆಸರಿದೆ. ವೇದ ವಿಹಿತವಾದ ಕರ್ಮಗಳ ಅನುಷ್ಠಾನ ದಿಂದ ಮಾತ್ರವೇ ಬ್ರಾಹ್ಮಣನಾಗುತ್ತಾನೆ. ತಾಯಿ–ತಂದೆ ಶಾಸ್ತ್ರ ವಿಧಿಯಿಂದ ವಿವಾಹಿತರಾಗಿದ್ದು ಅವರಲ್ಲಿ ಜನಿಸಿದ ಬಾಲಕನು 'ಉಪನೀತ' ನಾದ ಮೇಲೆ ಬ್ರಾಹ್ಮಣನಾಗುತ್ತಾನೆ. ವೇದಾಧ್ಯಯನಕ್ಕೆ ಅಧಿಕಾರಿಯಾಗುತ್ತಾನೆ.

ವೇದಗಳನ್ನು ಎಲ್ಲರೂ ಅಧ್ಯಯನ ಮಾಡಬಹುದು. ಸಾಹಿತ್ಯಿಕ ದೃಷ್ಟಿಯಿಂದ. ಏಕೆಂದರೆ ಇಂತಹ ಅದ್ಭುತ ಸಾಹಿತ್ಯ ಜಗತ್ತಿನ ಬೇರೆ ಯಾವುದೇ ಭಾಷೆಯಲ್ಲಿಲ್ಲವೆಂದು ವಿದೇಶೀ ಚಿಂತಕರೂ, ವಿದ್ವಾಂಸರೂ ಅಭಿಪ್ರಾಯಪಟ್ಟಿದ್ದಾರೆ.

ಪಂಚಭೂತಗಳನ್ನೂ ಪ್ರತ್ಯೇಕ ದೇವತೆಗಳನ್ನೂ ಆವಾಹನೆ ಮಾಡಲು, ದೇವತೆಗಳ ಸಮುದಾಯವನ್ನು ತೃಪ್ತಿಪಡಿಸಿ ಅನುಗ್ರಹ ಬೇಡುವ, ಯುದ್ಧದಲ್ಲಿ ಶತ್ರುಗಳನ್ನು ನಿಗ್ರಹಿಸಿ ಗೆಲುವು ಪಡೆಯುವ, ಬಿರುಗಾಳಿ–ಸುಂಟರಗಾಳಿಯನ್ನು ತಪ್ಪಿಸುವಂತೆ ಮರುತ್ತನ್ನು ಸ್ತುತಿಸುವ, ಮೃತ್ಯುವನ್ನು ಗೆಲ್ಲುವ, ರೋಗರುಜಿನಗಳನ್ನು ಜಯಿಸುವ, ಪ್ರಿಯತಮ–ಪ್ರಿಯತಮೆಯರನ್ನು ಒಲಿಸುವ ಮಂತ್ರಗಳ ರಾಶಿಯೇ ವೇದ.

ವೇದವ್ಯಾಸರು ತಮ್ಮ ನಾಲ್ವರು ಶಿಷ್ಯರ ಸಹಾಯದಿಂದ ಈ ಮಂತ್ರಗಳನ್ನು ಋಗ್ಯಜುಃಸಾಮಾಥರ್ವಣವೆಂದು ನಾಲ್ಕು ವೇದಗಳಾಗಿ ವರ್ಗೀಕರಿಸಿದರು. ದೇವತೆಗಳ ಸ್ತುತಿ ಮತ್ತು ಅವರ ಅನುಗ್ರಹಯಾಚನೆಯ ಮಂತ್ರಗಳನ್ನೊಳಗೊಂಡ ಋಗ್ವೇದವನ್ನು ಪೈಲ ಮಹರ್ಷಿಗಳೂ,

ಯಜ್ಞ ಕಾರ್ಯಗಳನ್ನು ದೈವೀ ಪ್ರಭಾವದಿಂದ ಪುನೀತಗೊಳಿಸುವಂತೆಮಾಡುವ ಮಂತ್ರಗಳನ್ನು ಯಜುರ್ವೇದವೆಂದು ವೈಶಂಪಾಯನರೂ, ಸಂಗೀತದ ಶ್ರವಣ ಪ್ರಭಾವವನ್ನು ಕೊಡುವಂತೆ ಹೇಳುವ ಮಂತ್ರಗಳನ್ನೊಳಗೊಂಡಿರುವ ಸಾಮವೇದವನ್ನು ಜೈಮಿನಿ ಮಹರ್ಷಿಗಳೂ, ಮಾಟ, ತಾಯಿತ, ವನಸ್ಪತಿ, ಶತ್ರುನಿಗ್ರಹ, ಅಪಾಯದಿಂದ ಪಾರಾಗುವಿಕೆ, ಭವಿಷ್ಯವನ್ನು ಗುರುತಿಸುವುದು ಇಂತಹ ವಿಚಾರಗಳನ್ನೊಳಗೊಂಡ ಮಂತ್ರಗಳನ್ನು ಅಥರ್ವಣವೇದವೆಂದು ಸುಮಂತು ಮಹರ್ಷಿಗಳೂ ಪರಿಷ್ಕರಿಸಿ ಸಂಪಾದಿಸಿದರು.

ಈ ವೇದಮಂತ್ರಗಳನ್ನು ಸರಿಯಾದ ಸ್ವರದಲ್ಲಿ ಹಾಡಿ ಅದರ ಜತೆಗೆ ತದನುಕೂಲ ಕರ್ಮಗಳನ್ನು ಮಾಡಿದರೆ ಇದರಲ್ಲಿ ದಿವ್ಯ ಶಕ್ತಿ ಪ್ರಕಟವಾಗುತ್ತದೆ. ಅದರ ಸ್ವರ ಮಾಧುರ್ಯವೇ ಆ ಮಂತ್ರಗಳ ದಿವ್ಯತೆಯ ಅಂಗ. ವೇದಗಳ ಮೂಲಕ ದೇವರನ್ನು ಸಾಕ್ಷಾತ್ಕರಿಸಿಕೊಳ್ಳಬಹುದು.

ವೇದಾಧ್ಯಯನ ಕುರಿತಾದ ಪರಿಭಾಷೆ ಹೀಗಿದೆ.

ಮಂತ್ರೋ ಹೀನಃ ಸ್ವರತೋ ವರ್ಣತೋ ವಾ
ಮಿಥ್ಯಾ ಪ್ರಯುಕ್ತೋ ನ ತಮರ್ಥಮಾಹಃ ॥
ಸ ವಾಗ್ವಜ್ರೋ ಯಜಮಾನಂ ಹಿನಸ್ತಿ
ಯಥೇಂದ್ರ ಶತ್ರುಃ ಸ್ವರತೋಽಪರಾಧಾತ್ ॥

ಸ್ವರಗಳ ಏರಿಳಿತದೊಂದಿಗೆ ಸ್ಪಷ್ಟವಾದ ಉಚ್ಚಾರಣೆಯಿಂದ ಮಾತ್ರ ವೇದಮಂತ್ರಗಳಿಗೆ ವಿವಕ್ಷಿತವಾದ ಅರ್ಥವಾಗುತ್ತದೆ, ಸಿದ್ಧಿಸುತ್ತದೆ, ಫಲಿಸುತ್ತದೆ ಎಂಬುದು ಪಾಶ್ಚಾತ್ಯ ದೇಶಗಳಲ್ಲಿನ ಸಂಶೋಧನೆಗಳಿಂದಲೂ ದೃಢಪಟ್ಟಿದೆ. ದಟ್ಟಿ ಪಂಚೆಯುಟ್ಟ ಒಬ್ಬ ಸಾಮಾನ್ಯ

ವ್ಯಕ್ತಿ ಅಸ್ಪಷ್ಟ ಧ್ವನಿಯಲ್ಲಿ "You are under arrest" ಎಂದು ಹೇಳಿದರೆ ಅವನನ್ನು ಮೂರ್ಖನೆಂದು ಅಪಹಾಸ್ಯ ಮಾಡಿಯಾರು. ಆದರೆ ಗರಿಗರಿಯಾದ ಖಾಕಿ ಸಮವಸ್ತ್ರ ಧರಿಸಿ ಒಬ್ಬ ವ್ಯಕ್ತಿ ಸೊಂಟದಲ್ಲಿದ್ದ ಪಿಸ್ತೂಲನ್ನು ಕೈಯಲ್ಲಿ ಹಿಡಿದು ಧ್ವನಿ ಏರಿಸಿ you are under arrest ಎಂದು ಅವೇ ಶಬ್ದಗಳನ್ನು ಉಚ್ಚರಿಸಿದಾಗ ಆಗುವ ಪರಿಣಾಮವನ್ನು ಊಹಿಸಿಕೊಳ್ಳಿ. ಹೀಗೆ ಬೇರೆಬೇರೆ ಸಂದರ್ಭದಲ್ಲಿ, ಬೇರೆ ಬೇರೆ ವ್ಯಕ್ತಿಯ ಬಾಯಿಯಿಂದ ಬರುವ, ಧ್ವನಿಯ ಏರಿಳಿತಗಳಿಂದ ಕೂಡಿದ ಒಂದೇ ಮಾತಿನಿಂದ ಉಂಟಾಗುವ ಪರಿಣಾಮ ಭೇದಗಳನ್ನೂ ಊಹಿಸಬಲ್ಲಿರಿ. ಹಾಗೆಯೇ ಅನಧಿಕಾರಿಯಾದವನು ಅಪಸ್ವರದಲ್ಲಿ ಹೇಳುವ ಮಂತ್ರಗಳಿಂದ ವಿವಕ್ಷಿತ ಅರ್ಥವಾಗಲೀ ನಿರೀಕ್ಷಿತ ಫಲಿತಾಂಶವಾಗಲೀ ಸಿಗಲಾರದು.

ವೇದಗಳು ಜ್ಞಾನರಾಶಿ. ಸಮುದ್ರದ ಆಳ, ಅಗಲ–ಜಲ ರಾಶಿಯನ್ನು ಅಳೆಯಲಾಗದಂತೆ ವೇದಗಳ ಮೌಲ್ಯವನ್ನೂ ಅಳೆಯಲಾಗದು. ಇದು ಜಗತ್ತಿನ ಅತ್ಯಮೂಲ್ಯ ಸಾಹಿತ್ಯ ಭಂಡಾರ. ವೇದೋಕ್ತವಾದ ಕರ್ಮಗಳ ಅನುಷ್ಠಾನದಿಂದ, ವೇದಾಂತದ ಅರ್ಥಚಿಂತನೆಯಿಂದ ಮಾತ್ರ ಮನುಕುಲದ ಉದ್ಧಾರ ಸಾಧ್ಯ. ವೇದಗಳ ರಾಶಿ ಮಾನವ ಕೋಟಿಯ ಉದ್ಧಾರಕ್ಕೆ ಭಾರತ ನೀಡಿದ ಅನ್ಯಾದೃಶವಾದ ಕೊಡುಗೆ. 'ಮೋಕ್ಷ ಮೂಲರ ಭಟ್ಟ' ನೆಂದು ತನ್ನ ಹೆಸರನ್ನು ಬದಲಾಯಿಸಿಕೊಂಡ ಜರ್ಮನಿಯ ವಿದ್ವಾಂಸ ಮ್ಯಾಕ್ಸ್ ಮುಲರ್ ನಂತಹ ಹಲವಾರು ಪಾಶ್ಚಾತ್ಯ ವಿದ್ವಾಂಸರು ವೇದಗಳಿಂದ ಆಕರ್ಷಿತರಾಗಿ ಸಂಸ್ಕೃತವನ್ನು ಅಭ್ಯಾಸ ಮಾಡಿ ವೇದಗಳ ಅರ್ಥವಿಸ್ತಾರವನ್ನು ಅರಿತು ಜಗತ್ತಿನ ಇತರ ಭಾಷೆಗಳಿಗೂ ಅನುವಾದ ಮಾಡಿದ ಸಂಗತಿ ಸರ್ವವಿದಿತ. ಇಂತಹ ವೇದಗಳನ್ನು ಅಧ್ಯಯನ ಮಾಡಲು ಅರ್ಹತೆಯನ್ನು ಪಡೆಯುವ ಸಂಸ್ಕಾರವೇ **'ಉಪನಯನ.'**

ಉಪನಯನ ಏಕೆ? ಉಪನಯನದ ಮುಖ್ಯಭಾಗ ಗಾಯತ್ರಿ ಮಂತ್ರೋಪದೇಶ. ಗಾಯತ್ರಿಗಿಂತ ಶ್ರೇಷ್ಠವಾದ, ಪವಿತ್ರವಾದ ಮಂತ್ರವಿಲ್ಲ. ಈ ಮಂತ್ರವನ್ನು ಸ್ವೀಕರಿಸುವವನೂ ಪವಿತ್ರನಾಗುವುದು ಅನಿವಾರ್ಯ. ಕೊಳಕು ಪಾತ್ರೆಯಲ್ಲಿ ಹಾಕಿದ ಪರಿಶುದ್ಧವಾದ ಪದಾರ್ಥದಂತೆ ಅನಧಿಕಾರಿಗೆ, ಅಶುಚಿಯಾದವನಿಗೆ ಗಾಯತ್ರಿ ಮಹಾಮಂತ್ರವನ್ನು ಉಪದೇಶಿಬಾರದು, ಉಪದೇಶಿಸಿದರೂ ಅದು ಫಲಿಸುವುದಿಲ್ಲ–ಬಂಜರು ಭೂಮಿಯಲ್ಲಿ ನೆಟ್ಟ ಉತ್ತಮ ಬೀಜದಂತೆ. ಆದ್ದರಿಂದ ವಟು ಗಾಯತ್ರಿ ಮಂತ್ರ ಸ್ವೀಕಾರ ಯೋಗ್ಯನಾಗುವ ಮೊದಲು 'ಉಪನೀತ' ನಾಗಬೇಕು, ಶುಚಿಯಾಗಬೇಕು. 'ಉಪ' ಅಂದರೆ ಸಮೀಪ. 'ನಯನ' ಅಂದರೆ ತಲಪಿಸುವುದು, ಮುಟ್ಟಿಸುವುದು. ಅರ್ಥಾತ್ ಅಗ್ನಿಯ ಸಮೀಪಕ್ಕೆ ವಟುವನ್ನು ಒಯ್ಯುವುದು, ಶುಚಿಗೊಳಿಸುವುದು. 'ಅಗ್ನಿ' ಮತ್ತು 'ಶುಚಿ' ಎರಡೂ ಸಮಾನಾರ್ಥಕ ಶಬ್ದಗಳು. ಈ ಅಗ್ನಿಯ ಸಮೀಪಕ್ಕೆ ಹೋದ ವಟು ಆತನಿಂದ ತೇಜಸ್ಸನ್ನು, ವರ್ಚಸ್ಸನ್ನು ಬೇಡಿ ಪಡೆಯುತ್ತಾನೆ. ಅದಕ್ಕಾಗಿ ಉಪನಯನದಲ್ಲಿ ಉಪವೀತ ಧಾರಣೆಯಾದ ಕೂಡಲೇ ವಟುವಿನಿಂದ ಅಗ್ನಿ ಕಾರ್ಯ ಮಾಡಿಸಲಾಗುತ್ತದೆ. ಹೀಗೆ 'ಉಪ–ನಯನ' ದಿಂದ ಶುಚಿಯಾದ ವಟು ಗಾಯತ್ರಿ

ಮಂತ್ರೋಪದೇಶ ಪಡೆಯಲು ಅರ್ಹನಾಗುತ್ತಾನೆ. ಮುಂದೆ ವೇದಾಧ್ಯಯನ ಮಾಡುವ ಬುದ್ಧಿ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಾನೆ.

'ಉಪನಯನ' ಎಂದರೆ ಸವಿತೃದೇವತೆಯ ಸಮೀಪಕ್ಕೆ ವಟುವನ್ನು ಒಯ್ಯುವುದು ಎಂದೂ ಅರ್ಥ. ದೇವ! ಸವಿತಃ! ಏಷ ತೇ ಬ್ರಹ್ಮಚಾರೀ ; ತಂ ಗೋಪಾಯ । ಎಲೈ ಸವಿತೃದೇವತೆಯೇ! ಈ ವಟು ನಿನ್ನವನು. ಈತನನ್ನು ರಕ್ಷಿಸು! ಎಂದು ವಟುವನ್ನು ಸವಿತೃದೇವತೆಗೆ ಸಮರ್ಪಿಸಲಾಗುವುದು. ಮುಂದೆ ಈ ವಟು ತನ್ನ ಬುದ್ಧಿಯನ್ನು ಪ್ರಚೋದಿಸುವಂತೆ, ಕೋರಿ ಸವಿತೃದೇವತೆಯ ಶ್ರೇಷ್ಠವಾದ ತೇಜಸ್ಸನ್ನು ಆರಾಧಿಸುತ್ತಾನೆ. ಇದೇ ಗಾಯತ್ರಿ ಜಪ.

ಉಪನಯನ ಎಂಬುದಕ್ಕೆ ಗುರುವಿನ ಸಮೀಪಕ್ಕೆ ಒಯ್ಯುವುದು ಎಂದೂ ಅರ್ಥವಾಗುತ್ತದೆ. ಉಪನಯನವಾದ ಕೂಡಲೇ ವಟುವನ್ನು ಗುರುಕುಲಕ್ಕೆ ಕಳಿಸಲಾಗುತ್ತಿತ್ತು. ಅಲ್ಲಿ ಅವನು 12 ವರ್ಷವೋ ಅದಕ್ಕಿಂತ ಹೆಚ್ಚು ಕಾಲವೋ ವೇದ–ವೇದಾಂಗಗಳನ್ನಾಗಲೀ, ಅಥವಾ ತನ್ನ ಕೌಟುಂಬಿಕ ಪರಂಪರೆಗನುಗುಣವಾದ ರಾಜ್ಯಶಾಸ್ತ್ರ, ರಾಜನೀತಿ ಶಾಸ್ತ್ರ, ವಾಣಿಜ್ಯ ಶಾಸ್ತ್ರ, ಬಿಲ್ಲುಗಾರಿಕೆ ಮೊದಲಾದ ಐಚ್ಛಿಕ ವಿಷಯಗಳನ್ನಾಗಲೀ ಅಧ್ಯಯನ ಮಾಡಬೇಕಾಗುತ್ತಿತ್ತು. ಅಧ್ಯಯನ ಮುಗಿಸಿ ಸ್ವತಂತ್ರ ಬದುಕಿಗೆ ಸಾಕಾಗುವಷ್ಟು ಪರಿಣಿತಿ ಪಡೆದ ನಂತರ ಸಮಾವರ್ತನೆ (Convocation) ಮುಗಿಸಿಕೊಂಡು ಗೃಹಸ್ಥನಾಗಲು ಹಿಂದಿರುಗುವವರೆಗೆ ಈತನಿಗೆ ಗುರುಕುಲವಾಸ.

'ಉಪನಯನ' ಶಬ್ದ ಮತ್ತೊಂದು ಕಣ್ಣು, ಕನ್ನಡಕ ಎಂಬ ಅರ್ಥದಲ್ಲೂ ಬಳಕೆಯಲ್ಲಿದೆ. ಉಪವೀತ ಧಾರಣೆಯ ಮೂಲಕ ಮರುಹುಟ್ಟನ್ನು ಪಡೆದ ವಟು ಜ್ಞಾನವೆಂಬ ಕಣ್ಣಿನಿಂದ ವೇದಗಳ ಅರ್ಥವನ್ನು ಕಾಣಲು ತೊಡಗುತ್ತಾನೆ.

"ಗಾಯತ್ರ್ಯಾ ಬ್ರಾಹ್ಮಣ ಮಸೃಜತ" ಎಂಬ ವಸಿಷ್ಠ ಸ್ಮೃತಿಯಂತೆ ಗಾಯತ್ರಿ ಮಂತ್ರಾನುಷ್ಠಾನದಿಂದ ಮಾತ್ರ ಬ್ರಾಹ್ಮಣ ತನ್ನ 'ಬ್ರಾಹ್ಮಣತ್ವ' ವನ್ನು ಉಳಿಸಿಕೊಳ್ಳಲು ಸಾಧ್ಯ. ತಾಯಿತಂದೆ ಶಾಸ್ತ್ರ ವಿಧಿಯಿಂದ ಮದುವೆಯಾಗಿದ್ದು ಅವರಲ್ಲಿ ಜನಿಸಿದ ಬಾಲಕನು ಉಪನೀತನಾದರೆ ಮಾತ್ರ ಬ್ರಾಹ್ಮಣನಾಗುತ್ತಾನೆ. ನಾರದರು ಸತ್ಸಂಗ ಮತ್ತು ಸೇವೆಯ ಪ್ರಭಾವದಿಂದ ಒಮ್ಮೆ ಭಗವಂತನ ಸಾಕ್ಷಾತ್ಕಾರ ಪಡೆದರು. ಆದರೆ ಇಷ್ಟಪಟ್ಟಾಗಲೆಲ್ಲ ಭಗವಂತನ ದರ್ಶನ ಪಡೆಯುವ ಸಲುವಾಗಿ ಅವರು ಪುನಃ ಬ್ರಹ್ಮನ ಮಾನಸಪುತ್ರರಾಗಿ ಜನಿಸಬೇಕಾಯಿತು. ಅಂತೆಯೇ ಬ್ರಾಹ್ಮಣಿಯ ಗರ್ಭದಲ್ಲಿ ಬ್ರಾಹ್ಮಣ ಬೀಜದಿಂದ ಜನಿಸಿದ್ದರೂ ಉಪನಯನ ಸಂಸ್ಕಾರದ ಮೂಲಕ ದ್ವಿಜತ್ವ ಪಡೆದ ಮೇಲೆ ಮಾತ್ರವೇ ಬ್ರಾಹ್ಮಣನೆನಿಸಿಕೊಂಡು ವೇದಾಧ್ಯಯನಕ್ಕೆ ಅರ್ಹತೆ ಪಡೆಯುತ್ತಾನೆ.

"ಆಚಾರ ಹೀನಂ ನಪುನಂತಿ ವೇದಾಃ" (ವಸಿಷ್ಠ ಧರ್ಮಸೂತ್ರ) ಎಂಬ ಋಷಿ ವಚನದಂತೆ ಬ್ರಾಹ್ಮಣ್ಯದ ಉಳಿವು ಸದಾಚಾರ ಮತ್ತು ಸತ್ಕರ್ಮಾನುಷ್ಠಾನದಿಂದ ಮಾತ್ರ ಸಾಧ್ಯ. ಥೋಮಸ್ ಮೋರೀಸ್ ಮತ್ತು ಸರ್ ಚಾರ್ಜ್‌ಬರ್ಡ್‌ವುಡ್‌ರಂತಹ ವಿದೇಶಿಯರೂ ಸಹ ಆಚಾರಶೀಲ ಬ್ರಾಹ್ಮಣ ಕುಟುಂಬದ ಜೀವನ ಕ್ರಮವನ್ನು

ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ. ದೀಪದ ಬುಡ ಕತ್ತಲೆಯೆಂಬಂತೆ ನಮಗೆ ಮಾತ್ರ ನಮ್ಮ ಆಚಾರ ವಿಚಾರಗಳಲ್ಲಿ ಶ್ರದ್ಧೆ, ನಂಬುಗೆ ಕಡಿಮೆಯಾಗುತ್ತಿರುವುದು ನಮ್ಮ ದೌರ್ಭಾಗ್ಯ. ಕ್ರಿಶ್ಚಿಯನ್ನರು ಅಂತಸ್ತು, ವಯಸ್ಸು, ಲಿಂಗಭೇದವಿಲ್ಲದೆ ಭಾನುವಾರಗಳಲ್ಲಿ ತಪ್ಪದೆ ಇಗರ್ಜಿಯಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ. ಮಾನವ ಸಹಜ ದೌರ್ಬಲ್ಯಗಳಿಗಾಗಿಯೋ, ಪಾಪ ಕಾರ್ಯಗಳಿಗಾಗಿಯೋ ಪಶ್ಚಾತ್ತಾಪ ಪಡುತ್ತಾರೆ, ಕ್ಷಮೆ ಕೋರುತ್ತಾರೆ. ಮುಸ್ಲಿಂ ಬಂಧುಗಳು ಶುಕ್ರವಾರದಂದು ಸಾಮೂಹಿಕ ಪ್ರಾರ್ಥನೆ ಸಲ್ಲಿಸುತ್ತಾರೆ. ಹಬ್ಬ, ಉಪವಾಸ ವ್ರತ ಮೊದಲಾದುವನ್ನು ಕಟ್ಟುನಿಟ್ಟಾಗಿ ಆಚರಿಸುತ್ತಾರೆ, ಕಟ್ಟುಪಾಡುಗಳನ್ನು ಮೀರಿದರೆ ದಂಡ ತೆರುತ್ತಾರೆ. ಆದರೆ ನಾವು? ಇತರೆ ಕಾರ್ಯಗಳ ಒತ್ತಡದಿಂದಾಗಿ ನಮಗೆ ಸಂಧ್ಯಾವಂದನೆ–ಜಪ ಮಾಡಲು ಬಿಡುವಿರುವುದಿಲ್ಲ. "ದುಡಿಮೆಯೇ ನಮ್ಮ ದೇವರು" ಅನ್ನುತ್ತೀರಾ? ದುಡಿಮೆಯೇ ಎಲ್ಲರಿಗೂ ದೇವರು–ಹೌದು. ಆದರೆ ನಮ್ಮ ಆತ್ಮೋದ್ಧಾರಕ್ಕಾಗಿ ವಿಧಿಸಲಾದ ನಮ್ಮ ಪೂರ್ವಾಚಾರವೂ ಬದುಕಿನ ಅಂಗವೆಂಬುದನ್ನು ನಾವು ಮರೆಯಬಾರದು.

ನಮ್ಮ ಅಧ್ಯಯನಶೀಲತೆ ಮತ್ತು ಜಪಾನುಷ್ಠಾನಪರತೆಯಿಂದ ಬೆಲೆ ಬಾಳುವ ಬಟ್ಟೆ, ರೇಡಿಯೋ, ಟಿ.ವಿ. ಮೊದಲಾದಂತೆ ವಿಲಾಸ ಸಾಮಗ್ರಿಗಳ ಅವಶ್ಯಕತೆಯು ಕಡಿಮೆಯಾಗುತ್ತದೆ. ಭೋಗ ಜೀವನದ ಒಲವು ಕಡಿಮೆಯಾಗಿ ಸರಳ ಜೀವನಕ್ಕೆ ಮನಸ್ಸು ಒಗ್ಗುತ್ತದೆ. ಮಿತವಾದ ಆದಾಯದಿಂದ ತೃಪ್ತಿ ಸಿಗುತ್ತದೆ. ದುಡಿಮೆಯಿಂದ ಮಾತ್ರವಲ್ಲದೆ ಅನುಷ್ಠಾನ ಬಲದಿಂದಲೂ ದೇವರನ್ನು ಕಾಣಲು ಸಾಧ್ಯ ಎಂದು ಚಿಂತಿಸಲು ಅವಕಾಶ ಸಿಗುತ್ತದೆ.

ಬಡಗಿ ತನ್ನ ಉಳಿಯನ್ನು ಮಸೆಯುವುದರಿಂದ ಸಮಯ ವ್ಯರ್ಥವಾಯಿತೆಂದು ತಿಳಿಯುವುದಿಲ್ಲ. ಹರಿತವಲ್ಲದ ಉಳಿಯಿಂದ ಅರ್ಧ ತಾಸಿನಲ್ಲಿ ಮಾಡುವ ಕೆಲಸವನ್ನು ಉಳಿಹರಿತ ಮಾಡಲು 10 ನಿಮಿಷ ಕಳೆದರೂ ಹತ್ತೇ ನಿಮಿಷದಲ್ಲಿ ಬೇಗ ಕೆಲಸ ಮುಗಿಸಿ ಹತ್ತು ನಿಮಿಷ ಉಳಿಸುತ್ತಾನೆ. ಹಾಗೆಯೇ ನಿಯತವಾದ ಗಾಯತ್ರಿ ಜಪ ಮತ್ತಿತರ ಅನುಷ್ಠಾನದಿಂದ ಬುದ್ಧಿ ಹರಿತಗೊಳಿಸಿಕೊಂಡ ಬ್ರಾಹ್ಮಣ ತನ್ನ ಮನೋಬಲವನ್ನೂ ಹೆಚ್ಚಿಸಿಕೊಂಡು ಯಾವುದೇ ಕಾರ್ಯವನ್ನೂ ಬೇಗನೇ ಯಶ್ವಿಯಾಗಿ ಮುಗಿಸಲು ಸಮರ್ಥನಾಗುತ್ತಾನೆ. ಹತ್ತು ಬಾರಿ ಓದಿ ಅರ್ಥೈಸಿಕೊಳ್ಳಬಹುದಾದುದನ್ನು ಎರಡೇ ಬಾರಿ ಓದಿ ಅರ್ಥೈಸಿಕೊಳ್ಳುವ ಸಾಮರ್ಥ್ಯ ಪಡೆಯುತ್ತಾನೆ. ಆದುದರಿಂದ ನಮ್ಮ ಪೂರ್ವಜರು ತಮ್ಮ ಆಚಾರ ವಿಚಾರಗಳಿಗಂಟಿಕೊಂಡೇ ಸುಖಿಗಳಾಗಿದ್ದರು. ಇಂದಿನ ಯುವ ಪೀಳಿಗೆ ತಮ್ಮ ಕುಲಾಚಾರಗಳಲ್ಲಿ ಶ್ರದ್ಧೆ ನಂಬಿಕೆಗಳನ್ನು ಕಳೆದುಕೊಂಡುದರಿಂದಲೇ ದೈಹಿಕವಾಗಿಯೂ ಮಾನಸಿಕವಾಗಿಯೂ ಬಳಲುವಂತಾಗಿದೆಯೆಂಬುದರಲ್ಲಿ ಸತ್ಯಾಂಶವಿದೆ. ಈ ವೈಚಾರಿಕತೆಯ ಅಧೋಗತಿಗೆ ಪರಿಸರ ಮತ್ತು ಕಾಲವೇ ಕಾರಣ. ಕಾಲಾಯ ತಸ್ಮೈ ನಮಃ । ಇರಲಿ. ಈಗ ನಮಗೆ ಮುಂದಿನ ದಾರಿ ಕಾಣದಾದರೆ, ನಡೆಯುವ ದಾರಿ ತಪ್ಪಿದೆ ಅನ್ನಿಸಿದರೆ, ಹಿಂದಕ್ಕೆ ಬಂದು ಸರಿದಾರಿಯಲ್ಲಿ ಮುಂದುವರಿಯುವುದು ಶ್ರೇಯಸ್ಕರ.

ಗೌತಮರು ತನ್ನ ಶಿಷ್ಯ ಸತ್ಯಕಾಮನಿಗೆ ನಾಲ್ಕು ನೂರು ಸೊರಗಿದ ಗೋವುಗಳನ್ನು ನೀಡಿ ಒಂದು ಸಾವಿರ ಗೋವುಗಳಾಗಿ ವೃದ್ಧಿಯಾದ ಮೇಲೆ ಹಿಂದೆ ಬರುವಂತೆ ಆಜ್ಞಾಪಿಸಿಕಳುಹಿಸಿದರು. ಗುರುಗಳ ಆಜ್ಞೆಯನ್ನು ಶಿರಸಾವಹಿಸಿದ ಸತ್ಯಕಾಮ ತನ್ನ ದೈಹಿಕ ಸುಖ, ಮಾನಸಿಕ ನೆಮ್ಮದಿಗಳನ್ನು ಕಡೆಗಣಿಸಿ ಗೋಸೇವೆಯಲ್ಲಿ ತಲ್ಲೀನನಾದ. ಅನೇಕ ವರ್ಷಗಳ ನಿರಂತರ ಸಾಧನೆಯಿಂದ ತನ್ನ ಸ್ವಂತದ ದೇಹ–ಮನಸ್ಸುಗಳ ಬಂಧನವನ್ನು ಗೆಲ್ಲುವ ಸಿದ್ಧಿ ಪಡೆದ. ಗುರುಗಳ ಆಜ್ಞಾನಪಾಲನೆ, ಗೋಸೇವೆ ಮತ್ತು ಏಕಾಗ್ರತೆ ಹಾಗೂ ಇಂದ್ರಿಯ ನಿಗ್ರಹ ಮೊದಲಾದ ಈತನ ಸಾಧನೆಯಿಂದ ಸಂತುಷ್ಟರಾದ ಸೂರ್ಯ, ಅಗ್ನಿ, ವಾಯುಗಳು ಆತನಿಗೆ ಆತ್ಮಜ್ಞಾನವನ್ನು ಉಪದೇಶಿಸಿ ಬ್ರಹ್ಮ ತೇಜಸ್ಸನ್ನು ಕರುಣಿಸಿದರು. ಗುರು ಗೌತಮರ ಅನುಗ್ರಹದಿಂದ ಆತನಿಗೆ ಎಲ್ಲ ವಿದ್ಯೆಗಳೂ ಸ್ಫುರಿಸಿದುವು. ಇದೇ ಗುರು ಗೌತಮರ ಆಜ್ಞೆಯನ್ನು ಪಾಲಿಸಿ, ಶ್ರದ್ಧೆಯಿಂದ ಗುರು ಶುಶ್ರೂಷೆ ಮಾಡಿದುದರಿಂದಲೇ ಆರುಣಿ, ಉಪಮನ್ಯುಗಳಿಗೆ ಬ್ರಹ್ಮಜ್ಞಾನ ಸ್ಫುರಿಸಿತೆಂದು ಉಪನಿಷತ್ತುಗಳಲ್ಲಿ ವರ್ಣಿತವಾಗಿದೆ. ಗುರುವಿನಲ್ಲಿ ತನ್ನನ್ನು ಸಮರ್ಪಿಸಿಕೊಂಡು ಬ್ರಹ್ಮಚರ್ಯೆಯ ಆಚಾರಗಳನ್ನು ಪಾಲಿಸುವುದರಿಂದ ದೇಹ–ಮನಸ್ಸನ್ನು ಹತೋಟಿಯಲ್ಲಿರಿಸಿಕೊಂಡು ಯಾವುದೇ ವಿದ್ಯೆಯನ್ನೂ ಸಾಧಿಸಬಹುದು, ಆತ್ಮೋನ್ನತಿಯನ್ನೂ ಪಡೆಯಬಹುದು.

ವಿಪ್ರೋ ವೃಕ್ಷಃ ತಸ್ಯ ಮೂಲಂ ಹಿ ಸಂಧ್ಯಾ
ವೇದಾಃ ಶಾಖಾಃ ಧರ್ಮ ಕರ್ಮಾಣಿ ಪತ್ರಮ್ ॥
ತಸ್ಮಾನ್ಮೂಲಂ ಯತ್ನ ತೋ ರಕ್ಷಣೀಯಂ
ಛಿನ್ನೇ ಮೂಲೇ ನೈವ ವೃಕ್ಷೋ ನ ಶಾಖಾ॥

ಉಪವೀತನಾದ ಬ್ರಾಹ್ಮಣನು ಸಂಧ್ಯಾವಂದನೆ ಮಾಡದಿದ್ದರೆ ಬ್ರಾಹ್ಮಣ್ಯ ಉಳಿಯಲಾರದು. ಬ್ರಾಹ್ಮಣನೆಂಬ ಒಂದು ಮಹಾವೃಕ್ಷಕ್ಕೆ ಸಂಧ್ಯಾವಂದನೆಯೇ ಬೇರು, ಶುಚಿತ್ವ, ನಿಯತವಾದ ಆಹಾರ, ಪೂಜೆ, ವ್ರತ, ಉಪವಾಸ ಮೊದಲಾದ ಶಾಸ್ತ್ರವಿಹಿತವಾದ ಆಚಾರಗಳೇ ಈ ಬ್ರಾಹ್ಮಣ ವೃಕ್ಷದ ಎಲೆಗಳು. ವೇದಗಳೇ ಈ ವೃಕ್ಷದ ಕೊಂಬೆಗಳು. ಸಂಧ್ಯೋಪಾಸನೆಯೆಂಬ ಬೇರೇ ಇಲ್ಲದಿದ್ದರೆ ಬ್ರಾಹ್ಮಣ್ಯ ಸೊರಗಿ ನಾಶವಾಗುತ್ತದೆ, ಬ್ರಾಹ್ಮಣತ್ವ ಸತ್ವಹೀನವಾಗುತ್ತದೆ. ಒಂದು ವೇಳೆ ಬ್ರಾಹ್ಮಣನಿಗೆ ವಿಹಿತವಾದ ಸಮಸ್ತವನ್ನೂ ಆಚರಿಸಲು ಸಾಧ್ಯವಿಲ್ಲವಾದರೂ ಗಾಯತ್ರಿ ಜಪವನ್ನು ಮಾತ್ರ ಬಿಡಬಾರದು.

ಕುರ್ಯಾದನ್ಯಾನ್ ನ ವಾ ಕುರ್ಯಾತ್
ಅನುಷ್ಠಾನಾದಿ ಕಂ ತಥಾ ।
ಗಾಯತ್ರೀ ಮಾತ್ರ ನಿಷ್ಠಸ್ತು
ಕೃತಕೃತ್ಯೋ ಭವೇತ್ ದ್ವಿಜಃ ॥

ಸಂಧ್ಯಾವಂದನೆಯೊಂದಿಗೆ ಗಾಯತ್ರಿ ಜಪ ಮಾತ್ರದಿಂದಲೇ ಬ್ರಾಹ್ಮಣನು ಬ್ರಹ್ಮನಿಗೆ ಸಮನಾಗುತ್ತಾನೆ. ಎಲ್ಲ ಅನುಷ್ಠಾನಗಳ ಫಲವನ್ನೂ ಪಡೆಯಲು ಸಮರ್ಥನಾಗುತ್ತಾನೆ.

ಏತತ್ಸಂಧ್ಯಾತ್ರಯಂ ಪ್ರೋಕ್ತಂ ಬ್ರಾಹ್ಮಣ್ಯಂ ಯದಧಿಷ್ಠಿತಂ ।
ಯಸ್ಯನಾಸ್ತ್ಯಾದರ ಸ್ತತ್ರ ನ ಸ ಬ್ರಾಹ್ಮಣ ಉಚ್ಯತೇ ॥
ಸಂಧ್ಯಾಹೀನೋಽಶುಚಿರ್ನಿತ್ಯಂ ಅನರ್ಹಸ್ಸರ್ವಕರ್ಮಸು ।
ಯದನ್ಯತ್ಕುರುತೇ ಕರ್ಮ ನ ತಸ್ಯ ಫಲಮಶ್ನುತೇ ॥

ಸಂಧ್ಯಾವಂದನೆಯಲ್ಲಿ ನಂಬಿಕೆಯಿಲ್ಲದವನು ಬ್ರಾಹ್ಮಣನಲ್ಲ. ಇಂತಹ ಅಶುಚಿಯಾದ ಬ್ರಾಹ್ಮಣನು ವೈದಿಕ ಕರ್ಮಾದಿಗಳಲ್ಲಿ ಅನರ್ಹನಾಗಿ ಆತನು ಮಾಡಿದ ಕರ್ಮಗಳು ಫಲಿಸಲಾರವು. ಮುಂದೆ ಇಂತಹ ಬ್ರಾಹ್ಮಣನಿಗೆ ಶ್ವಾನಜನ್ಮ ಬರುತ್ತದೆ. **(ಮೃತಃ ಶ್ವಾನೋಭಿಜಾಯತೇ).**

ವಟು–ವಟುವಿನ ವೇಷ:– ಭಾರತೀಯರ ಪ್ರತಿಯೊಂದು ಧಾರ್ಮಿಕ ಆಚರಣೆಗೆ ಭಾವನಾತ್ಮಕ ಮತ್ತು ವೈಜ್ಞಾನಿಕ ಹಿನ್ನೆಲೆ ಇದೆ. ಉಪನಯನ ಸಂಸ್ಕಾರವೂ ಇದಕ್ಕೆ ಹೊರತಲ್ಲ. ಆದರೆ ಈ ಸಂಸ್ಕಾರಗಳ ನಿಜವಾದ ಮಹತ್ವವನ್ನು ತಿಳಿಯುವ ಕುತೂಹಲ ವಿಲ್ಲದೆಯೋ, ಅಥವಾ ಕುತೂಹಲ ತಣಿಸುವ ಸಾಮರ್ಥ್ಯವಿಲ್ಲದೆಯೋ ನಮ್ಮ ಹೆಚ್ಚಿನ ಧಾರ್ಮಿಕ ಆಚರಣೆಗಳು ಆಡಂಬರದ ಅನುಕರಣೆಗಳಾಗಿ ಔಚಿತ್ಯವನ್ನೂ ಮಹತ್ವವನ್ನೂ ಕಳೆದುಕೊಂಡಿವೆ.

ಮಾತ್ರಾ ಸಹ (ಮಾತುರುತ್ಸಂಗೇ ವಾ?) ಭೋಜನ–ಬ್ರಾಹ್ಮಣ ವಟುವಿಗೆ ಗರ್ಭಾಷ್ಟಮದಲ್ಲೋ, ಎಂಟನೇ ವರ್ಷದಲ್ಲೋ (ಅಥವಾ ಐದನೇ ವರ್ಷದಲ್ಲೂ) ಉಪನಯನ ವಿಹಿತವಾಗಿದೆ. ಈ ಬಾಲ್ಯವನ್ನು ಬಾಲಕ ಸಮಾಜದ ಎಲ್ಲ ವರ್ಗದ ಸಮಾನ ವಯಸ್ಕರೊಡನೆ ಬೆರೆಯುತ್ತಾನೆ. ಶುಚಿ–ಅಶುಚಿಯ ಕಾಳಜಿಯಿಲ್ಲದೆ ವ್ಯವಹರಿಸುತ್ತಾನೆ, ಅನಿಯತವಾಗಿ ಮಲಮೂತ್ರ ವಿಸರ್ಜಿಸುತ್ತಾನೆ, ಗೋಲಿ, ಮರಕೋತಿ ಮೊದಲಾದ ಆಟಗಳನ್ನು ಆಡುತ್ತಾ ತಾಯಿಯ ಮುದ್ದಿನಲ್ಲಿ ಕಳೆಯುತ್ತಾನೆ. ಇನ್ನು ಮುಂದೆ ಗುರುಕುಲಕ್ಕೆ ಹೋಗಬೇಕಾದುದರಿಂದ ತಾಯಿಗೆ ಮುದ್ದಿಸಲು ಅವಕಾಶವಿಲ್ಲ. ಆದುದರಿಂದ ತಾಯಿ ಮುದ್ದಿನಿಂದ ಊಟ ಮಾಡಿಸಿ ಉಪನಯನ ಮಂಟಪಕ್ಕೆ ಕರೆತರುತ್ತಾಳೆ.

ಉಲ್ಟವಸ್ತ್ರದ ಮುಸುಕು : ಗರ್ಭಸ್ಥವಾದ ಶಿಶು ಜಠರಾಗ್ನಿಯಲ್ಲಿ ಬೇಯುತ್ತಾ ವಿಣ್ಮೂತ್ರಾಮೇಧ್ಯ ಮಧ್ಯದಲ್ಲಿ ವ್ಯಥೆಪಟ್ಟು ಜನ್ಮಾಂತರದ ಕರ್ಮಫಲವನ್ನು ಅನುಭವಿಸಲು ಸಿದ್ಧವಾಗಿ ಗರ್ಭದಿಂದ ಹೊಬರುತ್ತದೆಂದು ಆದಿಶಂಕರರು ವರ್ಣಿಸುತ್ತಾರೆ. ಗರ್ಭದ ಸಂಕೇತವಾದ ಮುಸುಕಿನಲ್ಲಿರುವ ವಟುವಿನ ಕಿವಿಯಲ್ಲಿ ಪುರೋಹಿತರ ಮಂತ್ರೋಚ್ಚಾರಣೆ, ಮಂಗಲವಾದ್ಯಘೋಷ, ಸುಮಂಗಲಿಯರ ಮಧುರಕಂಠದ ಹಾಡುಗಳು, ಘಂಟಾನಾದ–ಗುಂಯ್‌ಗುಡುತ್ತವೆ. ತಾನು ಒಂದು ಹೊಸ ಪ್ರಪಂಚವನ್ನು ಪ್ರವೇಶಿಸಲಿದ್ದೇನೆ ಎಂಬ ತುಮುಲ, ಗೊಂದಲ, ಭಯ, ಆತಂಕಗಳ ನಡುವೆ ಹಳೆಯ ಭಾವನೆಗಳನ್ನು ಮರೆಯುತ್ತಾನೆ. ಮನಸ್ಸಿನಲ್ಲಿ ಅನೇಕ ಅವ್ಯಕ್ತ ಭಾವನೆಯ ಅಲೆಗಳು ಏಳುತ್ತವೆ. ಪುನಃ ಮನಸ್ಸು ತಿಳಿಯಾಗಿ, ಶುದ್ಧತೆಯ ಅರಿವಾಗಿ ಹೊಸತನ್ನು ಸ್ವೀಕರಿಸಲು ಮನೋಭೂಮಿಕೆ ಸಿದ್ಧವಾಗುತ್ತದೆ. ಮುಸುಕು ತೆಗೆದೊಡನೆ ಪುನರ್ಜನ್ಮ ಪಡೆದ ಅನುಭವವಾಗುತ್ತದೆ.

ದೀಕ್ಷಾವಸ್ತ್ರ:– ಕಾಷಾಯಂ ಬ್ರಾಹ್ಮಣಸ್ಯ, ಮಾಂಜಿಷ್ಠ ಹಾರಿದ್ರೇ ಇತರಯೋಃ ಗೌತಮಧರ್ಮಾಸೂತ್ರ

ಕಾಷಾಯ ತ್ಯಾಗದ ಸಂಕೇತ. ಸ್ವಾರ್ಥವಿಲ್ಲದ, ಲೋಕಹಿತ ಚಿಂತೆನೆಯೇ ಇವನ ಬದುಕಿನ ಗುರಿ ಎಂಬುದನ್ನು ಇದು ಸೂಚಿಸುತ್ತದೆ. ಈ ವಟುವಿಗೆ ಕಾಷಾಯಾಂಬರ ತ್ಯಾಗಮಯ ಜೀವನಕ್ಕೆ ಪ್ರೇರಕ. ಅವರವರ ಕುಲಾಚಾರಕ್ಕನುಗುಣವಾಗಿ, ಮನೋವಿಕಾಸಕ್ಕೆ ಸಂಬಂಧಿಸಿದಂತೆ ಕ್ಷತ್ರಿಯ, ವೈಶ್ಯರಿಗೆ ಮಾಜಿಷ್ಠ ಮತ್ತು ಹಳದಿ ದೀಕ್ಷಾ ವಸ್ತ್ರ ವಿಹಿತವಾಗಿದೆ.

ಮೌಂಜೀ ಬಂಧನ:– ಮೂರು ಸುತ್ತು ಮೂರು ಗಂಟುಗಳಿರುವ ಮೌಂಜೀ ಬಂಧನ ದಿಂದ ವಟು ತಾನು ಮೂರು ವೇದಗಳಿಂದ ಆವೃತನಾಗಿದ್ದೇನೆಂದು ಭಾವಿಸುತ್ತಾನೆ. (ವಟು ಭಿಕ್ಷಾಟನೆ, ದರ್ಭೆಸಮಿತ್ ತರುವುದೇ ಮೊದಲಾದ ಚಟುವಟಿಕೆಗಳಲ್ಲಿ ತೊಡಗಿರು ವಾಗ, ಹಸಿದಿರುವಾಗ ಬಟ್ಟೆ ಪದೇ ಪದೇ ಸಡಿಲಗೊಂಡು ಕೆಳಕ್ಕೆ ಜಾರದಂತೆ ತಡೆಯುತ್ತದೆ).

ದಂಡಧಾರಣೆ:– ಆತ್ಮನಿಗ್ರಹಕ್ಕೆ ಸಹಕಾರಿ. ದುಷ್ಟಪ್ರಾಣಿಗಳನ್ನು ಹೆದರಿಸಲು (ಹೊಡೆಯಲಿಕ್ಕಲ್ಲ), ಧೈರ್ಯಕ್ಕಾಗಿ ಮತ್ತು ಮನೋಬಲಕ್ಕಾಗಿ. ದಂಡದಂತೆ ಬುದ್ಧಿ ನೆಟ್ಟಗಿರಬೇಕು. ವಕ್ರಬುದ್ಧಿಯಿರಬಾರದೆಂಬ ಆತ್ಮಜಾಗೃತಿಗಾಗಿ. ಕಾವಿ ಬಟ್ಟೆಯನ್ನುಟ್ಟ, ದಂಡಧಾರಿಯಾದ ಬ್ರಹ್ಮಚಾರಿ ತನ್ನ ತೇಜಸ್ಸಿನಿಂದಾಗಿ ಸಮಾಜದಲ್ಲಿ ಪ್ರತ್ಯೇಕವಾಗಿ ಗುರುತಿಸಲ್ಪಡುವುದಲ್ಲದೆ ಪ್ರೀತಿ–ಆದರ–ಗೌರವಗಳಿಂದ ವಿಶಿಷ್ಟ ಸ್ಥಾನ ಪಡೆಯುತ್ತಾನೆ.

ಭಿಕ್ಷಾಟನೆ:– ಅನುಪ್ರವಚನೀಯ ಹೋಮದಲ್ಲಿ ಭಿಕ್ಷಾ ತಂಡುಲವನ್ನು ಬೇಯಿಸಿ, ಹೋಮಿಸಿ ಉಳಿದುದನ್ನು ಆಚಾರ್ಯ, ಬ್ರಹ್ಮ, ಯಜಮಾನ ದಂಪತಿಗಳು ಮತ್ತು ವಟು ಊಟ ಮಾಡಬೇಕು ಎಂಬುದು ಶಾಸ್ತ್ರ. ಶಿಷ್ಯರು ಎಲ್ಲರ ಮನೆಗಳಿಂದ ತಂದ ಭಿಕ್ಷಾನ್ನ ವನ್ನು ಗುರುಗಳಿಗೆ ಅರ್ಪಿಸಬೇಕು. ಪ್ರತಿಯೊಂದು ಮನೆಯ ಭಿಕ್ಷಾನ್ನವೂ ಆಯಾ ಮನೆಯ ಜನರ ಮನೋಭಾವನೆಗಳಿಂದ ಪ್ರಭಾವಿತವಾಗಿರುತ್ತದೆ. ಗುರುಗಳು ಈ ಎಲ್ಲ ಅನ್ನವನ್ನು ಎಲ್ಲ ಶಿಷ್ಯರಿಗೂ ಹಂಚುವುದರಿಂದ ಎಲ್ಲ ವಟುಗಳೂ ಕೋಪ, ತಾಪ, ಸಹನೆ, ಶಾಂತಿ, ಧೈರ್ಯ ಮೊದಲಾದ ಎಲ್ಲ ಭಾವನೆಗಳನ್ನು ಮೈಗೂಡಿಸಿಕೊಳ್ಳುತ್ತಾರೆ. ತಾಯಂದಿರು ವಾತ್ಸಲ್ಯಪೂರಿತರಾಗಿ ಋಗ್ವೇದ ಮಧೀಷ್ವ, ಯಜುರ್ವೇದ ಮಧೀಷ್ವ, ಸಾಮವೇದ ಮಧೀಷ್ವ, ಸಕಲಶಾಸ್ತ್ರಾಣ್ಯಧೀಷ್ವ ಎಂದು ಹರಸಿ ನೀಡುವ ಭಿಕ್ಷೆ ಬ್ರಹ್ಮಚಾರಿಯ ಬೌದ್ಧಿಕ ಬೆಳವಣಿಗೆಗೂ, ವೇದಶಾಸ್ತ್ರಗಳ ಅಧ್ಯಯನ ಸಾಮರ್ಥ್ಯವೃದ್ಧಿಗೂ ಕಾರಣವಾಗುತ್ತದೆ. "ಆಹಾರ ಶುದ್ಧೌ ಸತ್ವ ಶುದ್ಧಿಃ' ಎಂಬ ಶ್ರುತಿ ವಾಕ್ಯದಂತೆ ಸಾತ್ವಿಕರೂ ಅನುಷ್ಠಾನ ಪರರೂ ಆದ ಸದ್ಗೃಹಸ್ಥರ ಮನೆಯಿಂದ ತಂದ ಭಗವಂತನ ಪ್ರಸಾದ ರೂಪವಾದ ಸಾತ್ವಿಕ ಆಹಾರದ ಸೇವನೆಯಿಂದ ವಟುವಿನಲ್ಲೂ ಸಾತ್ವಿಕತೆ ಬ್ರಹ್ಮತೇಜಸ್ಸು ವರ್ಧಿಸುತ್ತದೆ ಮತ್ತು ಅಧ್ಯಯನಕ್ಕೆ ಬುದ್ಧಿ ಪಕ್ವವಾಗುತ್ತದೆ. ವಟುವು ಭಿಕ್ಷಾಟನೆ ಮಾಡುವುದರಿಂದ ಗೃಹಸ್ಥನಿಗೆ ಆತನ ಆಶ್ರಮ ಧರ್ಮಪಾಲನೆಗೆ ಅವಕಾಶ

ದೊರೆತಂತಾಗುತ್ತದೆ. ಸಹಸ್ರಾರು ವಿದ್ಯಾರ್ಥಿಗಳಿಗೆ ಅಶನ–ವಸನ–ವಸತಿ ನೀಡಿ ಉನ್ನತ ವಿದ್ಯಾಭ್ಯಾಸದ ತನಕ ಅವಕಾಶ ಕಲ್ಪಿಸುವ 'ಕುಲಪತಿ' ಗಳು ನಡೆಸುತ್ತಿದ್ದ ಅನೇಕ ಗುರುಕುಲಗಳಿದ್ದುವು. ರಾಜಮಹಾರಾಜರು ಇಂತಹ ಗುರುಕುಲ ಗಳನ್ನು ಪೋಷಿಸುತ್ತಿದ್ದರು. ಆದುದರಿಂದ ಈ ಭಿಕ್ಷಾಟನೆ ಕೇವಲ ಧಾರ್ಮಿಕ ಹಿನ್ನೆಲೆ ಯುಳ್ಳದ್ದೇ ಹೊರತು ದಾರಿದ್ರ್ಯದ ಸೋಂಕುಉಳ್ಳದ್ದಾಗಿಲ್ಲ.

ಉಪವೀತ ಧಾರಣೆ:– ಇದು ಉಪನಯನದ ಅತಿಮುಖ್ಯವಾದ ಹಂತ. "ಯಜ್ಞೋಪವೀತಂ ಪರಮಂ ಪವಿತ್ರಂ" ಇಂಗ್ಲೀಷಿನ Sacred thread ಎಂಬ ಅನ್ವರ್ಥ ಹೆಸರುಳ್ಳ ಅತಿ ಪವಿತ್ರವಾದ ದಾರ. 288 ಅಂಗುಲ (ಧರಿಸುವವನ ಕೈಯ ಅಳತೆ) ಉದ್ದದ ದಾರವನ್ನು 9 ಎಳೆಗಳಲ್ಲಿ ಮಡಚಿ ಓಂಕಾರವೇ ಮೊದಲಾದಂತೆ ಒಂಬತ್ತು ದೇವತೆಗಳನ್ನು ಆವಾಹಿಸಬೇಕು. ಪುನಃ ಮೂರು ಎಳೆಗಳಾಗಿ ಸುತ್ತಿ ಬ್ರಹ್ಮ ಗ್ರಂಥಿಯನ್ನು ಹಾಕಿ ಧರಿಸಬೇಕು. ಈ ಮೂರು ಎಳೆಗಳು ತ್ರಿಮೂರ್ತಿ, ಮೂರು ವೇದಗಳು, ತ್ರಿಗುಣ – ಹೀಗೆ ಪವಿತ್ರ ಭಾವನೆಗಳ ಸಂಕೇತವಾಗಿವೆ.

ಬ್ರಹ್ಮಚಾರಿಯು ಒಂದು ಉಪವೀತವನ್ನು ಧರಿಸಬೇಕು. ಗೃಹಸ್ಥನು ಗಾರ್ಹಸ್ಥ್ಯದ್ಯೋತಕವಾಗಿ ಎರಡನೆಯದನ್ನು ಉತ್ತರೀಯ ಸ್ಥಾನೀಯವಾಗಿ ಮೂರನೆಯದನ್ನೂ ಮೇಲು ವಸ್ತ್ರದ ಬದಲಿಗೆ ನಾಲ್ಕನೆಯದನ್ನೂ ಧರಿಸಬಹುದು. ಇವುಗಳಲ್ಲಿ ಒಂದು ಜೀರ್ಣವಾದರೆ, ತುಂಡಾದರೆ ಒಂದನ್ನೇ ಬದಲಿಸದೆ ಎಲ್ಲವನ್ನೂ ಪುನಃ ಧರಿಸಬೇಕು.

ಉಪದೇಶ:– ಗಾಯತ್ರಿ ಮಮತ್ರೋಪದೇಶದೊಂದಿಗೆ ಬೃಹಸ್ಪತ್ಯಾಚಾರ್ಯರಿಂದ ಮೊದಲ್ಗೊಂಡು ಪರಂಪರೆಯಾಗಿ ಉಪದೇಶಿಸಲ್ಪಟ್ಟ ಕೆಲವು 'ವಿಧಿ' ಗಳನ್ನು ಉಪದೇಶಿಸ ಲಾಗುತ್ತದೆ. ತಂದೆ ತನ್ನ ಅಂತರಂಗದ ಭಾವನೆಗಳನ್ನು ಮಗನಿಗೆ ವರ್ಗಾಯಿಸುತ್ತಾನೆ. (ಮಮ ಚಿತ್ತ ಮನುಚಿತ್ತಂ ತೇ ಅಸ್ತು । ಮಮ ವಾಚಮೇಕವ್ರತೋ ಜುಷಸ್ವ ಇತ್ಯಾದಿ). ಕೌಟುಂಬಿಕ ರಹಸ್ಯವನ್ನರುಹಿ ಕುಲ–ಪರಂಪರೆಯ ಗೌರವವನ್ನು ಮುಂದುವರಿಸುವಂತೆ ಆದೇಶಿಸುತ್ತಾನೆ. ಅಧ್ಯಯನಕ್ಕೆ, ಇಂದ್ರಿಯ ನಿಗ್ರಹಕ್ಕೆ ಬಾಧಕವಾಗಬಾರದೆಂಬ ದೃಷ್ಟಿಯಿಂದ ಹಗಲು ನಿದ್ರೆ, ವಿಲಾಸ ವಸ್ತುಗಳ ಉಪಯೋಗವನ್ನು ನಿಷೇಧಿಸುತ್ತಾನೆ.

ಅಗ್ನಿಕಾರ್ಯ:– ಬ್ರಹ್ಮಚಾರಿಯು ಪವಿತ್ರವಾದ ವೇದಾಧ್ಯಯನ ಮಾಡುವ ಸಲುವಾಗಿ ತಾನು ನಿತ್ಯ ಶುಚಿಯಾಗಿರುವುದಕ್ಕಾಗಿ, ಆತನ ತೇಜಸ್ಸನ್ನು ತನ್ನಲ್ಲಿ ಆರೋಪಿಸಿ ಕೊಳ್ಳುವುದಕ್ಕಾಗಿ ಸಾಯಂ ಪ್ರಾತಃ ಅಗ್ನಿಕಾರ್ಯ ಮಾಡಬೇಕು. ನಂತರ ದೇಹ ಶುದ್ಧಿಗಾಗಿಯೂ (ಜಲಮಿತಿ ಭಸ್ಮ=ಸ್ನಾನ;) (ಸೋಂಕುರೋಗ ನಿವಾರಣೆಗಾಗಿಯೂ) ಆತ್ಮರಕ್ಷಣೆಗಾಗಿಯೂ (ಮಾರೀರಷಃ) ಭಸ್ಮಧಾರಣೆ ಮಾಡಬೇಕು.

ಆಚಮನ: ದೇಹದ ಉಷ್ಣತೆಯ ಸಮತೋಲನವನ್ನುಳಿಸಿಕೊಳ್ಳುವ ಸಲುವಾಗಿ ಮತ್ತು ದೇಹ ಶುದ್ಧಿಗಾಗಿ ಮಂತ್ರೋಚ್ಚಾರಣೆಯೊಂದಿಗೆ ಗೋಕರ್ಣಾಕೃತಿ ಹಸ್ತದಿಂದ (ಉದ್ದಿನ ಕಾಳು ಮುಳುಗುವಷ್ಟು) 3 ಬಾರಿ ನೀರನ್ನು ಕುಡಿಯುವುದು. ಮತ್ತು ಭಗವಂತನ

ಸಾನ್ನಿಧ್ಯವನ್ನು ಕಲ್ಪಿಸಿಕೊಂಡು ಕಣ್ಣು–ಕಿವಿ ಮೊದಲಾದ ಇಂದ್ರಿಯಗಳನ್ನು, ಅವಯುವಗಳನ್ನು ಜ್ಞಾನಪ್ರಚೋದಕ ಮುದ್ರೆಗಳಿಂದ ಸ್ಪರ್ಶಿಸುವುದು.

ಪ್ರಾಣಾಯಾಮ:– ರೇಚಕ, ಪೂರಕ, ಕುಂಭಕಗಳ ಮೂಲಕ ರಕ್ತಶುದ್ಧಿ, ಆರೋಗ್ಯವರ್ಧನೆ ಮತ್ತು ಆಯುರ್ವೃದ್ಧಿಗಾಗಿ ಮಂತ್ರೋಚ್ಚಾರಣೆಯೊಂದಿಗೆ ಮಾಡುವ ಒಂದು ವಿಧವಾದ ವ್ಯಾಯಾಮ. (ಯೋಗಶಾಸ್ತ್ರದಲ್ಲಿ ಪ್ರಾಣಾಯಾಮದ ಮಹತ್ವ ವಿವರಿಸಲ್ಪಟ್ಟಿದೆಯಾದುದರಿಂದ ವಿವರಣೆ ಪ್ರಸ್ತುತ ಲೇಖನದ ವ್ಯಾಪ್ತಿಗೆ ಮೀರಿದುದು).

ಸಂಕಲ್ಪ:– ಭಗವಂತನ ಸಂಕಲ್ಪ ಮಾತ್ರದಿಂದುಂಟಾದ ಜಗತ್ತಿನ ಸೃಷ್ಟಿಯ ಆದಿಯಿಂದ ವರ್ತಮಾನದವರೆಗಿನ ಕಾಲಸ್ಮರಣೆಯೊಂದಿಗೆ ತಾನು ಉಪಕ್ರಮಿಸಿದ ಕಾರ್ಯಕ್ಕೆ ಮಾನಸಿಕ ಸಿದ್ಧತೆ ಮತ್ತು ನಿರ್ಧಾರ.

ಆಚಮನ, ಪ್ರಾಣಾಯಾಮ, ಸಂಕಲ್ಪದ ನಂತರ ಗಾಯತ್ರಿ ಜಪವನ್ನು ಪ್ರಾರಂಭಿಸಬೇಕು. ಗಾಯತ್ರಿಯನ್ನು ಪ್ರಣವವ್ಯಾಹೃತಿಯೊಂದಿಗೆ ಜಪಿಸುವುದು ರೂಢಿ.

ಪ್ರಣವ:– ಅಂದರೆ ಓಂಕಾರ. ಜಗತ್ತಿನ ಸೃಷ್ಟಿ–ಸ್ಥಿತಿ–ಲಯಗಳಲ್ಲಿ ಇದು ವ್ಯಾಪಕವಾಗಿರುವುದರಿಂದ ಮಂತ್ರಗಳ ಆದಿಯಲ್ಲಿ ಇದನ್ನು ಉಚ್ಚರಿಸುವುದರಿಂದ ಸರ್ವವ್ಯಾಪಿಯಾದ ಭಗವಂತನನ್ನು ಸ್ಮರಿಸಿದಂತಾಗುತ್ತದೆ. ಸಕಲ ವೇದಗಳ ಸಾರವಾದುದರಿಂದ ಮಂತ್ರದ ಆದಿಯಲ್ಲಿ ಇದನ್ನು ಹೇಳಲೇಬೇಕು. ಓಂಕಾರದಲ್ಲಿ 'ಅ', 'ಉ', 'ಮ' ಗಳನ್ನು ಪ್ರತ್ಯೇಕಿಸಿ ಉಚ್ಚರಿಸುವಾಗ ಕಂಠದಿಂದ ತುಟಿಯತನಕ ಉಚ್ಚರಿಸಲ್ಪಡುವ ಎಲ್ಲ ವರ್ಣಗಳನ್ನೂ ಪ್ರಾತಿನಿಧಿಕವಾಗಿ ಉಚ್ಚರಿಸಿದಂತಾಗುತ್ತದೆ. 'ಅ' ವನ್ನು ಬಾಯಿ ತೆರೆದು 'ಮ' ವನ್ನು ಬಾಯಿ ಮುಚ್ಚಿ ಉಚ್ಚರಿಸುವುದರಿಂದ ಓಂ ಕಾರವು ಎಲ್ಲ ಶಬ್ದ ಸ್ವರೂಪಗಳನ್ನೂ ತನ್ನಲ್ಲಿ ಅಡಗಿಸಿಕೊಂಡಿದೆಯೆಂದು ಭಾವಿಸಬೇಕು. 'ಅ' ವರ್ಣವು ಋಗ್ವೇದದ ಆದಿಯೆಂದೂ, 'ಉ' ಕಾರವು ಯಜುರ್ವೇದದ ಮಧ್ಯವೆಂದೂ, 'ಮ' ಕಾರವು ಸಾಮವೇದದ ಅಂತ್ಯಾಕ್ಷರವೆಂದೂ ಪರಿಗಣಿಸಲ್ಪಟ್ಟಿದ್ದು ಓಂಕಾರದಲ್ಲಿ ಮೂರೂ ವೇದಗಳು ಅಡಕವಾಗಿದೆಯೆಂದು ಮನುಸ್ಮೃತಿಯಲ್ಲಿ ಹೇಳಿದೆ. ಆದುದರಿಂದ ಗಾಯತ್ರಿ ಮಂತ್ರದ ಪ್ರಾರಂಭದಲ್ಲೂ ಓಂ ಕಾರವನ್ನು ಹೇಳಬೇಕು.

ವ್ಯಾಹೃತಿ:– ಬ್ರಹ್ಮನು ಒಂದೊಂದೇ ವ್ಯಾಹೃತಿಯನ್ನು ಉಚ್ಚರಿಸುತ್ತಾ ಏಳು ಊರ್ಧ್ವಲೋಕಗಳನ್ನು ಸೃಷ್ಟಿಸಿದ. ಈ ವಿಶಾಲ ಜಗತ್ತನ್ನು ವ್ಯಾಪಿಸಿರುವ ಭಗವಂತನನ್ನು ಕಾಣಲು ತನ್ನ ಬುದ್ಧಿಯ ವಿಕಾಸಕ್ಕಾಗಿ ಗಾಯತ್ರಿಯನ್ನು ಜಪಿಸುತ್ತೇನೆ ಎಂದು ಜಪ ಮಾಡುವವನು ಭಾವಿಸಬೇಕು. ನಮಗೆ ಹತ್ತಿರದ ಲೋಕಗಳನ್ನು ಪ್ರತಿನಿಧಿಸುವ, ಅಗ್ನಿ–ವಾಯು–ಸೂರ್ಯಾತ್ಮಕವಾದ ಭೂಃ, ಭುವಃ, ಸುವಃ ಎಂಬ ಮೂರು ವ್ಯಾಹೃತಿಗಳನ್ನು ಮಾತ್ರ ಗಾಯತ್ರಿಮಂತ್ರದೊಂದಿಗೆ ಸೇರಿಸುವುದು ರೂಢಿ.

ಗಾಯತ್ರೀ:– 'ಗಾಯಂತಂ ತ್ರಾಯತೇ। ಅಂದರೆ ತನ್ನನ್ನು ಜಪಿಸುವವರನ್ನು ಪೂರ್ಣ ರಕ್ಷಿಸುವುದರಿಂದ ಈ ಮಂತ್ರಕ್ಕೆ ಆ ಹೆಸರು. ಇದನ್ನು ಹತ್ತಾರು ರೀತಿಯಲ್ಲಿ ಅರ್ಥೈಸಿದ್ದಾರೆ. ಅತ್ಯಂತ ಸರಳವಾದ, ತೀರಾ ಪ್ರಚಲಿತವಿರುವ ಮತ್ತು ಅನುಸಂಧಾನ ಸುಲಭವಾದ

ಅರ್ಥಕ್ಕನುಗುಣವಾಗಿ "ಯಃ ನಃ ಧಿಯಃ ಪ್ರಚೋದಯಾತ್ ತತ್ ಸವಿತುಃ ವರೇಣ್ಯಂ ಭರ್ಗಃ ಧೀಮಹಿ" ಎಂದು ಅನ್ವಯ ಮಾಡಬೇಕು.

'ನಮ್ಮ ಬುದ್ಧಿಯನ್ನೂ, ಸಮಸ್ತ ಚಟುವಟಿಕೆಗಳನ್ನೂ ಪ್ರೇರಿಸುವ ಸವಿತೃದೇವತೆಯ ಅತಿಮಹಿಮಾನ್ವಿತ ತೇಜಸ್ಸನ್ನು ಧ್ಯಾನಿಸುತ್ತೇವೆ."

"ಯಾವ ಸವಿತೃ ದೇವತೆಯು ತತ್ವಜ್ಞಾನದೆಡೆಗೆ ಪ್ರವರ್ತಿಸುವಂತೆ ನಮ್ಮ ಬುದ್ಧಿಯನ್ನು ಪ್ರಚೋದಿಸುತ್ತಾನೆಯೋ ಅಂತಹ ಜ್ಞಾನ ನಾಶಕವಾದ ತೇಜಸ್ಸನ್ನು ನಾವು ಧ್ಯಾನಿಸುತ್ತೇವೆ."

ಈ ಅರ್ಥವನ್ನು ಅನುಸಂಧಾನ ಮಾಡಿ ಜಪಿಸುವುದರಿಂದ ಮಂತ್ರ ಸಿದ್ಧಿಸುತ್ತದೆ.

'ಸೌರಶಕ್ತಿ' ಜಗತ್ತಿನ ಎಲ್ಲ ಶಕ್ತಿಗಳ ಮೂಲ ಎಂಬುದು ವೈಜ್ಞಾನಿಕ ಸತ್ಯ. ಈ ಸತ್ಯದ ತಳಹದಿಯ ಮೇಲೆ ನಮ್ಮ ಸೌರಶಕ್ತಿಯ ಆರಾಧನೆ (ಸವಿತೃದೇವತೆಯ ಉಪಾಸನೆ) ಅಂದರೆ ಗಾಯತ್ರಿ ಜಪ ನಿಂತಿದೆ. ಏಕೆಂದರೆ ವಿಜ್ಞಾನದ ಅಂತ್ಯವೇ ತತ್ವಶಾಸ್ತ್ರದ ಆದಿ. ಭಾರತೀಯ ತತ್ವಶಾಸ್ತ್ರ ಮತ್ತು ಆಚಾರ ವಿಚಾರಗಳು ವಿಜ್ಞಾನದೊಂದಿಗೆ ಹಾಸುಹೊಕ್ಕಾಗಿವೆಯಾದುದರಿಂದ ಒಂದನ್ನೊಂದು ಪ್ರತ್ಯೇಕಿಸಲು ಸಾಧ್ಯವಿಲ್ಲ. ನಮ್ಮ ಪ್ರಾಚೀನ ಮಹರ್ಷಿಗಳು ಸರ್ವಸಮಭಾವದಿಂದ ಎಲ್ಲರನ್ನೂ ಉದ್ಧರಿಸಲು ಸಮರ್ಥವಾದ ಈ ಶಕ್ತಿಯ ಮಹತ್ವವನ್ನರಿತು ಮಾನವ ಕೋಟಿಯ ಉದ್ಧಾರಕ್ಕಾಗಿ ಈ ಶಕ್ತಿಯ ಉಪಾಸನೆಯನ್ನು ಪ್ರಚುರಪಡಿಸಿದರು. ಬ್ರಾಹ್ಮಣನು ಹಣ, ಅಧಿಕಾರ, ಆಸ್ತಿ, ಅಂತಸ್ತು–ಯಾವುದೇ ಇಲ್ಲದಿದ್ದರೂ ತನ್ನ ಬುದ್ಧಿಯ ಬಲದಿಂದ ಸಂಪಾದಿಸಬಲ್ಲ, ಕಳೆದುಕೊಂಡರೂ ಪುನಃ ಗಳಿಸಬಲ್ಲ. 'ಬುದ್ಧಿರ್ಯಸ್ಯ, ಬಲಂ ತಸ್ಯ' ಅಂತಹ ಬುದ್ಧಿಯನ್ನು ಪ್ರಚೋದಿಸುವ ಶಕ್ತಿಯೇ ಗಾಯತ್ರಿ. ಅದೇ ಆಸ್ತಿ. ಅದನ್ನು ಎಷ್ಟು ಶ್ರದ್ಧೆಯಿಂದ ಅನುಷ್ಠಾನ ಮಾಡುತ್ತೇವೆಯೋ ಅಷ್ಟೂ ನಮ್ಮ ಆತ್ಮಬಲ ವೃದ್ಧಿ. ಶ್ರದ್ಧೆಯಿಂದ ಗಾಯತ್ರೀ ಜಪ ಮಾಡುವ ಮತ್ತು ವೇದಾಧ್ಯಯನ ಶೀಲನನ್ನು ಜಗತ್ತಿನ ಬೇರೆ ಯಾವುದೇ ಶಕ್ತಿ ಅಲುಗಾಡಿಸಲಾರದು. "ಬ್ರಹ್ಮತೇಜೋ ಬಲಂ ಬಲಂ".

ಕಾಲೇಫಲಂತ್ಯೋಷಧಯಃ ಕಾಲೇ ಪುಷ್ಪ್ಯಂತಿ ಪಾದಪಾಃ।
ವರ್ಷಂತಿ ತೋಯದಾಃ ಕಾಲೇ ತಸ್ಮಾತ್ ಕಾಲಂ ನ ಲಂಘಯೇತ್ ॥

ಗಿಡಗಳಲ್ಲಿ ಹೂ ಬಿಡುವುದೂ, ಮರಗಳಲ್ಲಿ ಹಣ್ಣಾಗುವುದೂ, ಮಳೆ ಬರುವುದೂ ಆಯಾ ಕಾಲದಲ್ಲಿ ಮಾತ್ರ. ಅಂತೆಯೇ ಗಾಯತ್ರಿಯನ್ನು ಸಕಾಲದಲ್ಲಿ ಜಪಿಸುವುದರಿಂದ ಪೂರ್ಣಫಲ ಪ್ರಾಪ್ತಿಯಾಗುತ್ತದೆ.

ಪ್ರಾತಃ ಸಂಧ್ಯಾಂ ಸನಕ್ಷತ್ರಾಂ
ಮಧ್ಯಮಾಂ ಸ್ನಾನಕರ್ಮಣಿ ।
ಸಾದಿತ್ಯಾಂ ಪಶ್ಚಿಮಾಂ ಸಂಧ್ಯಾಂ
ಉಪಾಸೀತ ಯಥಾ ವಿಧಿ ॥

ಸೂರ್ಯೋದಯದ ಮೊದಲು ಅಂದರೆ ನಕ್ಷತ್ರಗಳಿರುವಾಗ ಬೆಳಗಿನ, ಮತ್ತು

ಸೂರ್ಯಾಸ್ತದ ಮೊದಲು ಸಾಯಂಕಾಲದ ಹಾಗೂ ಸ್ನಾನದ ನಂತರ ಮಾಧ್ಯಾಹ್ನಿಕ ಸಂಧ್ಯೆಗಳನ್ನು ಉಪಾಸನೆ ಮಾಡಲು ಸಕಾಲ. ಬೆಳಗಿನ ಮತ್ತು ಸಾಯಂಕಾಲದ ಸಂಧ್ಯೋಪಾಸನೆ ಅತಿಮುಖ್ಯ. ಸಂಧ್ಯಾಕಾಲದಲ್ಲಿ ಅತಿಸೂಕ್ಷ್ಮ ರೋಗಾಣು (ವೈರಸ್)ಗಳ ಚಟುವಟಿಕೆ ಜಾಸ್ತಿ. ಆಗ ಮಾನಸಿಕವಾಗಿಯೂ, ದೈಹಿಕವಾಗಿಯೂ ಶುಚಿರ್ಭೂತರಾಗಿ ಧ್ಯಾನ ಜಪ ಮಾಡುವುದರಿಂದ ಆರೋಗ್ಯವಂತರೂ ದೀರ್ಘಾಯುಷಿಗಳೂ ಆಗುತ್ತಾರೆಂಬುದು ಈ ಕಾಲದ ಸಂಧ್ಯಾನುಷ್ಠಾನಕ್ಕೆ ವೈಜ್ಞಾನಿಕ ಹಿನ್ನೆಲೆ

ಎಸ್.ವೆಂಕಟರಮಣ ಅಡಿಗ
ನಿವೃತ್ತ ಪ್ರಾಚಾರ್ಯ
ಶ್ರೀ ಅ|ರಾ|ಸ| ಪದವಿಪೂರ್ವ ಕಾಲೇಜು
"ಶ್ರೀಗಿರಿ", ಹರಿಹರಪುರ
ಚಿಕ್ಕಮಗಳೂರು ಜಿಲ್ಲೆ.

{ಕತ್ತಲೆಯ ಗರ್ಭದಲ್ಲಿಯೇ ಬೆಳಕು ಹುಟ್ಟುವುದು. ಅಂತೆಯೇ ಅಧರ್ಮ ಹೆಚ್ಚಿದಾಗಲೇ ಧರ್ಮಕ್ಕೆ ಶಕ್ತಿ.}

{ವೇದ ನಿಷ್ಠರಾದವರ ಬದುಕಿನ ಆಧಾರದ ಮೇಲೆ ಧರ್ಮ ನೆಲೆಯಾಗಿ ನಿಲ್ಲುತ್ತದೆ.}

[ಆನೋಭದ್ರಾಃ ಕೃತವೊಯಂತು ವಿಶ್ವತಃ ಅರಿವು ಎಲ್ಲಿಂದ ಬಂದರೂ ಸ್ವಾಗತಿಸಬೇಕು]

[ಜನ್ಮನಾ ಬ್ರಾಹ್ಮಣೋ ಜ್ಞೇಯಃ ಕರ್ಮಣಾ ದ್ವಿಜ ಉಚ್ಯತೇ ।
ವಿದ್ಯಯಾ ಯಾತಿ ವಿಪ್ರತ್ವಂ ತ್ರಿಭಿಃ ಶ್ರೋತ್ರಿಯ ಉಚ್ಯತೇ ॥]

[ಸತ್ವೇನ ಬ್ರಾಹ್ಮಣಃ ಸತ್ವರಜೋಭ್ಯಾಂ ಕ್ಷತ್ರಿಯಃ
ರಜಸ್ತಮೋಭ್ಯಾಂ ವೈಶ್ಯಃ, ತಮಸಾ ಶೂದ್ರಃ॥]

ಮಂದರ್ತಿ : ಪ್ರತಿಭಾ ಪುರಸ್ಕಾರ

'ಮಹಿಳೆಯರಿಗೆ ವೇದಾಧ್ಯಯನ ನಿಷಿದ್ಧವಲ್ಲ'

ಬ್ರಹ್ಮಾವರ : 'ವೇದಾಧ್ಯಯನ ಮಹಿಳೆಯರೂ ಮಾಡಬಹುದು. ಆದರೆ, ಸಮಾಜದಲ್ಲಿ ಆದ ಬದಲಾವಣೆಗಳ ಕಾರಣ ಮಹಿಳೆಯರ ವೇದಾಧ್ಯಯನವನ್ನು ಕ್ರಮೇಣ ನಿಲ್ಲಿಸಲಾಯಿತು' ಎಂದು ಹರಿಹರಪುರ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಎಸ್. ವೆಂಕಟರಮಣ ಅಡಿಗ ಹೇಳಿದರು.

ಮಂದರ್ತಿಯ ದುರ್ಗಾ ಪರಮೇಶ್ವರೀ ದೇವಾಲಯದ ವಠಾರದಲ್ಲಿ ಭಾನುವಾರ ನಡೆದ ಉಡುಪಿ ತಾಲ್ಲೂಕು ಬ್ರಾಹ್ಮಣ ಮಹಾಸಭಾದ ಮಂದರ್ತಿ ವಲಯ ಸಮಿತಿಯ ವಾರ್ಷಿಕ ಮಹಾಸಭೆಯಲ್ಲಿ ಅವರು ಮಾತನಾಡಿದರು.

'ಸಮಾಜದ ಏಳಿಗೆಗಾಗಿ, ಸಮಾಜದ ಪರಂಪರೆಯನ್ನು ಜನತೆಗೆ ತಿಳಿಸಿ ಜಾಗೃತಿ ಮೂಡಿಸುವ ಕೆಲಸ ಬ್ರಾಹ್ಮಣರಿಂದ ಆಗುತ್ತಿದೆ. ವೇದ ಪುರಾಣಗಳ ಬಗ್ಗೆ ಅಧ್ಯಯನ ನಡೆಸುವ ಶಕ್ತಿ ಅವರಲ್ಲಿದೆ' ಎಂದರು.

ಎಸ್.ಎಸ್.ಎಲ್.ಸಿ. ಮತ್ತು ಪಿ.ಯು. ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾಶ್ರೀ ಕಾರಂತ, ವಿಭಾ ಐತಾಳ, ಅವಿನಾಶ್ ರಾವ್ ಮತ್ತು ನಾಗೇಂದ್ರ ಹೆಬ್ಬಾರ್ ಅವರನ್ನು ಸನ್ಮಾನಿಸಲಾಯಿತು.

ಉಡುಪಿ ತಾಲ್ಲೂಕು ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಡಾ.ಪಿ.ಕೆ.ರವಿಚಂದ್ರ, ಪ್ರಧಾನ ಕಾರ್ಯದರ್ಶಿ ನರಸಿಂಹ ಉಪಾಧ್ಯ, ಕಾರ್ಯಾಧ್ಯಕ್ಷ ವಿಶ್ವನಾಥ ಉಡುಪ, ಪ್ರಧಾನ ಕಾರ್ಯದರ್ಶಿ ಬಿ. ಗಣಪತಿ ಉಡುಪ, ಕೋಶಾಧಿಕಾರಿ ನಾರಾಯಣ ಅಡಿಗ, ಗೌರವಾಧ್ಯಕ್ಷ ರಾಮಕೃಷ್ಣ ಅಡಿಗ, ಗಣೇಶ್ ಅಡಿಗ, ಶ್ರೀನಿವಾಸ್ ಭಟ್, ಜಯಶ್ರೀ, ಶಂಭು ಶಂಕರರಾವ್, ರಾಘವೇಂದ್ರ ಇದ್ದರು.

–ಪ್ರಜಾವಾಣಿ "ಕರಾವಳಿ"

ಪ್ರಭಾತದಲ್ಲಿ ಸೂರ್ಯಾಸ್ತ

24/03.1999ರಂದು ಜಗಚ್ಚಕ್ಷುವಾದ ಸೂರ್ಯ ಉದಯಿಸುತ್ತಿದ್ದಂತೆ ಜನರು ಎಚ್ಚರಗೊಂಡು ತಮ್ಮ ಕಾರ್ಯಚಟುವಟಿಕೆಗಳಲ್ಲಿ ತೊಡಗುವಷ್ಟರಲ್ಲಿ, ಧಾರ್ಮಿಕ ಸದ್ಭಾವನೆಯನ್ನು ಜಾಗೃತಗೊಳಿಸಿದ, ಜ್ಞಾನಜ್ಯೋತಿಯಿಂದ ಸಮಾಜವನ್ನು ಬೆಳಗಿದ ಹರಿಹರಪುರ ಶ್ರೀ ಮಠಾಧೀಶ ಶ್ರೀ ಶ್ರೀ ಸ್ವಯಂ ಪ್ರಕಾಶ ಶ್ರೀ ಅಭಿನವ ರಾಮಾನಂದ ಸರಸ್ವತೀ ಸ್ವಾಮಿಯೆಂಬ ಅಭಿಧಾನದ ಸೂರ್ಯ ಅಸ್ತಂಗತನಾದ ಸುದ್ದಿ ಕೇಳಿದ ಜನರ ಚಟುವಟಿಕೆ ಸ್ತಬ್ದವಾಯಿತು. ಜಗತ್ತಿನ ವ್ಯಾಮೋಹವನ್ನು ತೊರೆದು, ಕೌಟುಂಬಿಕ ವ್ಯವಹಾರದಿಂದ ಬಿಡುಗಡೆ ಹೊಂದಿ ಸಂನ್ಯಾಸ ಪಡೆದ ಶ್ರೀ ಶ್ರೀ ಸ್ವಾಮೀಜಿಯವರ ದೇಹ ಪಂಜರದಲ್ಲಡಗಿದ್ದು ಶಿಷ್ಯರ ಏಳಿಗೆ, ಸುಖ ಶಾಂತಿಗಾಗಿ ಅನುಷ್ಠಾನದ ಸತ್ವವನ್ನೂ ಧಾರೆಯೆರೆಯಲು ಸಹಕರಿಸಿದ್ದ ಪರಮಹಂಸ ಚೇತನ ಪರ ಬ್ರಹ್ಮನಲ್ಲಿ ಐಕ್ಯವಾಯಿತು. ಹೀಗೆ ಬ್ರಹ್ಮೈಕ್ಯರಾದ ಶ್ರೀ ಶ್ರೀಗಳವರ ಪಾರ್ಥಿವ ಶರೀರದ ಚಟುವಟಿಕೆಗಳಿಂದ ಈತನಕ ಪಡೆಯುತ್ತಿದ್ದ ಸಮಸ್ತ ಜಗತ್ತಿನ ವ್ಯಾಮೋಹವನ್ನು ತೊರೆದು, ಕೌಟುಂಬಿಕ ವ್ಯವಹಾರದಿಂದ ಬಿಡುಗಡೆ ಹೊಂದಿ ಸಂನ್ಯಾಸ ದೀಕ್ಷೆ ಪಡೆದ ಶ್ರೀ ಶ್ರೀ ಸ್ವಾಮೀಜಿಯವರ ದೇಹ ಪಂಜರದಲ್ಲಡಗಿದ್ದು ಶಿಷ್ಯರ ಏಳಿಗೆ, ಸುಖ ಶಾಂತಿಗಾಗಿ ಅನುಷ್ಠಾನದ ಸತ್ವವನ್ನು ಧಾರೆಯರೆಯಲು ಸಹಕರಿಸಿದ್ದ ಪರಮಹಂಸ ಚೇತನ ಪರಬ್ರಹ್ಮನಲ್ಲಿ ಐಕ್ಯವಾಯಿತು. ಹೀಗೆ ಬ್ರಹ್ಮೈಕ್ಯರಾದ ಶ್ರೀ ಶ್ರೀಗಳವರ ಪಾರ್ಥಿವ ಶರೀರದ ಚಟುವಟಿಕೆಗಳಿಂದ ಆತನಕ ಪಡೆಯುತ್ತಿದ್ದ ಸಮಸ್ತ ಸವಲತ್ತುಗಳಿಂದ, ಆಶೀರ್ವಾದ ಅನುಗ್ರಹಗಳಿಂದ ವಂಚಿತರಾದ ಎಲ್ಲ ವರ್ಗದ ಜನತೆ ಶೋಕ ಸಾಗರದಲ್ಲಿ ಮುಳುಗಿತು. ಜಾತಿ ಮತ ಲಿಂಗ ವಯೋಭೇದವಿಲ್ಲದೆ ಸಹಸ್ರಾರು, ಜನ ಶ್ರೀ ಶ್ರೀಗಳವರ ಪಾರ್ಥಿವ ಶರೀರದ ದರ್ಶನ ಪಡೆಯಲು ಧಾವಿಸಿದರು.

ನಾನು ಶ್ರೀ ಶ್ರೀಗಳವರ ಆಶೀರ್ವಾದದ ನೆರಳಿಗೆ ಬಂದುದು 1962ರಲ್ಲಿ ಅಂದಿನಿಂದ ಈತನಕ ಅವರ ಅತ್ಯಂತ ಸಾಮೀಪ್ಯ ದೊರಕಿದುದು ನನ್ನ ಜನ್ಮಾಂತರದ ಸುಕೃತದ ಫಲವೆಂದು ತಿಳಿದಿದ್ದೇನೆ.

"ಯದ್ಯದಾಚರತಿ ಶ್ರೇಷ್ಠಃ ತತ್ತ್ವ ದೇವೇತರೋ ಜನಃ" ಎಂಬ ಗೀತಾ ವಾಕ್ಯದಂತೆ ಶ್ರೀ ಶ್ರೀಗಳವರ ದಿನಚರಿ ಅನುಕರಣೀಯ, ಅನುಸರಣೀಯ, ಬೆಳಗಿನ ಜಾವ 4.00 ಗಂಟೆಗೆ ಪ್ರಾತರ್ವಿಧಿಗಳನ್ನು ಮುಗಿಸಿ ಸ್ನಾನ, 6 ಗಂಟೆಯ ತನಕ ಆಹ್ನಿಕ, ಶೀನಜ್ಜ ಅಥವಾ ಜಮ್ಮಟಿಗೆ ವೆಂಕಟಗಿರಿ ಭಟ್ಟರು ಬರುವುದು ಸ್ವಲ್ಪ ತಡವಾದರೂ ಶ್ರೀ ಶ್ರೀಗಳವರು ಸ್ವತಃ ಸ್ನಾನಕ್ಕೆ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದುದುಂಟು. ಅಪರೂಪಕ್ಕೊಮ್ಮೊಮ್ಮೆ ಅವರು ಆಗಾಗ ಹೇಳುತ್ತಿದ್ದುದುಂಟು "ನಮಗೆ ಬಾರದ, ನಮ್ಮಿಂದ ಸಾಧ್ಯವಾಗದ, ಕೆಲಸವನ್ನು ಇತರರಿಂದ ಮಾಡಿಸುವುದು ಕಷ್ಟ." ಇನ್ನೊಂದು ವೈಶಿಷ್ಟ್ಯವೆಂದರೆ ಶ್ರೀ ಶ್ರೀಗಳವರ ಸಮಯ ಪ್ರಜ್ಞೆ

ಮತ್ತು ಶಿಸ್ತುಪಾಲನೆ. ಒಂದು ಕ್ಷಣವೂ ಹಿಂದುಮುಂದಾಗದಂತೆ ಆಯಾ ಕೆಲಸ, ಕ್ಲುಪ್ತ ಸಮಯದಲ್ಲಿ ಮುಗಿಯಬೇಕು. ಸಕಾಲದಲ್ಲಿ ಸಹಾಯಕರು ಸಹಕರಿಸದಿದ್ದರೂ ತಾವೇ ಹೇಗೋ ಸರಿದೂಗಿಸಿಕೊಂಡು ಸಮಯಕ್ಕೆ ಸರಿಯಾಗಿ ಕಾರ್ಯ ಮುಗಿಯುವಂತೆ ನೋಡಿಕೊಳ್ಳುತ್ತಿದ್ದರು. ಅದಕ್ಕಾಗಿ ಯಾರನ್ನೂ ದೂರುತ್ತಾ ಬೈಯುತ್ತಾ ಕಾಲಹರಣ ಮಾಡುವ ಸ್ವಭಾವ ಅವರದಾಗಿರಲಿಲ್ಲ. ಯಾವುದೇ ಕಾರ್ಯಕ್ರಮದಲ್ಲಿ ಭಾಗವಹಿಸುವುದಿದ್ದರೆ ಸಾಕಷ್ಟು ಮುಂಚಿತ ಪೂರ್ವ ತಯಾರಿಯೊಂದಿಗೆ ಹೊರಟು, ಊರಿನ ಹೊರವಲಯದಲ್ಲಿ ಹತ್ತಾರು ನಿಮಿಷ ಕಾದು ನಿಗದಿತ ಸಮಯಕ್ಕೆ ಕ್ಷಣವೂ ವ್ಯತ್ಯಾಸವಿಲ್ಲದಂತೆ ಕಾರ್ಯಕ್ರಮದ ಜಾಗ ತಲುಪುವ ಅವರ ಸ್ವಭಾವ ಹಲವರಿಗೆ ಅನುಭವವಾಗಿದೆ.

6 ಗಂಟೆಯಿಂದ 7ರ ತನಕ ಗೋಸೇವೆ, ಸ್ತೋತ್ರ ಪಠನ, ದೇವತಾ ಸಂದರ್ಶನ, 7 ರಿಂದ 8ರ ತನಕ ನಿತ್ಯಪೂಜೆ, ಶ್ರೀ ಚಕ್ರಾರ್ಚನೆಯಿದ್ದರೆ 9ಕ್ಕೆ ಪೂಜೆ ಮುಗಿಯುತ್ತಿತ್ತು. 8 ಅಥವಾ 9 ಗಂಟೆಗೆ ಸರಿಯಾಗಿ ಅವರ ಪೂಜೆ ಮುಗಿಯುತ್ತಿತ್ತೋ ಅಥವಾ ಪೂಜೆ ಮುಗಿಯುವಾಗ ಎಂಟೋ ಒಂಬತ್ತೋ ಗಂಟೆಯಾಗುತ್ತಿತ್ತೋ ಹೇಳಲಾಗದು. ಶ್ರೀ ಶ್ರೀಗಳವರ ದಿನಚರಿಗನುಗುಣವಾಗಿ ತಮ್ಮ–ತಮ್ಮ ಗಡಿಯಾರದ ಮುಳ್ಳನ್ನು ಸರಿಪಡಿಸಿ ಕೊಳ್ಳುವವರೂ ಇದ್ದರೆಂಬುದು ಸತ್ಯಸಂಗತಿ. ಶ್ರೀ ಶ್ರೀಗಳವರ ಸಮಯ ಪರಿಪಾಲನೆ ಅಷ್ಟು ಕರಾರುವಾಕ್ಕು.

9 ರಿಂದ 11ರ ತನಕ ಸಂದರ್ಶನ, ವೃತ್ತಪತ್ರಿಕೆ ಅಥವಾ ಇನ್ನಿತರ ಸಾಹಿತ್ಯ ಅಧ್ಯಯನ, ಶ್ರೀಮಠದ ವ್ಯವಹಾರದ ಕುರಿತ ಚರ್ಚೆ ಇತ್ಯಾದಿ. 11 ರಿಂದ 11.30ರ ತನಕ ಆಹ್ನಿಕ 11.30ಕ್ಕೆ ಭಿಕ್ಷಾ ಸ್ವೀಕಾರ. ಮಧ್ಯಾಹ್ನ 1 ರಿಂದ ಸಂಜೆ ಆರರ ತನಕ ಸಂದರ್ಶನ, ಗ್ರಂಥಾವಲೋಕನ, ಕೃತಿ ರಚನೆ, ಧಾರ್ಮಿಕ ಚಿಂತನೆ, ಬೋಧನೆ ಮತ್ತು ಇತರೆ ರಚನಾತ್ಮಕ ಕಾರ್ಯಕ್ರಮಗಳು. ಸಂಜೆ 6 ರಿಂದ 8.30ರ ತನಕ ಅನುಷ್ಠಾನ ಪೂಜೆ, 8.30 ರಿಂದ 9ರ ತನಕ ಮರುದಿನದ ವಿಶೇಷ ಕಾರ್ಯಕ್ರಮಗಳ ಬಗ್ಗೆ ಸೂಚನೆ, ಸಿದ್ಧತೆ. 9 ಗಂಟೆಯಿಂದ ಗ್ರಂಥಾವಲೋಕನ ವಿಶ್ರಾಂತಿ. ದಿನಚರಿಯಲ್ಲಾಗಲೀ ಸಮಯ ಪರಿಪಾಲನೆಯಲ್ಲಾಗಲೀ ಎಂದೂ ಯಾವುದೇ ಕಾರಣಕ್ಕೂ ವ್ಯತ್ಯಯ ಬಾರದಂತೆ ಇತ್ತೀಚಿನ ದಿನಗಳವರೆಗೂ ನಡೆದು ಬಂದಿದೆ. ಶ್ರೀ ಶ್ರೀಗಳವರ ಕರ್ತವ್ಯ ಶಕ್ತಿ ಅನನ್ಯ. ಅವರು ಆಗಾಗ ಮಾರ್ಮಿಕವಾಗಿ, ಸರಸವಾಗಿ ಹೇಳುತ್ತಿದ್ದಂತೆ ಅವರ ಸಂನ್ಯಾಸದ ಮೊದಲ ದಿನಗಳಲ್ಲಿ ಶ್ರೀಮಠ ತುಂಬ ದುಃಸ್ಥಿತಿಯಲ್ಲಿತ್ತಂತೆ. ಶೌಚಾದಿಗಳಿಗೆ ವ್ಯವಸ್ಥೆಯಿಲ್ಲ. ಮಳೆಗಾಲದಲ್ಲಿ ಮಳೆಯೆಲ್ಲ ಹೊರಗೇ, ನೀರು ಮಾತ್ರ ಒಳಗೆ, ಬೇಸಗೆಯಲ್ಲೂ ಸರಿಯಾದ ನೆರಳಿಲ್ಲ. ಮಧ್ಯಾಹ್ನದ ಭಿಕ್ಷಕ್ಕೆ ಏನು ಮಾಡುವುದು, ರಾತ್ರಿ ಉಪಾಹಾರಕ್ಕೆ ಏನೂ ಇಲ್ಲವಲ್ಲ, ಏನು ಮಾಡುವುದು ಎಂಬ ಪರಿಸ್ಥಿತಿ. ಆದರೆ ಈಗ ಯಾರ್‍ಯಾರು ಬರುತ್ತಾರೆ. ಎಷ್ಟು ಜನ ಬರುತ್ತಾರೆ. ಬೆಳಿಗ್ಗೆ ಏನೇನು, ಮಧ್ಯಾಹ್ನ ಏನೇನು, ಸಂಜೆಗೆ

ಏನೇನು ಮಾಡೋಣ. ಈ ಹಂತಕ್ಕೆ ಅಭಿವೃದ್ಧಿಪಡಿಸಲು ಬೇಕಾದ ಕೃತುಶಕ್ತಿಯನ್ನು ಅಳೆಯಲಾಗದು. ಭಿಕ್ಷೆಗೆ ಮೊದಲು ಯಾರೇ ಬಂದರೂ "ಊಟ ಮಾಡಿಕೊಂಡು ಹೋಗಿ "ಭಿಕ್ಷೆಯ ನಂತರ ಬಂದವರೊಡನೆ" ಊಟ ಆಗಿದೆಯೆ?" "ಮೊದಲು ಊಟ ಮಾಡಿ," ಅನಂತರ ಮಾತನಾಡೋಣ ಎಂಬ ಅವರ ಔದಾರ್ಯವನ್ನು ಅರಿಯದವರಿಲ್ಲ. ಶ್ರೀ ಶ್ರೀಗಳವರ ಸಂಘಟನಾ ಕೌಶಲಕ್ಕೆ ಎಣೆಯಿಲ್ಲ. ಶ್ರೀಮಠದ ಶಿಷ್ಯ ವೃಂದವನ್ನು ಒಗ್ಗೂಡಿಸಿ, ಅವರು ಸ್ವಯಂ ಪ್ರೇರಣೆಯಿಂದ ಶ್ರೀಮಠಕ್ಕೆ ವರ್ಷಕ್ಕೆ ಇಂತಿಷ್ಟು ಚರಣ ಕಾಣಿಕೆಯನ್ನೋ ಸರ್ತಿ ಅಡಕೆಯನ್ನೋ ಕೊಡುವಂತೆ ಪ್ರೇರೇಪಿಸಿದರು. ಶಿಷ್ಯರ ಕೌಟುಂಬಿಕ ಸಮಸ್ಯೆಗಳಿಗೆ, ಎರಡೂ ಪಕ್ಷದವರಿಗೆ ಖುಶಿಯಾಗುವಂತೆ ಪರಿಹಾರ ಸೂಚಿಸುವುದರ ಮೂಲಕ ಅದೆಷ್ಟೋ ಕುಟುಂಬಗಳು ಕೋರ್ಟು ವ್ಯವಹಾರಕ್ಕಾಗಿ ಮಾಡಬೇಕಾದ ಅಲೆದಾಟ, ಹಣದ ಅಪವ್ಯಯವನ್ನು ತಪ್ಪಿಸಿದ್ದಾರೆ. ಧಾರ್ಮಿಕ, ಲೌಕಿಕ, ಶೈಕ್ಷಣಿಕ ಹೀಗೆ ಯಾವುದೇ ವಿಷಯಕ್ಕೆ ಸಂಬಂಧಿಸಿದ ಎಲ್ಲ ಸಮಸ್ಯೆಗಳಿಗೆ ಶ್ರೀ ಶ್ರೀಗಳವರಲ್ಲಿ ಪರಿಹಾರ ಸಿಗುತ್ತಿತ್ತು. "ಆರ್ತೋ, ಜಿಜ್ಞಾಸುಃ ಅರ್ಥಾರ್ಥೀ, ಜ್ಞಾನೀಚ" ಹೀಗೆ ನಾಲ್ಕು ವರ್ಗದ ಜನರು ತನ್ನನ್ನು ಆಶ್ರಯಿಸುತ್ತಾರೆಂದು ಗೀತೆಯಲ್ಲಿ ಶ್ರೀ ಕೃಷ್ಣ ಹೇಳಿದಂತೆ ಅನೇಕ ಕೌಟುಂಬಿಕ ತೊಂದರೆಗಳ ಪರಿಹಾರಕ್ಕಾಗಿಯೂ ಜಿಜ್ಞಾಸುಗಳಾಗಿಯೂ, ಆರ್ಥಿಕ ಸಹಾಯಕ್ಕಾಗಿಯೂ ಉನ್ನತ ಚಿಂತನಕ್ಕಾಗಿಯೂ ಜನತೆ ಶ್ರೀ ಶ್ರೀಗಳವರನ್ನು ಅರಸಿ ಬರುತ್ತಿತ್ತು. ಮೊದಲ ಮೊದಲು ಇಂತಹ ಜನರ ಸಂಖ್ಯೆ ದಿನಕ್ಕೆ ಬೆರಳೆಣಿಕೆಯಷ್ಟಿರುತ್ತಿದ್ದರೆ ಇತ್ತೀಚಿನ ಎರಡು ದಶಕಗಳಲ್ಲಿ ದಿನಕ್ಕೆ ಹತ್ತಾರು ಜನರು ಬರುತ್ತಿದ್ದು ಶ್ರೀ ಶ್ರೀಗಳವರ ಸ್ವಂತ ಅನುಷ್ಠಾನಕ್ಕೆ ಬಿಡುವೇ ಸಿಗದಂತಹ ಸನ್ನಿವೇಶ ಒದಗುತ್ತಿತ್ತು.

ಶ್ರೀ ಶ್ರೀಗಳವರ ವಿದ್ಯಾಪ್ರೇಮ ಅಪಾರ. ತಾನು ಪ್ರಾಥಮಿಕ ಶಾಲೆಯಲ್ಲೂ ಓದಿಲ್ಲವೆಂದು ಅವರು ಆಗಾಗ ಹೇಳುತ್ತಿದ್ದರು. ಆದರೆ ಶಿಶು ವಿಹಾರದಿಂದ ಪ್ರಥಮ ದರ್ಜೆ ಕಾಲೇಜುಗಳ ತನಕ ಹತ್ತಾರು ಶಿಕ್ಷಣ ಸಂಸ್ಥೆಗಳನ್ನೂ ಹುಟ್ಟುಹಾಕಿ, ಪೋಷಿಸಿ ನೂರಾರು ನೌಕರರ ಬದುಕನ್ನು ರೂಪಿಸಿದ್ದಲ್ಲದೆ ಹಲವಾರು ಜನೋಪಯೋಗಿ ಸಂಸ್ಥೆಗಳ ಬೆಳವಣಿಗೆಗೆ ಪ್ರೇರಕ ಶಕ್ತಿಯಾಗಿದ್ದಾರೆ. ಈಗಾಗಲೇ ಪ್ರಕಟಗೊಂಡ ವಿವಿಧ ಲೇಖನಗಳಲ್ಲಿ ಇವೆಲ್ಲದರ ವಿವರವಾದ ಮಾಹಿತಿಯಿರುವುದರಿಂದ ಲೇಖನದ ವಿಸ್ತಾರ ಭಯದಿಂದಾಗಿ ಉಲ್ಲೇಖಿಸುವುದಿಲ್ಲ. ಕಿಗ್ಗ, ನಾರ್ವೆಯಂತಹ ಕುಗ್ರಾಮದ ಶಾಲೆಗಳಲ್ಲಿ ವ್ಯಾಸಂಗ ಮಾಡಿದ ಸಾವಿರಾರು ತರುಣರು ಇಂದಿಗೂ, ಶ್ರೀ ಶ್ರೀಗಳವರ ವಿದ್ಯಾಪ್ರೇಮವನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಹರಿಹರಪುರ ಪ್ರೌಢಶಾಲೆ ಪ್ರಾರಂಭವಾದ ಸುಮಾರು 10 ವರ್ಷ ಪರವೂರಿನಿಂದ ಬರುವ ವಿದ್ಯಾರ್ಥಿಗಳೆಲ್ಲರಿಗೆ ಶ್ರೀಮಠದಲ್ಲಿ ಮಧ್ಯಾಹ್ನ ಪುಕ್ಕಟೆಯಾಗಿ ಊಟದ ವ್ಯವಸ್ಥೆ ಮಾಡಿದ್ದರು. ಮಧ್ಯಾಹ್ನ ಶ್ರೀ ಶ್ರೀ ಗಳವರ ಭಿಕ್ಷೆಗಾಗಿ ತಯಾರಿಸಿದ ಅಡುಗೆಯೇ ಇಲ್ಲಿ ಬಡಿಸಲ್ಪಡುತ್ತಿತ್ತು. ಅಬ್ದುಲ್ ಹಕ್, ಅಬ್ದುಲ್ ಶುಕ್ಕೂರ್ ಮೊದಲಾದ ಮುಸ್ಲಿಂ ವಿದ್ಯಾರ್ಥಿಗಳು ಇಂದಿಗೂ ಶ್ರೀ ಶ್ರೀಗಳವರ ಔದಾರ್ಯವನ್ನು ನೆನಪಿಸಿ

ಕೊಳ್ಳುತ್ತಾರೆ. ರಾಷ್ಟ್ರಭಾಷಾ ಬೋಧನೆಗಾಗಿ ಶಾರದಾ ಹಿಂದೀ ಶಿಕ್ಷಣಾಲಯವೆಂಬ ಹೆಸರಿನಲ್ಲಿ ನಿಶ್ಶುಲ್ಕ ಹಿಂದೀ ತರಗತಿಗಳನ್ನು ತೆರೆದು ಸುಮಾರು 8 ವರ್ಷ ಪ್ರಾಥಮಿಕದಿಂದ ವಿಶಾರದ ತನಕ ಪ್ರತಿ ಬ್ಯಾಚಿನಲ್ಲಿ 60–70 ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಕೂರಿಸಿದ್ದಾರೆ. ತಾವೇ ಸ್ವತಃ ಕೆಲವು ತರಗತಿಗಳಿಗೆ ಬೋಧಿಸುತ್ತಿದ್ದರು. ಕನ್ನಡ ಶ್ರೀ ಶ್ರೀಗಳವರ ಮಾತೃಭಾಷೆ. ಸಂಸ್ಕೃತದಲ್ಲಿ ಕಾವ್ಯ ರಚನೆ ಮಾಡುವಷ್ಟು ಶಾಸ್ತ್ರೀಯ ಪಾಂಡಿತ್ಯವಿತ್ತು. ತಮಿಳಿನಲ್ಲಿ ಉಪನ್ಯಾಸ ನೀಡುತ್ತಿದ್ದರು. ತೆಲುಗಿನವರೊಂದಿಗೆ ತೆಲುಗಿನಲ್ಲಿ ವ್ಯವಹರಿಸುತ್ತಿದ್ದರು. ಶ್ರೀ ಶ್ರೀಗಳವರು ಸಕ್ರಿಯ ರಾಜಕಾರದಿಂದ ದೂರವಿದ್ದರು. ಆದರೆ ದೇವರಾಜ ಅರಸರಂತಹ ಅತ್ಯುನ್ನತ ರಾಜಕಾರಣಿಗಳು ಶಾಂತಿ, ಸಮಾಧಾನ, ಪರಿಹಾರಕ್ಕಾಗಿ ಶ್ರೀ ಶ್ರೀಗಳವರನ್ನು ಹುಡುಕಿಕೊಂಡು ಬರುತ್ತಿದ್ದರು. ಸಮಾಜದ ಯಾವ ವರ್ಗದ ಜನರೊಂದಿಗೆ ಹೇಗೆ ಬೆರೆಯಬೇಕು ಹೇಗೆ ವ್ಯವಹರಿಸಬೇಕು ಎಂಬುದನ್ನು ಶ್ರೀ ಶ್ರೀಗಳವರಿಂದ ಕಲಿಯಬೇಕಿತ್ತು.

ಚಿಕ್ಕಮಕ್ಕಳೊಂದಿಗೆ ಬಾಲಕರಂತೆ, ಯುವಕರೊಂದಿಗೆ ಯುವಕರಾಗಿ ಜ್ಞಾನವಯೋವೃದ್ಧರೊಡನೆ ತಾವೂ ವೃದ್ಧರಾಗಿ ವ್ಯವಹರಿಸುವುದು ಅವರ ಕೌಶಲಕ್ಕೆ, ಅಪಾರ ತಿಳುವಳಿಕೆಗೆ ಉದಾಹರಣೆ. ಆಬಾಲವೃದ್ಧರಾದಿಯಾಗಿ ಸ್ತ್ರೀ ಪುರುಷರು ಶ್ರೀ ಶ್ರೀಗಳವರೊಂದಿಗೆ ತೀರಾ ಆತ್ಮೀಯವಾಗಿ ಸಂಭಾಷಿಸಬಹುದಿತ್ತು. ಸಿಂಹಾಸನಾರೋಹಣ, ಪಲ್ಲಕ್ಕಿ ಉತ್ಸವ, ಜರತಾರಿ ಮೊದಲಾದುವನ್ನೂ ತ್ಯಜಿಸಿ ಸಾಮಾನ್ಯ ಕಾವಿ ಬಟ್ಟೆಯನ್ನು ಧರಿಸುತ್ತಾ ತೀರಾ ಸರಳವಾದ ಬದುಕನ್ನು ನಡೆಸುತ್ತಿದ್ದರು.

ಶ್ರೀ ಶ್ರೀಗಳವರು ಉತ್ತಮ ಕೃಷಿಕರಾಗಿದ್ದರೆಂಬ ಸಂಗತಿ ಬಹು ಜನರಿಗೆ ತಿಳಿದಿರಲಾರದು. ಶ್ರೀಮಠದ ಎದುರಿನಲ್ಲಿರುವ ಕೆಲವೇ ಕೆ.ಜಿ.ಗಳಷ್ಟು ಅಡಿಕೆ ಬೆಳೆಯುತ್ತಿದ್ದ ಸಣ್ಣ ನೆಲದಲ್ಲಿ ಹದಿಮೂರು ಕ್ವಿಂಟಾಲುಗಳಷ್ಟು ಫಸಲು ತೆಗೆದು ಮಾದರಿ ಬೇಸಾಯಗಾರರೆಂದು ಸಾಬೀತು ಪಡಿಸಿದ್ದಾರೆ. ವಿಟ್ಲದ ಅಡಿಕೆ ಸಂಶೋಧನ ಕೇಂದ್ರದವರು ಈ ತೋಟವನ್ನು ಸಂದರ್ಶಿಸಿ ಶ್ರೀ ಶ್ರೀಗಳವರ ಬೇಸಾಯದ ಕ್ರಮವನ್ನು ಮೆಚ್ಚಿಕೊಂಡಿದ್ದರೆಂಬುದು ಅವರ ಹಿರಿಮೆಗೆ ಸಾಕ್ಷಿ.

ಧಾರ್ಮಿಕ ಚಿಂತನೆಗಳಿಂದ, ಧಾರ್ಮಿಕ ಆಚರಣೆಗಳಿಂದ, ಧರ್ಮ ಪ್ರಚಾರದಿಂದ ಧಾರ್ಮಿಕ ಕ್ಷೇತ್ರದಲ್ಲಿ ಜನ ಜಾಗೃತಿಗೊಳಿಸಿದುದಲ್ಲದೆ ಅನೇಕ ದೇವಾಲಯಗಳ ಜೀರ್ಣೋದ್ಧಾರ, ಪುನಃ ಪ್ರತಿಷ್ಠಾಪನೆಗೆ ಚಾಲನೆ ನೀಡಿ ಭಗವದ್ಭಕ್ತಿಯನ್ನು ಉತ್ತೇಜಿಸಿದ್ದಾರೆ.

" ಸುದ್ದಿ ವಿಪ್ಲವ"

ಇಂಗ್ಲೆಂಡ್ ಪ್ರವಾಸದ ಅನುಭವ

ಹರಿಹರಪುರ ಪದವಿಪೂರ್ವ ಕಾಲೇಜಿನ ನಿವೃತ್ತ ಪ್ರಾಚಾರ್ಯರಾದ ಎಸ್. ವೆಂಕಟರಮಣ ಅಡಿಗರವರು ಇತ್ತೀಚೆಗೆ ಇಂಗ್ಲೆಂಡಿಗೆ ಭೇಟಿ ನೀಡಿದರು. ಲಿವರ್ ಪೂಲ್ ನಲ್ಲಿ ಇವರ ಪುತ್ರ ಡಾ.ನಾಗರಾಜ್ ಎಂ.ಬಿ.ಬಿ.ಎಸ್., ಎಂ.ಡಿ, ಡಿ.ಎನ್,ಬಿ. ಎಫ್..ಆರ್.ಸಿ.ಎಸ್. ರವರು ಸ್ಪೆಷಲ್ ರಿಜಿಸ್ಟ್ರಾರ್ ಇನ್ ಅನಸ್ತೇಟಿಕ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಶ್ರೀಯುತ ಅಡಿಗರು **ಸುದ್ದಿ ವಿಪ್ಲವದ** ಓದುಗರಿಗೆ ಪ್ರತಿವಾರ ತಮ್ಮ ಇಂಗ್ಲೆಂಡ್ ಪ್ರವಾಸದ ಅನುಭವವನ್ನು ಹಂಚಿಕೊಳ್ಳಲು ಮುಂದಾಗಿದ್ದಾರೆ. ಪತ್ರಿಕೆ ಅವರನ್ನು ಅನನ್ಯವಾಗಿ ಅಭಿನಂದಿಸುತ್ತದೆ.

ಸಂಪಾದಕ. –**ಸುದ್ದಿ ವಿಪ್ಲವ**

“ದೂರತಃ ಪರ್ವತೋ ರಮ್ಯಃ”

ಎಂಬುದು ಸಂಸ್ಕೃತದ ಒಂದು ಗಾದೆ. ಅತಿ ಸಮೀಪದಿಂದ ಕಂಡಾಗ ಮಾತ್ರ ವಸ್ತುವಿನ ನೈಜ ಸ್ವರೂಪ ತಿಳಿಯುತ್ತದೆ. ಭಾರತದ ಸ್ವಾತಂತ್ರ್ಯದ ಸುವರ್ಣ ಮಹೋತ್ಸವದ ಅನೇಕ ಸಭೆ ಸಮಾರಂಭಗಳಲ್ಲಿ ಬ್ರಿಟಿಷರ ಬಗ್ಗೆ ಪ್ರಸ್ತಾಪಿಸಲ್ಪಡುವುದು ಸ್ವಾಭಾವಿಕ. ಶತಮಾನಗಳ ಕಾಲ ನಮ್ಮನ್ನಾಳಿದ ದೊರೆಗಳ ಮೂಲಸ್ಥಾನವನ್ನು ಸಂದರ್ಶಿಸಿ ಐತಿಹಾಸಿಕ ಸತ್ಯವನ್ನು ವಿಮರ್ಶಿಸುವ ಸಂದರ್ಭ ಇತ್ತೀಚೆಗೆ ಒದಗಿ ಬಂತು. ನಾಣ್ಯದ ಎರಡು ಬದಿಗಳನ್ನು ನೋಡಿದ ಮೇಲಷ್ಟೆ ಅದರ ಬೆಲೆ ಕಟ್ಟಬೇಕೆಂದು ನನ್ನ ಅನುಭವಕ್ಕೆ ಬಂದುದರಿಂದ ಅಂತಹ ಅನುಭವವನ್ನು ಪತ್ರಿಕೆಯ ಮೂಲಕ ಓದುಗರಿಗೆ ಹಂಚಿಕೊಳ್ಳುವುದಕ್ಕಾಗಿ ಈ ಲೇಖನ. ನನ್ನ ಐದು ವಾರಗಳ ಪ್ರವಾಸದ ಅವಧಿಯಲ್ಲಿನ ಸಂಪರ್ಕ, ಸಂದರ್ಶನಗಳ ಮಿತಿಯೊಳಗಿನ ಈ ಲೇಖನ ಅಪೂರ್ಣವಾಗಿದ್ದು, ಸಮಗ್ರ ಚಿತ್ರಣ ದೊರಕಲಾರದು. ನಮ್ಮ ದೇಶದ ಪರಿಸ್ಥಿತಿಗೆ, ಬದುಕಿನ ರೀತಿ ನೀತಿಗಳಿಗೆ ಹೊಂದಿಕೆಯಾಗದ ಕೆಲವು ಸಂಗತಿಗಳನ್ನು ಮಾತ್ರ ಅನುಕರಿಸಿ, ಅವರಲ್ಲಿರುವ ಒಳಿತನ್ನು ಅನುಸರಿಸುವ ಪ್ರಾಮಾಣಿಕ ಪ್ರಯತ್ನವನ್ನು ನಾವು ಮಾಡಿಲ್ಲ ಎಂಬ ನನ್ನ ಅನಿಸಿಕೆಯನ್ನು ಈ ಲೇಖನದ ಮೂಲಕ ಪ್ರಸ್ತುಪಡಿಸುತ್ತೇನೆ.

“ಮೇ ಐ ಹೆಲ್ಪ್ ಯು” (May I help you) ಎಂಬುದು ಒಂದು ಸೌಜನ್ಯ ಸೂಚಕ ಪದಪುಂಜ. ನಾನು ಇಂಗ್ಲೀಷ್ ನೆಲದಲ್ಲಿ ಕಾಲಿಟ್ಟ ಮೊದಲ ದಿನ ಲಿವರ್ ಪೂಲ್‌ನ ದೊಡ್ಡ ಆಸ್ಪತ್ರೆಯೊಂದರ ಹನ್ನೊಂದನೇ ಮಹಡಿಯ ಸಂದರ್ಶಕರ ಕೊಠಡಿಯಲ್ಲಿ ನಿಂತಿದ್ದೆ. ಸಂಜೆ 7.30 ಗಂಟೆಯ ಸಮಯ. ಸಾವಿರಾರು ನೌಕರರಿರುವ ಆಸ್ಪತ್ರೆಯ ಹಗಲು ಪಾಳಿಯ ನೌಕರರು ಹೊರಟು ಹೋಗಿಯಾಗಿದೆ. ರಾತ್ರಿ ಪಾಳಿಯವರು

ಬರಬೇಕಷ್ಟೆ. ನೂರಾರು ಜನ ಸಂದರ್ಶಕರಿರಬೇಕಾಗಿದ್ದ ಸ್ಥಳದಲ್ಲಿ, ಆ ಕಾಲದಲ್ಲಿ ನಾನು ಒಂಟಿಯಾಗಿದ್ದೆ. ಒಂದೆರಡು ನಿಮಿಷಗಳಲ್ಲೇ ಕರ್ತವ್ಯ ಮುಗಿಸಿ ಮನೆಗೆ ತೆರಳುತ್ತಿದ್ದ ದಾದಿಯೊಬ್ಬರು ಮುಗುಳ್ನಗುತ್ತಾ “ಹಾಯ್ ಗುಡ್ ಇವ್‌ನಿಂಗ್” "ಮೆ ಐ ಹೆಲ್ಪ್ ಯೂ" ಎಂದುಲಿದಾಗ ನಾನು ಕೊಂಚ ತಬ್ಬಿಬ್ಬಾದೆ. ದಿನಪೂರ್ತಿಯ ಕೆಲಸದಿಂದ ಬಳಲಿದ್ದರೂ ಅಸಹಾಯಕನಾಗಿರುವ ಪರದೇಸಿಯೊಬ್ಬನಿಗೆ ತಾನೇನಾದರೂ ಸಹಾಯ ಮಾಡಬೇಕೆಂಬ ಕಳಕಳಿಯ ಭಾವ ಆಕೆಯ ಮಾತುಗಳಲ್ಲಿ ಸ್ಪಷ್ಟವಾಗಿ ಧ್ವನಿಸುತ್ತಿತ್ತು.

ನನ್ನ ಹರಕು ಮುರುಕು ಇಂಗ್ಲೀಷ್ ನಲ್ಲಿ ನಾನೇನೋ ಬಡಬಡಿಸಿದೆ. ಆಕೆ ಮತ್ತೊಮ್ಮೆ ನಗುಮೊಗದಿಂದ "ದಟ್ಸ್ ಓ.ಕೆ. ಥೇಂಕ್ಯೂ" ಎಂದು ಲಿಫ್ಟ್‌ನೆಡೆಗೆ ನಡೆದಳು.

ಈಗ ನಾಲ್ಕು ವರ್ಷಗಳ ಕೆಳಗೆ ದಕ್ಷಿಣ ಕನ್ನಡದ ಆಸ್ಪತ್ರೆಯೊಂದರ ಒಳರೋಗಿಯೊಬ್ಬರ ನೆರವಿಗಾಗಿ ಆಸ್ಪತ್ರೆಯ ಆವರಣದಲ್ಲಿ ರಾತ್ರಿ ಉಳಿಯುವ ಸಂದರ್ಭ ಬಂದಿತ್ತು. ನನ್ನಂತಹ ಅನೇಕರು ಆಗಲೇ ಎಲ್ಲ ಮೂಲೆಯ ಸ್ಥಳಗಳನ್ನು ಆಕ್ರಮಿಸಿದ್ದುದರಿಂದ ಅನಿವಾರ್ಯವಾಗಿ ಜನರು ನಡೆದಾಡುವ, ರೋಗಿಗಳನ್ನು ಟ್ರಾಲಿಯಲ್ಲಿ ಸಾಗಿಸುವ ದಾರಿಯಲ್ಲೇ ಹಾಗೆಯೇ ಒರಗಿದ್ದೆ. ಅಷ್ಟರಲ್ಲಿ ರಾತ್ರಿ ಪಾಳಿಯ ಕಾವಲುಗಾರನ ಗದರಿಕೆಯ ಧ್ವನಿ – “ರೀ, ಎದ್ದೇಳ್ರೀ ದಾರಿ ಮೇಲೆ ಮಲಗದ್ದೀರಲ್ರೀ” ನಾನೆಂದೆ “ಸ್ವಾಮಿ ಒಳರೋಗಿಯ ನೆರವಿಗಾಗಿ ನಾನಿಲ್ಲಿ ಇರಬೇಕಾಗಿ ಆಸ್ಪತ್ರೆಯ ಆದೇಶವಿದೆ. ನನಗೆ ಬೇರೆ ಯಾವುದಾದರೂ ಜಾಗ ತೋರಿಸಿ.”

“ಅದೆಲ್ಲಾ ನನಗೊತ್ತಿಲ್ಲ ರೀ, ದಾರಿ ಮೇಲೆ ಮಲಗಬಾರದು. ಆಸ್ಪತ್ರೆ ರೂಲ್ಸು”.

ಅಸಹಾಯಕತೆ, ಅಳು ಕೋಪ ಯಾವುದನ್ನೂ ಪ್ರದರ್ಶಿಸುವ ಸಮಯವಲ್ಲ. ಹಾಗಂತ ಜಾಗ ತೆರವು ಮಾಡಲು ಸಾಧ್ಯವೂ ಆಗಲಿಲ್ಲ. ರಾತ್ರಿ ಸುಮಾರು 3 ಗಂಟೆಯ ಹೊತ್ತಿಗೆ ಮನೆಗೆ ಬೆಂಕಿ ತಗಲಿ ಬೆಂದು ಅರೆಜೀವವಾಗಿದ್ದ ಪರಿಶಿಷ್ಟ ಪಂಗಡದ ಹೆಂಗಸೊಬ್ಬಳನ್ನು ಹೆಬ್ರಿಯಿಂದ ಆಸ್ಪತ್ರೆಗೆ ತರಲಾಯಿತು. ಒಂದು ಗಂಟೆಯ ಚರ್ಚೆಯ ನಂತರ ತುರ್ತು ಚಿಕಿತ್ಸೆಗೂ ಸಾಕಾಗುವಷ್ಟು ಹಣವಿಲ್ಲದುದರಿಂದ ಆ ರೋಗಿಯನ್ನು ಹಿಂದಕ್ಕೆ ಕಳುಹಿಸ ಲಾಯಿತು. ಅಲ್ಲಿಂದ ಇನ್ನೊಂದು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯುವ ಆಯಸ್ಸು, ಆ ರೋಗಿಗಿರಲಿಲ್ಲ. ಇದೇ ಆಸ್ಪತ್ರೆಯಲ್ಲಿ ತುಸು ಭಿನ್ನವಾದರೂ ನೋವುಂಟುಮಾಡುವ ಅನುಭವ ಎರಡು ಬಾರಿ ನನಗಾಗಿದೆ. ವೈದ್ಯಕೀಯ ವೃತ್ತಿಯಲ್ಲಿ ಸೇವಾಭಾವನೆಯೇ ಪ್ರಧಾನವಾಗಿರಬೇಕೆ ಹೊರತು ಅಲಕ್ಷ್ಯವಲ್ಲ. ಅಂತಹ ಸೇವಾಭಾವನೆಯನ್ನು ಆಂಗ್ಲರಿಂದ ನಾವು ರೂಢಿಸಿಕೊಂಡಿಲ್ಲ.

“ಮೆ ಐ ಹೆಲ್ಪ್ ಯು” ನ ಇನ್ನೊಂದು ಮುಖ ಶ್ರೀಮತಿ ಮತ್ತು ಶ್ರೀ “ಅ” ರವರಿಗಾದ ಅನುಭವ ಇಂಗ್ಲೆಂಡ್ ನ ಚೆಶಯರ್ ಪ್ರಾಂತ್ಯದ ಕ್ರ್ಯೂ ನಲ್ಲಿ ನಡೆದ ಘಟನೆ. ಕೆಲವೇ ದಿನಗಳ ಹಿಂದೆ ಇಂಗ್ಲೆಂಡ್‌ಗೆ ಹೋಗಿದ್ದ ಈ ಭಾರತೀಯ ದಂಪತಿಗಳು ಶಾಪಿಂಗ್ ಸೆಂಟರ್‌ನಲ್ಲಿ ವಸ್ತುಗಳನ್ನು ಖರೀದಿಸಿ ಮನೆಗೆ ಮರಳಬೇಕಾಗಿತ್ತು. ರಾತ್ರಿ 8.30ರ

ಸಮಯ ಬಸ್ಸಿಗಾಗಿ ಕಾದು ಟ್ಯಾಕ್ಸಿಗಾಗಿ ಕರೆ ನೀಡಲು ಸಮೀಪದ ಸಾರ್ವಜನಿಕ ದೂರವಾಣಿಯನ್ನು ಹುಡುಕಿ ಶ್ರೀಯುತ "ಅ" ರವರು ತೆರಳಿದರು.

ಒಂಟಿಯಾಗಿ, ಅಸಹಾಯಕಳಂತೆ ನಿಂತಿದ್ದ ಶ್ರೀಮತಿ "ಅ" ರವರಿದ್ದಲ್ಲಿಗೆ ಒಂದೆರಡು ನಿಮಿಷಗಳಲ್ಲೇ ಆಂಗ್ಲ ಯುವಕನೊಬ್ಬನ ಆಗಮನ, "Hello, Good evening may I help you" ಎಂಬ ಉದ್ಗಾರ. ಮಾತುಗಳ ಹಿಂದಿನ ದುರ್ಭಾವನೆ ಕುಲಸ್ತ್ರೀಯೊಬ್ಬಳ ಅಸಹಾಯಕತೆಯಿಂದ ದುರ್ಲಾಭ ಪಡೆಯುವ ಹೊಂಚು ಶ್ರೀಮತಿ "ಅ" ರವರನ್ನು ಎಷ್ಟು ನಡುಗಿಸಿರಬಹುದು! ಒಂದೆರಡು ನಿಮಿಷಗಳೊಳಗೆ ಶ್ರೀಯುತ "ಅ' ರವರು ಬಂದುದರಿಂದ ಪರಿಸ್ಥಿತಿ ಕೈಮೀರಲಿಲ್ಲ. ಆಗಲೂ ಒಂದು ವೇಳೆ ಈ ದಂಪತಿಗಳು ಯುವಕ ನೊಡನೆ ಒಂದೆರಡು ಮಾತು ಮುಂದುವರಿಸಿದ್ದರೆ ಪರಿಸ್ಥಿತಿ ಖಂಡಿತ ಬಿಗಡಾಯಿಸುತ್ತಿತ್ತು "ಅಪನೀ ಗಲೀಮೇ ಕುತ್ತಾ ಭೀ ಶೇರ್ ಹೋತಾ ಹೈ" ಅಂದರೆ ಸ್ವಕ್ಷೇತ್ರದಲ್ಲಿ ನಾಯಿಗೂ ಸಿಂಹದ ಬಲವಿದೆ. ಈ ಘಟನೆ ಇಂಗ್ಲೀಷ್ ಸಭ್ಯತೆಯ ನಾಣ್ಯದ ಇನ್ನೊಂದು ಮುಖ. ಈ ಮುಖದ ಚಲಾವಣೆ ನಮ್ಮ ದೇಶದಲ್ಲೂ ಸಾಕಷ್ಟು ನಡೆಯುತ್ತದೆ.

"ಪಾಸ್‌ಪೋರ್ಟ್" ಎಂಬ ಶಬ್ದ ಕೇಳಿದೊಡನೆಯೇ "ನೀವು ಅಮೇರಿಕಕ್ಕೆ ಹೋಗುತ್ತೀರೋ? ದುಬೈಗೋ? ಲಂಡನ್ ಗೋ ಎಲ್ಲಿಗೆ? ಎಂದು ಹಲವರು ಪ್ರಶ್ನಿಸಿದ್ದುಂಟು ಪಾಸ್ ಪೋರ್ಟ್ ಇದ್ದ ಮಾತ್ರಕ್ಕೆ ವಿದೇಶಕ್ಕೆ ಹೋಗಲೇಬೇಕೆಂದಿಲ್ಲ. ಆದರೆ ವಿದೇಶಯಾನಕ್ಕೆ ಪಾಸ್‌ಪೋರ್ಟ್ ಅನಿವಾರ್ಯ ದಾಖಲೆ. ಈತ–ಈಕೆ ಭಾರತದ ನಾಗರಿಕನೆಂದು ವಿಶ್ವದ ಯಾವುದೇ ರಾಷ್ಟ್ರವೂ ಗುರುತಿಸಲು ಸಾಧ್ಯವಾಗುವಂತೆ ಭಾರತ ಸರ್ಕಾರದ ಪರವಾಗಿ ಅಧಿಕೃತ ಅಧಿಕಾರಿ ಸಹಿ ಮಾಡಿ ಸೀಲಿನೊಂದಿಗೆ ನೀಡುವ, ಜೇಬಿನಲ್ಲಿಡಲು ಸಾಧ್ಯವಾಗುವ 20 ಹಾಳೆಗಳ ಒಂದು ಚಿಕ್ಕ ಪುಸ್ತಿಕೆಯೇ ಪಾಸ್‌ಪೋರ್ಟ್ ಇದನ್ನು ಯಾವನೇ ಭಾರತೀಯ ಪ್ರಜೆ ಹೊಂದಿರಬಹುದು. ಪ್ರತಿಯೊಂದು ರಾಜ್ಯದಲ್ಲೂ ಪಾಸ್‌ಪೋರ್ಟ್ ನೀಡುವ ಕಚೇರಿಗಳಿವೆ. ಬೆಂಗಳೂರಿನ ಕಂಟೋನ್ಮೆಂಟ್ ಪ್ರದೇಶದ ಬ್ರಂಟನ್ ರೋಡಿನಲ್ಲಿ ಈ ಕಚೇರಿಯಿದೆ. ಇತ್ತೀಚೆಗೆ ಮಂಗಳೂರಿನಲ್ಲೂ ಒಂದು ಕಚೇರಿ ತೆರೆದಿರುವುದಾಗಿ ಪತ್ರಿಕೆಗಳಲ್ಲಿ ಓದಿದ ನೆನಪು.

ನಿಯತ ಶುಲ್ಕದೊಂದಿಗೆ (ರೂ.600/=) ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ (ಪಾಸ್‌ಪೋರ್ಟ್ ಕಚೇರಿಯಿಂದ ಅಥವಾ ಅಧಿಕೃತ ಪ್ರತಿನಿಧಿಯಿಂದ ಪಡೆಯಬಹುದು) ಈ ಕೆಳಗಿನ ದಾಖಲಾತಿಯೊಂದಿಗೆ ಸ್ವತಃ ಅಥವಾ ಅಧಿಕೃತ ಏಜೆಂಟರ ಮೂಲಕ ಸಲ್ಲಿಸಬೇಕು.

1. ಜನ್ಮ ದಿನಾಂಕ. ಶಾಲೆಯ ವರ್ಗಾವಣೆ ಪತ್ರ ಅಥವಾ ಜನನ ಮರಣ ರಿಜಿಸ್ಟ್ರಾರ್/ತಹಸೀಲ್ದಾರ್ ರಿಂದ ಪಡೆಯಬಹುದು.

2. ಶೈಕ್ಷಣಿಕ ಅರ್ಹತೆ.

3. ಕುಟುಂಬದ ವಾಸಸ್ಥಾನದ ವಿವರ, ಪಡಿತರ ಪತ್ರವಗೈರೆ, ಮೂಲಪತ್ರಿಗಳೊಂದಿಗೆ ಜೆರಾಕ್ಸ್ ಪ್ರತಿಗಳನ್ನಿರಿಸಿದಲ್ಲಿ ದೃಢೀಕರಿಸಿದ ಪ್ರತಿಗಳ್ನಾರಿಸಿಕೊಂಡು ಮೂಲ ಪ್ರತಿಗಳನ್ನು ಹಿಂದಿರುಗಿಸುತ್ತಾರೆ. ಅಥವಾ ಸರಕಾರದ ಅಧಿಕೃತ ಅಧಿಕಾರಿಗಳಿಂದ ದೃಢೀಕರಿಸಿದ ಪ್ರತಿಗಳು.

4.ಪಾಸ್‌ಪೋರ್ಟ್ ಸೈಜಿನ ಫೋಟೋ 04 ಪ್ರತಿಗಳು.

ಸುಮಾರು 3 ತಿಂಗಳಲ್ಲಿ ಪಾಸ್‌ಪೋರ್ಟ್ ನಿಮ್ಮ ಕೈ ಸೇರುತ್ತದೆ. 10 ಅಥವಾ 20 ವರ್ಷಗಳ ನಂತರ ಇದನ್ನು ನವೀಕರಿಸಬೇಕು.

ವೀಸಾ: ವಿದೇಶವನ್ನು ಪ್ರವೇಶಿಸಲು ಮತ್ತು ನೆಲೆಸಲು ಆಯಾ ದೇಶದ ಅಧಿಕೃತ ಅಧಿಕಾರಿ (Ambessy or High Commission-VISA Office) ನೀಡುವ, ಅಂಚೆ ಚೀಟಿ ಮಾದರಿಯ ಒಂದು ಅನುಮತಿ ಪತ್ರ ಆ ದೇಶದಲ್ಲಿ ಉನ್ನತ ವ್ಯಾಸಂಗಕ್ಕೋ, ನೌಕರಿಗೋ ಅವಕಾಶ ದೊರಕಿದ್ದರೆ ವೀಸಾ ಪಡೆಯುವುದು ಸುಲಭ. ನೀವು ಒಮ್ಮೆ ಮಾತ್ರ ಆ ದೇಶಕ್ಕೆ ಹೋಗುವವರೊ, ಅನೇಕ ಬಾರಿ ಹೋಗಿ ಬರುವವರೊ, ಅಥವಾ ಆ ದೇಶದಿಂದ ಇನ್ನೊಂದು ದೇಶಕ್ಕೆ ಹೋಗುವವರೋ ಎಂಬಿತ್ಯಾದಿ ವಿವರಗಳ ಮೇರೆಗೆ ಇದಕ್ಕಾಗಿ ಸಲ್ಲಿಸುವ ಶುಲ್ಕದಲ್ಲಿ ವ್ಯತ್ಯಾಸವಿರುತ್ತದೆ. ಅರ್ಜಿಯ ನಮೂನೆಯನ್ನು ಆಯಾ ಕಚೇರಿಯಲ್ಲೇ ಪಡೆದು ಪಾಸ್ ಪೋರ್ಟ್ ಸೈಜಿನ ನಾಲ್ಕು ಫೋಟೋ ಮತ್ತು ಅಡಕ ಗಳೊಂದಿಗೆ ಪಾಸ್ ಪೋರ್ಟ್ ಕಚೇರಿಗೆ ಅರ್ಜಿ ಸಲ್ಲಿಸಬೇಕು. ಆಯಾ ದೇಶದ ಸರಕಾರಕ್ಕೆ ನಿಮ್ಮ ಬಗ್ಗೆ ಆರ್ಥಿಕ ಅಥವಾ ಇನ್ನಿತರ ಯಾವುದೇ ಬಾಧ್ಯತೆಗಳಿರದಿರುವಂತೆ ದೃಢೀಕರಣ ನೀಡುವುದು ಅಗತ್ಯ. ಸಂದರ್ಭಾನುಸಾರ ನಿಮ್ಮ ವೈದ್ಯಕೀಯ ತಪಾಸಣೆಯೂ ಅಗತ್ಯ ಬೀಳಬಹುದು.

ಆಯಾ ದೇಶದಲ್ಲಿ ನಿಮ್ಮ ಸೇವೆಯ ಅಗತ್ಯಕ್ಕನುಸಾರವಾಗಿ ನಿಮಗೆ ನೇರ ವೀಸಾ ಸಿಗುವ ಸಾಧ್ಯತೆಯೂ ಇದೆ.

ಮೊದಲ ಬಾರಿಗೆ ವಿಮಾನದಲ್ಲಿ ಹಾರುವುದು ಒಂದು ವಿಶಿಷ್ಟ ಅನುಭವ ವಿಮಾನ ಹೊರಡುವ 2 ಗಂಟೆಗೆ ಮೊದಲೇ ನಿಲ್ದಾಣದಲ್ಲಿ ನಿಮ್ಮ ವಿಮಾನಯಾನದ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಏಜೆಂಟರಿಂದ ಪಡೆದ ಪ್ರಯಾಣದ ಟಿಕೇಟು, ಪಾಸ್‌ಪೋರ್ಟ್, ವೀಸಾ ಮತ್ತು ಲಗ್ಗೇಜ್ ನೊಂದಿಗೆ ವಿಮಾನ ನಿಲ್ದಾಣದೊಳಗೆ ಪ್ರವೇಶಿಸುವ ಮೊದಲು ನಿಮಗೆ ಆಪ್ತೇಷ್ಟರು, ಬಂಧು ಬಳಗದವರಿಂದ ಭಾವಪೂರ್ಣ ಶುಭ ವಿದಾಯ, ಸೆಕ್ಯೂರಿಟಿ ಚೆಕ್‌ನಲ್ಲಿ ನಿಮ್ಮ ಲಗೇಜ್ ಬ್ಯಾಗ್‌ನ ತಪಾಸಣೆ ಸ್ಫೋಟಕ ಪದಾರ್ಥ ಗಳನ್ನಾಗಲೀ, ಮಾರಕ ವಸ್ತುಗಳನ್ನಾಗಲೀ ಸಾಗಿಸುವುದಿಲ್ಲವೆಂದು ಖಚಿತವಾದ ಬಳಿಕ ನೀವು ಪ್ರಯಾಣಿಸಬೇಕಾದ ವಿಮಾನದ ಕಂಪೆನಿಯ ಸಿಬ್ಬಂದಿಗಳು ಕುಳಿತ ಜಾಗಕ್ಕೆ ಹೋಗಬೇಕು. ನೀವು ಯಾವ ಯಾವ ಪದಾರ್ಥಗಳನ್ನು ಒಯ್ಯಬಾರದೆಂಬ ಸೂಚನೆ ನಿಮ್ಮ ಟಿಕೇಟಿನಲ್ಲಿ ನಮೂದಿಸಲ್ಪಟ್ಟಿರುತ್ತದೆ. ಒಬ್ಬ ವ್ಯಕ್ತಿ ಒಯ್ಯಬಹುದಾದ (ಸುಮಾರು

20.25 ಕೆ.ಜಿ.) ತೂಕದ ನಿಮ್ಮ ಲಗ್ಗೇಜ್ ಬ್ಯಾಗನ್ನೂ ತೂಗಿ, ಚೀಟಿ ಅಂಟಿಸಿ ಆ ಚೀಟಿಯ ಒಂದು ಚೂರನ್ನು ನಿಮಗೆ ನೀಡಿ, ಬ್ಯಾಗನ್ನು ಕನ್ವೇಯರ್ ಬೆಲ್ಟ್ ಮೂಲಕ ವಿಮಾನಕ್ಕೆ ಸಾಗಿಸಲಾಗುತ್ತದೆ. ಈ ಬ್ಯಾಗು ನೀವು ವಿಮಾನದಿಂದಿಳಿದ ಮೇಲಷ್ಟೆ ನಿಮಗೆ ಸಿಗುತ್ತದೆ. ವಿಮಾನದಲ್ಲಿ ನಿಮ್ಮ ಆಸನ ಸಂಖ್ಯೆಯನ್ನೂ ನಮೂದಿಸಿದ ಇನ್ನೊಂದು ಟಿಕೇಟನ್ನೂ ನೀವಿಲ್ಲಿ ಪಡೆಯುತ್ತೀರಿ. Emigration Check ಎಂಬ ಇನ್ನೊಂದು ತಪಾಸಣೆಯ ನಂತರ ವಿಮಾನವೇರುವ ಬಾಗಿಲ ಬಳಿಗೆ ತಲುಪುತ್ತೀರಿ. ಭಾರತದಲ್ಲಾದರೆ ಹಿಂದಿ/ಇಂಗ್ಲೀಷ್ ಭಾಷೆಗಳು ಮತ್ತು ವಿದೇಶದಲ್ಲಿ ಇಂಗ್ಲೀಷ್ ಭಾಷೆಯ ಜ್ಞಾನ ಅನಿವಾರ್ಯವೆನಿಸುತ್ತದೆ ಅಥವಾ ಆ ಭಾಷೆಯನ್ನು ತಿಳಿದ ಸಹ ಪ್ರಯಾಣಿಕರ ಸಹಾಯ ಅವಶ್ಯಕವೆನಿಸುತ್ತದೆ.

ವಿಮಾನ ಪರಿಚಾರಕ–ಪರಿಚಾರಿಕೆಯರು ನಗುಮೊಗದಿಂದ ಸ್ವಾಗತಿಸಿ ನಿಮ್ಮ ಅವಶ್ಯಕತೆಗಳನ್ನು ಪೂರೈಸಲು ತುದಿಗಾಲಲ್ಲಿ ನಿಂತಿರುತ್ತಾರೆ. ಕಾಲ–ಕಾಲಕ್ಕೆ ನಿಮಗೆ ಆಹಾರ–ಪಾನೀಯಗಳನ್ನು ನಿಮ್ಮ ಆಯ್ಕೆಗೆ ತಕ್ಕಂತೆ ಒದಗಿಸುತ್ತಾರೆ. ನಿಮ್ಮ ವೈಯಕ್ತಿಕ ಅಭಿರುಚಿಗೆ ತಕ್ಕಂತೆ ನೀವು ಸಂಗೀತ ಕೇಳಬಹುದು, ಮಾನಿಟರ್ ಟಿ.ವಿ. ಪರದೆಯ ಮೇಲೆ ಸಿನೆಮಾ ನೋಡಬಹುದು. ಅಥವಾ ವಿಮಾನ ಹಾರುವ ವೇಗ, ಎತ್ತರ, ಸ್ಥಳೀಯ ಕಾಲಮಾನ, ತಲುಪುವ ವೇಳೆ ಮೊದಲಾದ ಮಾಹಿತಿಗಳನ್ನು ನೋಡುತ್ತಿರಬಹುದು.

ವಿಮಾನದಲ್ಲಿ ಹಾರುವ ಆನಂದ ಅನುಭವಕ್ಕೆ ವೇದ್ಯ, ಮೋಡಗಳಿಲ್ಲದ ಆಗಸದಿಂದ ಸೂರ್ಯ ಬೆಳಕಿನಲ್ಲೋ, ದೀಪಗಳ ರಾತ್ರಿಯಲ್ಲೋ ನೆಲ–ಜಲ–ಗುಡ್ಡ–ಬೆಟ್ಟಗಳ ಸೊಬಗು ವರ್ಣನಾತೀತ. ಸಾಮಾನ್ಯ ಎತ್ತರದಲ್ಲಿ ಹಾರುತ್ತಿರುವ ನಿಮಗೆ ಕೆಳಗಿನ ವಾಹನಗಳು ಇರುವೆ ಚಲಿಸುವಂತೆ ಮನೆಗಳು ಮಕ್ಕಳಾಟದ ಗುಬ್ಬಚ್ಚಿ ಗೂಡಿನಂತೆ ಕಾಣಿಸುತ್ತವೆ. ಹಗಲಿನ ಬಿಳಿ ಮೋಡಗಳು ಹತ್ತಿಯ ರಾಶಿಯ ನೆನಪನ್ನು ತರುತ್ತವೆ. ಭ್ರಮಾಲೋಕದಲ್ಲಿ ವಿಹರಿಸುತ್ತಿದ್ದ ನೀವು ಒಲ್ಲದ ಮನಸ್ಸಿನಿಂದ ವಿಮಾನದಿಂದಿಳಿದು ಮತ್ತೊಮ್ಮೆ ಎಲ್ಲ ತಪಾಸಣೆಗೊಳಗಾಗಿ ನಿಮ್ಮ ಲಗೇಜ್ ಬ್ಯಾಗನ್ನು ಪಡೆದು ವಿಮಾನ ನಿಲ್ದಾಣದಿಂದ ಹೊರ ಬರುತ್ತೀರಿ. ವಿಮಾನದಿಂದಿಳಿಯುವಾಗ ಪುನಃ ಮುಗುಳ್ನಗೆಯೊಂದಿಗೆ ನಿಮಗೆ ಶುಭ ವಿದಾಯ ಹೇಳುವ ಪರಿಚಾರಿಕೆಯರ ಸೌಜನ್ಯಪೂರಿತ ಸೇವೆಗೆ ಮರುಳಾಗಿ ಮತ್ತೊಮ್ಮೆ ಶೀಘ್ರವೇ ವಿಮಾನಯಾನಕ್ಕೆ ನೆಪ ಹುಡುಕುವ ಗುಂಗಿನಲ್ಲೇ ಮೈ ಮರೆಯುತ್ತೀರಿ.

ದಿನಾಂಕ 15.09.1997ರ ಮುಂಜಾನೆ 8.30ಕ್ಕೆ ಮ್ಯಾಂಚೆಸ್ಟರ್ ವಿಮಾನ ನಿಲ್ದಾಣದಿಂದ ಹೊರಬರುತ್ತಿದ್ದಂತೆ ಹೊಸತೊಂದು ಲೋಕಕ್ಕೆ ಕಾಲಿಟ್ಟ ಅನುಭವ. ಎಲ್ಲೆಲ್ಲೂ ಶಿಸ್ತು–ಸ್ವಚ್ಛತೆ–ಅಚ್ಚುಕಟ್ಟುತನ, ಹೊರಬರುವಾಗ ತಳ್ಳುಗಾಡಿಗಾಗಿ ಸರದಿಯ ಸಾಲಿನಲ್ಲಿ ನಿಂತಿದ್ದೆ. ಸರದಿಯನ್ನು ಮುರಿದ ಮಹಾನುಭಾವರೊಬ್ಬರು (ಆಂಗ್ಲ ವಿ.ಐ.ಪಿ.?) ತನಗೆ ಪ್ರಥಮ ಪ್ರಾಶಸ್ತ್ಯ ನೀಡಿ ತತ್‌ಕ್ಷಣ ಗಾಡಿ ಒದಗಿಸುವಂತೆ ಅಲ್ಲಿನ ಸಿಬ್ಬಂದಿ ಯುವಕನನ್ನು ಗದರಿಸತೊಡಗಿದರು. ಆ ತರುಣ ತನ್ನ ಕರ್ತವ್ಯ ಮುಂದುವರಿಸುತ್ತಲೇ ಅವರನ್ನು ಸಮಾಧಾನಪಡಿಸ ತೊಡಗಿದ. ಆ ಮಹಾನುಭಾವರಿಗಿಂತ ನಂತರ ಬಂದವರು ಸರದಿಯ ಸಾಲಿನಲ್ಲಿ ನಿಂತು ಗಾಡಿ ಪಡೆದು ಹಿಂದಿರುಗಿದರೂ ಬಿಸಿ ಬಿಸಿ ವಾಗ್ವಾದ ನಿಲ್ಲಲಿಲ್ಲ. ಸರದಿ

ಮುರಿದ ಆ ಮಹಾನುಭಾವರ ಧಿಮಾಕಿನ ಮಾತಿಗೆ ಆ ತರುಣ ವಿಚಲಿತನಾಗಲಿಲ್ಲ. ಸಿಟ್ಟಾದ ಆ ಮಹಾನುಭಾವರು who are you my son? What is your name? you will be dismissed ಎಂದು ಅರಚತೊಡಗಿದರು. ಆ ತರುಣ ಏನೂ ಪ್ರಭಾವಿತನಾಗದೆ “O.K.” "Thank you sir. Please come in the Que" ಎಂದು ಹೇಳಿದ. ಅಷ್ಟರಲ್ಲಿ ನನ್ನ ಸರದಿ ಬಂತು. ಅಲ್ಲಿನ ರಸ್ತೆಗಳು ನಾಲ್ಕು ವಿಧ Motor way, A-Road, B-Road ಮತ್ತು ಹಳ್ಳಿಯ ರಸ್ತೆಗಳು. ಈ ಹಳ್ಳಿಯ ರಸ್ತೆಗಳಲ್ಲಿ ಮಾತ್ರ ದ್ವಿಮುಖ ಸಂಚಾರವಿದ್ದು (ಇವು ನಮ್ಮೂರಿನ ಜಿ.ಮು.ರ. ಜಿಲ್ಲಾ ಮುಖ್ಯರಸ್ತೆಗಳನ್ನು ನೆನಪಿಸುತ್ತದೆ.) ಉಳಿದ ರಸ್ತೆಗಳು ಪ್ರಾಯಶಃ ಏಕ ಮುಖ್ಯರಸ್ತೆಗಳು. ಇಡೀ ದೇಶದ ಎಲ್ಲಾ ರಸ್ತೆಗಳನ್ನೂ ಎಂ–6, ಎಂ.12, ಎಂ.18, ಅ–5, ಎ–1056, ಬಿ–205, ಬಿ–37 ಹೀಗೆ ಗುರುತಿಸಿ ನಕ್ಷೆಯನ್ನು ತಯಾರಿಸಿದ್ದಾರೆ. ಈ ನಕ್ಷೆಯಲ್ಲಿ ರಸ್ತೆಯ ಅಕ್ಕಪಕ್ಕದ ದಾರಿಗಳು ಓಣಿಗಳು ಅವುಗಳ ಹೆಸರು ಅಡ್ಡ ರಸ್ತೆಯ ಹೆಸರು, ನಾಮಫಲಕಗಳುಳ್ಳ ಪ್ರಸಿದ್ಧ ಕಟ್ಟಡಗಳು ಅಲ್ಲಿಂದಲ್ಲಿಗೆ ದೂರ ಮುಂತಾದ ಪೂರ್ತಿ ವಿವರ ಗುರುತಿಸಲ್ಪಟ್ಟಿದೆ. ಈ ನಕ್ಷೆಯೊಂದಿದ್ದರೆ ಯಾರ ಸಹಾಯವೂ ಇಲ್ಲದೆ ಇಡೀ ದೇಶವನ್ನು ಸುತ್ತಬಹುದು. ಮೋಟಾರ್ ವೇಯಲ್ಲಿ ಸಮಾನಾಂತರವಾಗಿ ನಾಲ್ಕು ವಾಹನಗಳು ಏಕಕಾಲದಲ್ಲಿ ಸಂಚರಿಸಬಹುದಾದಂತೆ ನಾಲ್ಕು ಸಾಲುಗಳನ್ನು ಗುರುತಿಸಲಾಗಿದೆ. ಎಲ್ಲಕ್ಕಿಂತ ಬಲಗಡೆಯ ಸಾಲಿನಲ್ಲಿ ಅತಿಹೆಚ್ಚು ಅಂದರೆ ಗಂಟೆಗೆ 100 ಮೈಲಿಗಿಂತ ಹೆಚ್ಚು ವೇಗದ ವಾಹನಗಳು ಸಂಚರಿಸಬೇಕು. ಎಲ್ಲಕ್ಕಿಂತ ಎಡಗಡೆಯ ಸಾಲಿನಲ್ಲಿ ಗಂಟೆಗೆ 60 ರಿಂದ 70 ಮೈಲಿ ವೇಗದ ವಾಹನಗಳು ಸಂಚರಿಸುತ್ತವೆ. ಇದಕ್ಕಿಂತ ಕಡಿಮೆ ವೇಗದಲ್ಲಿ ಸಂಚರಿಸುವುದು ಮೋಟಾರ್ ವೇನಲ್ಲಿ ಕಷ್ಟ ಎಡಗಡೆಗೆ ಅಥವಾ ಬಲಕ್ಕೆ ಇರುವ ಸಾಲಿಗೆ ತಿರುಗಬೇಕಾದಾಗ ಸುಮಾರು 10 ಮೈಲಿ ಹಿಂದಿನಿಂದಲೇ ಹಿಂದಿನ ವಾಹನಗಳಿಗೆ ಸೂಚನೆ ನೀಡುತ್ತಾ ಎಡದಿಂದ ಬಲಕ್ಕೋ ಬಲದಿಂದ ಎಡಕ್ಕೋ ಹೋಗಬೇಕು. ಸ್ವಲ್ಪ ಅಜಾಗರೂಕರಾದರೂ, ನೂರಾರು ಮೈಲಿ ವೇಗದಲ್ಲಿ ಸಮಚರಿಸುತ್ತಿರುವ ವಾಹನಗಳ ನಡುವೆ ಅಪಘಾತ ನಿಶ್ಚಿತ. ಆದರೆ ಪ್ರತಿ ಅರ್ಧಮೈಲಿಗೊಂದರಂತೆ ದೊಡ್ಡದಾಗಿ ಕಾಣುವ ಮಾರ್ಗಸೂಚಿ ಫಲಕ ಮತ್ತು ಕಟ್ಟುನಿಟ್ಟಾದ ಸಂಚಾರಿ ನಿಯಮ ಪಾಲನೆಯಿಂದಾಗಿ ಇಂತಹ ಅಪಘಾತಗಳು ಅಪರೂಪ. ಈ ಮೋಟರ್ ವೇಯ ಯಾವುದೇ ಬದಿಯಲ್ಲೂ ಸಹ ಮನುಷ್ಯ ಸಂಚಾರ ನಿಷಿದ್ಧ. ಸಾಕು ಪ್ರಾಣಿಗಳಂತೂ ಕಾಣಸಿಗುವ ಪ್ರಶ್ನೆಯೇ ಇಲ್ಲ.

ರಸ್ತೆಯಲ್ಲಿ ಏನಾದರೂ ಅಪಘಾತಗಳು ಸಂಭವಿಸಿದಲ್ಲಿ ಅಥವಾ ವಾಹನ ಕೆಟ್ಟು ಹೋದಲ್ಲಿ ರಸ್ತೆಯ ತೀರಾ ಎಡಗಡೆ ಇರುವ ಖಾಲಿ ಜಾಗದಲ್ಲಿ ನಿಲ್ಲಿಸುವ ಅವಕಾಶವಿದೆ. ಉಳಿದ ವಾಹನಗಳು ತಮ್ಮ ಪಾಡಿಗೆ ಸಂಚರಿಸುತ್ತಿರುತ್ತೆವೆ. ಈ ಒಂದೆರೆಡು ನಿಮಿಷಗಳ ರಸ್ತೆ ತಡೆಯಿಂದಾಗಿ ವಾಹನ ಸಂಚಾರ ಸ್ಥಗಿತಗೊಂಡರೆ/ ಅಡ್ಡಿಯಾದರೆ, ವಾಹನಗಳ ವೇಗಮಿತಿಯನ್ನು ತಗ್ಗಿಸುವ ಸಲುವಾಗಿ ವಿದ್ಯುದ್ದೀಪದ ಬೆಳಗುವಿಕೆಯಿಂದ ಸೂಚನೆ

ನೀಡಲಾಗುತ್ತದೆ. ವೇಗಮಿತಿಯನ್ನು ಮೀರಿ ವಾಹನ ಓಡಿಸಿದರೆ ಎಲ್ಲೋ ಕಾಣದಂತಿರುವ ಪೋಲೀಸರ ಕ್ಯಾಮರಾ ಕ್ಲಿಕ್ಕಿಸುತ್ತದೆ. ಯಾವುದೇ ಆಯಕಟ್ಟಿನ ಸ್ಥಳದಲ್ಲೋ ಅಥವಾ ಇನ್ನೆಲ್ಲೋ ಕೆಂಪುದೀಪದ ಸೂಚನೆ ಮೀರಿ ರಸ್ತೆಯಲ್ಲಿ ಒಂದಡಿ ಮುಂದೆ ವಾಹನ ಚಲಿಸಿತೋ, ಅಲ್ಲೂ ಸ್ವಯಂಚಾಲಿತ ಇಲೆಕ್ಟ್ರಾನಿಕ್ ಕ್ಯಾಮೆರಾ ನಿಮ್ಮ ವಾಹನವನ್ನು ಕ್ಲಿಕ್ಕಿಸುತ್ತದೆ. ಒಂದೆರೆಡು ವಾರದೊಳಗೆ ಪೊಲೀಸರಿಂದ ನಿಮಗೆ ನೋಟೀಸು ದಂಡ ಪಾವತಿಯ ಬಗ್ಗೆ ಮತ್ತು ನಿಮ್ಮ ಡ್ರೈವಿಂಗ್ ಲೈಸನ್ಸ್ ನಲ್ಲಿ ಮೂರು ಚುಕ್ಕೆಗಳ ಗುರುತು. ನಿಮ್ಮ ಲೈಸನ್ಸ್ ನಲ್ಲಿ ಇಂತಹ 12 ಚುಕ್ಕೆಗಳ ಗುರುತಾದುವೆಂದರೆ ನಿಮ್ಮ ಲೈಸೆನ್ಸ್ ರದ್ದಾಗುತ್ತದೆ. ಮತ್ತೆರೆಡು ವರ್ಷ ನೀವು ವಾಹನ ಓಡಿಸಲಾರಿರಿ.

ಮೋಟಾರ್ ವೇನಲ್ಲಿ ಅಪಘಾತ ಅಥವಾ ಇನ್ನಿತರೆ ಯಾವುದೇ ತೊಂದರೆಯಾದಲ್ಲಿ ಒಂದು ಫರ್ಲಾಂಗ್ ದೂರದೊಳಗೆ ರಸ್ತೆಯ ಬದಿಯಲ್ಲಿರುವ ಪೋನನ್ನೆತ್ತಿ (ಪುಕ್ಕಟೆ) ವಿಷಯ ತಿಳಿಸಿ. 5–6 ನಿಮಿಷದೊಳಗೆ ನಿಮಗೆ ಪೊಲೀಸರ ಸಹಾಯ ಲಭ್ಯ. ವೈದ್ಯಕೀಯ ನೆರವೂ ಸೇರಿದಂತೆ ಸಂದರ್ಭದ ತೀವ್ರತೆಯನ್ನನುಸರಿಸಿ ಹೆಲಿಕಾಪ್ಟರ್ ಮೂಲಕವೂ ಸಹಾಯ ಲಭಿಸೀತು.

ಮೋಟಾರ್ ವೇಯ ಬದಿಗಳಲ್ಲಿರುವ ಪೆಟ್ರೋಲ್ ಬಂಕ್ ಗಳು ಹೆಚ್ಚನವು **ಮೋಟೇಲ್** ಗಳಿಗೆ ಹೊಂದಿಕೊಂಡಿವೆ. ಇಲ್ಲಿ ಹಗಲು ರಾತ್ರಿ ಸೇವೆ ಉಂಟು. ಪಾನೀಯಗಳು, ತಿಂಡಿಗಳು, ಶೌಚಾಲಯಗಳು ಕಂಪ್ಯೂಟರ್ ಆಟಗಳು ಎಲ್ಲಾ ಸವಲತ್ತುಗಳೂ ಇವೆ. ಕೆಲವು ಗಂಟೆಗಳ ವಿಶ್ರಾಂತಿಗೂ ಅವಕಾಶವಿದೆ.

ನಮ್ಮ ಮರು ಪ್ರಯಾಣದ ಒಂದು ಅನುಭವ : ಬೊಂಬಾಯಿಯಿಂದ ಶಿವಮೊಗ್ಗ ಮಾರ್ಗವಾಗಿ ತೀರ್ಥಹಳ್ಳಿಗೆ ಬರುವ ಒಂದು ಖಾಸಗಿ ಬಸ್ಸು ಸ್ಟಾಂಡಿನ ಒಂದು ಇಕ್ಕಟ್ಟಾದ ಜಾಗದಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಳ್ಳಲು 5–10 ನಿಮಿಷ ನಿಲ್ಲುತ್ತದೆ. ಹತ್ತಿರದಲ್ಲೆಲ್ಲೂ ಶೌಚಾಲಯದ ಮಾತಿರಲಿ, ರಸ್ತೆಯ ಬದಿಗಳಲ್ಲಿ 10–20 ಜನ ನಿಲ್ಲಲೂ ಸ್ಥಳವಿಲ್ಲ. ನಮ್ಮ ವಾಸ್ತವ್ಯದಿಂದ ಸುಮಾರು ಮಧ್ಯಾಹ್ನ 12.00 ಗಂಟೆಗೆ ಹೊರಟವರು 2–00 ಗಂಟೆಯಿಂದ ಇಲ್ಲಿ ಕಾಯುತ್ತಿದ್ದೆವು. 2–30 ಗಂಟೆಗೆ ಬರಬೇಕಾಗಿದ್ದ ಬಸ್ಸು ಅಂತೂ ಸಂಜೆ 6–00 ಗಂಟೆಗೇ ಅಲ್ಲಿಂದ ಹೊರಟು ರಾತ್ರಿ 8–30ರ ಹೊತ್ತಿಗೆ ಪನ್‌ವೇಲ್‌ನಲ್ಲಿ ಬಸ್‌ನ ಸಿಬ್ಬಂದಿಗೆ ಪರಿಚಿತವಾದ ಒಂದು ಹೋಟೇಲ್ ನ ಎದುರು ತಲುಪಿತು. ಕ್ಯೂನಲ್ಲಿ ನಿಂತು ದೇಹಬಾಧೆ ತೀರಿಸಿ ಉಪಹಾರದ ಮೇಜಿನ ಬಳಿ ಬಂದರೆ ಎಲ್ಲ ಮೇಜುಗಳನ್ನೂ ದೀಪದ ಹಸುರುಹುಳುಗಳು ಆಕ್ರಮಿಸಿಯಾಗಿತ್ತು. ಇಲ್ಲಿನ ಪರಿಚಾರಕರೋ ದಿನದ ದುಡಿಮೆಯಿಂದ ಬಳಲಿದವರು. ನಮಗೋ ಬಸ್ಸಿಗೆ ಮರಳುವ ಆತುರ. ಇಲ್ಲಿನ ವೈಶಿಷ್ಟ್ಯವೆಂದರೆ ಪ್ರತಿ ಕಾಫಿ–ಚಹಾದ ಬಟ್ಟಲೊಳಗೋ ಉಪಾಹಾರದ ತಟ್ಟೆಗಳ ಮೇಲೋ ಬಿದ್ದು (ಹೋಟೇಲಿನ ಯಜಮಾನನಿಗಾಗಿ) ಆತ್ಮ ಬಲಿದಾನಗೈಯುವ ಹತ್ತಾರು ದೀಪದ ಹುಳುಗಳ ಬಾಬ್ತು ಅಧಿಕ ತೆರಿಗೆ ತೆರಬೇಕಾಗಿಲ್ಲ.

19ನೇ ತಾರಿಕು ಅಪರಾಹ್ನ ಬೊಂಬಾಯಿಯಿಂದ ಹೊರಟು 20ರಂದು ಮಧ್ಯಾಹ್ನ ಸುಮಾರು 11 ಗಂಟೆಗೆ ಶಿವಮೊಗ್ಗ ತಲುಪಬೇಕಾಗಿದ್ದ ಈ ಬಸ್ಸು ರಾತ್ರಿ 12 ಗಂಟೆಗೆ ತೀರ್ಥಹಳ್ಳಿ ತಲುಪಿತು. ಕಪೋಲಿಯಲ್ಲಿ ಮೆಕ್ಯಾನಿಕ್‌ನಿಂದ ಚಿಕಿತ್ಸೆ ಪಡೆದರೂ ತೃಪ್ತವಾಗದೇ ಖಂಡಾಲಾಘಾಟಿಯಲ್ಲಿ ನಡುರಾತ್ರಿ ನಮ್ಮೆಲ್ಲ ಪ್ರಯಾಣಿಕರಿಂದ ಕೆಲವು ಕಿಲೊಮೀಟರ್‌ಗಳ ದೂರ ತಳ್ಳಿಸಿಕೊಳ್ಳದಿರುತ್ತಿದ್ದರೆ ಇನ್ನೆಷ್ಟು ತಡವಾಗಿ ತಲುಪುತಿತ್ತೋ ಹೇಳಲಾಗದು. ಪ್ರಯಾಣದ ಆವಾಂತರಗಳಿಂದ ನೊಂದ ಪ್ರಯಾಣಿಕರ ಎಲ್ಲಾ ತರಹದ ಮಾತುಗಳನ್ನೂ, ವ್ಯಂಗವನ್ನೂ, ನುಂಗಿ ಸಹಕರಿಸಿದ ಬಸ್ಸಿನ ಸಿಬ್ಬಂದಿ ವರ್ಗದವರ ಸಹನೆ, ನಿರ್ಲಿಪ್ತತೆ ಪ್ರಶಂಸಾರ್ಹವಾದುದು. ಪ್ರಯಾಣಿಕರ ಅವಶ್ಯಕತೆಗಳಿಗೆ ತಕ್ಕಂತೆ (ಸಿಬ್ಬಂದಿಯವರ ಅನುಕೂಲತೆ–ಆಯ್ಕೆಯಂತಲ್ಲ) ದೇಹಬಾಧೆ ತೀರಿಸಲು ಉತ್ತಮ ಶೌಚಾಲಯಗಳಿರುವೆಡೆ ಕೆಲವು ನಿಮಿಷ ನಿಲ್ಲಿಸುವುದಾಗಿದ್ದರೆ ಪ್ರಯಾಣಿಕರ ದುಗುಡದ ನಡುವೆ ಕೂಡ ಕಿವಿಗಡಚಿಕ್ಕುವಂತೆ ಧ್ವನಿಸುರುಳಿ ಕೂಗಿಸದಿರುತ್ತಿದ್ದರೆ ಇನ್ನಷ್ಟು ಮೆಚ್ಚುಗೆ ಗಳಿಸುತ್ತಿದ್ದರು.

ಇಲ್ಲಿನ ಅಂದರೆ ಇಂಗ್ಲಂಡಿನ ಹೆಚ್ಚಿನ ರಸ್ತೆಗಳು ಬಯಲು ಸೀಮೆಯ ರಸ್ತೆಗಳಂತೆ ನೇರ ರಸ್ತೆಗಳು. ಲೀವರ್ ಪೂಲಿನಲ್ಲಿ ಹನ್ನೊಂದು ರಸ್ತೆಗಳು ಕೂಡುವ ಒಂದು ಚೌಕವಿದೆ. ರಸ್ತೆ ಸಂಚಾರಕ್ಕೆ ಅಡ್ಡಿಯಾಗದಂತೆ, ಆಕಸ್ಮಿಕಗಳು ಸಂಭವಿಸದಂತೆ ಸ್ವಯಂಚಾಲಿತ ವಿದ್ಯುದ್ದೀಪ ಗಳು ನಿಯಂತ್ರಿಸುತ್ತವೆ. ವೃದ್ಧರೂ, ಅಶಕ್ತರೂ ತುರ್ತಾಗಿ ರಸ್ತೆ ದಾಟುವ ಅವಶ್ಯಕತೆ ಯಿದ್ದರೆ, ರಸ್ತೆಯ ಪಕ್ಕದಲ್ಲಿರುವ ಒಂದು ಗುಂಡಿಯನ್ನು ಒತ್ತಿದರೆ ಕೆಂಪು ದೀಪ ಹೊತ್ತಿ ವಾಹನ ಸಂಚಾರ ನಿಲ್ಲುತ್ತದೆ. ರಸ್ತೆ ದಾಟಿದ ಕೂಡಲೇ ಮಾಮೂಲಿಯಂತೆ ವಾಹನ ಸಂಚಾರ ಪ್ರಾರಂಭವಾಗುತ್ತದೆ. ಕೆಲವೊಮ್ಮೆ ಸಂಚಾರ ನಿಯಂತ್ರಿಸುವ ಫಲಕವನ್ನು ಹಿಡಿದು ಕೆಲವು ಸ್ವಯಂಸೇವಕ ವೃದ್ಧರೂ ಶಾಲೆಯ ಮಕ್ಕಳು ರಸ್ತೆ ದಾಟಲು ಸಹಕರಿಸು ತ್ತಾರೆ. ಈ ಕೆಲಸ ವೃದ್ಧರಿಗೆ ಆನಂದ ನೀಡುವ ಒಂದು ಹವ್ಯಾಸ. ಇದರಿಂದ ಮಕ್ಕಳೂ ಸುರಕ್ಷಿತ.

ಇಲ್ಲಿನ ಪ್ರೇಕ್ಷಣೀಯ ಸ್ಥಳಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಶಾಪಿಂಗ್ ಸೆಂಟರ್‌ಗಳಲ್ಲಿ, ರೈಲು–ಬಸ್ಸು, ನಿಲ್ದಾಣಗಳಲ್ಲಿರುವ ಶೌಚಾಲಯಗಳು ವಿಶಿಷ್ಟ ರೀತಿಯವು. ಈ ಶೌಚಾಲಯಗಳಲ್ಲಿ ಅಂಗವಿಕಲರಿಗೆ, ಮೊಲೆಯೂಡಿಸುವ ತಾಯಂದಿರಿಗೆ, ಮಹಿಳೆ ಯರಿಗೆ ಮತ್ತು ಪುರುಷರಿಗೆ ಹೀಗೆ ನಾಲ್ಕು ಪ್ರತ್ಯೇಕ ವಿಭಾಗಗಳಿವೆ. ಇಲ್ಲಿ ತಣ್ಣೀರು, ಬಿಸಿನೀರು ಮತ್ತು ಸೋಪು ಹಾಗೂ ಟಿಶ್ಯೂ ಪೇಪರುಗಳು, ಒದ್ದೆಯಾದ ಕೈ ಒಣಗಿಸಲು ಬಿಸಿ ಹವೆ ನೀಡುವ ಸ್ವಯಂಚಾಲಿತ ಉಪಕರಣ ಎಲ್ಲ ಸ್ವಚ್ಛ ಅಚ್ಚುಕಟ್ಟು. ಈ ಶೌಚಾಲಯವನ್ನು ಸ್ವಚ್ಛಗೊಳಿಸದಿದ್ದರೆ ಮತ್ತು ಸ್ವಚ್ಛವಿಲ್ಲದೆ ನಿಮಗೇನಾದರೂ ತೊಂದರೆ ಯಾಗಿದ್ದರೆ ದೂರು ನೀಡಲು, ಅಥವಾ ಸುಧಾರಣೆಗಾಗಿ ಸಲಹೆ ಸೂಚನೆ ನೀಡಲು ಇಚ್ಛಿಸುವಿರಾದರೆ, ನೀವು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ವ್ಯಕ್ತಿಯ ಬಗ್ಗೆ ಪೂರ್ಣ ಮಾಹಿತಿ ಇಲ್ಲಿ ನಮೂದಿಸಲ್ಪಟ್ಟಿರುತ್ತದೆ. ತಮ್ಮ ದುರ್ಗಂಧ ಬೀರುತ್ತಾ

ದೂರದಿಂದಲೇ ಆಕರ್ಷಿಸುವ ನಮ್ಮೂರ ಮಾದರಿ ಶೌಚಾಲಯಗಳಾಗಲೀ ಸಾರ್ವಜನಿಕ ಬಯಲು ಶೌಚಾಯಲಗಳಾಗಲೀ ಇಲ್ಲಿಲ್ಲ.

ಸುಮಾರು ಒಂದು ತಿಂಗಳೀಗೂ ಹೆಚ್ಚಿನ ಅವಧಿಯ ನನ್ನ ವಾಸ್ತವ್ಯದಲ್ಲಿ ಮನೆಯ ಒಳಗಾಗಲೀ ಸಂಚರಿಸಿದ ಯಾವುದೇ ಸ್ಥಳದಲ್ಲಾಗಲೀ ಒಂದೇ ಒಂದು ನೊಣ ಅಥವಾ ಸೊಳ್ಳೆ ಕಾಣಸಿಗಲಿಲ್ಲವೆಂದರೆ ಆಶ್ಚರ್ಯವೆನಿಸಬಹುದಲ್ಲವೆ? ಇವರಿಗೆ ಸ್ವಚ್ಛತೆಯ ಬಗ್ಗೆ ತೀವ್ರ ಕಳಕಳಿ.

ಇಲ್ಲಿ ಪುರುಷರಂತೆ ಮಹಿಳೆಯರೂ ಧೂಮಪಾನ ಮಾಡುತ್ತಾರೆ. ಆದರೆ ನಿಶ್ಚಿತ ಜಾಗದಲ್ಲಲ್ಲದೆ ಮನೆಯ ಒಳಗಾಗಲೀ ಹೊರಗಾಗಲೀ ಸಿಗರೇಟಿನ ತುಂಡು ಕಸ ಕಡ್ಡಿ ಕಾಗದದ ಚೂರುಗಳು ಕಾಣಸಿಗುವುದಿಲ್ಲ. ಕಂಡಕಂಡಲ್ಲಿ ಉಗುಳುವಂತಿಲ್ಲ. ಆಕಸ್ಮಾತ್ ಸೀನಿದರೆ, ಕೆಮ್ಮಿದರೆ, ತೇಗಿದರೆ ಪಕ್ಕದವರಿಂದ ಕ್ಷಮೆ ಕೇಳಬೇಕು. ಮನೆಯ ಒಳಗೂ ಹೊರಗೂ ಸಂಗ್ರಹವಾದ ಎಲ್ಲ ರೀತಿಯ ಕಸ ಕಶ್ಮಲ ಕೊಳೆಯನ್ನು ಸಂಗ್ರಹಿಸುವ ಮತ್ತು ರೀಸೈಕ್ಲಿಂಗ್ ಮೂಲಕ ಪುನಃ ಬಳಸುವ ಕಟ್ಟುನಿಟ್ಟಾದ ವ್ಯವಸ್ಥೆ ಇಲ್ಲಿನ ವೈಶಿಷ್ಟ್ಯಗಳಲ್ಲೊಂದು.

ತಮ್ಮ ಹವ್ಯಾಸಗಳಿಂದ ಇತರರಿಗೆ ತೊಂದರೆಯಾಗಬಾರದೆಂಬ ಕಳಕಳಿ ಇವರಿಗೆ This is a non smoking hospital. This is non smoking are ಮೊದಲಾದ ಸೂಚನಾ ಫಲಕಗಳಿರುತ್ತವೆ. ಪಕ್ಕದ ಮನೆಯ ರೋಗಿಗೋ ವೃದ್ಧರಿಗೋ ತೊಂದರೆಯಾಗದಂತೆ ಸಣ್ಣ ದನಿಯಲ್ಲಿ ಟಿ.ವಿ., ಟೇಪ್ ರೆಕಾರ್ಡರ್‌ಗಳನ್ನಾಲಿಸುತ್ತಾರೆ. ಕಂಡ ಕಂಡಲ್ಲಿ ಕುಡಿದು ಮಲಗುವುದಿಲ್ಲ. ಮಾದಕ ಪೇಯ ಧೂಮಪಾನ ಎಲ್ಲವೂ ಶಿಸ್ತುಬದ್ಧ. ನಮ್ಮ ನಾಡಿನ ಪ್ರಬುದ್ಧ ವೈದ್ಯಕೀಯ ಮಹಾವಿದ್ಯಾಲಯದ ಆಸ್ಪತ್ರೆಯ ಮಹಡಿ ಮೆಟ್ಟಲುಗಳ ಮೂಲೆ ಗಳಲ್ಲಿ ಎಲೆ ಅಡಕೆಯ ಉಗುಳಿನ ರಾಶಿ, ಹೊರಗೋಡೆಗಳ ಪಕ್ಕದ ಮಲಮೂತ್ರಗಳ ವಾಸನೆ ತಪ್ಪಿಸುವ ಸಲುವಾಗಿ ಆಯಾ ಜಾಗಗಳಲ್ಲಿ ದೇವರ ಹಾಗೂ ಪವಿತ್ರ ಮಂದಿರಗಳ ಫೋಟೋ ಅಂಟಿಸಲಾಯಿತು. ಆದರೆ ಈ ಆಧ್ಯಾತ್ಮಿಕ ಭಯವೂ ನಿರೀಕ್ಷಿತ ಪರಿಣಾಮ ಬೀರಲಿಲ್ಲ. ನಮ್ಮ ಅಭ್ಯಾಸ ಬಲ ನಮ್ಮನ್ನು ಬಿಡಬೇಕಲ್ಲ! ಹೆಚ್ಚಿನ ವಿವರಣೆ ಬೇಡ ಮೇಲ್ಮುಖವಾಗಿ ಉಗುಳಿದರೆ. . . !

ಹಮಾರಾ ಭಾರತ್ ಮಹಾನ್. . .!

ಒಮ್ಮೆ ಬಸ್ಸಿನ no smoking ಫಲಕದ ಕೆಳಗಡೆ ಒಬ್ಬರು ಸಿಗರೇಟಿನ ಹೊಗೆ ಹಾರಿಸುತ್ತಿದ್ದರು. ಪಕ್ಕದಲ್ಲಿ ಕುಳಿತ ಮಹಿಳೆಗೆ ವಾಂತಿ ಬರುವ ಅನುಭವ ಅನುಭವಿ ವೃದ್ಧರೊಬ್ಬರು ಹೊಗೆಯುಗುಳುತ್ತಿರುವ ಮಹಾನುಭಾವರನ್ನು ಕುರಿತು ಸ್ವಾಮಿ, ನಿಮ್ಮ ಸಿಗರೇಟಿನ ಹೊಗೆಯಿಂದ ಈಕೆಗೆ ತೊಂದರೆಯಾಗುತ್ತಿದೆ. ದಯವಿಟ್ಟು ಕೆಡಿಸಿ ಅಥವಾ ಕೆಳಗಿಳಿದಾದರೂ ಸೇದಿರಿ ಎಂಬುದೇ ತಡ, ಮೈಮೇಲೆ ಬೀಳುವವರಂತೆ ಸುಮ್ಮನೆ ಕೊತ್ಕೋಳ್ರೀ, ನಿಮ್ಮ ಪಾಡಿಗೆ, ನಿಮ್ಮ ಉಪದೇಶ ಬೇಡ ಎಂದು ಜಗಳಕ್ಕೇ ಶುರು ಮಾಡಿದ

ಆ ಮಹಾನುಭಾವ, ವೃದ್ಧರು ಸ್ವಲ್ಪ ದನಿ ಏರಿಸಿ ಮಾತನಾಡ ತೊಡಗಿದರು. ಇದ್ದಕ್ಕಿದ್ದಂತೆ 3–4 ಜನ ತರುಣರು ಒಟ್ಟಿಗೇ "ರೀ ನೀವ್ಯಾರ್ರೀ ಅವರನ್ನ ಕೇಳೋಕೆ, ಅವರು ಸ್ವಂತದ ಹಣಕೊಟ್ಟು ಸಿಗರೇಟು ಕೊಂಡು ಸೇರಿದರೆ ನಿಮ್ಮ ತಾತನ ಗಂಟು ಖರ್ಚಾಗುತ್ತೇನ್ರೀ? ಅವರಿಗೆ ಸಿಗರೇಟು ಸೇದಿ ಕಾಯಿಲೆ ಬಂದರೆ ಆಸ್ಪತ್ರೆ ಖರ್ಚು ಕೇಳೋಕೆ ನಿಮ್ಮನೆಗೆ ಬರೋಲ್ಲಾರೀ. ತೆಪ್ಪಗಿರಿ" ಎಂದು ವ್ಯಂಗ್ಯವಾಡತೊಡಗಿದರು. ಸದ್ಯ ಮುದುಕರನ್ನು ಬಹುವಚನದಿಂದ ಸಂಬೋಧಿಸುವಷ್ಟು ಗೌರವಭಾವನೆ ಆ ಬಿಸಿ ರಕ್ತದ ತರುಣಗಿರಿತ್ತಲ್ಲ! ಬಸ್ಸಿನಲ್ಲಿದ್ದ 25–30 ಜನ ಸಹ ಪ್ರಯಾಣಿಕರಲ್ಲಿ ಯಾರೂ ನಾನೂ ಸೇರಿದಂತೆ ಆ ಮುದುಕರ ಬಗ್ಗೆ ಸಹಾನುಭೂತಿ ಸೂಚಿಸಲು ಅವರ ಮಾತನ್ನು ಸಮರ್ಥಿಸಲು ಮುಂದಾಗಲಿಲ್ಲ. ಪರಿಸ್ಥಿತಿ ಹಾಗಿತ್ತು. ಇದು–ನಮ್ಮ ದೇಶ ನಮ್ಮ ನಾಗರೀಕತೆ!

ಇಲ್ಲಿನ ವಾತಾವರಣದಲ್ಲಿ ಧೂಳಿಲ್ಲ. ನೂರಾರು ಮೈಲಿ ವೇಗದಲ್ಲಿ ಸಂಚರಿಸುವ ವಾಹನಗಳು ಹೊಗೆಯುಗುಳುವದಿಲ್ಲ ಶಿಸ್ತುಬದ್ಧವಾದ ಸಂಚಾರಿ ನಿಯಮಗಳ. ಪಾಲನೆಯಿಂದಾಗಿ ಕರ್ಕಶಧ್ವನಿ ಮಾಡುವ ಅಗತ್ಯತೆ ಬೀಳುವುದಿಲ್ಲ. ಆದ್ದರಿಂದ ಪರಿಸರ ಮಾಲಿನ್ಯ, ಶಬ್ಧ ಮಾಲಿನ್ಯ, ವಾಯು ಮಾಲಿನ್ಯ, ಜಲ ಮಾಲಿನ್ಯದ ನಿವಾರಣೆಗೆ ವಿಶೇಷ ಆಂದೋಲನ ನಡೆಸಬೇಕಾದ ಪ್ರಶ್ನೆಯೇ ಇಲ್ಲಿ ಉದ್ಭವಿಸುವುದಿಲ್ಲ.

ದಕ್ಷತೆ ಮತ್ತು ತ್ವರಿತ ಸೇವೆಯಿಂದಾಗಿ ಇಲ್ಲಿನ ಪೊಲೀಸ್ ಇಲಾಖೆ ಎಲ್ಲರ ಮೆಚ್ಚುಗೆಗಳಿಸಿದೆ. ಗಂಟೆಗೆ 110 ಮೈಲಿ ವೇಗದಲ್ಲಿ ಒಂದರ ಹಿಂದೊಂದರಂತೆ ಹಗಲು ರಾತ್ರಿಯೆನ್ನದೆ ಸಂಚರಿಸುವ ವಾಹನಗಳ ವೇಗವನ್ನೂ ವಾಹನ ಸಂಚಾರಿ ನಿಯಮಗಳನ್ನೂ ನಿಯಂತ್ರಿಸುವುದಲ್ಲದೆ ಸಂಭವಿಸಬಹುದಾದ ಅಪಘಾತ ಮತ್ತು ಅಗತ್ಯ ಬೀಳುವ ತರ್ತು ಸೇವೆಗಾಗಿ ಕೂಡಲೇ ಸ್ಪಂದಿಸುತ್ತಾರೆ. ಒಂದೋ ಇವರೇ ಸ್ವತಃ ಪ್ರತ್ಯಕ್ಷದರ್ಶಿಗಳಾಗಿದ್ದು ಅಥವಾ ಅಲ್ಲಲ್ಲಿ ಅಳವಡಿಸಿದ ಸ್ವಯಂಚಾಲಿತ ಕ್ಯಾಮರಾಗಳಿಂದ ಸಂದೇಶ ಪಡೆದು ಕೂಡಲೇ ಕಾರ್ಯತತ್ಪರರಾಗುತ್ತಾರೆ. ಇಲೆಕ್ಟ್ರಾನಿಕ್ ಮತ್ತು ಕಂಪ್ಯೂಟರ್ ಮಾಧ್ಯಮಗಳ ಮೂಲಕ ದೇಶದ ಯಾವುದೇ ಮೂಲೆಯಲ್ಲಿ ಏನೇ ನಡೆದರೂ ಕೇಂದ್ರ ಕಛೇರಿಗೆ ಸಂದೇಶ ತಲುಪುತ್ತದೆ. ಕೂಡಲೇ ಆಯಾ ಸ್ಥಳ–ವ್ಯಕ್ತಿಗೆ ಮರುಸಂದೇಶ ರವಾನೆಯಾಗುತ್ತದೆ.

ನಮ್ಮ ದೇಶದ ಪೊಲೀಸು ಇಲಾಖೆಯ ದಕ್ಷತೆಗೆ, ಪ್ರಾಮಾಣಿಕತೆಗೆ, ರಾಜಕಾರಣಿಗಳ ಒತ್ತಡದ ಕಿಲುಬು ಹಿಡಿದಿದೆ. ಇಂಗ್ಲೆಂಡಿನ ಪೊಲೀಸು ಇಲಾಖೆಗೆ ಒದಗಿಸಲಾದ ಅತ್ಯಾಧುನಿಕ ಇಲೆಕ್ಟ್ರಾನಿಕ್, ಕಂಪ್ಯೂಟರ್ ಸಾಧನಗಳನ್ನು ನೀಡಿದರೆ, ಪ್ರಾಮಾಣಿಕತೆಯನ್ನು ಪುರಸ್ಕರಿಸಿದರೆ, ನಾಗರೀಕರು ಸಹಕರಿಸಿದರೆ, ರಾಜಕಾರಣಿಗಳ ಹಸ್ತಕ್ಷೇಪ ಇಲ್ಲವಾದರೆ, ಅಪರಾಧಿಗಳಿಗೆ ನ್ಯಾಯೋಚಿತ ಶಿಕ್ಷೆ ದೊರಕುವುದಾದರೆ, ನಮ್ಮ ಪೊಲೀಸರು ಜಗತ್ತಿನಲ್ಲೇ ಅತಿಶ್ರೇಷ್ಠರೆನಿಸಿಕೊಳ್ಳುವುದರಲ್ಲಿ ಸಂದೇಹವಿಲ್ಲ. ಅಪರಾಧ–ಆಕಸ್ಮಿಕಗಳ ಸಂಖ್ಯೆ ಇಳಿಮುಖವಾಗುವುದರಲ್ಲೂ ಅನುಮಾನವಿಲ್ಲ.

ದೂರದರ್ಶನ, ವೃತ್ತಪತ್ರಿಕೆ ಮೊದಲಾದ ಮಾಧ್ಯಮಗಳು ಇಲ್ಲಿ ಅತ್ಯಂತ ಪ್ರಭಾವಶಾಲಿಯಾಗಿದೆ. ಇತ್ತೀಚೆಗೆ ನಡೆದ ಒಂದು ಸಂಗತಿ. ಇಲ್ಲಿನ ಮಂತ್ರಿಗಳೊಬ್ಬರು "15–20 ವರ್ಷಗಳ ಹಿಂದೆ ಓರ್ವ ಗೆಳತಿ (Girl friend) ಯೊಂದಿಗೆ ಇಂತಹ ಹೋಟೇಲ್ ನಲ್ಲಿದ್ದರು" ಎಂಬ ಸುದ್ಧಿ ಬೆಳಗಿನ ಪತ್ರಿಕೆಯೊಂದರಲ್ಲಿ ಪ್ರಕಟವಾಯಿತು. ಸಂಜೆಯಾಗುವಷ್ಟರಲ್ಲಿ ರಾಜಕೀಯ ವರ್ತುಲದಲ್ಲಿ ಬಿಸಿಬಿಸಿ ಚರ್ಚೆ, ಮುಂದಿನ ಬೆಳವಣಿಗೆ ಎಷ್ಟು ಶೀಘ್ರ! ಸಚಿವರ ರಾಜಿನಾಮೆ–ಅಂಗೀಕಾರ, ದೂರದರ್ಶನದವರೂ ಸೇರಿದಂತೆ ವಾರ್ತಾ ಮಾಧ್ಯಮದವರಿಂದ ನಿರ್ಗಮನ ಸಚಿವರ ಸಂದರ್ಶನ. ಯಾವುದೇ ಉದ್ವೇಗವಿಲ್ಲದೆ, ಸಮಾಧಾನದಿಂದ ಸಚಿವರ ಉತ್ತರ "No Comments Please" ನಾನು ನಮ್ಮ ದೇಶದ ಕಾನೂನನ್ನು ಗೌರವಿಸುತ್ತೇನೆ. ಅಭಿಪ್ರಾಯವನ್ನೂ ಮನ್ನಿಸುತ್ತೇನೆ. ಭ್ರಷ್ಟಾಚಾರದ ಆರೋಪದ ಮೇಲೆ ಜೈಲಿಗೆ ಹೋಗುವ, ಜೈಲಿನಲ್ಲಿದ್ದೂ ರಾಜ್ಯದ ಆಡಳಿತವನ್ನು ನಿಯಂತ್ರಿಸುವ, ಆರೋಪಪಟ್ಟಿ ಸಲ್ಲಿಸದಂತೆ, ಆರೋಪ ಸಾಬೀತುಪಡಿಸ ದಂತೆ ವರ್ಚಸ್ಸು ಬೀರುವ ಮಂತ್ರಿಮಹೋದಯ ರಂತಹ ರಾಜಕಾರಣಿಗಳಿಂದ ನಮ್ಮ ದೇಶ ಉದ್ಧಾರವಾಗುವ ಕಾಲ ಬೇಗ ಬರಲಿ! ಹಮ್ ಬುಲ್ ಬುಲೇ ಹೈಂ ಇಸಕೀ "ವಂದೇ ಮಾತರಂ"!

ಗೃಹಿಣಿಯರಿಗೆ ಅವರವರ ಅಭಿರುಚಿಗೆ ತಕ್ಕಂತೆ ವಿಶೇಷ ಶಿಕ್ಷಣ–ತರಬೇತಿ ನೀಡುವ ಅನೇಕ ವಿಶ್ವವಿದ್ಯಾಲಯಗಳು ಇಲ್ಲಿವೆ. ನಾಲ್ಕು ತಿಂಗಳ ಶಿಕ್ಷಣದ ಅವಧಿಯಲ್ಲಿ ಶೈಕ್ಷಣಿಕ ವಸ್ತುಗಳು (ಪುಸ್ತಕ, ನೋಟ್ಸ್ ವಗೈರೆ) ಪ್ರಯಾಣಭತ್ಯೆ, ಚಿಕ್ಕ ಮಗುವಿದ್ದರೆ ಅದನ್ನು ಸಾಕಲು ವಿಶೇಷ ಭತ್ಯೆಯೊಂದಿಗೆ ಉಚಿತ ಶಿಕ್ಷಣ ನೀಡಲಾಗುತ್ತದೆ.

(ಹನ್ನೆರೆಡು ವರ್ಷದೊಳಗಿನ?) ಚಿಕ್ಕಮಕ್ಕಳನ್ನು ಮಾತ್ರ ಸ್ವತಂತ್ರ್ಯವಾಗಿ ಮನೆಯಲ್ಲಿ ಬಿಟ್ಟು ನೌಕರಿಗೋ, ಬೇರೆಲ್ಲಿಗೋ ಹೋಗುವಂತಿಲ್ಲ. ಅಂತಹ ಸಂದರ್ಭಗಳಲ್ಲಿ ದಾದಿಗಳ ನೇಮಕಾತಿಗೆ ವಿಶೇಷ ಭತ್ಯೆ ಸರಕಾರದಿಂದ ಲಭಿಸುತ್ತದೆ.

ಇಲ್ಲಿನ ದೂರದರ್ಶನದಲ್ಲಿ ಶೈಕ್ಷಣಿಕ ಮಹತ್ವದ ಅನೇಕ ಕಾರ್ಯಕ್ರಮಗಳು ಪ್ರಸಾರವಾಗುತ್ತವೆ. ಒಂದು ವಿಪರ್ಯಾಸವೆಂದರೆ ಇಲ್ಲಿನ ಜನರಿಗೆ ದನದ ಮಾಂಸವನ್ನು (ಬೀಫ್) ತಿನ್ನುವುದು, ಪ್ರಾಣಿಗಳನ್ನು ಸಾಕುವುದು ಒಂದು ಹವ್ಯಾಸ. ಒಂದು ಹಾವುರಾಣಿಗೆ ಅರಿವಳಿಕೆ ನೀಡಿ ಅದರ ಒಂದು ಕಾಲಿನಿಂದ ಮುಳ್ಳನ್ನು ತೆಗೆದು ಪಟ್ಟಿಕಟ್ಟಿ ಗುಣಪಡಿಸಿದುದನ್ನೂ ದೂರದರ್ಶನದಲ್ಲಿ ತೋರಿಸಲಾಯಿತು. ನಾಯಿ, ಬೆಕ್ಕು ಮೊದಲಾದ ಪ್ರಾಣಿಗಳ ಮನಃಶಾಸ್ತ್ರವನ್ನು ಅಭ್ಯಾಸ ಮಾಡುವವರೂ ಇದ್ದಾರೆ. ಈ ನಾಯಿಗೆ ಹಸಿವಾಗಿದೆ, ಬೆಕ್ಕಿಗೆ ಬೇಸರವಾಗಿದೆ, ಈ ಪ್ರಾಣಿಗೆ ತಲೆ ಸಿಡಿಯುತ್ತಿದೆ. ಇದಕ್ಕೆ ಸಂಗಾತಿ ಬೇಕೆನಿಸುತ್ತದೆ ಎಂದು ಮುಂತಾಗಿ ಇವರು ಪ್ರಾಣಿಗಳ ಭಾವನೆಗಳನ್ನು ವಿಶ್ಲೇಷಿಸಬಲ್ಲರು. ಇಲ್ಲಿ ಜೇಡ, ಇಲಿ ಎಲ್ಲವನ್ನೂ ಸಾಕುವ ಪ್ರಾಣಿಪ್ರಿಯರಿದ್ದಾರೆ. ನೀವು ಸಾಕುತ್ತಿರುವ ನಾಯಿ, ಬೆಕ್ಕುಗಳಿಗೆ ಸರಿಯಾಗಿ ಆಹಾರ ನೀಡುತ್ತಿಲ್ಲವೆಂದೋ, ಅವುಗಳನ್ನು ಸರಿಯಾಗಿ ಆರೈಕೆ ಮಾಡುತ್ತಿಲ್ಲವೆಂದೋ ಅಕ್ಕಪಕ್ಕದವರು ಯಾರಾದರೂ ದೂರಿಟ್ಟ

ರೆಂದಿಟ್ಟುಕೊಳ್ಳಿ. ಕೂಡಲೇ ಅಂತಹ ಪ್ರಾಣಿಯನ್ನು ಸರಕಾರ ವಶಪಡಿಸಿಕೊಳ್ಳುತ್ತದೆ. ಒಂದು ವೇಳೆ ನೀವು ಯಾವುದಾದರೂ ಪ್ರಾಣಿಯನ್ನು ಸಾಕುವ ಬಯಕೆ ವ್ಯಕ್ತಪಡಿಸಿದರೆ ನಿಮ್ಮ ಆದಾಯ, ಅದನ್ನು ಸಾಕುವ ಮನೋವೃತ್ತಿ, ಇತರೆ ಸವಲತ್ತುಗಳು ಎಲ್ಲವನ್ನೂ ದೃಢೀಕರಿಸಿಕೊಂಡು ಸಾಕಲು ಅನುಮತಿ ನೀಡಲಾಗುತ್ತದೆ. ಸಾಕು ಪ್ರಾಣಿಗಳ ಬಗ್ಗೆ ಅಲಕ್ಷ್ಯವೂ ಒಂದು ಅಪರಾಧವೆಂದು ಪರಿಗಣಿಸಲ್ಪಡುತ್ತದೆ.

ಒಂದು ಇರ್ಗಜಿಯ ತುದಿಯಲ್ಲಿ ಅಳಿಲೊಂದು ವಾಸವಾಗಿತ್ತು. ಇಗರ್ಜಿಯ ಮಧ್ಯದಲ್ಲಿ ನವೀಕರಿಸಲ್ಪಟ್ಟು ದುರಸ್ತಿಯಾದುದರಿಂದ ಅದಕ್ಕೆ ಕೆಳಗಿಳಿಯಲು ಸಾಧ್ಯವಾಗಲಿಲ್ಲ. ಆಹಾರವಿಲ್ಲದೇ ಸಾಯುವ ಸ್ಥಿತಿಯಲ್ಲಿದ್ದ ಅದರ ರಕ್ಷಣೆಗಾಗಿ ಅಗ್ನಿಶಾಮಕ ದಳಕ್ಕೆ ಕರೆ ನೀಡಲಾಯಿತು. ಅವರು ಬೋನಿನಲ್ಲಿ ಅದನ್ನು ಹಿಡಿದು ಸುರಕ್ಷಿತ ಸ್ಥಳಕ್ಕೆ ಬಿಡುವ ದೃಶ್ಯ– ಈ ದೃಶ್ಯವನ್ನು ಕಾತರ–ಆತಂಕಗಳಿಂದ ನೋಡುವ ಜನ ಸಮುದಾಯ– ಎಲ್ಲವನ್ನೂ ಕ್ಯಾಮರಾದಲ್ಲಿ ಸೆರೆ ಹಿಡಿದು ದೂರದರ್ಶನದಲ್ಲಿ ತೋರಿಸ ಲಾಯಿತು.

ಮಾರುಕಟ್ಟೆ ಸಮುಚ್ಚಯಗಳಲ್ಲಿನ ವ್ಯಾಪಾರ ಪ್ರೋತ್ಸಾಹಿಸುವ ಸಲುವಾಗಿ ವಿವಿಧ ಸ್ಪರ್ಧೆಗಳನ್ನು ನಡೆಸಿ ಬಹುಮಾನ ನೀಡುವ ಪ್ರಾಯೋಜಕರ ಕಾರ್ಯಕ್ರಮವನ್ನೂ ದೂರದರ್ಶನದಲ್ಲಿ ನೋಡಬಹುದು. ಇಲ್ಲಿನ ದೂರದರ್ಶನದ ವಿವಿಧ ಮನರಂಜನೆಯ ಕಾರ್ಯಕ್ರಮಗಳ ನಡುವೆ ಹಿತಮಿತವಾಗಿ ಜಾಹೀರಾತನ್ನು ತೋರಿಸುತ್ತಾರೆ.

ನಮ್ಮ ದೂರದರ್ಶನದಲ್ಲಿ ಅನೇಕ ಜಾಹೀರಾತುಗಳ ನಡುವೆ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಾರಲ್ಲ! ಜಾಹಿರಾತುಗಳೇ ನಮ್ಮ ದೂರದರ್ಶನದ ಆದಾಯದ ಮೂಲ. ಪ್ರಾಯೋಜಕರೇ ನಮ್ಮ ದೂರದರ್ಶನದ ಉಸಿರು.

ಹದಿಹರೆಯದ ತರುಣ–ತರುಣಿಯರಿಗಾಗಿ ದೂರದರ್ಶನದಲ್ಲಿ ವಿಶೇಷ ಕಾರ್ಯಕ್ರಮ ನಡೆಯುತ್ತಲೇ ಇರುತ್ತದೆ. ದೂರದರ್ಶನದ ಸಿಬ್ಬಂದಿ ಸ್ಟುಡಿಯೋದಲ್ಲಿ ಮೂವರು ತರುಣಿಯರನ್ನು ವೀಕ್ಷಕರಿಗೆ ಪರಿಚಯಿಸುತ್ತಾರೆ. ನಂತರ ಒಬ್ಬ ತರುಣನನ್ನು ಕರೆಯುತ್ತಾರೆ. ಆ ತರುಣ ತನ್ನ ಇಷ್ಟಾನಿಷ್ಟ, ಆಸಕ್ತಿ, ಹವ್ಯಾಸಗಳನ್ನು ಕುರಿತಂತೆ ಮೂವರೂ ತರುಣಿಯರಿಗೆ ಪ್ರಶ್ನೆಗಳನ್ನು ಕೇಳುತ್ತಾನೆ. ಅವರು ಹೇಳುವ ಜಾಣತನದ ಉತ್ತರ ಮತ್ತು ಅಭಿರುಚಿಯ ಮೇರೆಗೆ ಒಬ್ಬಳನ್ನು ತನ್ನ ಸಂಗಾತಿಯನ್ನಾಗಿ ಆರಿಸಿಕೊಳ್ಳುತ್ತಾನೆ. ಹೀಗೆಯೇ ಒಬ್ಬ ತರುಣಿ ಮೂವರು ತರುಣರಲ್ಲಿ ಒಬ್ಬ ತರುಣನನ್ನು ಆಯ್ದುಕೊಳ್ಳುವುದೂ ಉಂಟು. ಈ ಜೋಡಿ ನಿಶ್ಚಿತ ಸ್ಥಳದಲ್ಲಿ ವಿಹರಿಸುವಂತೆ ವ್ಯವಸ್ಥೆ ಮಾಡಲಾಗಿರುತ್ತದೆ. ಮುಂದಿನ ಕಾರ್ಯಕ್ರಮದಲ್ಲಿ ಈ ಜೋಡಿಯನ್ನು ಪುನಃ ಸ್ಟುಡಿಯೋಕ್ಕೆ ಕರೆಸಲಾಗುತ್ತದೆ. ಇಬ್ಬರನ್ನೂ ಅವರವರ ಅನುಭವನದ ಬಗ್ಗೆ ಪ್ರತ್ಯೇಕವಾಗಿ ಕೆದಕಿ, ಬೆದಕಿ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಅಭಿಪ್ರಾಯ–ಅಭಿರುಚಿ ಪರಸ್ಪರ ಭಿನ್ನವಾಗಿದ್ದು ಈ ಜೋಡಿ ಅಗಲುವುದೂ ಉಂಟು. ಅಥವಾ ಇಬ್ಬರ ವಿಹಾರ (ಮಧುಚಂದ್ರ?) ಸರಸಕ್ಕೆ ತಿರುಗಿ ಬಾಳಸಂಗಾತಿಗಳಾಗುವುದೂ ಉಂಟು. ಎಲ್ಲಾ

ಕಾರ್ಯಕ್ರಮಗಳಂತೆ ಇಲ್ಲೂ ಆಗಾಗ ಬ್ರೇಕ್ (ಜಾಹಿರಾತಿಗಾಗಿ ವಿರಾಮ) ಇರುತ್ತದೆ. ಆದರೆ ರಸಭಂಗಕ್ಕೆ ಎಡೆಯಿರುವುದಿಲ್ಲ.

ಮುಕ್ತ ಲೈಂಗಿಕ ಜೀವನಕ್ಕೆ ಇಲ್ಲಿ ವಿಪುಲ ಅವಕಾಶವಿದ್ದರೂ ಸಾಮಾಜಿಕ ವ್ಯವಸ್ಥೆಗೆ ಧಕ್ಕೆಯಾಗದಂತೆ ಜಾಗ್ರತೆ ವಹಿಸಲಾಗುತ್ತದೆ. ಶಾಲೆಗೆ ಹೋಗುವ ಒಬ್ಬ ಮುಗ್ಧ ಬಾಲಕಿ ತಾಯಿಯಾಗುತ್ತಾಳೆನ್ನಿ. ಈಕೆಯನ್ನು ಸಮಾಜ ಬಹಿಷ್ಕರಿಸುವುದಿಲ್ಲ. ಆಕೆಯ ಇಷ್ಟಕ್ಕನು ಗುಣವಾಗಿ ಆ ಮಗುವನ್ನು ಪೋಷಿಸುವ ವ್ಯವಸ್ಥೆಯನ್ನು ಸರಕಾರ ಮಾಡುತ್ತದೆ. ಪ್ರಸೂತಿ ವಿರಾಮದ ಬಳಿಕ ವ್ಯಾಸಂಗ ಮುಂದುವರಿಸಲು ಆಕೆಗೆ ಅನುವು ಮಾಡುತ್ತದೆ. ತನ್ನ ಮಾಜಿ ಪ್ರಿಯತಮನ ಮಕ್ಕಳೊಂದಿಗೆ ಈಗಿನ ಪತಿಯೊಡನೆ ಅಥವಾ ಮಾಜಿ ಪ್ರಿಯತಮೆಯ ಮಕ್ಕಳೊಂದಿಗೆ ಈಗಿನ ಸತಿಯೊಡನೆ ದಾಂಪತ್ಯ ಮುಂದುವರಿಸುವುದು ಇಲ್ಲಿ ಸಾಮಾನ್ಯ ಸಂಗತಿ.

ನಮ್ಮ ದೇಶದ ಅನೇಕ ನಿರುದ್ಯೋಗಿ ಪೋಲಿ ಹುಡುಗರ ಕೆಲವು ಲಕ್ಷಣಗಳುಳ್ಳ ಯುವಕರು ಇಲ್ಲೂ ಇದ್ದಾರೆ. ಆದರೆ ಸಾಮಾನ್ಯ ನಾಗರೀಕನಂತೆ ಬದುಕಲು ಸಾಕಾಗುವಷ್ಟು ನಿರುದ್ಯೋಗ ಭತ್ಯೆಯನ್ನು ಸರಕಾರ ಇವರಿಗೆ ನೀಡುತ್ತದೆ. ಶಿಕ್ಷಣದಲ್ಲಿ ಆಸಕ್ತಿ ಇರುವವರಿಗೆ ಅವರವರ ಅಭಿರುಚಿಗೆ ತಕ್ಕಂತೆ ಶಿಕ್ಷಣ ನೀಡಿ, ಸೂಕ್ತ ನೌಕರಿ ನೀಡುವುದು ಅಥವಾ ಶಿಕ್ಷಣ ಪಡೆಯಲಾಗದ ಸೋಮಾರಿಗಳನ್ನು ಇತರ ನಾಗರೀಕರಿಗೆ ಸಮನಾಗಿ ಸಾಕುವುದು ಎರಡೂ ತನ್ನ ಹೊಣೆಗಾರಿಕೆಯೆಂದು ಇಲ್ಲಿನ ಸರಕಾರ ಅರಿತಿದೆ.

ಇವರ ಅಂತರಂಗದಲ್ಲಿ ಹುದುಗಿರುವ ವರ್ಣಬೇಧ ನೀತಿ ಒಮ್ಮೊಮ್ಮೆ ಇದ್ದಕ್ಕಿದ್ದಂತೆ ಸ್ಫೋಟಗೊಳ್ಳುವುದನ್ನು ಸ್ಪಷ್ಟವಾಗಿ ಗುರುತಿಸಬಹುದಾದರೂ, ತೋರಿಕೆಗೆ ಎಲ್ಲರಿಗೂ ಎಲ್ಲಾ ಕ್ಷೇತ್ರಗಳಲ್ಲೂ ಸಮಾನ ಅವಕಾಶವೆಂಬುದು ಇವರ ಧೋರಣೆ. ಆದರೆ ಅತ್ಯುನ್ನತ ಹುದ್ದೆಗೇರುವವರು ಇವರೇ. ಸಮಯಾನುಸಾರ ದುಡಿಸಿಕೊಂಡು ಮೇಲೇರದಂತೆ ತುಳಿಯುವುದೂ ನಡೆಯುತ್ತಲೇ ಇರುತ್ತದೆ. ಸ್ವಾರ್ಥಸಾಧನೆಗಾಗಿ ಯಾವುದೇ ತಂತ್ರವನ್ನು ಬಳಸುವಷ್ಟು ಇವರು ಬುದ್ಧಿಶಾಲಿಗಳಿದ್ದಾರೆ.

ಕಂಪ್ಯೂಟರ್ ತಂತ್ರಜ್ಞಾನದಲ್ಲಿ ಇವರು ಸಾಕಷ್ಟು ಮುಂದಿದ್ದಾರೆ. ದಿನದ ಯಾವುದೇ ವೇಳೆಯಲ್ಲೂ ಯಾವುದೇ ವಾಣಿಜ್ಯ ಸಂಸ್ಥೆಯೊಂದಿಗೆ, ಕಚೇರಿಯೊಂದಿಗೆ, ಕಂಪೆನಿಯೊಂದಿಗೆ ದೂರವಾಣಿಯ ಕರೆಯಲ್ಲಿ ಆರ್ಥಿಕ ವ್ಯವಹಾರ ನಡೆಸಬಹುದು. ವಾಣಿಜ್ಯ ಸಂಕೀರ್ಣಗಳಲ್ಲೋ, ಇತರ ಕಡೆಗಳಲ್ಲೋ, ಅಳವಡಿಸಿದ ಯಂತ್ರಗಳ ಮೂಲಕ ನಿಮ್ಮ ಖಾತೆಯಲ್ಲಿರುವ ಹಣವನ್ನೂ ಪಡೆಯಬಹುದು. ಅಪರೂಪಕ್ಕೊಮ್ಮೆ ತಾಂತ್ರಿಕದೋಷ ಸಂಭವಿಸುವುದೂ ಉಂಟು. ಮರುದಿನ ಕಾರ್ಯವೇಳೆಯಲ್ಲಿ ಬ್ಯಾಂಕ್ ಅಧಿಕಾರಿಗಳನ್ನು ಫೋನ್ ನಲ್ಲಿ ಸಂಪರ್ಕಿಸಿದರೆ ಸಾಕು. ಎಲ್ಲವನ್ನೂ ಸರಿಪಡಿಸಿ ತೊಂದರೆಗಾಗಿ ಕ್ಷಮೆ ಕೋರುವುದಲ್ಲದೇ, ಮರು ಟಪಾಲಿನಲ್ಲೇ ನಿಮ್ಮ ವಿಳಾಸಕ್ಕೆ ಕ್ಷಮಾಪಣೆ ಕೋರುವ ವಿನಯಪೂರಿತ ಪತ್ರ ತಲುಪುತ್ತದೆ.

ಇವರಿಗೆ ಪರಿಚಿತರಿರಲಿ, ಅಪರಿಚಿತವಿರಲಿ, ದಿನದ ಯಾವುದೇ ಸಮಯದಲ್ಲಿ ಎಷ್ಟನೇ ಬಾರಿಯಾದರೂ ಸಂಭಾಷಿಸುವ ವಿಧಾನವನ್ನು ನಾವು ಇವರಿಂದ ಕಲಿಯ ಬೇಕು. ಈ ಸೌಜನ್ಯಪೂರಿತ ಸಂಭಾಷಣೆಗೆ ಲಿಂಗ, ವರ್ಣ, ವಯೋಬೇಧವಿಲ್ಲ. ಯಾವುದೇ ವ್ಯಾಪಾರಿ ಸಂಸ್ಥೆಯಲ್ಲಿ 'ಸೇಲ್ಸ್ ಗರ್ಲ್' ಆಗಿಯೋ 'ಸೇಲ್ಸ್ ಮನ್' ಆಗಿಯೋ ಅಥವಾ ಯಾವುದೇ ಸಾರ್ವಜನಿಕ ಸಂಪರ್ಕಾಧಿಕಾರಿಯೋ ಆಗಿದ್ದರಂತೂ ಮಾತಿ ನಿಂದಲೇ ನಿಮ್ಮನ್ನು ಮೋಡಿ ಮಾಡುತ್ತಾರೆ. 'ಹಾ. . .ಯ್. ..', 'ಗುಡ್ ಮಾರ್ನಿಂಗ್', 'ಗುಡ್ ಈವ್ ನಿಂಗ್', 'ಗುಡ್ ನೈಟ್', 'ಸ್ಸಾ. . . ರಿ', 'ಓ.ಕೆ.', 'ನೋ ಪ್ರಾಬ್ಲೆಮ್', 'ಥ್ಯಾಂಕ್ಯೂ', 'ಬಾಯ್' ಎಂದು ಮುಂತಾಗಿ ಗೌರವ ಸೂಚಕ ಪದಗಳನ್ನು ಅವಶ್ಯ ವಿದ್ದಾಗಲೆಲ್ಲ ಉಚ್ಚರಿಸುತ್ತಲೇ ಇರುತ್ತಾರೆ.

ಒಮ್ಮೆ ಮೂವತ್ತರ ಯುವಕನೊಬ್ಬ ಖಾಸಗೀ ವಿಮಾ ಕಂಪೆನಿಯೊಂದಿಗೆ ಅವೇಳೆಯಲ್ಲಿ ದೂರವಾಣಿಯಲ್ಲಿ ವ್ಯವಹರಿಸಬೇಕಾಯ್ತು. ಸ್ವಾಗತಕಾರಿಣಿಗೆ ಆತ ತನ್ನ ಹೆಸರು ಹೇಳುತ್ತಿದ್ದ. ಆತನದು A.Y. Ram ಎಂಬ ಕಲ್ಪಿತ ಹೆಸರೆಂದಿಟ್ಟುಕೊಳ್ಳಿ. ಆತ R- for River, A-for Apple, M-for Monkey ಎಂದು ತನ್ನ ಹೆಸರು ಬಿಡಿಸಿ ಹೇಳಿದ Initials ನ್ನೂ ವಿಸ್ತರಿಸಿ ಹೇಳಲು ಒತ್ತಾಯಿಸಿದರು. ಆತ 'ಅದು ಉದ್ದದ ಹೆಸರು ಅನಂತ ಪದ್ಮನಾಭ ಯೋಗ ನರಸಿಂಹ ಎಂದು ಉತ್ತರಿಸುತ್ತಾ ತೀರಾ ಅವಶ್ಯವಿದ್ದು, ಹತ್ತು ನಿಮಿಷ ಕೇಳುವ ಸಹನೆಯಿದ್ದರೆ ಹೇಳುತ್ತೇನೆ ಎಂದ. ಆಕೆ ಬರೆದುಕೊಳ್ಳತೊಡಗಿದಳು. ಎಂದು (ಅನಂತ ಪದ್ಮನಾಭ) ಅರ್ಧ ಹೆಸರು ಹೇಳುವಾಗಲೇ ಆಕೆ ಸುಸ್ತು.

'ಇದು ಯಾವ ರಾಷ್ಟ್ರದವರ ಹೆಸರು?'

ಆಕೆಯ ಪ್ರಶ್ನೆ.

"ಇಂಡಿಯನ್"–ಉತ್ತರ

ಮುಂದೆ 'ಯೋಗಾನರಸಿಂಹ' ನನ್ನು ಬರೆಯುವಷ್ಟು ಸಹನೆ ಆಕೆ ಉಳಿಯಲಿಲ್ಲ.

'Oh God, I am happy, I did not marry you' ಎಂದು ಆಕೆ ತಿಳಿಹಾಸ್ಯದ ಬುಗ್ಗೆ ಚಿಮ್ಮಿಸಿದಾಗ ದೂರವಾಣಿಯ ಎರಡೂ ತುದಿಗಳಲ್ಲಿ ಕೆಲವು ನಿಮಿಷಗಳ ತನಕ 'ಹ್ಹ ಹ್ಹ ಹ್ಹ'– ನಗೆಯ ಹೊನಲು. ತಮ್ಮ ಗ್ರಾಹಕರೊಂದಿಗೆ ಲಘು ಹಾಸ್ಯ, ಮೆಲುನಗೆ, ಸೌಜನ್ಯಪೂರಿತವಾಗಿ ವ್ಯವಹರಿಸುವುದನ್ನು ಬ್ರಿಟೀಷರ ಆಳ್ವಿಕೆಯ ಕಾಲದಲ್ಲಿ ನಾವು ಕಲಿತು ಗ್ರಾಹಕರನ್ನು ಖುಷಿಪಡಿಸುವ ಕಲೆಯನ್ನು ಮೈಗೂಡಿಸಿಕೊಂಡಿರುತ್ತಿದ್ದರೆ ಈಗ ಗ್ರಾಹಕರ ವೇದಿಕೆಗೆ ಕೆಲಸವೇ ಇರುತ್ತಿರಲಿಲ್ಲವಲ್ಲವೇ?

ಊರಿಂದೂರಿಗೆ ಅಥವಾ ಊರಿನೊಳಗೆ ಸಂಚರಿಸುವ ಬಸ್ಸುಗಳನ್ನು ನಿಲ್ಲಿಸಲು ರಸ್ತೆಯ ಬದಿಯಲ್ಲಿ ಪ್ರತ್ಯೇಕ ಸ್ಥಳವಿದೆ. ಈ ತಂಗುದಾಣಗಳು ಮಾಡೂ ಸೇರಿದಂತೆ ಎಲ್ಲವೂ ಪಾರದರ್ಶಕ ಗಾಜಿನಿಂದ ನಿರ್ಮಿತ. ಇದರ ಒಳಗಿರುವವರಿಗೆ ಹೊರಗಿನ ವಿದ್ಯಮಾನಗಳೆಲ್ಲವೂ ಸ್ಪಷ್ಟ ಗೋಚರ. ಹಾಗೆಯೇ ಧೂಳು, ಮಳೆ, ಗಾಳಿ, ಹೊಗೆಯಿಂದ

ರಕ್ಷಣೆ. (ಅಶ್ಲೀಲ ಬರಹಗಳಿಂದ ಗೋಡೆಗಳನ್ನು ಸಿಂಗರಿಸುವಂತಿಲ್ಲ.) ಈ ನಿಲುಗಡೆಯ ಜಾಗದಿಂದ ಸ್ವಲ್ಪ ಹಿಂದೆ ಮುಂದೆ ಗುರುತಿಸಿದ ಜಾಗದಲ್ಲಿ ಬೇರಾವುದೇ ವಾಹನ ನಿಲ್ಲಿಸುವುದು ಅಪರಾಧ. ಇಂತಹ ಬಸ್ಸುಗಳಲ್ಲಿ ಸಂಚರಿಸುವ ಪ್ರಯಾಣಿಕರ ಸಂಖ್ಯೆ ಬಹಳ ಕಡಿಮೆ. ಕೂಲಿಯವರೂ ಸಹ ನೀಟಾಗಿ ಪೋಷಾಕು ಧರಿಸಿ ಕಾರುಗಳಲ್ಲೇ ಸಂಚರಿಸುತ್ತಾರೆ. ವ್ಯಾಯಾಮ ಅಥವಾ ವಿಶೇಷ ಕಾರಣಗಳ ಹೊರತಾಗಿ ನಡೆದಾಡುವವರ ಸಂಖ್ಯೆ ವಿರಳ. ಸಿರಿವಂತರಿಗೆ ಹೊಸ ಹೊಸ ಮಾದರಿಯ ಕಾರುಗಳನ್ನು ಕೊಂಡು 10–20 ಸಾವಿರ ಮೈಲು ಓಡಿಸಿ, ಮಾರುವುದು ಮತ್ತೆ ಹೊಸತನ್ನು ಕೊಳ್ಳುವುದು ಒಂದು ಚಟ. ಇಂತಹ ಹಳೆಯ ನೂರಾರು ಕಾರುಗಳನ್ನು ಮಾರುವುದಕ್ಕಾಗಿಯೇ ಸಣ್ಣ ಸಣ್ಣ ಊರುಗಳಲ್ಲೂ ಗ್ಯಾರೇಜುಗಳಿವೆ. ಕಾರಿನ ಬಳಕೆ ಜಾಸ್ತಿಯಿರುವುದರಿಂದ ಸಾರ್ವಜನಿಕ ಮಹತ್ವದ ಸ್ಥಳಗಳಲ್ಲೋ, ವ್ಯಾಪಾರಿ ಕೇಂದ್ರಗಳಲ್ಲೋ ಮತ್ತು ಸಾಮಾನ್ಯ ಜಾಗಗಳಲ್ಲೂ ಸಹ ಕಾರುಗಳನ್ನು ನಿಲ್ಲಿಸುವುದೇ ಒಂದು ಸಮಸ್ಯೆ. ಕಾರುಗಳನ್ನು ಪಾರ್ಕು ಮಾಡುವುದಕ್ಕಾಗಿಯೇ ಕಟ್ಟಿಸಲಾದ 3–4 ಮಹಡಿಯ ವಿಶಾಲ ಕಟ್ಟಡಗಳೂ ಇವೆ. ಇಲ್ಲಿ ಕಾರುಗಳನ್ನು ನಿಲ್ಲಿಸಿದರೆ ಪ್ರತಿ ಗಂಟೆಗೆ ಒಂದು ಪೌಂಡು ಅಥವಾ ಇಂತಿಷ್ಟು ಪೌಂಡು ಎಂದು ಬಾಡಿಗೆ ನೀಡಬೇಕಾಗುತ್ತದೆ. ಇಂತಹ ಸ್ಥಳಗಳಲ್ಲಿ ನಿಮ್ಮ ಕಾರು ಒಳಗೆ ಪ್ರವೇಶಿದ ವೇಳೆಯನ್ನು ಸೂಚಿಸುವ ಕಾರ್ಡೊಂದನ್ನು ಯಂತ್ರವೊಂದರಿಂದ ಪಡೆದು ಹೊರಬರುವ ದಾರಿಯಲ್ಲಿ ಬಾಡಿಗೆ ತೆತ್ತು ಬರಬೇಕು. ತಪ್ಪಿಸಿಕೊಳ್ಳುವ ಕಳ್ಳದಾರಿಯಿಲ್ಲ.

ನಿಮ್ಮ ಮತೀಯ ಭಾವನೆಗಳನ್ನು ಕೆರಳಿಸುವ ಸಂಸ್ಕೃತಿಯನ್ನು ಅಪಹಾಸ್ಯಗೈಯುವ ಚಟುವಟಿಕೆಗಳು ಇಲ್ಲಿ ಕಡಿಮೆ. ಇಲ್ಲವೇ ಇಲ್ಲ ಎಂದು ಹೇಳಲಾಗದು. ಕಚ್ಚೆ ಪಂಚೆಯನ್ನು ಉಟ್ಟಿರುತ್ತೀರೆಂದುಕೊಳ್ಳಿ ಆ ಪಂಚೆ ಎಲ್ಲಿ ಸಿಗುತ್ತದೆ? ಏಕೆ ಉಡಬೇಕು? ಹೇಗೆ ಉಡಬೇಕು? ಎಂಬ ಪ್ರಶ್ನೆಗಳನ್ನು ಎದುರಿಸಬೇಕಾದೀತು. ನಿಮ್ಮ ಜನಿವಾರ ಕಾಣಿಸಿ ಕೊಂಡಿತೆನ್ನಿ. ಅದನ್ನು Sacred Thread ಎಂದಷ್ಟೇ ಹೇಳಿದರೆ ಸಾಲದು. ಮತ್ತುಷ್ಟು ವಿವರಣೆ ನೀಡಬೇಕಾದೀತು. ಪಂಚೆ ಉಡಿಸಬೇಕಾದೀತು. ಜನಿವಾರ – ಪಂಚೆಗಳ ಸಂಬಂಧವಾದ ವೈಜ್ಞಾನಿಕ ಸಂಕೇತವನ್ನೂ ತಿಳಿಸಬೇಕಾದೀತು.

ಭಾರತದ ಸಾಂಸ್ಕೃತಿಕ ಪರಂಪರೆ, ವೇದ ಶಾಸ್ತ್ರಾಧ್ಯಯನ, ಯಜ್ಞಯಾಗಾದಿಗಳ ಅನುಷ್ಠಾನದ ಬಗ್ಗೆ ನಾವೆಷ್ಟು ಉದಾಸೀನರಾಗಿದ್ದೇವೋ, ಪಾಶ್ಚಾತ್ಯರು ಅಷ್ಟೇ ಆಸಕ್ತಿ ತಳೆಯುತ್ತಿದ್ದಾರೆ. ಇತ್ತೀಚೆಗೆ ಅಮೇರಿಕಾದಲ್ಲಿ ರುದ್ರಯಾಗಾನುಷ್ಠಾನ ನಡೆದುದು ಇದಕ್ಕೊಂದು ಉದಾಹರಣೆ. ಶೃಂಗೇರಿಯ ಜೆ.ಸಿ.ಬಿ.ಎಂ. ಕಾಲೇಜಿನ ಪ್ರಾಚಾರ್ಯ ರಾಗಿದ್ದ ಡಾ॥ ಕೆ.ಬಿ.ರಾಮಕೃಷ್ಣರಾಯರು ಭಾರತೀಯ ತತ್ವಶಾಸ್ತ್ರ ವಿಭಾಗಕ್ಕಾಗಿ Inodology ಪುಸ್ತಕಗಳನ್ನು ಖರೀದಿಸಲು ಅಮೇರಿಕಾದ ಪುಸ್ತಕ ವ್ಯಾಪಾರಿ ಗಳೊಡನೆ ವ್ಯವಹರಿಸಬೇಕಾದ ಪರಿಸ್ಥಿತಿಯನ್ನು ವ್ಯಸನದಿಂದ ಹೇಳುತ್ತಿದ್ದರು.

ಭಾರತೀಯ ಶುದ್ಧ ವೈದಿಕ ಪರಂಪರೆಯ ಉಡುಗೆಯಲ್ಲಿರುವ ವಿಭೂತಿ–ತಿಲಕಗಳನ್ನಿಟ್ಟ ಯಾರನ್ನೇ ಆದರೂ ಕಂಡಾಗ 'ಏಂ. . . ಭ. . ಟ್ಟೇ. . ., ಮಧ್ಯಾಹ್ನ. . . .ಎಲ್ಲಿ . . . ಊಟ. . .? ವಳ್ಳೀ ಛಾನ್ಸಾತು. ಊಟಬ್ಯಾರೇ, ದಕ್ಷಿಣೆ ಬ್ಯಾರೇ! ಹ್ಹ. . ಹ್ಹ. . . ಹ್ಹ. . .' ಎಂದು ಮುಂತಾಗಿ ಅಪಹಾಸ್ಯ ಮಾಡುವವರು ನಮ್ಮಲ್ಲೇನೂ ಕಡಿಮೆಯಿಲ್ಲ. ವೇದಾಧ್ಯಯನ ಮಾಡದೆಯೂ, ಶಾಸ್ತ್ರಾರ್ಥವನ್ನರಿಯದೆಯೂ ಇರುವವರನ್ನೂ ಸಹ 'ಭಟ್ಟೇ. . . . ಎಂದು ಸಂಬೋಧಿಸುವುದನ್ನು ಅತ್ಯಂತ ಗೌರವವೆಂದು ನಾನು ಭಾವಿಸುತ್ತೇನೆ. 'ವೇದ ಶಾಸ್ತ್ರ, ಪುರಾಣಜ್ಞಃ ಭಟ್ಟ ಇತ್ಯಾಭಿಧೀಯತೇ' ಎಂಬುದು ಭಟ್ಟ ಶಬ್ದದ ವ್ಯಾಖ್ಯಾನ. ಆದ್ದರಿಂದ ಇದು ಗೌರವ ಸೂಚಕ ಪದ.

ಲಿವರ್ ಪೂಲ್‌ನ ಸಭಾ ಭವನವೊಂದರಲ್ಲಿ ನಾಲ್ಕಾರು ದಿನ ನಡೆದ ದುರ್ಗಾಪೂಜೆ–ನವರಾತ್ರಿ ಉತ್ಸವವದಲ್ಲಿ ಪ್ರತಿದಿನ ಸಹಸ್ರಾರು ಭಾರತೀಯರು ಭಾಗವಹಿಸುತ್ತಿದ್ದರು. ಇಲ್ಲಿನ ಅನೇಕ ನಾಗರೀಕರೂ ಆಸಕ್ತಿ–ಕುತೂಹಲಗಳಿಂದ ಈ ಉತ್ಸವದಲ್ಲಿ ಭಾಗವಹಿಸಿರುವುದನ್ನೂ ಕಂಡಿದ್ದೇನೆ. ಭಾರತೀಯರ ಉಡುಗೆ–ತೊಡುಗೆ, ಆಚಾರ–ವಿಚಾರ, ಭಕ್ತಿಭಾವ, ಆಹಾರ, ಪಾನೀಯಗಳ ಬಗೆಗೆ ಅವರಾಡಿದ ಮೆಚ್ಚುಗೆಯ ಮಾತನ್ನೂ ಕೇಳಿದ್ದೇನೆ. ನಮ್ಮ ಭವ್ಯ ಭಾರತದ ಸಾಂಸ್ಕೃತಿಕ ಪರಂಪರೆಯನ್ನು ವಿದೇಶಗಳಲ್ಲಿ ಹುಡುಕಬೇಕಾಗಿ ಬಂದುದು ನಮ್ಮ ದುರ್ದೈವವೇ? ಸೌಭಾಗ್ಯವೇ?

ಶತಮಾನಗಳ ಕಾಲ ನಮ್ಮನ್ನು ಲೂಟಿ ಮಾಡಿದ ಬ್ರಿಟೀಷರು ತಮ್ಮ ದೇಶಕ್ಕಾಗಿ, ಜನತೆಗಾಗಿ ಸಾಕಷ್ಟು ವಿನಿಯೋಗಿಸಿದ್ದಾರೆ. ತಲೆಮಾರುಗಳವರೆಗೆ ಸುಖದ ಸುಪ್ಪತ್ತಿಗೆಯಲ್ಲಿ ನಿಶ್ಚಿಂತೆಯಿಂದ ವಿಲಾಸಿ ಜೀವನ ನಡೆಸಲು ಬೇಕಾಗುವಷ್ಟು ತಮಗಾಗಿ ಇಟ್ಟುಕೊಂಡವರು ಹಲವರಿದ್ದಾರೆ. ಆದರೂ ಇಲ್ಲಿಯೂ ತಿರುಕರಿದ್ದಾರೆ. ಪರಂತು ಸುಸಂಸ್ಕೃತ ತಿರುಕರು! ಇವರು ಪ್ರವಾಸಿ ತಾಣಗಳಲ್ಲೋ, ದೊಡ್ಡ ದೊಡ್ಡ ವಾಣಿಜ್ಯ ಸಂಕೀರ್ಣಗಳಲ್ಲೋ, ಜನರ ಸಂಚಾರ ವ್ಯವಹಾರಕ್ಕೆ ತೊಂದರೆಯಾಗದ ಒಂದು ಸ್ಥಳದಲ್ಲಿ ಗಿಟಾರ್ ವಾದನ, ಗಾಯನ–ನೃತ್ಯಗಳಿಂದ ಜನರ ಗಮನ ಸೆಳೆಯುತ್ತಾರೆ. ದಾನಿಗಳು ಸ್ವಯಂಪ್ರೇರಣೆಯಿಂದ ಚೆಲ್ಲುವ ಧರ್ಮವನ್ನು ಧನ್ಯವಾದಗಳೊಂದಿಗೆ ಸ್ವೀಕರಿಸುತ್ತಾರೆ. ಜನಸಾಮಾನ್ಯರ ನಡುವೆ ಇವರನ್ನು ತಿರುಕರೆಂದು ಗುರುತಿಸುವುದು ಕಷ್ಟ. ನಮ್ಮಲ್ಲೂ ಬಸ್ ನಿಲ್ದಾಣ, ಧಾರ್ಮಿಕ ಕೇಂದ್ರ, ಕೆಲವು ರಸ್ತೆಗಳ ಬದಿಗಳಲ್ಲಿನ ತಿರುಕರನ್ನು ಕಂಡೇ ವಿದೇಶಿ ಪ್ರವಾಸಿಗರು 'ಭಾರತ ಭಿಕ್ಷುಕರ ದೇಶ' ಎಂದು ಹೇಳುತ್ತಿರಬಹುದು.

ಈ ದೇಶದಲ್ಲಿ ದತ್ತಿ, ದಾನ, ಧರ್ಮಗಳನ್ನು ಸಂಗ್ರಹಿಸುವ ಇನ್ನೊಂದು ವಿಧಾನವಿದೆ. ಒಂದು ಸಂಸ್ಥೆ, ವ್ಯಕ್ತಿ, ಉತ್ಸವ, ಕಾರ್ಯಕ್ರಮಗಳ ಅಗತ್ಯತೆ, ಯೋಜನೆಗಳ ಸಂಪೂರ್ಣ ಮಾಹಿತಿಯನ್ನೊಳಗೊಂಡ ಕರಪತ್ರಗಳನ್ನು ಮನೆ ಮನೆಗೆ ವ್ಯಕ್ತಿಗಳಿಗೆ ಹಂಚುತ್ತಾರೆ. ಮುಂದೆ ಇಂತಹ ದಿನ, ಗಂಟೆಗೆ ಸಂಪರ್ಕಿಸುವುದಾಗಿ ತಿಳಿಸುತ್ತಾರೆ. ನಿರ್ದಿಷ್ಟ ಸಮಯಕ್ಕೆ ಪುನಃ ನಿಮ್ಮೆದುರು ಹಾಜರಾಗುತ್ತಾರೆ. ನಿಮಗೆ ಮನಸ್ಸಿದ್ದು, ಕೊಟ್ಟರೆ, ಕೊಟ್ಟಷ್ಟನ್ನು

ಸಂತೋಷದಿಂದ ಸ್ವೀಕರಿಸಿ, ಧನ್ಯವಾದ ಅರ್ಪಿಸುತ್ತಾರೆ. ನೀವು ಕೊಡದಿದ್ದರೂ ನಗುತ್ತಾ That's O.K. Thank you, Bye ಎಂದು ವಿದಾಯ ಹೇಳುತ್ತಾರೆ. ಇಂತಿಷ್ಟೇ ಕೊಟ್ಟು ಬಿಡಬೇಕೆಂಬ ನಿರ್ಬಂಧವಿಲ್ಲ. ಕೊಟ್ಟದ್ದು ಕಡಮೆಯೆಂದು ಬೇಸರವಿಲ್ಲ. ಕೊಡಲಿಲ್ಲವೆಂದು ಬೈಗುಳವೂ ಇಲ್ಲ.

ಇಲ್ಲಿನ ಹವಾಮಾನವನ್ನು ಊಹಿಸುವುದು ಕಷ್ಟ. ಅಕ್ಟೋಬರಿನಿಂದ ಡಿಸೆಂಬರ್ ಪೂರ್ತಿ ಸುಮಾರು 3 ತಿಂಗಳು ಕ್ಷಣ–ಕ್ಷಣಕ್ಕೂ ಮಳೆ, ಗಾಳಿ, ಚಳಿ, ದಶಂಬರದ ಕೆಲವು ದಿನಗಳಲ್ಲಿ ಬೀಳುವ ಹಿಮಪಾತದ ಸೌಂದರ್ಯ ವರ್ಣನಾತೀತ. ರಸ್ತೆ, ಮನೆ, ಮರ, ಗಿಡ ಎಲ್ಲದರ ಮೇಲೂ ಎರಡೂ, ಎರಡೂವರೆ ಅಡಿಗಳಷ್ಟು ಹಿಮಪಾತ. ನಡೆದಾಡುವಾಗ ಹಾರುವ ಹತ್ತಿಯ ಮೇಲೆ ಕಾಲಿಟ್ಟ ಅನುಭವ. ಸಮಸ್ತ ಪ್ರಕೃತಿ ಬಿಳಿಯುಡುಗೆಯ ಬೆಡಗಿನ ನವ ತರುಣಿ. ಹಿಮ ಕರಗುವಂತೆ ಲವಣಗಳ ಸಿಂಪಡಿಸುವಿಕೆಯಿಂದ ವಾಹನ ಸಂಚಾರಕ್ಕಾಗಿ ರಸ್ತೆಗಳನ್ನು ತೆರವು ಮಾಡುವುದು ಸರಕಾರದ ಹೊಣೆ.

ಇವರಿಗೆ ತಮ್ಮ ನಾಡು–ನುಡಿ–ಜನ–ಸಂಪನ್ಮೂಲಗಳ ಬಗೆಗೆ ಅಪಾರ ಅಭಿಮಾನ. ಇಲ್ಲಿನ ಅತಿ ಸಣ್ಣದಾದ, ಕ್ಷುಲ್ಲಕವೆನಿಸಬಹುದಾದ, ಸಂಸ್ಕೃತಿ–ಕಲೆ–ಸಾಹಿತ್ಯಗಳನ್ನು ಬಿಂಬಿಸುವ ಸಂಗತಿಗಳನ್ನು, ವಿಜ್ಞಾನ–ವಾಣಿಜ್ಯ ಕೇಂದ್ರಗಳನ್ನು, ಪ್ರವಾಸಿ ತಾಣಗಳನ್ನು, ನೈಸರ್ಗಿಕ ಸಂಪತ್ತನ್ನು, ಪ್ರೇಕ್ಷಣೀಯ ಸ್ಥಳಗಳನ್ನು, ಶೈಕ್ಷಣಿಕ ಸಂಸ್ಥೆಗಳನ್ನು ವೈಭವೀಕರಿಸಿ ಜಗಜ್ಜಾಹೀರುಗೊಳಿಸುತ್ತಾರೆ. ಇವುಗಳ ಸಂಕ್ಷಿಪ್ತ ಮಾಹಿತಿಯುಳ್ಳ 'Days out' ಎಂಬ ಪುಸ್ತಕವನ್ನು ಆಗಾಗ ಪರಿಷ್ಕರಿಸಿ ಬಿಡುಗಡೆಗೊಳಿಸುತ್ತಾರೆ. ಇದರಲ್ಲಿ ಗುರುತಿಸಿರುವ ಜಾಗಗಳನ್ನು ದಿನಕ್ಕೆ 4–6ರಂತೆ ಸಂದರ್ಶಿಸುವುದಾದರೆ ಪೂರ್ತಿ ಸಂದರ್ಶಿಸಲು ಕೆಲವು ವರ್ಷಗಳೇ ಬೇಕಾಗಬಹುದು.

ನೀವು ದೇಶದ ಒಂದು ಮೂಲೆಯಿಂದ ನೂರಾರು ಮೈಲಿ ದೂರದ ಒಂದು ಸ್ಥಳಕ್ಕೆ ಅಥವಾ ಪ್ರವಾಸಿ ಕೇಂದ್ರಕ್ಕೆ ಹೋಗಬೇಕಾಗಿದೆ ಎಂದಿಟ್ಟುಕೊಳ್ಳಿ. "ಡೇಸ್ ಔಟ್" ನಲ್ಲಿ ನಮೂದಿಸಿದ ಅಥವಾ ಒಂದು ನಿರ್ದಿಷ್ಟ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಿ, ನೀವು ಅಪೇಕ್ಷಿಸುವ ಎಲ್ಲಾ ಮಾಹಿತಿ ದೊರೆಯುತ್ತದೆ. ನಿಮ್ಮ ಉಳಿಯುವ ವ್ಯಸ್ಥೆ, ಕಾಯ್ದಿರಿಸುವುದು (Reservation) ಎಲ್ಲವೂ ಕ್ಷಣ ಮಾತ್ರದಲ್ಲಿ ಸಾಧ್ಯವಾಗುತ್ತದೆ. ನೀವು ತಲುಪಬೇಕಾಗಿರುವ ಸ್ಥಳವನ್ನು ತಲುಪುವ ಮಾರ್ಗಸೂಚಿ ನಕ್ಷೆ, ನೀವು ಹೊರಡಬೇಕಾದ ಸ್ಥಳದಿಂದ ಹೊರಡುವ ಮತ್ತು ಸೇರುವ ರೈಲು–ಬಸ್ಸುಗಳ ವೇಳಾಪಟ್ಟಿ, ಪ್ರಯಾಣ ದರ ಮೊದಲಾದ ಮಾಹಿತಿ ಮರು ಟಪಾಲಿನಲ್ಲಿ ನಿಮ್ಮ ಮನೆ ತಲುಪುತ್ತದೆ. ನೀವು ಅಲ್ಲಿ ತಲುಪುವ ವೇಳೆಗೆ ಸ್ವಾಗತಕಾರಿಣಿ ನಿಮ್ಮ ಸ್ವಾಗತಕ್ಕಾಗಿ ಕಾದಿರುತ್ತಾಳೆ. ಕೈ ಕುಲಕಿ ವಂದಿಸಿ ಉಪಚರಿಸುತ್ತಾಳೆ. ಇಂತಹ ಚಟುವಟಿಕೆಗಳಲ್ಲಿ ಇಲ್ಲಿನ ಮಹಿಳೆಯರು ಪುರುಷರಿಗಿಂತ ಮುಂದು, ಈ ಜನರು ವಿವಿಧ ಮಾಧ್ಯಮಗಳ ಮೂಲಕ ಪ್ರಚಾರ ಮಾಡುವುದಷ್ಟೇ ತಮ್ಮ ಕರ್ತವ್ಯವೆಂದು ತಿಳಿಯುವುದಿಲ್ಲ. ಆದರೆ ವಸ್ತುಸ್ಥಿತಿಗೆ ಬಣ್ಣ ಹಚ್ಚಿಯಾದರೂ

ತಮ್ಮತನವನ್ನು ಮನವರಿಕೆ ಮಾಡಿ ನಿಮ್ಮ ಮೇಲೆ ಪ್ರಭಾವ ಬೀರುವುದೂ ತಮ್ಮ ಕರ್ತವ್ಯವೆಂದು ತಿಳಿಯುತ್ತಾರೆ.

ಎಲ್ಲೆಲ್ಲೂ ಕೃತಕತೆ ಆಡಂಬರ, ಸುಳ್ಳು, ಮೋಸ, ಭ್ರಷ್ಟಾಚಾರ, ಕೊಲೆ, ಸುಲಿಗೆ, ಸ್ವಾರ್ಥ ಮೊದಲಾದವು ತುಂಬಿ ತುಳುಕುವ ಪರಿಸರದಲ್ಲಿ ಬದುಕುತ್ತಿರುವ ನಾವು ಅಲ್ಲಿಗೆ ಒಮ್ಮೆ ಹೋದರೆ ತಾಯ್ನಾಡಿಗೆ ಮರಳುಲು ಮನಸ್ಸಾಗುವುದಿಲ್ಲ. ಅಲ್ಲೇ ದೀರ್ಘಾವಧಿಯ ವಾಸ್ತವ್ಯದಲ್ಲಿರುವ ಅನೇಕ ಭಾರತೀಯರು ಆಗಾಗ ನಮ್ಮ ದೇಶದ ವಿದ್ಯಾಮಾನಗಳನ್ನು ತಿಳಿದು ನಮ್ಮ ದೇಶ ಎಂದೆಂದಿಗೂ ಉದ್ಧಾರವಾಗುವುದಿಲ್ಲವಲ್ಲ! ಎಂದು ಜಿಗುಪ್ಸೆಯಿಂದ ಉದ್ಗರಿಸುತ್ತಾರೆ. 'ಉಭಯಕೂಲ ಸಮಾಶ್ರಿತ ಗೌರಿವ' ಎಂಬುದು ಸಂಸ್ಕೃತದ ಒಂದು ಉಕ್ತಿ. ನದಿಯ ಈ ದಡದಲ್ಲಿರುವ ಒಂದು ಹಸು ಇನ್ನೊಂದು ದಡದ ಹುಲ್ಲನ್ನು ದೂರದಿಂದ ಕಂಡು ಆಕರ್ಷಿತವಾಗುತ್ತದೆ. ಆ ದಡ ಸೇರಿ ಸ್ವಲ್ಪ ಹುಲ್ಲನ್ನು ತಿಂದ ನಂತರ ಪುನಃ ನೋಡುವಾಗ ಈ ದಡದಲ್ಲೇ ಹುಲ್ಲು ಸಮೃದ್ಧವಾಗಿದೆಯೆಂದು ಅದಕ್ಕೆ ಅನ್ನಿಸಿ ಈಚೆಗೆ ಬರುತ್ತದೆ. ಹಾಗೆಯೇ ಬಹುಕಾಲ ಅಲ್ಲಿ ನೆಲೆಸಿದ ಭಾರತೀಯರಿಗೆ ತಮ್ಮ ತಾಯ್ನಾಡಿನ ಮೇಲಿನ ಪ್ರೀತಿ–ಆದರ–ಅಭಿಮಾನ ಮತ್ತೆ ಚಿಗುರೊಡೆದರೆ ಆಶ್ಚರ್ಯವಿಲ್ಲ. ಅಂತೆಯೇ ಅಲ್ಲಿನ ಮೂಲ ನಿವಾಸಿಗಳ ದೃಷ್ಟಿಗೆ ಭಾರತದ ಪ್ರಾಚೀನ ಸಂಸ್ಕೃತಿ, ಆಚಾರ, ವಿಚಾರಗಳು ಆಕರ್ಷಕವಾಗಿ ಕಾಣುವುದೂ ಅಷ್ಟೇ ಸಹಜ.

ಇಲ್ಲಿನವರ ದೃಷ್ಟಿಯಲ್ಲಿ ವಿದೇಶಿಯರೆಂದರೆ ಹೆಚ್ಚಿನವರು ಭಾರತೀಯರು, ದಕ್ಷಿಣ ಆಫ್ರಿಕಾದವರು, ಪಾಕಿಸ್ತಾನದವರು ಹಾಗೂ ಇನ್ನಿತರ ದೇಶದವರು. ಸ್ವಾತಂತ್ರ್ಯ ಪೂರ್ವದಲ್ಲಿ ಇಂಗ್ಲೀಷ್‌ರ ಜತೆಯಲ್ಲಿ ಸೇವಕರಾಗಿಯೋ (Assistants) ಸಣ್ಣ ನೌಕರಿಗಾಗಿಯೋ ಇಲ್ಲಿಗೆ ಬಂದು, ಕ್ರಮೇಣ ಸುಧಾರಿಸಿಕೊಂಡು ಇಲ್ಲಿನ ಪ್ರಜೆಗಳಾಗಿ ಉಳಿದವರು ಕೆಲವರು. ನಂತರದ ಕೆಲವು ದಿನಗಳಲ್ಲಿ ಶಿಕ್ಷಣಾರ್ಥಿಗಳಾಗಿ ಒಂದು ಖಾಯಂ ನೌಕರಿ ಗಳಿಸಿ ಇಲ್ಲಿಯೇ ನೆಲಸಿದವರು ಕೆಲವರು. ತಮ್ಮ ಬುದ್ಧಿ ಶಕ್ತಿಗೆ ಭಾರತದಲ್ಲಿ ಬೆಲೆ ಸಿಗದೆ ಉದರ ನಿಮಿತ್ತವಾಗಿ ಇಲ್ಲಿ ಬಂದು ಬದುಕಿನ ದಾರಿ ಹಿಡಿದವರು ಕೆಲವರು. ಉನ್ನತ ವ್ಯಾಸಂಗ ನಡೆಸುತ್ತಿರುವವರು, ಹಂಗಾಮಿ ನೌಕರಿಯಲ್ಲಿರುವವರು ಇನ್ನು ಕೆಲವರು ಮೇಲ್ನೋಟಕ್ಕೆ ಇವರು ಭಾರತೀಯರನ್ನು ನಂಬುವವರಂತೆ, ಗೌರವಿಸುವವರಂತೆ ತೋರಿಸಿ ಕೊಂಡರೂ ಅಂತರಂಗದಲ್ಲಿ ಎಂದೆಂದಿಗೂ ಭಾರತೀಯರ ಬಗ್ಗೆ ಒಳ್ಳೆಯ ಭಾವನೆ, ಗೌರವ ಬುದ್ಧಿ ಖಂಡಿತ ಇಲ್ಲ.

ದಕ್ಷಿಣ ಆಫ್ರಿಕಾದವರು ಇಲ್ಲಿಗೆ ಗುಲಾಮರಾಗಿಯೇ ಬಂದು ಗುಲಾಮಗಿರಿಯಲ್ಲೇ ಇದ್ದವರು. ಇತ್ತೀಚೆಗೆ, ಇಲ್ಲಿನವರಿಗೆ ಸರಿಮನಾಗಿ ಸ್ವತಂತ್ರ ನಾಗರೀಕ ಜೀವನ ನಡೆಸುತ್ತಿದ್ದಾರೆ.

Indian Shops, Delhi Shops ಎಂದು ಮುಂತಾಗಿ ನಾಮಫಲಕದೊಂದಿಗೆ ಭಾರತೀಯರಿಗಾಗಿ ಅಂಗಡಿ ನಡೆಸುತ್ತಿರುವವರಲ್ಲಿ ಹೆಚ್ಚಿನವರು ಪಾಕಿಸ್ಥಾನ ಮೂಲದವರು.

ಇವರ ಅಂಗಡಿಗಳಲ್ಲಿ ಭಾರತೀಯರ ಅಭಿರುಚಿಗೆ ತಕ್ಕಂತೆ ಕಾಯಿಪಲ್ಲೆಗಳು, ಸಿದ್ಧಪಡಿಸಿದ ಆಹಾರ, ಪಾನೀಯಗಳು, ವಿವಿಧ ರುಚಿಯ ಮಸಾಲೆ ಪದಾರ್ಥಗಳು, ಎಲ್ಲವೂ ಸಿಗುತ್ತದೆ. ಬೇಳೆ ಕಾಳುಗಳಲ್ಲದೆ ತಿಂಗಳುಗಟ್ಟಲೆ ಕೆಡದಂತೆ ಪ್ಯಾಕ್ ಮಾಡಿದ ಎಲ್ಲಾ ಬಗೆಯ ತಿಂಡಿ-ತಿನಿಸುಗಳೂ ಇಲ್ಲಿ ದೊರೆಯುತ್ತವೆ. ಪತ್ರೊಡೆ ಮಾಡಲು ಕೆಸುವಿನ ಸೊಪ್ಪನ್ನು ಕೊಳ್ಳಬಹುದು. ಅಥವಾ ಸಿದ್ಧ ಪತ್ರೊಡೆಯ ಪ್ಯಾಕನ್ನು ಒಯ್ದು ಬಿಲ್ಲೆಯಂತೆ ಕಾಣುವ ಚೂರುಗಳನ್ನು ಕಾವಲಿಯ ಮೇಲಿರಿಸಿ ಬೇಕಾದರೆ ಸ್ವಲ್ಪ ಎಣ್ಣೆ ಸುರಿದು ಬಿಸಿ ಮಾಡಿಯೂ ತಿನ್ನಬಹುದು. ಉಪ್ಪು ಹಾಕಿ ಬೇಯಿಸಿ ಪ್ಯಾಕ್ ಮಾಡಿದ 'ಕಾಬೂಲ್ ಕಡಲೆ' ಯನ್ನು ಹದವಾಗಿ ನೀರು ಸೇರಿಸಿ ಬೆಚ್ಚಗೆ ಮಾಡಿ, ಮಸಾಲೆ ಪುಡಿ ಬೆರೆಸಿ, 'ಚಣೆಗಸಿ' ಯನ್ನೂ ತಯಾರಿಸಬಹುದು.

ಆದರೆ ಇಲ್ಲಿನವರಿಗೆ ಇಂತಹ ಯಾವುದೇ ಅಡುಗೆ ಗೊತ್ತಿಲ್ಲ. ಇವರಿಗೆ ಬೇಡವೂ ಬೇಡ. ಬ್ರೆಡ್, ಬನ್, ಬಿಸ್ಕತ್, ಕೇಕ್, ಚೀಸ್, ಯೋಗರ್ಟ್ ಇವರಿಗೆ ಬೇಕಾಗುವ ಇವೆಲ್ಲವೂ ಅಂಗಡಿಗಳಲ್ಲಿ ದೊರೆಯುತ್ತವೆ. ಕೊಬ್ಬು ಇಲ್ಲದ, ಅರ್ಧಕೊಬ್ಬಿರುವ ಪೂರ್ತಿ ಕೊಬ್ಬಿನ ಹಾಲನ್ನು ಕ್ಯಾನುಗಳಲ್ಲಿ ತಂದು ವಾರದ ತನಕ ಉಪಯೋಗಿಸಬಹುದು. ಚಹಾಪುಡಿ ಪೊಟ್ಟಣವನ್ನೇ ಬೇಯಿಸಿದರೆ ಸೋಸುವ ಅಗತ್ಯವಿಲ್ಲ. ಖಾಲಿ ಪೊಟ್ಟಣ ಕಸದ ಬುಟ್ಟಿಗೆ ಎಸೆದರಾಯಿತು. ಚೊಕ್ಕ ಮಾಡಿದ ಮಾಂಸವನ್ನು ತಂದು ಬೇಯಿಸಿಕೊಂಡರೆ ಮಾಂಸದ ಅಡುಗೆ ಸಿದ್ಧ. ಸೌತೆಕಾಯಿ, ಟೊಮ್ಯಾತೊ, ಕೋಸು (ಸೊಪ್ಪು) ಕತ್ತರಿಸಿ, ಸ್ವಲ್ಪ ಉಪ್ಪು ಮೇಲಿಂದ ಸವರಿ ಇಟ್ಟುಕೊಂಡರೆ ಸರಿ. ಒಟ್ಟಾರೆ ಇವರ ಅಡುಗೆ ತೀರಾ ಸಾದಾ (Simple) ತಯಾರಿಗೆ ಕೆಲವೇ ನಿಮಿಷ ಸಾಕು.

ಇಲ್ಲಿನ ಅಂಗಡಿಗಳಲ್ಲಿ ಸುತ್ತಾಡುವುದು, ವ್ಯಾಪಾರ ಮಾಡುವುದೇ ಒಂದು ರೀತಿಯ ಮಜ. 'ಅಸ್ಡಾ', ಸೈನ್ಸ್ ಬರೀಸ್, ಕಾಮೆಟ್ ಮೊದಲಾದ ಹಲವು ವ್ಯಾಪಾರೀ ಸಂಸ್ಥೆಗಳು ದೇಶದಾದ್ಯಂತ 2-3 ಮೈಲುಗಳ ಅಂತರದಲ್ಲಿ ತಮ್ಮ ಅಂಗಡಿಗಳ ಶಾಖೆಗಳನ್ನು ಹೊಂದಿವೆ. ಇವಲ್ಲದೆ ದೊಡ್ಡ ದೊಡ್ಡ 'ಶಾಪಿಂಗ್ ಸೆಂಟರ್'ಗಳೂ ಇವೆ. ಮ್ಯಾಂಚೆಸ್ಟರ್ ಶಾಪಿಂಗ್ ಸೆಂಟರ್ ಇವುಗಳಲ್ಲೊಂದು. ಇದರಲ್ಲಿನ ಮಳಿಗೆಗಳನ್ನು ನಿಮಿಷಕ್ಕೊಂದರಂತೆ ಸಂದರ್ಶಿಸುತ್ತಾ ಹೋದರೆ, ಎಲ್ಲಾ ಮಳಿಗೆಗಳನ್ನೂ ಸುತ್ತಲು ಒಂದು ದಿನ ಪೂರ್ತಿ ಸಾಲದು. ಈಗೆರೆಡು ವರ್ಷಗಳ ಹಿಂದೆ ಪ್ರತ್ಯೇಕತಾವಾದಿಗಳು ಈ ಶಾಪಿಂಗ್ ಸೆಂಟರ್‌ನ ಮೇಲೆ ಬಾಂಬ್ ಎಸೆದಿದ್ದರೆಂದು ಪತ್ರಿಕಾ ಸುದ್ದಿಯಿತ್ತು. ಯಾವುದೇ ಕಟ್ಟಡಕ್ಕೆ ಹಾನಿಯಾದಲ್ಲಿ ಅಥವಾ ದುರಸ್ತಿ ಅಗತ್ಯವಿದ್ದಲ್ಲಿ ಸುತ್ತಲೂ ಪ್ಲಾಸ್ಟಿಕ್ ತಡೆಯನ್ನು ನಿರ್ಮಿಸಿ, ಮಣ್ಣು-ಸುಣ್ಣದ ಘಾಟಿನಿಂದ, ಧೂಳಿನಿಂದ ಪರಿಸರ ಪ್ರಭಾವಿತವಾಗದಂತೆ, ಜನರ ದೈನಂದಿನ ವ್ಯವಹಾರ-ಓಡಾಟಗಳಿಗೆ ಅಡಚಣೆಯಾದಂತೆ ಅತ್ಯಲ್ಪ ಕಾಲಾವಧಿಯಲ್ಲಿ ಸರಿಪಡಿಸಿಬಿಡುತ್ತಾರೆ.

ಸ್ವಯಂಚಾಲಿತ ಬಾಗಿಲನ್ನು ದಾಟಿ ನೀವು ದೊಡ್ಡ ಅಂಗಡಿಯೊಂದನ್ನು ಪ್ರವೇಶಿದರೆ ಹೊಸತೊಂದು ಅದ್ಭುತ ಲೋಕದಲ್ಲಿ ಕಾಲಿಟ್ಟ ಅನುಭವವಾಗುತ್ತದೆ. ಮನುಷ್ಯ, ಪ್ರಾಣಿ,

ಪಕ್ಷಿ, ಜಲಚರಗಳ ಬದುಕಿನ ವಿವಿಧ ಹಂತಗಳ ಎಲ್ಲಾ ಅವಶ್ಯಕತೆಗಳನ್ನೂ ಪೂರೈಸಲು ಅಗತ್ಯವೆನಿಸಿದ ವಸ್ತುಗಳೆಲ್ಲವೂ ಇಲ್ಲಿ ಲಭ್ಯ. ಬಟ್ಟೆ, ಪಾತ್ರೆ, ಆಹಾರ ಪದಾರ್ಥಗಳು, ವಿಲಾಸಿ ವಸ್ತುಗಳು, ಪುಸ್ತಕ ಸ್ಟೇಶನರಿ, ಇಲೆಕ್ಟ್ರಾನಿಕ್ ಉಪಕರಣಗಳು, ಚಪ್ಪಲಿ, ಮಾಂಸ, ತರಕಾರಿ, ಹಣ್ಣು, ಹಾಲು ಎಲ್ಲವನ್ನೂ ಪ್ರತ್ಯೇಕ ವಿಭಾಗಗಳಲ್ಲಿ ಅತ್ಯಾಕರ್ಷಕವಾಗಿ ಜೋಡಿಸಿರುತ್ತಾರೆ. ಚಿಕ್ಕಮಕ್ಕಳಿಗಾಗಿ ಇರುವ ಮನರಂಜನಾ ವಿಭಾಗದಲ್ಲಿ ಅವರನ್ನು ಬಿಟ್ಟು ನೀವು ಅಂಗಡಿಯನ್ನು ಸುತ್ತಿ ಪದಾರ್ಥಗಳನ್ನು ಆಯ್ಕೆ ಮಾಡಬಹುದು. ಇಲ್ಲಿ ದೇಹಬಾಧೆ ತೀರಿಸಲು ಶೌಚಾಲಯಗಳ ವ್ಯವಸ್ಥೆಯೂ ಇದೆ.

ನಿಮ್ಮ ಅವಶ್ಯಕತೆಯ ವಸ್ತುಗಳನ್ನು ನೀವು ಆರಿಸಿ, ತಳ್ಳುಗಾಡಿಯಲ್ಲಿ ತುಂಬಿಸಿಕೊಳ್ಳಿ. ಎಲ್ಲ ನಿಗದಿತ ಬೆಲೆ. ಚರ್ಚೆಯ ಪ್ರಶ್ನೆಯೇ ಇಲ್ಲ. ಹಣ ಪಾವತಿಸಲು ಇರುವ 20-30 ಕೌಂಟರುಗಳಲ್ಲಿ ಯಾವುದಾದರೊಂದು ಸಾಲಿನಲ್ಲಿ ನಿಂತುಕೊಳ್ಳಿ. ನಿಮ್ಮ ಸರದಿ ಬಂದಾಗ ಎಲ್ಲಾ ಪದಾರ್ಥಗಳನ್ನೂ ತೆಗೆದಿರಿಸಿ. ಕಂಪ್ಯೂಟರ್ ಆ ಪದಾರ್ಥಗಳ ಬೆಲೆಯನ್ನೂ, ನೀವು ಪಾವತಿಸಬೇಕಾದ ಒಟ್ಟು ಹಣವನ್ನೂ ನಮೂದಿಸಿ ಬಿಲ್ ತಯಾರಿಸುತ್ತದೆ. ನಗದಾಗಿ ಪಾವತಿಸಿ, ಅಥವಾ ಕ್ರೆಡಿಟ್ ಕಾರ್ಡ್ ತೋರಿಸಿ, ನಿಮ್ಮ ಬ್ಯಾಂಕಿನ ಖಾತೆಯಿಂದ ಅಂಗಡಿಯ ಖಾತೆಗೆ ಹಣ ಜಮಾ, ಪ್ಲಾಸ್ಟಿಕ್ ಚೀಲಗಳಲ್ಲಿ ನಿಮ್ಮ ಸಾಮಾನುಗಳನ್ನು ತುಂಬಿಸಿಕೊಂಡು ಹೊರಗೆ ಬನ್ನಿ.

ಆಸ್ಪತ್ರೆಗಳಲ್ಲಿ ರೋಗಿಗಳಿಗೆ ನೀಡಲಾಗುವ ಸವಲತ್ತುಗಳು, ಆತನ ಹಕ್ಕುಗಳು- ಇವುಗಳನ್ನು ಕುರಿತ ಹಿಂದಿ ಮೊದಲಾದಂತೆ ವಿವಿಧ ಅಂತರ್ದೇಶಿಯ ಭಾಷೆಗಳಲ್ಲಿ ಪುಸ್ತಿಕೆಯನ್ನು ಪ್ರಕಟಿಸಿ ಸಾರ್ವಜನಿಕರ ಅವಗಾಹನೆಗೆ ತರಲಾಗುತ್ತದೆ. ಈ ಪುಸ್ತಿಕೆಯಲ್ಲಿ ಗಮನಿಸಬೇಕಾದ ಕೆಲವು ಮುಖ್ಯ ಸಂಗತಿಗಳು.

1.ರೋಗಿಯ ಸ್ವಾಸ್ಥ್ಯ ಸುಧಾರಣೆಗೆ ಸಂಬಂಧಿಸಿದ ಅವಶ್ಯಕತೆಗಳ ಆಧಾರದ ಮೇಲೆ ಚಿಕಿತ್ಸೆ ನೀಡಲಾಗುತ್ತದೆಯೇ ಹೊರತು, ನಿಗಧಿತ ಶುಲ್ಕ ನೀಡುವ ರೋಗಿಯ ಆರ್ಥಿಕ ಪರಿಸ್ಥಿತಿ ಅಥವಾ ಜೀವನ ಶೈಲಿ ಹಾಗೂ ಇನ್ನಿತರ ವಿಷಯಗಳನ್ನು ಅವಲಂಬಿಸಿಲ್ಲ.

2.ರೋಗಿ ಒಬ್ಬ ಜಿ.ಪಿ.ಯ ಹತ್ತಿರ ನೋಂದಣಿ ಮಾಡಿಕೊಳ್ಳಬೇಕು. ಅಥವಾ ಜಿ.ಪಿ. ಯನ್ನು ಬದಲಿಸುವುದಾದರೆ ಸುಲಭವಾಗಿಯೂ ಶೀಘ್ರವಾಗಿಯೂ, ಬದಲಿಸುವ ಸೌಲಭ್ಯ ಕಲ್ಪಿಸಲಾಗುವುದು.

3.ಆಪತ್ಕಾಲೀನ ಸ್ಥಿತಿಯಲ್ಲಿ ಜಿ.ಪಿ.ಯ ಅಥವಾ ಆಸ್ಪತ್ರೆಯ ತುರ್ತು ಚಿಕಿತ್ಸಾ ವಿಭಾಗದ ಮೂಲಕ ಆಂಬ್ಯುಲೆನ್ಸ್ ಮೊದಲಾದ ಯಾವುದೇ ಚಿಕಿತ್ಸಾ ಸೌಲಭ್ಯವನ್ನು ಪಡೆಯಬಹುದು.

4.ಜಿ.ಪಿ.ಯ ಸೂಚನೆಯಂತೆ ಅಥವಾ ರೋಗಿಯ ಇಷ್ಟದಂತೆ ಎಷ್ಟು ಜನ ತಜ್ಞ ವೈದ್ಯರ (ಕನ್ಸಲ್ಟೆಂಟ್) ಸಲಹೆ ಬೇಕಾದರೂ ಪಡೆಯಬಹುದು.

5.ನಿಮ್ಮ ಮಗುವನ್ನು ಮಕ್ಕಳ ಆಸ್ಪತ್ರೆಯಲ್ಲಿ ತಜ್ಞ ವೈದ್ಯರ ನಿಗಾದಲ್ಲಿರಿಸಬಹುದು. ಅಥವಾ ನೀವು ಅಪೇಕ್ಷಿಸುವ ಮಕ್ಕಳ ರೋಗತಜ್ಞರಾದ ವೈದ್ಯರ ನಿಗಾದಲ್ಲಿ ಬೇರೆ ವಾರ್ಡ್‌ನಲ್ಲೂ ಇರಿಸಿ ಚಿಕಿತ್ಸೆ ನೀಡುವ ವ್ಯವಸ್ಥೆ ಅಪೇಕ್ಷಿಸಬಹುದು.

6.ವೈದ್ಯಕೀಯ ವಿದ್ಯಾರ್ಥಿ ಅಥವಾ ವೈದ್ಯಕೀಯ ಸಂಶೋಧಕ ವಿದ್ಯಾರ್ಥಿಯ ತರಬೇತಿ–ಸಂಶೋಧನೆಗೆ ಒಳಗಾಗುವ, ಒಳಗಾಗದಿರುವ ಸ್ವಾತಂತ್ರ್ಯ ನಿಮಗಿದೆ.

7.ನಿಮ್ಮ ಸಂಪರ್ಕದಲ್ಲಿರುವ ಯಾವುದೇ ಸಿಬ್ಬಂದಿ ತನ್ನ ಪರಿಚಯದ ಕಾರ್ಡನ್ನು ಹೊಂದಿರಲೇಬೇಕೆಂದು ನೀವು ಅಪೇಕ್ಷಿಸಬಹುದು.

8.ರೋಗಿ ತನ್ನ ವ್ಯಾವಹಾರಿಕ ರಹಸ್ಯವನ್ನುಳಿಸಿಕೊಂಡು, ತನ್ನ ಧಾರ್ಮಿಕ, ಸಾಂಸ್ಕೃತಿಕ ವಿಶ್ವಾಸ–ನಂಬಿಕೆಗಳಿಗನುಗುಣವಾಗಿ ಆಹಾರ ಮತ್ತಿತರ ಅವಶ್ಯಕತೆಗಳನ್ನು ಒದಗಿಸುವಂತೆ ಆಸ್ಪತ್ರೆಯನ್ನು ಕೇಳಬಹುದು.

9.ರೋಗಿ ತನ್ನಿಷ್ಟದಂತೆ ಪೂರ್ಣ ಹೆಸರಿನಿಂದ ಅಥವಾ ಉಪನಾಮದಿಂದ (ಮಿ। ರಾಮದಾಸರಾವ್, ಮಿ। ರಾವ್, ಮಿ।ದಾಸ್, ಮಿ।ರಾಮ್ – ಹೀಗೆ) ತನ್ನನ್ನು ಕರೆಯುವಂತೆ ಸಿಬ್ಬಂದಿಯನ್ನು ಕೇಳಬಹುದು.

10.ರೋಗಿಗೆ ನೀಡಲಾಗುವ ಚಿಕಿತ್ಸೆಗೆ ಸಮ್ಮತಿ–ಅಸಮ್ಮತಿ ಪಡೆಯುವ ಮೊದಲು ಆತನ ರೋಗದ ಸ್ವರೂಪ–ಚಿಕಿತ್ಸಾ ವಿಧಾನ, ಪರಿಣಾಮ, ಅಪಾಯ, ವಿಕಲ್ಪಗಳ ಪೂರ್ಣ ಮಾಹಿತಿಯನ್ನು ಒದಗಿಸಬೇಕು.

11.ರೋಗಿಯ ಚಿಕಿತ್ಸೆಗೆ ಸಂಬಂಧಿಸಿದ ಯಾವುದೇ ದಲೂರುಗಳನ್ನು ಸ್ವೀಕರಿಸಿ, ತನಿಖೆಯ ಪೂರ್ಣ ವಿವರವನ್ನು ಒದಗಿಸಬೇಕು.

12.ಪಿಂಚಣಿದಾರರು, 16 ವರ್ಷಕ್ಕಿಂತ ಕಡಿಮೆ ವಯಸ್ಸಿನವರು, 19 ವರ್ಷದೊಳಗಿನವರಾಗಿದ್ದು, ಕ್ರಮ ಶಿಕ್ಷಣ ಪಡೆಯುವವರು, ಗರ್ಭವತಿ ಅಥವಾ ಬಾಣಂತಿ, ವಿಶಿಷ್ಟ ರೋಗಿಗಳು, ಅಸಹಾಯಕ ಭತ್ಯೆ ಪಡೆಯುವವರು, ಅವಲಂಬಿತರು–ಪುಕ್ಕಟೆಯಾಗಿ ಔಷಧ ಪಡೆಯಲು ಅರ್ಹರು.

ಇಂತಹ ಎಲ್ಲಾ ಸಂಗಿತಗಳನ್ನು ನಮ್ಮ ಆಸ್ಪತ್ರೆಗಳಲ್ಲಿ ಅಳವಡಿಸಿಕೊಳ್ಳಲು, ರೋಗಿಗಳಿಗೆ ಎಲ್ಲಾ ಸವಲತ್ತುಗಳನ್ನೂ ಒದಗಿಸಲು ನಮ್ಮ ದೇಶದಲ್ಲಿ ಸಾಧ್ಯವಾಗಲಾರದು.